



ಕಾವಿನಕಲ್ಲು
ವೆಂಕಟಕೃಷ್ಣ
ಆಚಾರ್ಯರ

ಇಸ್ಪೀಟತಿ

ಸಂಪಾದನೆ
ವೇ.ಮೂ. ಯಚ್. ವಿನೋದ ಆಚಾರ್ಯ





॥ ತಮಸೋಮಾ ಜ್ಯೋತಿರ್ಗಮಯ ॥



ಕಾವಿನಕಲ್ಲು

ವೆಂಕಟಕೃಷ್ಣ ಆಚಾರ್ಯರ

ಹಿಪ್ಪರತೆ

ಅಜ್ಜನ ಸವಿನೆನಪು

ಸಂಪಾದನೆ

ವೇ.ಮೂ. ಯಚ್. ವಿನೋದ ಆಚಾರ್ಯ

ಹರಿಃ ಓಂ । ಓಂ ನಮೋ ಭಗವತೇ ವಾಸುದೇವಾಯ ॥



Kavinakallu Venkatakrishna Acharyara
" HITLARATHE "
– a book on the sweet memories and recollections of his
Grand Father Kavinakallu Venkatakrishna Achar and released on the
82nd Birthday of his beloved Father Sri H. Gururaja Achar on 13-04-2021.

Published by: H. Vinod Acharya
Acharya Nilaya,
P.O. Kulai-Hosabettu – 575019. D.K.
Mob: 9448724561

Published on: 13-04-2021

Printed by: Print Media, Hampankatta,
Mangaluru – 575 001.
Mob: 9448194495, 9019164889



- ಈ ಪುಸ್ತಕದ ಪ್ರಕಟಣೆಗೆ ಪ್ರೇರೇಪಿಸಿದ ಹಾಗೂ ಸಂಪಾದನೆಯಲ್ಲಿ ಸಹಕರಿಸಿದ ಶ್ರೀ ಬಾಕ್ಯ ಅವರಿಗೆ,
- ಅಕ್ಷರ ಸಂಯೋಜನೆಯಲ್ಲಿ ಸಹಕರಿಸಿದ ಶ್ರೀ ಚಂದ್ರಶೇಖರ ಕಬ್ಬಿನಹಿತ್ಲು ಅವರಿಗೆ,
- ಭಾವಚಿತ್ರಗಳ ಸ್ಥಿರೀಕರಣದಲ್ಲಿ ಸಹಕರಿಸಿದ ಶ್ರೀ ಯಚ್. ಗಣಪತಿ ರಾವ್ ಅವರಿಗೆ,
- ಹಿಟ್ಲರ್ ಆಚಾರ್ಯರ ಕುರಿತು ಬರಹ, ಚಿತ್ರ, ನೆನಪಿನೋಲೆಗಳನ್ನು ಬಗೆದು ಅಕ್ಷರ ಕಸೂತಿಗೆ ರಂಗು ಬೆಸೆದ ಎಲ್ಲಾ ಲೇಖಕರಿಗೆ,
- ಅಂದವಾದ ರಕ್ಷಾಪುಟ ಮತ್ತು ಮುದ್ರಣದಲ್ಲಿ ವಿನ್ಯಾಸ ಮೆರೆದ ಶ್ರೀ ನಾಗೇಶ ರಾವ್, ಪ್ರಿಂಟ್ ಮೀಡಿಯಾ, ಮಂಗಳೂರು ಇವರಿಗೆ,
- ನಮ್ಮೆಲ್ಲಾ ಬಂಧು ಮಿತ್ರರಿಗೆ, ಆಚಾರ್ಯರ ಅಭಿಮಾನಿಗಳಿಗೆ, ಪ್ರೀತ್ಯಾದರದ ವಂದನೆಗಳು.

ವೇ. ಮೂ. ಯಚ್. ವಿನೋದ ಆಚಾರ್ಯ

ಶ್ರೀ ಚಿತ್ರಾಪುರ ದುರ್ಗಾಪರಮೇಶ್ವರೀ ಅಮ್ಮನವರು

ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ । ಅವ್ಯಯಃ ಪುರುಷಃ ಸಾಕ್ಷೀ ಕ್ಷೇತ್ರಜ್ಞೋಽಕ್ಷರ ಏವ ಚ ॥ ೨ ॥

ಮನೆ ದೇವರು

ಯೋಗೋ ಯೋಗವಿದಾಂ ನೇತಾ ಪ್ರಧಾನ ಪುರುಷೇಶ್ವರಃ । ನಾರಸಿಂಹವಪುಃ ಶ್ರೀಮಾನ್ ಕೇಶವಃ ಪುರುಷೋತ್ತಮಃ ॥ ೩ ॥

ಶ್ರೀಶ್ರೀಶ್ರೀ ವಿದ್ಯಾಪೂರ್ಣ ತೀರ್ಥ ಸ್ವಾಮೀಜಿ, ಚಿತ್ರಾಪುರ ಮಠ

ಸರ್ವಃ ಶರ್ವಃ ಶಿವಃ ಸ್ಥಾಣುರ್ಭೂತಾದಿರ್ನಿಧಿರವ್ಯಯಃ । ಸಂಭವೋ ಭಾವನೋ ಭರ್ತಾ ಪ್ರಭವಃ ಪ್ರಭುರೀಶ್ವರಃ ॥ ೪ ॥

ಶ್ರೀಮತಿ ಮಹಾಲಕ್ಷ್ಮೀ (ವೆಂಕಟಕೃಷ್ಣ ಆಚಾರ್ಯರ ತಾಯಿ)



ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು

ಶ್ರೀಮತಿ ಕಮಲ (ವೆಂಕಟಕೃಷ್ಣ ಆಚಾರ್ಯರ ಧರ್ಮಪತ್ನಿ)

ಓಂ

ಶ್ರೀ ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ,

ಚಿತ್ರಾಪುರ ಮಠ, ಶ್ರೀ ಚಿತ್ರಾಪುರ ದುರ್ಗಾಪರಮೇಶ್ವರೀ ದೇವಸ್ಥಾನ,
ಕುಳಾಯಿ –575 019. ದ.ಕ.
0824–2408068, 8123088068

ಆಶೀರ್ವಚನ

13–04–2021

ನಾವೆಲ್ಲರೂ ದೇವರ ಈ ಜಗತ್ತಿನಲ್ಲಿದ್ದೇವೆ. ಎಲ್ಲಾ ನೈರ್ಸಗಿಕ ಸೊತ್ತುಗಳನ್ನೂ ಬಳಸುತ್ತಿದ್ದೇವೆ. ಅದಕ್ಕೆ, ಸರ್ಕಾರಕ್ಕೆ ತೆರಿಗೆಯನ್ನು ಕಟ್ಟುತ್ತೇವೆ. ಆದರೆ "ಈಶಾವಾಸ್ಯಮಿದಂ ಸರ್ವಂ "ಎಂಬಂತೆ ಜಗತ್ತಿನ ಒಡೆಯನಾದ ಕೃಷ್ಣನಿಗೆ ಏನು ಕೊಡುತ್ತಿದ್ದೇವೆ? ಎಲ್ಲವೂ ಅವನದ್ದೇ. ಆದ್ದರಿಂದ ಏನು ಕೊಟ್ಟರೂ ಪ್ರಯೋಜನವಿಲ್ಲ, ಕೃಷ್ಣನೇ ಹೇಳುತ್ತಾನೆ – "ನಾನಾಜನಸ್ಯ ಶುಶ್ರೂಷಾ ಕರ್ತವ್ಯಾ ಕರವನ್ಮಿತೇಃ". ಜನರ ಸೇವೆಯೇ ನಾವು ದೇವರಿಗೆ ಕೊಡುವ ತೆರಿಗೆ. ಆದ್ದರಿಂದ ಸಮಾಜದಲ್ಲಿ ಕಷ್ಟದಲ್ಲಿರುವ ಜನರ ಸೇವೆಯನ್ನು ಮಾಡಬೇಕು. ಈ ನಿಟ್ಟಿನಲ್ಲಿ ನಮ್ಮ ಕ್ಷೇತ್ರದ ಭಕ್ತರಾದ, ಅಭಿಮಾನಿಗಳಾದ ವೆಂಕಟಕೃಷ್ಣ ಆಚಾರ್ಯರು ಅನೇಕ ಜನರಿಗೆ ಉಪಕಾರವನ್ನು ಮಾಡಿದ್ದಾರೆ. ಕೃಷ್ಣನ ಅನುಗ್ರಹ ಸದಾ ಅವರಿಗಿತ್ತು ಎನ್ನುವುದು ಅವರ ಜೀವನವೇ ನಮಗೆ ಸಾಕ್ಷಿ. ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ । ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ । ಎನ್ನುವಂತೆ ಅನೇಕ ಅವಘಡಗಳಿಂದ ಪಾರಾಗಿ ದೇವರ ಸೇವೆಯನ್ನು ಮಾಡಿದ್ದಾರೆ. ಅದೇ ದಾರಿಯಲ್ಲಿ ಗುರುರಾಜಾಚಾರ್ಯರು, ಅವರ ಮಕ್ಕಳು ದೇವರ ಸೇವೆಯನ್ನು ಮಾಡುತ್ತಿದ್ದಾರೆ.

ಎಲ್ಲರಿಗೂ ಕ್ಷೇತ್ರಾಧಿಪತಿಯು ಆಯುರಾರೋಗ್ಯವನ್ನು ಕೊಟ್ಟು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇತ್ಯನೇಕ ನಾರಾಯಣ ಸ್ಮರಣೆಗಳೊಂದಿಗೆ,

ಶ್ರೀವಿದ್ಯೇಂದ್ರ ತೀರ್ಥ ಶ್ರೀಪಾದಃ

ಪ್ರಸ್ತಾವನೆ



ಉಪನಿಷತ್ತಿನಲ್ಲಿ ಒಂದು ಮಾತು ಉಂಟು. ಯಃ ಜೀವತಿ ಸ ಜೀವತಿ । ಯಾರು ಇಲ್ಲಿ ಎಲ್ಲಿಯವರೆಗೆ ಜೀವಿಸಿರುತ್ತಾರೆ ಅಲ್ಲಿಯವರೆಗೆ ಅವರು ಮೇಲು ಲೋಕದಲ್ಲೂ ಜೀವಿಸುತ್ತಾರೆ. ಬಹುಶಃ ಅದಕ್ಕಾಗಿ ಹಿರಿಯರ ಹೆಸರು ಉಳಿಯಬೇಕೆಂದು ಮಕ್ಕಳಿಗೆ ಅವರ ಹೆಸರು ಇಡುತ್ತಿದ್ದರು. ಅದೇ ರೀತಿಯಾಗಿ ನನ್ನ ಅಜ್ಜನ ಕುರಿತಾಗಿ ಎಲ್ಲರೂ ಹೇಳುತ್ತಿದ್ದ ಪ್ರಶಂಸೆಯ ಮಾತುಗಳನ್ನು ಕೇಳುತ್ತಿದ್ದ ನಾನು ಸನ್ಮಿತ್ರರಾದಂತಹ ಬಾಲಕೃಷ್ಣರವರ (ಬಾಕೃ) ಪ್ರೇರಣೆಯಿಂದ ಈ ಪುಸ್ತಕದ ರಚನೆಗೆ ಹೊರಟಾಗ ನಮ್ಮ ಗ್ರಾಮದ ಬಹಳಷ್ಟು ಹಿರಿಯರು ನನ್ನ ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದಲ್ಲದೇ ಲೇಖನವನ್ನೂ ಒದಗಿಸಿರುತ್ತಾರೆ. ಅವರಿಗೆಲ್ಲಾ ನಾನು ಆಭಾರಿಯಾಗಿದ್ದೇನೆ. ವಯೋಸಹಜವಾದಂತಹ ದೋಷಗಳಿಂದ ಲೇಖನವನ್ನೂ ಬರೆಯದಿದ್ದರೂ ಪ್ರೋತ್ಸಾಹದ ಮಾತುಗಳಿಂದ ಎಷ್ಟೋ ಹಿರಿಯರು ಆಶೀರ್ವದಿಸಿರುತ್ತಾರೆ. ಅವರಿಗೂ ನಾನು ಚಿರಋಣಿಯಾಗಿದ್ದೇನೆ. ಪುಸ್ತಕದ ಮೌಲ್ಯವನ್ನು ವೃದ್ಧಿಸುವುದರಲ್ಲಿ ವಿಶೇಷವಾಗಿ ಆಶೀರ್ವಚನ ನೀಡಿದ ಶ್ರೀಶ್ರೀಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದರು ಅವರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು. ಪುಸ್ತಕ ಕೇವಲ ಅಜ್ಜನ ಹೊಗಳಿಕೆಗೆ ಸೀಮಿತವಾಗಬಾರದು. ಬೇರೆ ಬೇರೆ ವಿಚಾರಗಳೂ ಅದರಲ್ಲಿ ಇರಬೇಕು ಎಂದು ಆಲೋಚಿಸಿ ಕೇಳಿಕೊಂಡ ತಕ್ಷಣ ಪೂರಕವಾದ ಲೇಖನವನ್ನು ಒದಗಿಸಿದ ವಿದ್ವಾನ್ ಉಮಾಕಾಂತ ಭಟ್, ವಿದ್ವಾನ್ ರಘುಪತಿ ಭಟ್, ವೇದಮೂರ್ತಿ ಸುಬ್ರಹ್ಮಣ್ಯ ಭಟ್, ವೇದಮೂರ್ತಿ ರವೀಂದ್ರ ಭಟ್ ಇವರಿಗೂ ನಾನು ನನ್ನ ತುಂಬು ಹೃದಯದಿಂದ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ. ಒಟ್ಟಿನಲ್ಲಿ ಮಾನವೀಯತೆ ಪ್ರೀತಿ ವಿಶ್ವಾಸಗಳು ಕಮ್ಮಿಯಾಗುತ್ತಿರುವ ಈ ಕಾಲದಲ್ಲಿ ಹಿಂದೆ ಹೀಗೆಲ್ಲಾ ನಡೆಯುತ್ತಿತ್ತು ಎಂದಾಗ ಅದು ಮುಂದೆ ಹುಟ್ಟಿದ ಮಕ್ಕಳಿಗೆ ಅಡುಗೂಲಜ್ಜಿ ಕಥೆಯಾಗಬಾರದು. ಅದಕ್ಕೆ ದಾಖಲಾತಿಗಾಗಿ ಈ ಪುಸ್ತಕ ರಚನೆ. ತಾ. 13-04-2021ನೇ ಮಂಗಳವಾರ ಚಾಂದ್ರಮಾನ ಯುಗಾದಿಯಂದು ವಿವಿಧ ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಚಿತ್ರಾಪುರ ಶ್ರೀಗಳ ಅಮೃತ ಹಸ್ತದಲ್ಲಿ ಬಿಡುಗಡೆಯಾಗುವ ಈ ಹೊತ್ತಗೆ ಮುಂದಿನ ಪೀಳಿಗೆಗೆ ದಾರಿದೀಪವಾಗಲಿ. ಈ ಕಾರ್ಯಕ್ರಮದಿಂದ ಲಭಿಸುವ ಪುಣ್ಯವೆಲ್ಲವನ್ನೂ ನನ್ನ ಅಜ್ಜನ ದಿವ್ಯಾತ್ಮಕ್ಕೆ ಸಮರ್ಪಿಸುತ್ತಾ ನನ್ನ ಅಕ್ಷರ ನಮನವನ್ನು ಪ್ರಣಾಮಗಳೊಂದಿಗೆ ಸಲ್ಲಿಸುತ್ತಿದ್ದೇನೆ.

ವೇ.ಮೂ. ಯಚ್. ವಿನೋದ ಆಚಾರ್ಯ

ಭದ್ರಂ ಶುಭಂ ಮಂಗಲಂ

ನನ್ನ ಅಜ್ಜ ದೊಡ್ಡ ಅಜ್ಜ



ಯಚ್. ವಿಜಯ ಆಚಾರ್

ಹೊಸಬೆಟ್ಟು ಗ್ರಾಮದಲ್ಲಿರುವ ನಮ್ಮ ಮನೆಗೆ ಹೆಸರೇ ವಾದಿರಾಜ ಆಚಾರ್ಯರ ಮನೆ. ತುಳುವಿನಲ್ಲಿ ಅದನ್ನು "ವಾದಿರಾಜೇರ್‌ನ ಇಲ್ಲು" ಎಂದೂ ಕರೆಯುತ್ತಿದ್ದರು.

ಹೊಸಬೆಟ್ಟು ವಾದಿರಾಜ ಆಚಾರ್ಯ ಮತ್ತು ಶ್ರೀಮತಿ ಮಹಾಲಕ್ಷ್ಮೀ ಅಮ್ಮನವರಿಗೆ 12 ಜನ ಮಕ್ಕಳು. 9 ಗಂಡು ಮತ್ತು 3 ಹೆಣ್ಣು. ಆ ಕಾಲದಲ್ಲಿ ಹೆಸರಾಂತ ಪೌರೋಹಿತ್ಯದ ಮನೆತನವಾಗಿತ್ತು. ಆ 9 ಗಂಡು ಮಕ್ಕಳಲ್ಲಿ ಹಿರಿಯವರೇ ನನ್ನ ಅಜ್ಜ – **ದೊಡ್ಡ ಅಜ್ಜ ಶ್ರೀ ವೆಂಕಟಕೃಷ್ಣ ಆಚಾರ್ಯರು.**

ಈ 12 ಜನ ಮಕ್ಕಳಲ್ಲಿ ನಾನು ನೋಡಿರುವ 8 ಗಂಡು ಮತ್ತು 1 ಹೆಣ್ಣು ಮಕ್ಕಳ ಹೆಸರು ಈ ಕೆಳಗಿನಂತಿದೆ.


1. ಶ್ರೀ ವೆಂಕಟಕೃಷ್ಣ ಆಚಾರ್ಯ –ದೊಡ್ಡಜ್ಜ
2. ಶ್ರೀ ಜಿತೇಂದ್ರಿಯ ಆಚಾರ್ಯ –ಕಾಶಿ ಅಜ್ಜ
3. ಶ್ರೀ ನಾರಾಯಣ ಆಚಾರ್ಯ –ಮಡಿ ಅಜ್ಜ
4. ಶ್ರೀ ಶ್ರೀನಿವಾಸ ಆಚಾರ್ಯ – ಮಣಲೂರು ಅಜ್ಜ
5. ಶ್ರೀ ಶ್ರೀಧರ ಆಚಾರ್ಯ (ಗೋಪಾಲಕೃಷ್ಣ) –ಹರಿಕಥೆ ಅಜ್ಜ
6. ಶ್ರೀ ಹರಿದಾಸ ಆಚಾರ್ಯ (ದಾಸಪ್ಪಯ್ಯ) –ದಾಸಜ್ಜ
7. ಶ್ರೀ ರಮಾನಂದ ಆಚಾರ್ಯ
8. ಶ್ರೀ ಸೀತಾರಾಮ ಆಚಾರ್ಯ
9. ಶ್ರೀಮತಿ ವಾಗ್ದೇವಿ

8 ಜನ ದೊಡ್ಡಮ್ಮಂದಿರ ಹೆಸರು ಈ ಕೆಳಗಿನಂತೆ ಇದೆ.

1. ಶ್ರೀಮತಿ ಕಮಲ
2. ಶ್ರೀಮತಿ ಚಂದ್ರಾವಳಿ
3. ಶ್ರೀಮತಿ ಲೀಲಾವತಿ
4. ಶ್ರೀಮತಿ ಜಲಜ
5. ಶ್ರೀಮತಿ ಸತ್ಯಭಾಮ
6. ಶ್ರೀಮತಿ ಶಾರದ ಮತ್ತು ಶ್ರೀಮತಿ ಸರಸ್ವತಿ
7. ಶ್ರೀಮತಿ ಸುಶೀಲ
8. ಶ್ರೀಮತಿ ಜಾನಕಿ ಮತ್ತು ಶ್ರೀಮತಿ ಯಶೋದ
9. ಶ್ರೀಮತಿ ವಾಗ್ದೇವಿ

(ಗಂಡ ಶ್ರೀ ಯು. ರಾಮಚಂದ್ರ ರಾವ್)

ದೊಡ್ಡ ಅಜ್ಜನ ತಂದೆ ವೇದಮೂರ್ತಿ ವಾದಿರಾಜ ಆಚಾರ್ಯರು ತಮ್ಮ 61ನೇ ವಯಸ್ಸಿನಲ್ಲಿ ದೈವಾಧೀನರಾದಾಗ ಇನ್ನೂ ಸಣ್ಣ ಮಕ್ಕಳಾಗಿದ್ದ ರಮಾನಂದ ಅಜ್ಜ ಮತ್ತು ಸೀತಾರಾಮ ಅಜ್ಜನನ್ನು ನೋಡಿಕೊಳ್ಳುವ ಜವಾಬ್ದಾರಿಯು ದೊಡ್ಡ ಅಜ್ಜನ



ಹೆಗಲಿಗೆ ಬಿದ್ದಿತ್ತು. ಅವರಿಬ್ಬರನ್ನೂ ತನ್ನ ಮಕ್ಕಳಂತೆ ಸಾಕಿದರು ಎಂದು ಕೇಳಲ್ಪಟ್ಟಿದ್ದೇನೆ.

ದೊಡ್ಡ ಅಜ್ಜ ಊರಿನಲ್ಲಿ ಪೌರೋಹಿತ್ಯ ಕೆಲಸದ ಜತೆಯಲ್ಲಿ ಬೇಸಾಯವನ್ನು ಮಾಡುತ್ತಿದ್ದರು. ನಾರಾಯಣ ಅಜ್ಜ ಶ್ರೀ ಲಕ್ಷ್ಮೀ ವೆಂಕಟೇಶ ಪ್ರಾರ್ಥನಾ ಮಂದಿರದಲ್ಲಿ ಪೂಜೆ, ತೋಟದ ಕೆಲಸ, ಬೇಸಾಯದಲ್ಲಿ ಅಜ್ಜನಿಗೆ ಸಹಾಯ, ಸಣ್ಣ ಪುಟ್ಟ ಪೌರೋಹಿತ್ಯಗಳಿಗೆ, ಮುಖ್ಯಪ್ರಾಣ ಮಠದಲ್ಲಿ ಪಾರಾಯಣ ಮಾಡಲು ಹೋಗುತ್ತಿದ್ದರು. ಇನ್ನು ಹರಿಕಥೆ ಅಜ್ಜ ಹೆಚ್ಚಾಗಿ ಪರವೂರುಗಳಲ್ಲಿ ಹರಿಕಥೆ, ಪ್ರವಚನ, ಪೂಜೆಗಳನ್ನು ಮಾಡುತ್ತಾ ಇದ್ದರು. ಅವರು ಊರಿನಲ್ಲಿ ಇರುತ್ತಿದ್ದುದೇ ಕಡಿಮೆ. ಆಟಿ ತಿಂಗಳಿನಲ್ಲಿ ಮಾತ್ರ ಪೂರ್ತಿ ಒಂದು ತಿಂಗಳು ಊರಲ್ಲಿ ಇರುತ್ತಿದ್ದರು. ಯಾಕೆಂದರೆ ಆ ಸಮಯದಲ್ಲಿ ಹೆಜಮಾಡಿಯ ಭಾರತ ಭಜನಾ ಮಂಡಲಿ, ಗುಡ್ಡೆಕೊಪ್ಲ, ಹೊಸಬೆಟ್ಟು ಭಜನಾ ಮಂದಿರಗಳಲ್ಲಿ ಪ್ರವಚನ ಇರುತ್ತಿತ್ತು.

ಎರಡು ಜನ ಅಜ್ಜಂದಿರು ತಾವು ಸಂಪಾದನೆ ಮಾಡಿದ ಹಣವನ್ನು ತಂದು ದೊಡ್ಡ ಅಜ್ಜನ ಬಳಿಯೇ ನೀಡುತ್ತಿದ್ದರು. ಅಜ್ಜ ಅವರು ನೀಡಿದ ಹಣದ ಪೈ ಟು ಪೈ ಲೆಕ್ಕವನ್ನು ಪುಸ್ತಕದಲ್ಲಿ ತುಳು ಲಿಪಿಯಲ್ಲಿ ಬರೆದಿಡುತ್ತಿದ್ದರು. ಅಜ್ಜನ ಸಹಿ, ಬರಹಗಳು ತುಳು ಲಿಪಿಯಲ್ಲಿರುತ್ತಿದ್ದವು. ಮನೆಯ ಎಲ್ಲರ ಖರ್ಚು ವೆಚ್ಚಗಳ ಮೇಲ್ವಿಚಾರಣೆಯು ನನ್ನ ಅಜ್ಜನದ್ದೇ ಆಗಿತ್ತು. ಅದರಲ್ಲಿ ಸ್ವಲ್ಪ ಹಣವನ್ನು " ಆಪದ್ಧನ " ಎಂದು ಬರೆದು ಬೇರೆಯೇ ತೆಗೆದಿಡುತ್ತಿದ್ದರು. ಮನೆಯಲ್ಲಿದ್ದವರೆಲ್ಲಾ ಊಟ ಮುಂತಾದ ಸಮಾರಂಭಗಳಿಗೆ ಹೋದಾಗ ಸಿಕ್ಕುವ ದಕ್ಷಿಣೆಯನ್ನು ತಂದು ಅಜ್ಜನ ಬಳಿ ಕೊಡಬೇಕಾಗಿತ್ತು. ಅದನ್ನು ಪುಸ್ತಕದಲ್ಲಿ ಬರೆದಿಡುತ್ತಿದ್ದರು. ಪ್ರತಿದಿನವೂ ಲೆಕ್ಕವನ್ನು ಬರೆಯದಿದ್ದರೆ ಅಜ್ಜನಿಗೆ ನಿದ್ದೆ ಬರುತ್ತಾ ಇರಲಿಲ್ಲ. ಮನೆಯಲ್ಲಿ ಮೊಗವೀರ ಸಮಾಜದವರ, ಇತರ ವರ್ಗದವರ ಸತ್ಯನಾರಾಯಣ ಪೂಜೆ, ಶನಿಪೂಜೆ, ದುರ್ಗಾನಮಸ್ಕಾರ, ಸರ್ಪಸಂಸ್ಕಾರ, ತಂಬಿಲ, ತಿಲಹೋಮ, ಗಣಹೋಮ, ವೈಕುಂಠ ಸಮಾರಾಧನೆಗಳು, ಊಟಗಳು ಇಲ್ಲದ ದಿನಗಳೇ ಕಡಿಮೆ. ಅಡುಗೆಯವರಂತೂ ನಮ್ಮಲ್ಲಿ ಇಲ್ಲದ ದಿನಗಳೇ ಕಡಿಮೆ. ಕೆಲವು ಸಲ ಬೆಳಿಗ್ಗೆ ಮತ್ತು ರಾತ್ರಿ

ಎರಡೂ ಹೊತ್ತೂ ಬೇರೆ ಬೇರೆಯವರ ಪೂಜೆಗಳು ಇರುತ್ತಿತ್ತು. ಬೆಳಿಗ್ಗೆ ಇಟ್ಟ ದೇವರ ಮಂಟಪವನ್ನು ರಾತ್ರಿ ತೆಗೆಯುವುದು. ಸಣ್ಣ ಸಣ್ಣ ಊಟಗಳಿಗೆ ಅಡಿಗೆಯನ್ನು ದೊಡ್ಡಜ್ಜ, 3 ಜನ ದೊಡ್ಡಮ್ಮಂದಿರು, ಸಹಾಯಕ್ಕೆ ಗುಡ್ಡೆ ನಾರಾಯಣ ಅಜ್ಜ ಸೇರಿ ಮಾಡುತ್ತಿದ್ದರು. ಅಡಿಗೆ ಮಾಡುವುದರಲ್ಲಿ ಶ್ರೀಧರ ಅಜ್ಜನ ಹೆಂಡತಿ ಸತ್ಯ ದೊಡ್ಡಮ್ಮ ನನ್ನ ಅಜ್ಜನಿಗೆ ಬಲಗೈ. ಅವರನ್ನು ಕೇಳಿಯೇ ಮಸಾಲೆ ಹಾಕುತ್ತಿದ್ದರು. ಅಜ್ಜನಿಗೆ ಸಿಹಿ ಅಂದರೆ ಪಂಚಪ್ರಾಣ. ಗೋಧಿಕಡಿ ಪಾಯಸ ಇಷ್ಟ. ತುಪ್ಪ ಮತ್ತು ಸಕ್ಕರೆ ಹಾಕಿ ಗೋಧಿಕಡಿ ಪಾಯಸವನ್ನು ಕೇಳಿ ಹಾಕಿಸಿಕೊಂಡು ತಿನ್ನುತ್ತಿದ್ದರು. ಸಕ್ಕರೆ ಕಾಯಿಲೆ ಬರುವ ಮೊದಲು ಸಮಾರಂಭಗಳಲ್ಲಿ ಊಟಕ್ಕೆ ಕುಳಿತರೋ ಸಿಹಿ ತಿಂಡಿ ತಿನ್ನುವ ಸ್ಪರ್ಧೆಗೆ ಇಳಿಯುತ್ತಿದ್ದರಂತೆ. ಅದರಲ್ಲಿ ಅಜ್ಜನೇ ಗೆಲ್ಲುತ್ತಿದ್ದರಂತೆ. ಸಕ್ಕರೆ ಕಾಯಿಲೆ ಬಂದ ನಂತರ ಸ್ವಯಂ ನಿಯಂತ್ರಣದಿಂದ ರಾತ್ರಿಯ ಊಟವನ್ನು ಬಿಟ್ಟು ಸಜ್ಜಿಗೆ ಗಂಜಿ ಅಥವಾ ರಾಗಿ ಅಥವಾ ಗೋಧಿಯ ದೋಸೆಯನ್ನು ತಿನ್ನುತ್ತಿದ್ದರು. ಡಯಾನಿಲ್ ಮಾತ್ರೆಯನ್ನು ಪ್ರತಿನಿತ್ಯ ಸೇವಿಸುತ್ತಿದ್ದರು.

ನಮ್ಮ ಮನೆಯ ಒಕ್ಕಲಿನವರನ್ನು ತಮ್ಮ ಮನೆಯವರಂತೆ ಪ್ರೀತಿಯಿಂದ ನೋಡಿ ಕೊಳ್ಳುತ್ತಿದ್ದರು. ಗಣೇಶ ಚತುರ್ಥಿ ದಿನ ಮೊಗವೀರ ಸಮಾಜದವರ ಮತ್ತು ಇತರರ ಮನೆಗಳಲ್ಲಿ ಗಣಹೋಮಗಳು ಇರುತ್ತಿತ್ತು. ಅವರ ಮನೆಗಳಲ್ಲಿ ಸಿಕ್ಕಿದ ತೆಂಗಿನಕಾಯಿಗಳನ್ನು ಭಜನಾ ಮಂದಿರದಲ್ಲಿ ಒಟ್ಟುಗೂಡಿಸಿ ಮನೆಗೆ ತರುವ ಜವಾಬ್ದಾರಿಯು ನಮ್ಮ ಒಕ್ಕಲಿನ ಭವಾನಿಯದ್ದು ಆಗಿತ್ತು. ಅಂತೆಯೇ ನಾಗರಪಂಚಮಿಯ ದಿನ ನಾಗಬನದಿಂದ ನಾಗನಿಗೆ ಹಾಕಿದ ಬೊಂಡದೊಟ್ಟೆಗಳನ್ನು ತಂದು ಮನೆಗೆ ಹಾಕುವುದು, ಮಧ್ವರಾಯರ ಅಂಗಡಿಯಿಂದ ತುಂಬಾ ಸಾಮಾನುಗಳು ಇದ್ದಾಗ ಮನೆಗೆ ತರುವ ಜವಾಬ್ದಾರಿಯೂ ಭವಾನಿಗೆ ಇತ್ತು. ಅವರ ಮಕ್ಕಳಾದ ಜಲಜ, ಪದ್ಮ, ಕುಸುಮ ನಮ್ಮ ಮನೆಯ ಕೆಲಸಕ್ಕೆ, ಪಾತ್ರೆ ತೊಳೆಯಲು, ಪ್ರತಿದಿನ ಕ್ಲೀನ್ ಮಾಡಲು ಬರುತ್ತಿದ್ದರು. ಅವಳ ಗಂಡ ರಾಮಪ್ಪ ಮತ್ತು ಮಗ ಚನ್ನಪ್ಪ ಗದ್ದೆಯ ಕೆಲಸಗಳಿಗೆ ನಮ್ಮಲ್ಲಿಗೆ ಬರುತ್ತಿದ್ದರು. ನಮ್ಮಲ್ಲಿ ಅಕ್ಕಿಮುಡಿಯನ್ನು ಕಟ್ಟಲು ಮುಡಿರಾಮ ಬರುತ್ತಾ ಇದ್ದರು. ಅವರುಗಳು ಅಜ್ಜನನ್ನು ಮಲ್ಲ ದನಿಕುಲು ಎಂದು ಕರೆಯುತ್ತಾ ಇದ್ದರು.

ಮೂರು ಜನ ಅಜ್ಜಂದಿರು ಒಗ್ಗಟ್ಟಿನಿಂದ ಇದ್ದಂತೆ ಮೂರು ಜನ ದೊಡ್ಡಮ್ಮಂದಿರೂ ಒಟ್ಟಾಗಿ ಇದ್ದರು. ಅವರಲ್ಲಿ ಏನಾದರೂ ಸಣ್ಣಪುಟ್ಟ ವ್ಯತ್ಯಾಸಗಳು ಉಂಟಾಗಿ ಚರ್ಚೆ ನಡೆದಾಗ ನನ್ನ ಅಜ್ಜ ನನ್ನ ದೊಡ್ಡಮ್ಮನಿಗೇ ಬುದ್ಧಿಯನ್ನು ಹೇಳುತ್ತಾ ಇದ್ದರು. ಯಾಕೆಂದರೆ ಹಿರಿಯರಿಗೆ ಬುದ್ಧಿ ಹೇಳಿದರೆ ಕಿರಿಯರು ತಪ್ಪನ್ನು ತಿದ್ದಿಕೊಳ್ಳುತ್ತಾರೆ ಎಂದು ಅವರ ನಂಬಿಕೆ. ಮನೆಯಲ್ಲಿದ್ದ ಮೂರು ಜನ ಅಜ್ಜಂದಿರು ದೇಹ ಬೇರೆ ಬೇರೆಯಾದರೂ ಪ್ರಾಣ ಒಂದೇ ಎಂಬಷ್ಟು ಅನ್ಯೋನ್ಯತೆಯಿಂದ ಒಗ್ಗಟ್ಟಾಗಿದ್ದರು. ಅವರಿಬ್ಬರಿಗೆ ದೊಡ್ಡಜ್ಜನ ಮಾತೇ ವೇದವಾಕ್ಯ.

8 ಜನ ಅಜ್ಜಂದಿರಲ್ಲಿ 5 ಜನ ಅಜ್ಜಂದಿರು 1969ನೇ ಇಸವಿಯಲ್ಲಿ ಒಟ್ಟಿರುವ ಆಸ್ತಿಯನ್ನು ಪಾಲು ಮಾಡಿಕೊಂಡರು. ದೊಡ್ಡ ಅಜ್ಜ, ನಾರಾಯಣ ಅಜ್ಜ, ಶ್ರೀಧರ ಅಜ್ಜ ಮಾತ್ರ ಆಸ್ತಿಯನ್ನು ಪಾಲು ಮಾಡಿಕೊಳ್ಳದೇ ಒಂದೇ ಮನೆಯಲ್ಲಿ ಒಗ್ಗಟ್ಟಾಗಿದ್ದರು. 1978–79ನೇ ಇಸವಿಯಲ್ಲಿ ಹೈದರಾಬಾದ್‌ನಲ್ಲಿದ್ದ ಕಾಶಿ ಅಜ್ಜನಿಗೆ ಆರೋಗ್ಯ ಸರಿ ಇಲ್ಲವೆಂದು ಕಾಗದ ಬಂದ ಪ್ರಯುಕ್ತ ದೊಡ್ಡ ಅಜ್ಜ ಹೈದರಾಬಾದ್‌ಗೆ ಹೋಗಿ ಅವರೊಡನೆ ಸ್ವಲ್ಪ ಸಮಯವನ್ನು ಕಳೆದು ಅವರು ಸುಧಾರಿಸಿಕೊಂಡರು ಎಂದು ಭಾವಿಸಿ ವಾಪಾಸು ಊರಿಗೆ ಹೋಗುವ ದಾರಿಯಲ್ಲಿ ಹರಿಹರಕ್ಕೆ ಬಂದಿದ್ದರು. ಆ ದಿನವೇ ಕಾಶಿ ಅಜ್ಜ ದೈವಾಧೀನರಾದರು ಎಂದು ಟೆಲಿಗ್ರಾಂ ಬಂದು ಪುನಃ ಹೈದರಾಬಾದ್‌ಗೆ ವಾಪಾಸು ಹೋಗಿ ಅವರ ಅಂತ್ಯಕ್ರಿಯೆಗಳನ್ನೆಲ್ಲಾ ತೀರಿಸಿ ಬಂದರು. ಇದು ನಾನು ನಮ್ಮ ಮನೆಯಲ್ಲಿ ಕೇಳಿದ ಮೊದಲ ಮರಣವಾರ್ತೆ.

ದೀರ್ಘ ಕಾಲದ ಒಗ್ಗಟ್ಟಿನ ಜೀವನದ ನಂತರ 1980ನೇ ಇಸವಿಯಲ್ಲಿ ಮುಂದಿನ ಪೀಳಿಗೆಯವರಿಗೆ ತೊಂದರೆಯಾಗಬಾರದು ಎಂದು ಒಲ್ಲದ ಮನಸ್ಸಿನಿಂದ ಮೂರು ಜನ ಅಜ್ಜಂದಿರು ತಮ್ಮ ತಮ್ಮ ಭಾಗದ ಆಸ್ತಿಯನ್ನು ಪಾಲು ಮಾಡಿಕೊಂಡರು. ಆದರೂ ಒಗ್ಗಟ್ಟಿನಿಂದ ಪ್ರತಿದಿನವೂ ಒಟ್ಟಿಗೆ ಕೂತು

ಉಭಯ ಕುಶಲೋಪರಿ ಮಾತಾಡಿಕೊಳ್ಳುತ್ತಿದ್ದರು. ದಾಸಜ್ಜ ಕಾರವಾರದಿಂದ ಕರೆತಂದ ತಮಿಳುನಾಡಿನ ಮೇಸ್ತ್ರಿ ಮತ್ತು ಅವನ ಮನೆಯವರು ಸೇರಿ ನಾರಾಯಣ ಅಜ್ಜನಿಗೆ ನಮ್ಮ ಮನೆಯ ಕೆಳಗಿನ ಅವರ ಪಾಲಿನ ಜಾಗದಲ್ಲಿ ಮನೆಯನ್ನು ಕಟ್ಟಿದ ನಂತರ ಆ ಮನೆಗೆ ದುಂಧುಬಿ ಎಂದು ಹೆಸರಿಟ್ಟು – ನಾರಾಯಣ ಅಜ್ಜ ಮತ್ತು ಲೀಲಾವತಿ ದೊಡ್ಡಮ್ಮ ಆ ಮನೆಯಲ್ಲಿ ವಾಸಿಸುತ್ತಾ ಇದ್ದರು. ಸ್ವಲ್ಪ ಕಾಲದ ನಂತರ ಲೀಲಾವತಿ ದೊಡ್ಡಮ್ಮನಿಗೆ ಕಾಲು ನೋವು ಜೋರಾದಾಗ ಅವರನ್ನು ಹೊಸದುರ್ಗಕ್ಕೆ ಕರಕೊಂಡು ಹೋಗಿ ರಾಜ ಚಿಕ್ಕಪ್ಪನ ಬಳಿ ಬಿಟ್ಟು, ನಾನು ಬಂದು ಈ ಮನೆಯಲ್ಲಿ ಇರುತ್ತೇನೆಂದು ಹೇಳಿ ಹೋದ ನಾರಾಯಣಜ್ಜ, ಅಲ್ಲಿಗೆ ಹೋದ ಕೆಲವೇ ದಿನಗಳಲ್ಲಿ ನಿಧನರಾದರು ಎಂದು ಟೆಲಿಗ್ರಾಂ ಬಂದಾಗ ನಮಗೆಲ್ಲಾ ದಿಗ್ಭ್ರಮೆ. ಕೂಡಲೇ ದೊಡ್ಡ ಅಜ್ಜ ಮಧ್ಯಾಹ್ನ ಇದ್ದ ಸರಕಾರಿ ಬಸ್ಸಿನಲ್ಲಿ ಹೊಸದುರ್ಗಕ್ಕೆ ಹೋಗಿ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದರು. ಇದು ನಮ್ಮ ಮನೆಯಲ್ಲಿ ನಾನು ಕೇಳಿದ 2ನೇ ಮರಣ ವಾರ್ತೆ.

ಕೆಲವು ಸಮಯದ ಬಳಿಕ ದಾಸಜ್ಜ ಅನಾರೋಗ್ಯದಿಂದ ಮರಣ ಹೊಂದಿದಾಗ, ಅವರ ಅಂತ್ಯಸಂಸ್ಕಾರವನ್ನು ದೊಡ್ಡ ಅಜ್ಜನ ಆಸೆಯಂತೆ ಗೋಂಟುಸಾಲು ಗದ್ದೆಯಲ್ಲಿ ನೆರವೇರಿಸಿದ್ದು, ಅವರ ಅಪರ ಕ್ರಿಯಾ ಕರ್ಮಗಳನ್ನು ಅಜ್ಜನ ಮುಂದಾಳುತನದಲ್ಲಿ ಸುಸೂತ್ರವಾಗಿ ನಡೆಸಿದ್ದು, ಆ ಸಮಯದಲ್ಲಿ ದಾಸಜ್ಜನ ಮಗ ಕೃಪಾಕರ ಚಿಕ್ಕಪ್ಪನಿಗೆ ಅಜ್ಜ "ತಂಡೇಲ" ಎಂಬ ಬಿರುದು ನೀಡಿದ್ದು ಎಲ್ಲಾ ಚರಿತ್ರೆ.



ದಾಸಜ್ಜನಂತೂ ಕೊನೆಕೊನೆಗೆ ಬೆಳಿಗ್ಗೆಯಿಂದ ರಾತ್ರಿಯವರೆಗೂ ನಮ್ಮ ಮನೆಗೆ ಬಂದು ಅಜ್ಜನ ಜೊತೆ ಮಾತಾಡುತ್ತಾ ಕುಳಿತಿರುತ್ತಿದ್ದರು. ದಾಸಜ್ಜನ ಮರಣ ನಮ್ಮ ಮನೆಯಲ್ಲಿ ನಾನು ನೋಡಿದ ಮೂರನೇ ಮರಣ.

ನಮ್ಮ ಪಿಜ್ಜ ವೇದಮೂರ್ತಿ ವಾದಿರಾಜ ಆಚಾರ್ಯರು ಮತ್ತು ಪಿಜ್ಜಿ ಶ್ರೀಮತಿ ಮಹಾಲಕ್ಷ್ಮೀ ಅಮ್ಮನವರು ನಮ್ಮ ವಂಶದ ಎರಡು ಬೇರುಗಳು. ಈ ಬೇರಿನಲ್ಲಿ ಹುಟ್ಟಿದ ವಿಶಾಲವಾದ ಮರದ ಕಾಂಡದ 9 ಕೊಂಬೆಗಳಲ್ಲಿ 3 ಕೊಂಬೆಗಳು ಇಲ್ಲಿಗೆ ಉರುಳಿದವು.

ದೊಡ್ಡ ಅಜ್ಜನ ನೇತೃತ್ವದಲ್ಲಿ ತಾವಿರುವ ಮನೆ, ದಾಸಜ್ಜನ ಮನೆ "ಶಾರದಾ ಮಹಲ್", ಸೀತಾರಾಮಜ್ಜನ ಮನೆಯನ್ನು ತಾವೇ ನಿಂತು ಕಟ್ಟಿಸಿದ್ದರು. ಅದರಲ್ಲಿ ದಾಸಜ್ಜನ ಜಾಗದಲ್ಲಿ ಕಟ್ಟಿದ ಮನೆ ಮಾತ್ರ ಇನ್ನು ಗಟ್ಟಿಮುಟ್ಟಾಗಿದೆ. ನಮ್ಮ ಮನೆಯನ್ನು ಬಿಚ್ಚಿ ಈಗ 3 ಮನೆ ಮಾಡಿದೆ. ಸೀತಾರಾಮಜ್ಜನ ಮನೆಯನ್ನು ಮೊನ್ನೆ 2020, ಫೆಬ್ರವರಿಯಲ್ಲಿ ತೆಗೆದು ವಾಣಿಜ್ಯ ಸಂಕೀರ್ಣ ನಿರ್ಮಿಸಲಾಗುತ್ತಿದೆ.

1972ನೇ ಇಸವಿಯಲ್ಲಿ ಹರಿಹರದ ಸರಕಾರಿ ಶಾಲೆಯಲ್ಲಿ 1ನೇ ತರಗತಿಯಲ್ಲಿ ಕಲಿಯುತ್ತಿದ್ದ ನನ್ನನ್ನು ದೊಡ್ಡ ಅಜ್ಜ ಅವರ ಜೊತೆ ಊರಿಗೆ ಕರೆತಂದರು. ಅವರಿಗೆ ತನ್ನ ಕಡೆಯವರು ಯಾರೂ ತನ್ನೊಟ್ಟಿಗೆ ಇಲ್ಲ ಮತ್ತು ಮನೆಯಲ್ಲಿ ಚಿಕ್ಕ ಮಕ್ಕಳು ಇಲ್ಲ ಎಂಬ ಭಾವನೆ ಕಾಡುತ್ತಿತ್ತು. ಅದಕ್ಕಾಗಿ ನನ್ನನ್ನು ಕರೆತಂದು ಮೈರ್ಪಾಡಿ ವೆಂಕಟ್ರಮಣ ಹಿರಿಯ ಪ್ರಾಥಮಿಕ ಶಾಲೆ (ಕುಳ್ಯಾ) ಗೆ ಅವರೇ ಕರಕೊಂಡು ಹೋಗಿ ಪುನಃ 1ನೇ ಕ್ಲಾಸ್‌ಗೆ ಸೇರಿಸಿದರು. ಆಗ ಮನೆಗೆ ನಾನೇ ಸಣ್ಣವ. ಮನೆಯಲ್ಲಿ ಹರಿಕಥೆ ಅಜ್ಜನ ಮಕ್ಕಳಾದ ಹಯವದನ ಚಿಕ್ಕಪ್ಪ, ಸಾವಿತ್ರಿ ಅತ್ತೆ, ಗಾಯತ್ರಿ ಅತ್ತೆ, ವ್ಯಾಸ ಚಿಕ್ಕಪ್ಪ ಇದ್ದರು. ಹರಿಹರದಿಂದ ಕರೆತಂದ ವಾಗ್ದೇವಿ ದೊಡ್ಡಮ್ಮನ ಮಗ ಯಜ್ಞೇಶಣ್ಣ ಇದ್ದರು. ಉಳಿದವರೆಲ್ಲಾ ಪರವೂರಿನಲ್ಲಿ ಉದ್ಯೋಗದಲ್ಲಿ ಇದ್ದರು. ನಾನು ಸಣ್ಣವನಾದ್ದರಿಂದ ನನ್ನ ಎಲ್ಲಾ ಕೆಲಸ ಕಾರ್ಯಗಳನ್ನು ಸಾವಿತ್ರಿ ಅತ್ತೆ ಮತ್ತು ಗಾಯತ್ರಿ

ಅತ್ತೆಯೇ ಮಾಡುತ್ತಿದ್ದರು. ಅವರೊಟ್ಟಿಗೆ ನಾನು ಆಟಪಾಠವಾಡುತ್ತಾ ಬೆಳೆದೆ. ನಾನು ಹುಟ್ಟಿದಾಗ ದೊಡ್ಡ ಅಜ್ಜನ ತಾಯಿ ಶ್ರೀಮತಿ ಮಹಾಲಕ್ಷ್ಮೀ ಅಮ್ಮನವರು ನನ್ನನ್ನು ಚಿನ್ನದ ನೀಲಾಂಜನದಲ್ಲಿ ದೀಪ ಹಚ್ಚಿ ನನ್ನ ಮುಖ ನೋಡಿದ್ದರೆಂದು ಅವರಿಂದ ಕೇಳಿ ತಿಳಿದಿದ್ದೇನೆ.

ಅಜ್ಜ – ಅಜ್ಜಿ ಸಾಕಿದ ಮಳ್ಳಿಯಾಗಿ ಬೆಳೆದ ನನಗೆ ಅಜ್ಜನ ಮಾತುಗಳೇ ವೇದವಾಕ್ಯ. ಅವರೊಟ್ಟಿಗೆ ಎಲ್ಲಾ ಕಡೆ ಓಡಾಡುತ್ತಾ ಬೆಳೆದೆ. 1974–75ನೇ ಇಸವಿಯಲ್ಲಿ 2ನೇ ತರಗತಿಯಲ್ಲಿ ಓದುತ್ತಿದ್ದ ನನಗೆ ಮನೆಯಲ್ಲೇ ವಿಜ್ರಂಭಣೆಯಿಂದ ಉಪನಯನವನ್ನು ಮಾಡಿದರು. ಅವರೇ ಜಪವನ್ನು ಕಲಿಸಿಕೊಟ್ಟರು. ನಂತರ ಅಜ್ಜನೊಟ್ಟಿಗೆ ಪೂಜೆಗಳಿಗೆ ಸಹಾಯಕ್ಕೆ ಹೋಗುವುದು, ನಂತರ ಬಂದು ಶಾಲೆಗೆ ಹೋಗುವುದು, ಶಾಲೆಯಿಂದ ಬಂದ ನಂತರ ನೆರೆಮನೆಯ ಮಕ್ಕಳೊಟ್ಟಿಗೆ ಜಾಲಿನಲ್ಲಿ, ಕಾಡಿನಲ್ಲಿ ಆಟವಾಡುವುದು. ಸಂಜೆ ಜಪ, ಪೂಜೆ, ಸಂಕೀರ್ತನೆ ಇದೇ ನನ್ನ ದಿನಚರಿಯಾಯಿತು. ಪ್ರತಿದಿನವೂ ಮನೆಯಲ್ಲಿ ಪೂಜಾ ಕಾರ್ಯಕ್ರಮಗಳು ನಡೆಯುತ್ತಾ ಇತ್ತು.

ಬೆಳಿಗ್ಗೆ 4 ಗಂಟೆಗೆ ಎದ್ದು ಎಲೆ ಅಡಿಕೆ ತಿಂದು, ಬಿಸಿ ನೀರು ಒಲೆಗೆ ಉರಿ ಹಾಕಿ, ಸ್ನಾನ ಮಾಡಿ ಪೂಜೆಗೆ ಕುಳಿತರೆ 7 ಗಂಟೆಗೆ ಪೂಜೆ. ನಂತರ ತಿಂಡಿ ತಿಂದು ಪೇಪರ್ ಓದುವುದು. ನಂತರ ಪೌರೋಹಿತ್ಯ ಕೆಲಸಕ್ಕೂ, ಗದ್ದೆ ತೋಟದ ಬಳಿ ಕೆಲಸಕ್ಕೂ ಹೋಗುವುದು. ಮಧ್ಯಾಹ್ನ 12.30ಕ್ಕೆ ಊಟ ಆಗಲೇಬೇಕು. ಸ್ವಲ್ಪ ಮಲಗಿ 3 ಗಂಟೆಗೆ ಕಾಫಿ ಕುಡಿದು ನಂತರ ಕೆಲಸಗಳು. ಸಂಜೆ ಸ್ನಾನ, ಜಪ. 7.15ಕ್ಕೆ ಪೂಜೆ ಸಂಕೀರ್ತನೆ, ನಂತರ ವಾರ್ತೆ ಕೇಳಿ ಫಲಾಹಾರ ಮಾಡುವುದು ಅಜ್ಜನ ದೈನಂದಿನ ದಿನಚರಿಯಾಗಿತ್ತು. ಜೊತೆಯಲ್ಲಿದ್ದ ಅಜ್ಜಂದಿರು ಮತ್ತು ಅವರ ಮಕ್ಕಳು ಅಜ್ಜ ಹಾಕಿದ ಗೆರೆ ದಾಟುತ್ತಿರಲಿಲ್ಲ. ಅವರ ಮಾತೇ ವೇದವಾಕ್ಯ. ಮನೆಯಲ್ಲಿ ಹೊಸ ಬಟ್ಟೆಗಳನ್ನು ಎಲ್ಲರಿಗೂ ಒಟ್ಟಾಗಿಯೇ ತರುತ್ತಿದ್ದರು. ಶಾಲೆಯಿಂದ ಬಂದ ನಂತರ ನಮ್ಮ ಗದ್ದೆಯಲ್ಲಿ ಬೆಳೆದ ಎಳ್ಳಿನ ಗಿಡ, ಉದ್ದಿನ ಗಿಡ, ಹೆಸರು ಗಿಡಗಳನ್ನು ಕೊಯ್ಯುವುದು. ಮನೆಗೆ ತರುವುದು. ಬತ್ತದ ಹುಲ್ಲುಗಳನ್ನು ಮಾರ್ಗದ ಬದಿ ಒಣಗಲು ಹಾಕುವುದು, ಒಣಗಿದ ನಂತರ ಅದನ್ನು ಮನೆಗೆ ತರುವುದು, ಮುಟ್ಟೆ ಕಟ್ಟುವುದು. ಮಳೆಗಾಲ ಆರಂಭವಾಗುವಾಗ ಚಪ್ಪರ ಬಿಚ್ಚಿ ತಟ್ಟಿ ಕಟ್ಟುವುದು. ಕೆರೆ ಬದಿಯಿಂದ ಹ್ಯೊಗೆ ತಂದು ಜಾಲಿಗೆ ಬಿಡಿಸುವುದು. ಮಳೆಗಾಲ ಮುಗಿದ ನಂತರ ಅದನ್ನು ಜಾಲಿನಲ್ಲಿ ರಾಶಿ ಮಾಡಿ ತರಕಾರಿ ಗಿಡಗಳನ್ನು ನೆಡುವುದು. ಬೇಸಿಗೆ ಕಾಲದಲ್ಲಿ ಗದ್ದೆಯಲ್ಲಿ ಹಾಕಿದ ಸೌತೆಕಾಯಿ, ಗೆಣಸು, ಚೀನಿ ಕಾಯಿ, ಕುಂಬಳಕಾಯಿ ಗಿಡಗಳಿಗೆ ನೀರು ತೇಪುವುದು. ತರಕಾರಿಗಳನ್ನು ಕೊಯ್ದು ಮನೆಗೆ ತರುವುದು. ಅಂಗಡಿಯಿಂದ ತಂದ



ಕಟ್ಟಿಗೆಗಳನ್ನು ಅಟ್ಟದಲ್ಲಿ ಸಾಲಾಗಿ ಜೋಡಿಸುವುದು ಮುಂತಾದ ಕೆಲಸಗಳನ್ನು ಮಾಡಿದಾಗ ಅಜ್ಜ ನಮಗೆ ಸಿನಿಮಾವನ್ನು ನೋಡಲು ಹಣವನ್ನು ನೀಡುತ್ತಿದ್ದರು. ಮನೆಯ ಪಕ್ಕದ ಅಡಿಗೆ ಕೋಣೆಯನ್ನು ಕಟ್ಟಲು ಮರದ ಚೌಕವನ್ನು ತಂದು ಮಣ್ಣನ್ನು ಹುಳಿ ಬರೆಸಿ, ನಮ್ಮ ಅಂಗಳದಲ್ಲಿ ಇಟ್ಟಿಗೆಗಳನ್ನು ಸ್ವತಃ ಮಾಡಿ ಸಾಲಾಗಿ ಜೋಡಿಸಿಟ್ಟದ್ದನ್ನು ನಾನೇ ನೋಡಿದ್ದೇನೆ. ಇತರರ ಕಾರ್ಯಕ್ರಮಗಳನ್ನು ಮನೆಯಲ್ಲಿ ವಹಿಸಿಕೊಳ್ಳುವಾಗ ಅವರಿಗೆ ಒಂದು ನಿರ್ದಿಷ್ಟ ಮೊತ್ತವನ್ನು ಹೇಳಿ, ಸ್ವಲ್ಪ ಕಮ್ಮಿ ಮಾಡಿ ಎಂದಾಗ ಆಯಿತು ನಿನಗೆ ಎಷ್ಟು ಆಗುತ್ತೋ ಅಷ್ಟು ಕೊಡು ಎಂದು ಅವರು ಕೊಟ್ಟದ್ದನ್ನು ತಗೊಂಡು ಕಾರ್ಯಕ್ರಮ ಮಾಡಿದ್ದೂ ಉಂಟು. ಪಾಪದವರಿಗೆ ಉಚಿತವಾಗಿ ಮಾಡಿಕೊಟ್ಟದ್ದೂ ಉಂಟು. ಎಂದೂ ಹಣದ ಹಿಂದೆ ಹೋದವರಲ್ಲ. ನಮ್ಮ ಮನೆಯಲ್ಲಿ ನಡೆದ ಸಂಬಂಧಿಕರ ಮದುವೆ, ಉಪನಯನ, ಇತರ ಕ್ರಿಯಾಭಾಗಗಳಿಗೆ ಲೆಕ್ಕವಿಲ್ಲ. ಬಂದು ಹೋಗುವ ನೆಂಟರಿಷ್ಟರುಗಳಿಗೂ ಲೆಕ್ಕವಿಲ್ಲ. ಮನೆಗೆ ಬಂದವರನ್ನು ಊಟ ಹಾಕದೇ ಕಳಿಸುತ್ತಿರಲಿಲ್ಲ. ತುಳು ಜನರು ಇವರನ್ನು ಇವರ ತಂದೆಯ ಹೆಸರಿನಿಂದಲೇ ಕರೆಯುತ್ತಿದ್ದರು. ಮಂಗಳೂರಿನ ಕಲ್ಬಾವಿಯವರ ಅಂಗಡಿ, ಕುಕ್ಕಾಡಿ ಅಂಗಡಿ ಬೈಕಂಪಾಡಿ, ಸುರತ್ಕಲ್ ಕುಡ್ವರ ಅಂಗಡಿ, ಬಂಜನ್ ಅಂಗಡಿ, ಸಾಧು ಪೂಜಾರಿ ಮಿಲ್‌ಗೆ ಹೋಗುವಾಗಲೆಲ್ಲಾ ನನ್ನನ್ನು ಜೊತೆಗೆ ಕರೆದು ಕೊಂಡು ಹೋಗುತ್ತಿದ್ದರು. ಯಾವುದೇ ಮನೆಯ ಪೌರೋಹಿತ್ಯಕ್ಕೆ ಹೋದರೆ ಮೊದಲು ಎಷ್ಟು ಜನರಿಗೆ ಹೇಳಿಕೆ ಮಾಡಿದೆ? ಅನ್ನಕ್ಕೆ ಎಷ್ಟು ಹಾಕಿದೆ ? ಇಷ್ಟು ಅನ್ನ ಆಗಿದ್ದರೆ ಇಷ್ಟು ಜನಕ್ಕೆ ಊಟಕ್ಕೆ ಎಲೆ ಕೊಡಬಹುದು ಎಂದು ಕರಾರುವಕ್ಕಾಗಿ ಹೇಳುತ್ತಿದ್ದರು. 12.30 ಗಂಟೆಯಾದ ಕೂಡಲೇ, ಎಲೆ ಹಾಕಿ ಊಟಕ್ಕೆ ಎನ್ನುತ್ತಾ ಕಸಬರಿಕೆಯೋ, ಬಾಳೆ



ಎಲೆಯೋ ಕೈಯಲ್ಲಿ ಹಿಡಿದು ಸುಧಾರಿಸಲು ಹೋಗುತ್ತಿದ್ದರು. ಯಾರೂ ಹಸಿವಿನಿಂದ ಊಟಕ್ಕಾಗಿ ಕಾಯಬಾರದು ಎಂದು ಅವರ ಅಭಿಪ್ರಾಯ.

ನನ್ನ ಅಜ್ಜ ಪೌರೋಹಿತ್ಯಕ್ಕೂ ರೆಡಿ, ಅಡಿಗೆ ಮಾಡಲೂ ರೆಡಿ, ಬಳಸಲೂ ತಯಾರು, ಬೇಸಾಯದ ಕೆಲಸಗಳಿಗೂ ತಯಾರು, ಅಂಗಡಿಯಿಂದ ಸಾಮಾನುಗಳನ್ನು ತರಲೂ ರೆಡಿ. ಮಧ್ವರಾಯರ ಅಂಗಡಿಯಿಂದ ಸಾಮಾನುಗಳನ್ನು ಟಪಾಲಿನ ಚೀಲದಲ್ಲಿ ಹಾಕಿ ತಲೆಯ ಮೇಲಿಟ್ಟುಕೊಂಡು ಮನೆಗೆ ತರುತ್ತಿದ್ದರು. ಕಾಯಕವೇ ಕೈಲಾಸ ಎಂಬುದು ಅವರ ನಂಬಿಕೆ. ಹಿಂದೊಮ್ಮೆ ಕಾಶಿ ಅಜ್ಜನ ಮಗ ಸೀತಾರಾಮ ಚಿಕ್ಕಪ್ಪಯ್ಯ ಬೇಲಿಯಲ್ಲಿ ಸಿಕ್ಕಿದ ಅಬರೆಕಾಯಿಗಳನ್ನು ತಿಂದು ಮೋಷನ್ ಹೋಗದೇ ಹೊಟ್ಟೆ ಉಬ್ಬರಿಸಿದಾಗ ಅಜ್ಜ ಅವರ ಮುಕುಳಿಗೆ ಕೈ ಹಾಕಿ ಅಬರೆ ಬೀಜಗಳನ್ನು ತೆಗೆದಿದ್ದರೆಂದು ಹೇಳಿದ್ದನ್ನು ಕೇಳಿ ತಿಳಿದಿದ್ದೇನೆ.

ಅಜ್ಜನಿಗೆ ನಮ್ಮ ಮನೆಯಲ್ಲಿ ನಡೆಯುವ ಎಲ್ಲಾ ಸಮಾರಂಭಗಳಿಗೂ ಅನಸೂಯ ಟೀಚರ್ ಮಗ ಪುಟ್ಟಣ್ಣ, ನಾರಾಯಣ ಆಚಾರ್ಯರ ಕಡೇ ಮಗಳು ಪೂರ್ಣಿಮಾ ಇರಲೇಬೇಕು. ಅವರಿಬ್ಬರಲ್ಲಿ ಅಷ್ಟು ವಾತ್ಸಲ್ಯ. ಸೀತಾರಾಮಜ್ಜ ಮತ್ತು ಅವರ ಮಕ್ಕಳ ಮೇಲಂತೂ ತುಂಬಾ ಮಮತೆ. ಮನೆಯಲ್ಲಿ ಏನು ತಿಂಡಿ ಮಾಡಿದರೂ ಅವರನ್ನು ಕರೆದು ತಿನ್ನಿಸುತ್ತಿದ್ದರು. ಮನೆಯಲ್ಲಿ ದೇವರ ಪೂಜೆಗೆ ದಿನಾ ನೈವೇದ್ಯವಾಗಬೇಕು. ಮನೆಯವರೆಲ್ಲಾ ಪೂಜೆಗೆ ಬರಲೇಬೇಕು. ದೇವರ ನಾಮಗಳನ್ನು ಹೇಳಲೇಬೇಕು. ಸ್ವಲ್ಪ ತಡವಾದರೂ "ಆವ ಕಡೆಯಿಂದ ಬಂದೆ" ಎಂದು ಅವರೇ ಪದ್ಯ ಪ್ರಾರಂಭ ಮಾಡುತ್ತಿದ್ದರು. ಸಾಹಿತ್ಯ ಹರಿವಾಣದಲ್ಲಿ ದೇವರಿಗೆ ಪ್ರತಿನಿತ್ಯ ವೀಳ್ಯದೆಲೆ ಅಡಿಕೆ, ನೆನೆಸಿದ ಕಡಲೆ, ಅರಳು ಬೆಲ್ಲ, ಎಳ್ಳು ಬೆಲ್ಲ ಹಾಲು ಇಡಬೇಕು. ಪೂಜೆಯ ನಂತರ ಎಳ್ಳು – ಬೆಲ್ಲ, ಅರಳು – ಬೆಲ್ಲ ತಿನ್ನಲು ನಮ್ಮಲ್ಲಿ ಸಾಹಿತ್ಯದ ಹರಿವಾಣ ಒಳಗೆ ತಗೊಂಡು ಹೋಗಲು ಪೈಪೋಟಿ ಇತ್ತು. ಮೂರು ಜನ ಅಜ್ಜಂದಿರು ಬೆಳಿಗ್ಗೆ ಮತ್ತು ಸಂಜೆ ದೇವರ ಕೋಣೆಯಲ್ಲಿ ಸಾಲಾಗಿ ಕುಳಿತು ಜಪ ಮಾಡುವುದನ್ನು ನೋಡುವುದೇ ಒಂದು ಚಂದ. ರಾತ್ರಿ ಪೂಜೆಯ ನಂತರ ಸಂಕೀರ್ತನೆ, ಭಜನೆ ಇರುತ್ತಿತ್ತು.

ಮಂಗಳಾರತಿಯನ್ನು, ತೀರ್ಥವನ್ನು ಹಿರಿಯರು ಮೊದಲು, ಕಿರಿಯರು ನಂತರ ತೆಗೆದುಕೊಳ್ಳಬೇಕು. ನಂತರ ಕಿರಿಯರು ಹಿರಿಯರಿಗೆ ನಮಸ್ಕಾರ ಹಾಕಿ ಆಶೀರ್ವಾದ ಪಡೆದುಕೊಳ್ಳಬೇಕು. ಇದು ಅವರು ಜಾರಿಗೆ ತಂದ ಪದ್ಧತಿ.

ಹರಿಹರದಲ್ಲಿದ್ದ ಅಜ್ಜನ ತಂಗಿ ವಾಗ್ದೇವಿ ದೊಡ್ಡಮ್ಮನ ಮಗ ಯಜ್ಞೇಶಣ್ಣನ್ನು ಊರಿಗೆ ಕರಕೊಂಡು ಬಂದು ಶಾಲೆಗೆ ಸೇರಿಸಿ, ನಂತರ ಕೊಕ್ಕರ್ಣೆಯಲ್ಲಿ ಟಿ.ಸಿ.ಎಚ್. ಮಾಡಿಸಿದರು. ನಂತರ ಹಿಂದು ವಿದ್ಯಾದಾಯಿನೀ ಸಂಘದಲ್ಲಿದ್ದ ತೋಡಬಳಿ ವಾಸುದೇವರಾಯರ ಮನೆಗೆ ಹೋಗಿ ಅವರನ್ನು ಒಪ್ಪಿಸಿ ಇಡ್ಯಾ ವಿದ್ಯಾದಾಯಿನೀ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕನಾಗಿ ಕೆಲಸ ಕೊಡಿಸಿದರು. ತಂಗಿ ವಾಗ್ದೇವಿಗೆ ಸ್ವಂತ ಮನೆಯಿಲ್ಲವೆಂದು 1985ರಲ್ಲಿ ನಮ್ಮ ಗದ್ದೆಗಳನ್ನು ಮಾರಿದಾಗ ಬಂದ ಹಣದಲ್ಲಿ ಮನೆಯಲ್ಲಿ ಚಂಡಿಕಾಹೋಮ ಮಾಡಿಸಿ, ಆ ದಿನ ನಮ್ಮ ಕೆರೆಯ ಪಕ್ಕದ ಸ್ಥಳದ ಮಣ್ಣನ್ನು ತಂದು ತಂಗಿ ಗಂಡನಿಗೆ $2^1/_2$ ಸೆಂಟ್ಸ್ ಜಾಗ ಎಂದು ಹೇಳಿ ಭೂದಾನವನ್ನು ನೀಡಿದ್ದರು.

ನನಗೆ ಉಪನಯನವಾದ ನಂತರ, ಅಜ್ಜನ ಪೌರೋಹಿತ್ಯದಲ್ಲಿ ನಡೆದ ಉಪನಯನದ ವಟುವಿಗೆ ಜಪವನ್ನು ಕಲಿಸಿಕೊಡುವ ಕೆಲಸವು ನನ್ನದಾಗಿತ್ತು. ಹರಿನಿವಾಸ ರವೀಂದ್ರ, ಅಳುವೆ ಕೇಶವರಾಜ, ಉಪೇಂದ್ರರಾಯರ ಮಗ ನಾಗರಾಜ ಮೊದಲಾದವರು ಬೆಳಿಗ್ಗೆ ಮತ್ತು ಸಂಜೆ ಎರಡು ಹೊತ್ತು ಬಂದು ಜಪವನ್ನು ಕಲಿಯುತ್ತಿದ್ದರು. ಅಜ್ಜ ಪೌರೋಹಿತ್ಯಕ್ಕೆ ಹೋಗುವ ಮನೆಗಳಲ್ಲಿ ವರ್ಷಕ್ಕೊಮ್ಮೆ ನಡೆಯುವ ಬ್ರಹ್ಮಚಾರಿ ಆರಾಧನೆಗೆ ಬ್ರಹ್ಮಚಾರಿಗಳನ್ನು ಒಟ್ಟು ಮಾಡುವ ಜವಾಬ್ದಾರಿ ನನಗೆ ನೀಡಿದ್ದರು. ದುರ್ಗಾ ನಮಸ್ಕಾರ ಪೂಜೆಗೆ ಅಜ್ಜ ಒಬ್ಬರೇ ಹೋಗಿ ಮಂಡಲ ಹಾಕಿ, ಪಾರಾಯಣ ಮಾಡಿ, ಪಾಯಸ ಮಾಡಿ ಪೂಜೆ ಮಾಡುತ್ತಿದ್ದರು. ಹತ್ವಾರ್ ರಾಮಚಂದ್ರ ಅಜ್ಜನ ಮನೆಯಲ್ಲಿ ಪ್ರತಿ ತಿಂಗಳು ದುರ್ಗಾ ನಮಸ್ಕಾರ ಪೂಜೆ ಇರುತ್ತಿದ್ದು, ಅವರ ಮಕ್ಕಳು ಪರವೂರಿನಲ್ಲಿ ಇದ್ದುದರಿಂದ ಗಂಟೆ ಹೊಡೆಯಲು ಜೊತೆಯಲ್ಲಿ ನನ್ನನ್ನು ಕರಕೊಂಡು ಹೋಗುತ್ತಿದ್ದರು. ಸರ್ಪ ಸಂಸ್ಕಾರ, ತಿಲಹೋಮ, ಗಣಹೋಮ, ಸತ್ಯನಾರಾಯಣ ಪೂಜೆ, ಮನೆ ಒಕ್ಕಲು, ಇತರರ ಮದುವೆಗಳಿಗೆ ಪೌರೋಹಿತ್ಯಕ್ಕೆ ಹೋಗುವಾಗ ಅಜ್ಜ ನನ್ನನ್ನು ಜೊತೆಯಲ್ಲಿ ಸಹಾಯಕ್ಕೆ ಕರೆದೊಯ್ಯುತ್ತಿದ್ದರು. ನಮ್ಮ ಗ್ರಾಮದ ಸುತ್ತಮುತ್ತಲಲ್ಲಿ ಮೃತವಾದ ಸರ್ಪಗಳನ್ನು ಸಂಸ್ಕಾರಕ್ಕಾಗಿ ನಮ್ಮ ಮನೆಗೆ ತರುತ್ತಿದ್ದರು. ನನ್ನಿಂದ ಸರ್ಪಸಂಸ್ಕಾರ ಮಾಡಿಸಿದ್ದಕ್ಕಂತೂ ಲೆಕ್ಕವಿಲ್ಲ. ಸಂಸ್ಕಾರ ಮಾಡಿದವರು 3 ದಿನ ಸೂತಕ ಆಚರಣೆ ಮಾಡಬೇಕಾಗಿತ್ತು. ಮೊದಮೊದಲು ಮೃತ ಸರ್ಪವನ್ನು ಕಂಡು ಹೆದರುತ್ತಿದ್ದಾಗ, ನೋಡುವಾಗ ಜೀವ ಇರುವ ಹಾವಿಗೆ ಹೆದರಬೇಕು. ಸತ್ತ ಮೇಲೆ ಏನುಂಟು. ಅದು ಒಂದು ಕಟ್ಟಿಗೆಯ ತುಂಡಿನ ಹಾಗೆ ಎಂದು ಧೈರ್ಯ ತುಂಬಿದ್ದರು. ನನ್ನನ್ನು ಎಂದೂ ಪುರೋಹಿತನಾಗು ಎಂದು ಒತ್ತಡವನ್ನು ಹೇರಿರಲಿಲ್ಲ. ಕಲಿಯುವುದು ಬಿಡುವುದು ಅವರವರ ಇಷ್ಟ ಎಂದು ಹೇಳುತ್ತಿದ್ದರು.

ಅಜ್ಜ ಯಾವುದೇ ಕೆಲಸಕ್ಕೂ ಸೈ. ಖಡಾಖಂಡಿತವಾಗಿ ಇದು ಸರಿ – ಇದು ತಪ್ಪು ಎಂದು ಯಾವುದೇ ಮುಲಾಜಿಲ್ಲದೇ ಹೇಳುತ್ತಿದ್ದರು. ಅಜ್ಜನಿಗೆ ಬೋಳೂರು ಬ್ರಾಹ್ಮಣ ಸಮಾಜದವರು 'ಹಿಟ್ಲರ್ ಆಚಾರ್' ಎಂದು ಗೌರವದಿಂದ ಕರೆಯುತ್ತಿದ್ದರು. ನಮ್ಮ ಮನೆಯಲ್ಲಿ ಯಾವುದೇ ಸಮಾರಂಭ ನಡೆದರೂ ಇಸ್ಪೀಟ್ ಆಟ ಆಡಲೇಬೇಕು. ಮೊದಲನೆ ದಿನ ರಾತ್ರಿ ಮತ್ತು ಸಮಾರಂಭದ ಊಟವಾದ ನಂತರ ರಾತ್ರಿ ಪೂಜೆಗೆ ಜಪಕ್ಕೆ ಹೋಗುವವರೆಗೂ ಇಸ್ಪೀಟು ಆಟ ನಡೆಯುತ್ತಿತ್ತು. 8 ಜನ ಅಜ್ಜಂದಿರಿಗೂ ಇಸ್ಪೀಟು ಆಟದಲ್ಲಿ ಆಸಕ್ತಿ ಇತ್ತು. ಅಣ್ಣ ತಮ್ಮಂದಿರೇ ಕೂತು ಇಸ್ಪೀಟು ಆಟ ಆಡುತ್ತಿದ್ದರು. ಇವರ ತಂಡದಲ್ಲಿ ಅತಿಕಾರಿ ಗೋಪಾಲ ಮಾಸ್ಟ್ರು, ಸಂಭಟ್ರ ಮನೆ ಅಚ್ಯುತ ರಾಯರು, ಹರಿನಿವಾಸ ನಾರಾಯಣ ರಾಯರು ಹೆಚ್ಚಾಗಿ ಭಾಗವಹಿಸುತ್ತಿದ್ದರು. ಅಜ್ಜನಿಗೆ ಹುಲಿ ದನ ಆಟದಲ್ಲಿ ಆಸಕ್ತಿ ಇತ್ತು.

ಸುತ್ತಮುತ್ತಲಿನ ಮನೆಯ ಮಕ್ಕಳಿಗಂತೂ ನಮ್ಮ ಮನೆಯ ಜಾಲೇ ಆಟದ ಮೈದಾನ. ನಾರಾಯಣ ಅಜ್ಜ ಮಕ್ಕಳನ್ನು ಆಟ ಆಡಿಸುವಲ್ಲಿ ಪ್ರವೀಣರು. ನಮ್ಮ ಮನೆಯಲ್ಲಿ ಕಟ್ಟಿಗೆ ಡಿಪೋದಿಂದ ತಂದ ಕಟ್ಟಿಗೆಗಳನ್ನು

ಅಟ್ಟದಲ್ಲಿ ಜೋಡಿಸಲು ನೆರೆಕರೆಯ ಮಕ್ಕಳನ್ನು ಅಜ್ಜ ಉಪಯೋಗಿಸಿಕೊಳ್ಳುತ್ತಿದ್ದರು. ಪಕ್ಕದ ಮನೆಯ ಪಿ. ನಾರಾಯಣ ಆಚಾರ್ಯರಿಗಂತೂ ಅಜ್ಜ ಎಂದರೆ ತುಂಬು ಗೌರವ. ಹಬ್ಬ ಹರಿದಿನಗಳಲ್ಲಿ ಮನೆಯವರನ್ನೆಲ್ಲಾ ಜೊತೆಯಲ್ಲಿ ಕರಕೊಂಡು ಬಂದು ನಮಸ್ಕಾರ ಹಾಕಿಸುತ್ತಿದ್ದರು.

ನಾನು ತಿಳಿದಂತೆ ನಮ್ಮ ಮನೆಯಲ್ಲಿ ಅಡುಗೆ ಮಾಡಲು ಅಡಿಗೆ ಕೃಷ್ಣ ಭಟ್, ರಾಮಚಂದ್ರಣ್ಣ ಚಿತ್ರಾಪುರ, ಮಾಧವ ಕಾರಂತರು, ನಾರಾಯಣ ಐತಾಳರು, ಚಿತ್ರಾಪುರ ಹರಿಶ್ಚಂದ್ರಣ್ಣ, ಕೇಶವ ಮಯ್ಯರು, ನಾವುಡರು, ಕಟ್ಲ ಸುರೇಶ ಬರುತ್ತಿದ್ದರು.

ವಿದ್ಯೆ ಕಲಿಯಲು ಅಜ್ಜ ಪ್ರೋತ್ಸಾಹ ನೀಡುತ್ತಿದ್ದರು. ಘಟ್ಟದ ಮೇಲಿನ ತೀರ್ಥಹಳ್ಳಿ, ಹಂದಿಗೋಡು, ಆಗುಂಬೆ ಮುಂತಾದ ಕಡೆಯ ಪರಿಚಯಸ್ಥರ ಮಕ್ಕಳೆಲ್ಲಾ ನಮ್ಮ ಮನೆಯಲ್ಲಿದ್ದುಕೊಂಡು ಇಡ್ಯಾ ವಿದ್ಯಾದಾಯಿನೀ ಶಾಲೆಯಲ್ಲಿ ವಿದ್ಯೆ ಕಲಿತವರೆಂದು ಕೇಳಿ ತಿಳಿದಿದ್ದೇನೆ. ಅವರುಗಳು ಅದನ್ನು ಹೇಳುತ್ತಿದ್ದರು ಮತ್ತು ನಮ್ಮ ಮನೆಗೆ ಬಂದು ಹೋಗುತ್ತಿದ್ದರು.

ನನ್ನ ಅಜ್ಜ ಊರಿಗೆಲ್ಲಾ ಪರೋಪಕಾರಿ. ವಿದ್ಯೆ ಕಲಿಯುವವರಿಗೆ, ಕಷ್ಟದಲ್ಲಿರುವವರಿಗೆ ಧನ ಸಹಾಯವನ್ನು ಮಾಡುತ್ತಿದ್ದರು. ಮನೆಯಲ್ಲಿ ಬೆಳೆದ ಅಕ್ಕಿಯ ಸ್ವಲ್ಪ ಭಾಗವನ್ನು ಪಾಪದವರಿಗೆ ನೀಡಲು ತೆಗೆದಿಡುತ್ತಿದ್ದರು. ಗೋಕುಲ ಅಷ್ಟಮಿಯ ಮಾರನೇ ದಿನ ಊರವರಿಗೆ ಉಂಡೆ, ಚಕ್ಕುಲಿ, ಪಂಚ



ಕಜ್ಜಾಯವನ್ನು ಹಂಚುತ್ತಾ ಇದ್ದರು. ಅಮೆ ಸೂತಕದ ಬಗ್ಗೆ ಯಾರಾದರೂ ಹೇಳಲು ಬಂದರೆ, ಅಮೆಯಾದರೆ ಯಾವ ಮಗು ? ಯಾವಾಗ ಶುದ್ಧ, ಸೂತಕವಾದರೆ ಯಾರು ? ಯಾವಾಗ ಶುದ್ಧ ? ಎಂದು ವಿವರವಾಗಿ ಹೇಳು ನಂತರ ಆಚರಿಸುತ್ತೇವೆ. ಅರ್ಧಂಬರ್ಧ ತಿಳಿದುಕೊಂಡು ಬಂದು ಹೇಳುವುದು ಬೇಡ ಎಂದು ನುಡಿಯುತ್ತಿದ್ದರು.

ನಮ್ಮ ಗದ್ದೆಯಲ್ಲದೇ, ಬೇರೆಯವರಿಂದ ಮೂಲಗೇಣಿಗೆ ಗದ್ದೆಗಳನ್ನು ವಹಿಸಿಕೊಂಡು ಅಜ್ಜ, ನಾರಾಯಣ ಅಜ್ಜ ಜೊತೆಯಾಗಿ ದುಡಿಯುತ್ತಿದ್ದರು. ಅದರಲ್ಲಿ 1 ಎಕ್ರೆ 62 ಸೆಂಟ್ಸ್ ಸ್ಥಳವನ್ನು ಒಕ್ಕಲಿಗೆ ನೀಡಿ ಅವರು ಕೊಡುವ ದೇಣಿಗೆಯಲ್ಲಿ ಜೀವನ ಸಾಗಿಸುತ್ತಿದ್ದರು. 1977ನೇ ಇಸವಿ ಜನವರಿ 29ರಲ್ಲಿ ಒಕ್ಕಲು ಡಿಕ್ಲರೇಷನ್‌ಗೆ ಅರ್ಜಿ ಹಾಕಿದಾಗ ಭೂನ್ಯಾಯ ಮಂಡಲಿಯ ಸಭೆಯಲ್ಲಿ 1.62 ಸೆಂಟ್ಸ್ ಜಾಗವನ್ನು ಅವರಿಗೇ ಬಿಟ್ಟುಕೊಟ್ಟು 1 ಪೈಸೆ ಪರಿಹಾರವನ್ನು ತೆಗೆದುಕೊಳ್ಳದ ಸ್ವಾಭಿಮಾನಿಯಾಗಿದ್ದರು. ಅಜ್ಜ ಎಂದೂ ಅನಾರೋಗ್ಯದಿಂದ ಮಲಗಿದ್ದೇ ನಮಗೆ ಗೊತ್ತಿಲ್ಲ. ಸಕ್ರಿಯಾಶೀಲ ವ್ಯಕ್ತಿತ್ವ. ಬೆಳಿಗ್ಗೆ ತನಗೆ ತಿಂಡಿಗೆ ಮಾಡಿದ ದೋಸೆಯನ್ನು ಉಳಿಸಿ, ಮಕ್ಕಳಿಗೆ ತುಂಡು ಮಾಡಿ ಹಂಚುವಷ್ಟು ಮಕ್ಕಳ ಮೇಲೆ ಮಮತೆ ಅಪರಿಮಿತವಾದದ್ದು. ಆ ತುಂಡು ದೋಸೆಯ ರುಚಿಯನ್ನು ವರ್ಣಿಸಲು ಅಸಾಧ್ಯ. ಧನುರ್ಮಾಸದ ಸಮಯದಲ್ಲಿ 1 ತಿಂಗಳು ಮನೆಯ ದೇವರಿಗೆ ಸೂರ್ಯೋದಯಕ್ಕೆ ಮೊದಲೇ ಪೂಜೆ ಮಾಡಬೇಕು. ನೈವೇದ್ಯಕ್ಕೆ ಹುಗ್ಗಿ ಆಗಬೇಕು. ಆ ಒಂದು ತಿಂಗಳು ಬೆಳಿಗ್ಗೆ 5.30ರ ವರೆಗೆ ಮಲಗಿದ್ದ ನಮ್ಮನ್ನು ನೀರು ಹಾಕಿ ಎಬ್ಬಿಸುತ್ತಿದ್ದರು. ಗಂಜಿ ಊಟದ ಸಮಯದಲ್ಲಿ ಬಾದಾಮಿ ಎಲೆಯಲ್ಲಿ ತಿನ್ನಲು ಕೊಡುವ ಹುಗ್ಗಿಯ ಆಸೆಗೆ ನಾವೆಲ್ಲಾ ತಡಬಡಾಯಿಸಿ ಏಳುತ್ತಿದ್ದ ನೆನಪು ಹಸಿರಾಗಿದೆ. ಎಷ್ಟೋ ಒಡೆದ ಕುಟುಂಬಗಳನ್ನು ಒಂದುಗೂಡಿಸಿದ, ರಾಜಿ ಮಾಡಿಸಿದ, ಆಸ್ತಿಯನ್ನು ಸರಿಯಾಗಿ ಪಾಲು ಮಾಡಿಸಿದ ಕೀರ್ತಿ ನಮ್ಮ ಅಜ್ಜನಿಗೆ ಸಲ್ಲಬೇಕು.

ನಮ್ಮ ಮನೆ ಅಜ್ಜನ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದ ಕಾಲ ಒಂದು ಸುವರ್ಣಯುಗ

ಎನ್ನಬಹುದು. ದೊಡ್ಡ ಮನೆ. ಎದುರಲ್ಲಿ ದೊಡ್ಡ ಜಾಲು, ಜಾಲಿನಲ್ಲಿ ಹುಲ್ಲಿನ ಮುಟ್ಟೆ, ಎದುರಲ್ಲಿ ದೊಡ್ಡ ಹಟ್ಟಿ, ಅದರಲ್ಲಿ ಎತ್ತು, ಎಮ್ಮೆ, ದನಕರುಗಳು, ಹಟ್ಟಿಯ ಅಟ್ಟದ ಒಂದು ಬದಿಯಲ್ಲಿ ಹುಲ್ಲಿನ ರಾಶಿ, ಮತ್ತೊಂದು ಬದಿಯಲ್ಲಿ ಕಟ್ಟಿಗೆ ರಾಶಿ. ಹಟ್ಟಿಯ ಹಿಂದೆ ಗದ್ದೆಗೆ ಹೋಗುವ ಕಾಲುದಾರಿ. ಹಟ್ಟಿಯ ಕೆಳಗಡೆ ದೊಡ್ಡ ಗೊಬ್ಬರ ಹಾಕುವ ಗುಂಡಿ, ಹಟ್ಟಿಯ ಎದುರು ಒಂದು ದೊಡ್ಡ ಮಾವಿನ ಮರ. ಮನೆಯಲ್ಲಿ ಮಕ್ಕಳಿಗೆ ಓದಲು ಮಕ್ಕಳ ಕೋಣೆ – ಚಾವಡಿ, ಮೇಲು ಚಾವಡಿ, ಅದರಲ್ಲಿ ಕತ್ತಲೆ ಕೋಣೆ, ಪಕ್ಕದಲ್ಲಿ ದೇವರ ಕೋಣೆ, ಹಿಂದೆ ಅಡಿಗೆ ಮನೆ, ಅಂತ್ರಮಾಣ, ಉಪ್ಪರಿಗೆಗೆ ಹೋಗುವ ಮೆಟ್ಟಿಲು. ಶ್ರೀಧರ ಅಜ್ಜನ ಕೋಣೆ. ಕುತ್ತಟ್ಟದಲ್ಲಿ ತುಂಬಾ ಅಕ್ಕಿಯ ಮುಡಿ, ಪಕ್ಕದ ಕೋಣೆಯಲ್ಲಿ ಅಡಿಗೆ ಪಾತ್ರೆಗಳು, ಉಪ್ಪಿನಕಾಯಿ ಭರಣಿಗಳು, ಪಕ್ಕದಲ್ಲಿ ಗದ್ದೆಗೆ ಬೇಕಾಗುವ ಸಾಮಗ್ರಿಗಳು. ಭತ್ತ ಹೊಡೆಯುವ ಪಡಿಮಂಚ, ನೊಗ, ಮೊರ, ಶಾವಿಗೆ ಮಣೆ ಮುಂತಾದ ವಸ್ತುಗಳು. ಅಂತ್ರಮಾಣದಲ್ಲಿ 2 ಗೂಡು. 1 ಗೂಡಿನಲ್ಲಿ ಬೇಡುವವರಿಗೆ ಕೊಡಲು ಅಕ್ಕಿ ಪಾತ್ರೆ, ಮರದ ಚಿಮಣಿ ಗೂಟಗಳು, ನೀರಿಗೆ ಹಾಕಿದ ಅಡಿಕೆ ಪಾತ್ರೆ, ಮೇಲೆ ಸಾಲು ಸಾಲಾಗಿ ನೇತು ಹಾಕಿದ ಕತ್ತಿಗಳು, ಮತ್ತೊಂದು ಗೂಡಿನಲ್ಲಿ ಔಷಧಿ ಬಾಟ್ಲಿ, ಚಿಮಣಿಗಳು. ಪಕ್ಕದಲ್ಲಿ ಹಾಸಿಗೆ ಇಡುವ ಕೋಣೆ. ಪಕ್ಕದಲ್ಲಿ ನಾರಾಯಣ ಅಜ್ಜನ ಕೋಣೆ. ಉದ್ದವಾದ ಚಾವಡಿ, ಬಾಣಂತಿ ಕೋಣೆ, ದೊಡ್ಡ ಅಡಿಗೆ ಮನೆ, ಅಡಿಗೆ ಮನೆಯಲ್ಲಿ ಅಟ್ಟದ ತುಂಬಾ ಕಟ್ಟಿಗೆ. ಕೆಲವು ಸಲ ಬಾಲ ಕೆಳಗೆ ಹಾಕುವ ಕ್ಯಾರೆ ಹಾವುಗಳು. ಬಿಸಿನೀರಿನ ಒಲೆ, ಒನಕೆಯ ಒರಳು, ದೊಡ್ಡ ದೊಡ್ಡ ಒಲೆಗಳು, ಅರೆಯುವ ಕಲ್ಲು, ಬದಿಯಲ್ಲಿ ಬಚ್ಚಲು ಮನೆ, ದೊಡ್ಡ ಬಾವಿ, ಪಂಪ್‌ಶೆಡ್, ನೀರಿನ ಟ್ಯಾಂಕ್. ಹಿಂದುಗಡೆ ಬೂದಿ ಹಾಕುವ ಗುಂಡಿ. ಅದರ ಹಿಂದೆ ಸಮಾರಂಭಗಳಲ್ಲಿ ಅಡಿಗೆ ಮಾಡುವ ಅಡಿಗೆ ಕೊಟ್ಟಿಗೆ, ಅದರ ಮೇಲೆ ಚಪ್ಪರ ಹಾಕುವ ಕಂಗಿನ ಮರಗಳು, ಮಡಲುಗಳು, ಎಲ್ಲವೂ ಕಣ್ಣಿಗೆ ಕಟ್ಟಿದಂತಿದೆ. ನಮ್ಮ ಮನೆಯಲ್ಲಿ ಬೆಕ್ಕು ಇರಲೇಬೇಕು. ಹಿಂದೆ ಬೆಕ್ಕುಗಳು ಬದುಕದೇ ಇದ್ದಾಗ ಕಟೀಲಿಗೆ ಬೆಳ್ಳಿಯ ಬೆಕ್ಕಿನ ಹರಕೆ ಹೇಳಿದ್ದರಂತೆ. ಅದರ ನಂತರ ನಮ್ಮ ಮನೆಯಲ್ಲಿ ಬೆಕ್ಕು ತಪ್ಪುತ್ತಿರಲಿಲ್ಲ. ನಡುವಿನ ಚಾವಡಿಯಲ್ಲಿ ಅಪ್ಪ



ಹರಿಹರದಿಂದ ತಂದುಕೊಟ್ಟಿದ್ದ ದೊಡ್ಡ ಫ್ಯಾನ್ ತಿರುಗುತ್ತಿತ್ತು. ಎದುರಿನ ಚಾವಡಿಯಲ್ಲಿ [ಪಡ್ಸಾಗಿ ಚಾವಡಿ] ಗದ್ದೆಯ, ತೋಟದ ಮೇಲಿಂದ ಬೀಸಿ ಬರುವ ತಂಗಾಳಿಯಿಂದಾಗಿ ಮಧ್ಯಾಹ್ನ ಎಲ್ಲರೂ ಅಲ್ಲಿಯೇ ಮಲಗುವುದು ಪದ್ಧತಿ.

ಗಾಂಧೀಜಿಯಂತೆ ಅಜ್ಜ ಸರಳ ಜೀವಿ. ಒಂದು ಬೈರಾಸು ಕಚ್ಚೆ, ಮೈ ಮೇಲೊಂದು ಬೈರಾಸು, ಮೂಗಿನ ತುದಿಯಲ್ಲಿ ಕನ್ನಡಕ, ಹಣೆಯ ಮೇಲೊಂದು ಉದ್ದದ ಅಕ್ಷತಂಗಾರಕ, ಕಿವಿಯಲ್ಲಿ ಟಿಕ್ಕಿ, ಕುತ್ತಿಗೆಯಲ್ಲಿ ತುಳಸೀಮಣಿ ಸರ, ಕೈಯಲ್ಲೊಂದು ಕೊಡೆ. ಹೊರಗೆ ಹೋಗುವಾಗ ಮಾತ್ರ ವೇಸ್ಟಿ ಮತ್ತು ಅಂಗಿ ಹಾಕುತ್ತಿದ್ದರು. ಎಲ್ಲಿ ಹೋದರೂ ವೀಳ್ಯದೆಲೆ, ಹೊಗೆಸೊಪ್ಪು ಬೇಕೇ ಬೇಕು. ಅವರು ಅಜಾತಶತ್ರು. ಪರೋಪಕಾರಿ. ಪ್ರತಿಫಲ ಅಪೇಕ್ಷೆ ಇಲ್ಲದೇ ಮಾಡುವ ಕೆಲಸ. ತನಗೆ ತಪ್ಪೆಂದು ತೋರಿದ್ದನ್ನು ನಿಷ್ಠುರವಾಗಿ ಹೇಳುವ ಗುಣ, ತಪ್ಪು ಮಾಡಿದವರನ್ನು ಕ್ಷಮಿಸಿ, ಸರಿದಾರಿ ತೋರಿಸುವ ಗುಣದಿಂದಾಗಿ ಊರಲ್ಲಿ ಎಲ್ಲರಿಗೂ ಅಚ್ಚು ಮೆಚ್ಚಾಗಿದ್ದರು.

ನನ್ನ ಅಜ್ಜ ಸಂಬಂಧಗಳಿಗೆ ಹೆಚ್ಚು ಬೆಲೆಯನ್ನು ಕೊಡುತ್ತಿದ್ದರು. ತನ್ನ ತಾಯಿಯ 4 ಜನ ತಮ್ಮಂದಿರ ಮಕ್ಕಳನ್ನು ತಮ್ಮ ಮನೆಗೆ ಮದುವೆ ಮಾಡಿಸಿದ್ದರು. 1ನೇ ಮಾವನ ಮಗಳು ನನ್ನ ಅಮ್ಮ. 2ನೇ ಮಾವನ ಮಗನಿಗೆ ಮಣಲೂರು ಸೀನಜ್ಜನ ಮಗಳನ್ನು, ಕೂಟಾಲೆ ಮಾವನ ಮಗನ ಮಗಳನ್ನು ಶ್ರೀಧರಜ್ಜನ ಮಗ ವ್ಯಾಸ ಚಿಕ್ಕಪ್ಪನಿಗೆ, ಹರಿನಿವಾಸ ಮಾವನ



ಮಗನಿಗೆ ನಾರಾಯಣ ಅಜ್ಜನ ಮಗಳನ್ನು, ಮತ್ತೊಂದು ಮಾವನ ಮಗಳನ್ನು ದಾಸಜ್ಜನಿಗೆ 2ನೇ ಹೆಂಡತಿಯಾಗಿ ತಂದಿದ್ದರು.

ಅಜ್ಜನಿಗೆ ಪ್ರಾಣಿಗಳೆಂದರೆ ಪ್ರೀತಿ. ಪ್ರತಿದಿನ ಪೂಜೆಯ ನಂತರ ಕಾಗೆಗೆ ಅಕ್ಕಿ ಹಾಕುತ್ತಿದ್ದರು. ಬೆಕ್ಕು ಕಾಲಿಗೆ ಮೈ ಕೈ ಒರೆಸಿದರೂ ಮಾತಾಡುತ್ತಾ ಇರಲಿಲ್ಲ. ಮೊದಲು ನಮ್ಮ ಮನೆಯಲ್ಲಿ ನಾಯಿಯೂ ಇತ್ತಂತೆ. ಮಹಾತ್ಮಾ ಗಾಂಧೀಜಿ ನಿಧನರಾದ ದಿನ ಅದು ಸತ್ತು ಹೋಯಿತಂತೆ. ಅದರ ನಂತರ ತುಂಬಾ ಸಮಯ ನಾಯಿಯನ್ನು ಸಾಕುತ್ತಿರಲಿಲ್ಲ. ಶ್ರೀಧರಜ್ಜನ ಮಗಳು ಸಾವಿತ್ರತ್ತೆಯ ಮದುವೆ ನಂತರ ಕೃಷ್ಣ ಮಾವ ನಮ್ಮಲ್ಲಿಗೆ ಬರುವಾಗ ಅವರೊಟ್ಟಿಗೆ ಬಂದ ಅವರ ಮನೆ ನಾಯಿ ಅವರ ಮನೆಗೆ ಹೋಗದೇ ನಮ್ಮಲ್ಲಿಯೇ ಕುಳಿತಾಗ, ನಾಯಿ ಬಂದು ಮನೆ ಸೇರಿದರೆ ಬೊಜ್ಜ ತಿನ್ನಿಸುತ್ತದೆ ಎಂಬ ಮಾತಿಗೂ ಹೆದರದೇ ಅದನ್ನು ನಮ್ಮಲ್ಲಿಯೆ ಸಾಕಿ ಅದಕ್ಕೆ ಮಲಗಲು ಬೆತ್ತದ ಬುಟ್ಟಿ, ಗೋಣಿಚೀಲ ಹಾಕುತ್ತಿದ್ದರು. ತಾನು ತಿನ್ನುವ ತಿಂಡಿಯನ್ನು ಉಳಿಸಿ ಅದಕ್ಕೆ ಹಾಕುತ್ತಿದ್ದರು.

ಅಜ್ಜನಿಗೆ ಅವರದೇ ಆದ ಅಭಿಮಾನಿಗಳು ಇದ್ದರು. ಅದರಲ್ಲಿ ಕೆಲವರ ಹೆಸರು ನೆನಪಿದೆ. ಚಿತ್ರಾಪುರ ಶ್ರೀನಿವಾಸ ಆಚಾರ್, ವಿಷ್ಣುತೀರ್ಥ ಆಚಾರ್, ಕಗ್ಗಿ ವೆಂಕಟಕೃಷ್ಣ ಆಚಾರ್, ಪಿಲಿಕೋಡು ಮಾವಂದಿರು, ಮಧ್ವರಾಯರು, ಕಲ್ಬಾವಿ ವೆಂಕಟ ರಾವ್, ಅಜ್ಜಿಮನೆ ಅಜ್ಜ (ಲಕ್ಷ್ಮೀನಾರಾಯಣ ಆಚಾರ್ಯ), ಕಾವಿನಕಲ್ಲು ದೊಡ್ಡಮ್ಮ, ಕಂಬಳ ಲಕ್ಷ್ಮಕ್ಕ, ನಾರಾಯಣ ಸಂಭಟ್ರು, ಸಂಭಟ್ರ ಮನೆ ಜಾನಕಿ ದೊಡ್ಡಮ್ಮ, ಶಂಕರ ನಾರಾಯಣ ಮಾಸ್ಟ್ರು, ಮತ್ತು ಅವರ ಹೆಂಡತಿ ಪುಟ್ಟಮಕ್ಕ, ಅವರ ಮಗ ರಮೇಶ ರಾವ್, ಅಳುವೆ ಶ್ರೀನಿವಾಸ ರಾವ್, ರಾಮಚಂದ್ರ ಹತ್ವಾರ್, ತೋಡಬಳಿ ವಾಸುದೇವ ರಾವ್, ಹೆಡ್‌ಮಾಸ್ಟ್ರು ದಾಮೋದರ ರಾವ್, ಪ್ರಿನ್ಸಿಪಾಲ್ ಗೋಪಾಲಕೃಷ್ಣ ರಾವ್, ಬುದ್ರ ಮನೆಯವರು, ಅಟ್ಲಾರ್ ಮನೆಯವರು, ಮಗ್ಗ ಅನಂತ ರಾವ್, ಉಪ್ಪಜೆ ಅನಂತಯ್ಯ ಮಾಸ್ಟ್ರು, ಗಿರಿಧರ ಹತ್ವಾರ್, ಅತಿಕಾರಿ ಗೋಪಾಲ ಮಾಸ್ಟ್ರು, ಸಂಭಟ್ರ ಮನೆ ಅಚ್ಚುತ ರಾವ್, ಸಂಭಟ್ರ ಮನೆ ವಾಸುದೇವ ರಾವ್, ಕರೂರು ಡಾ. ಜನಾರ್ಧನ ಆಚಾರ್, ಪಿರ್ಕಿ (ವಿದ್ವಾನ್) ವೆಂಕಟ್ರಾಯ ಆಚಾರ್, ಪಡ್ಲಾಕಾಡು ಕೃಷ್ಣ ರಾವ್, ನಾಸಿಕ ಕೃಷ್ಣ ರಾವ್, ಗುಡ್ಡೆ ನಾರಾಯಣ ಅಣ್ಣ, ಸುಬ್ಬಣ್ಣ ಮಾಸ್ಟ್ರು, ಜನಾರ್ಧನ ಮಾವ, ಹೊನ್ನಕಟ್ಟೆ ಗೋವಿಂದ ರಾವ್, ಐ.ಕೆ. ನಾರಾಯಣ ರಾವ್, ಪಿ. ನಾರಾಯಣ ಆಚಾರ್, ಅಗರಿ ಶ್ರೀನಿವಾಸ ಭಾಗವತರು, ಛಾತ್ರಮನೆ ಭೀಮ ರಾವ್, ವೆಂಕಟಕೃಷ್ಣ ರಾವ್, ಸುಬ್ಬ ರಾವ್, ರತ್ನಾಕರ ಮಾಸ್ಟ್ರು, ಪಿ.ಸಿ. ವಾಸುದೇವ ರಾವ್, ಇಡ್ಯಾ ನಾರಾಯಣ ಭಟ್, ಪುಟ್ಟಯ್ಯ ಹೆಬ್ಬಾರರು ಮೊದಲಾದವರು ಇದ್ದಾರೆ. 1984 ನೇ ಇಸವಿಯಲ್ಲಿ ನನಗೆ ವಯಸ್ಸಾಯಿತು. ಗದ್ದೆ ಕೆಲಸಗಳನ್ನು ಮಾಡಲು ಜನ ಸಿಕ್ಕುವುದಿಲ್ಲ. ನನಗೂ ತೀರುವುದಿಲ್ಲ ಎಂದು ಹೇಳಿ ಹರಿಹರದಲ್ಲಿದ್ದ ಅಪ್ಪ – ಅಮ್ಮನನ್ನು ಊರಿಗೆ ಕರೆಸಿಕೊಂಡರು. 1985ನೇ ಇಸವಿಯಲ್ಲಿ ತನ್ನ ಪಾಲಿನ ಗದ್ದೆಗಳಲ್ಲಿ 75 ಸೆಂಟ್ಸ್ ಮಾರಿ ಅದರಲ್ಲಿ ಬಂದ ಹಣದಲ್ಲಿ ತನ್ನ ತಮ್ಮಂದಿರ ಹೆಣ್ಣು ಮಕ್ಕಳಿಗೆ ಸ್ವಲ್ಪ ಹಣವನ್ನು ಪಾಲು ಮಾಡಿಕೊಟ್ಟರು. ಉಡುಪಿ ಶ್ರೀಕೃಷ್ಣ ದೇವಸ್ಥಾನದಲ್ಲಿ ಸರ್ವಸೇವೆ, ಮನೆಯಲ್ಲಿ ಚಂಡಿಕಾಹೋಮ ಮಾಡಿ ತನ್ನ ಆಸೆಯಂತೆ ತಂಗಿಗೆ $2^1/_2$ ಸೆಂಟ್ಸ್ ಜಾಗವನ್ನು ದಾನವಾಗಿ ನೀಡಿದರು.

ನಮ್ಮ ಮನೆಯ ಹಾಸಿಗೆ ಕೋಣೆಯಲ್ಲಿ ಒಂದು ಕವಾಟಿನಲ್ಲಿ ಹಿತ್ತಾಳೆಯ ವೀಳ್ಯದೆಲೆ ಡಬ್ಬ, ಸುಣ್ಣ ಹಾಕಿದ ಸಣ್ಣ ಮಡಿಕೆ, ಹೊಗೆಸೊಪ್ಪಿನ ಡಬ್ಬಿ ಖಾಲಿಯಾದದ್ದೇ ಇಲ್ಲ. ಪಡಲಾಗಿ ಚಾವಡಿಯಲ್ಲಿ ಬೆಂಚಿನ ಮೇಲೆ ವೀಳ್ಯದೆಲೆ ಹರಿವಾಣ, ಅಡಕತ್ತರಿ, ಸಣ್ಣ ಚೂರಿ ಯಾವಾಗಲೂ ಇರುತ್ತಿತ್ತು. ಮನೆಗೆ



ಯಾರು ಬಂದರೂ ಬಾಯಾರಿಕೆ ಕೊಟ್ಟ ನಂತರ ವೀಳ್ಯ ತಿನ್ನುತ್ತೀರಾ ಎಂದು ಕೇಳಿ ಅಜ್ಜನೇ ಎಲೆಗೆ ಸುಣ್ಣ ಅಡಿಕೆ ಹಾಕಿಕೊಡುತ್ತಿದ್ದರು. ಸುರತ್ಕಲ್ ಮಾರ್ಕೆಟ್‌ನಲ್ಲಿ ಲಂಗ ಬಾಯಿಂಯ ಅಂಗಡಿಯಿಂದಲೇ ವೀಳ್ಯದೆಲೆ ತರಬೇಕು. ಹೊಗೆಸೊಪ್ಪು ಮೊದಲು ಹ್ಯೆಗೆ ಸುರತ್ಕಲ್ ಕಾಮತರ ಅಂಗಡಿಯಿಂದ ನಂತರ ಮಂಗಳೂರು ಬಂದರಿಗೆ ಹೋಗಿ ಕುಣಿಯ ಹೊಗೆಸೊಪ್ಪು ತರುತ್ತಿದ್ದರು. ಬೇಸಾಯದ ಸಮಯದಲ್ಲಿ ಕೆಲಸಗಾರರಿಗೆ ಊಟ ಹಾಕಿದ ನಂತರ ತಾವೇ ಸಾಲಾಗಿ ವೀಳ್ಯದೆಲೆ, ಅಡಿಕೆ ಸುಣ್ಣ ಹಾಕಿ ಇಡುತ್ತಿದ್ದರು. ಅವರೊಡನೆ ಕೊಡೆ ಹಿಡಿದುಕೊಂಡು ಗದ್ದೆಯಲ್ಲಿ ಹೋಗಿ ಕಷ್ಟ ಸುಖ ಮಾತಾಡುತ್ತಾ ಕುಳಿತುಕೊಳ್ಳುತ್ತಿದ್ದರು.

ನವರಾತ್ರಿಯ ಸಮಯದಲ್ಲಿ ಹಳೆಯಂಗಡಿಯಿಂದ ಹುಲಿವೇಷ ಹಾಕುವವರು ಬಂದು 5 ದಿನ ನಮ್ಮ ಮನೆಯಲ್ಲಿ ಮಲಗಿ ಎದ್ದು ವೇಷ ಹಾಕಿ ಮನೆ ಮನೆಗೆ ಹೋಗುತ್ತಿದ್ದದ್ದು ಒಂದು ಸವಿ ನೆನಪು. ಸಂಕ್ರಮಣದ ದಿನ ರಾತ್ರಿ ಪೂಜೆಯಾದ ನಂತರ ಮಕ್ಕಳನ್ನೆಲ್ಲಾ ಸಾಲಾಗಿ ಕೂರಿಸಿ ಓಕುಳಿ ಮಾಡಿ ಆರತಿ ಮಾಡಿ ಅರಳು, ಕೇಪಳ ಹೂ, ದೊಂದಿ, ದೊನ್ನೆಯೊಂದಿಗೆ ಮನೆಯ ಹಿಂದೆ ಇದ್ದ ಸಂಪಿಗೆ ಮರದ ಕೆಳಗಿದ್ದ ಮುರಕಲ್ಲಿನ ಮೇಲೆ ಇಟ್ಟು ಬರುತ್ತಿದ್ದರು ನನ್ನ ಅಜ್ಜ.

3 ಜನ ಅಜ್ಜಂದಿರಲ್ಲಿ ನನ್ನ ಅಜ್ಜನಿಗೆ ಪ್ರತ್ಯೇಕ ಕೋಣೆ ಎಂದು ಇರಲಿಲ್ಲ. ರಾತ್ರಿ ನಡು ಚಾವಡಿಯಲ್ಲಿ ನಮ್ಮೊಟ್ಟಿಗೆ ಮಲಗುತ್ತಿದ್ದರು. ಕೆಲವು ಸಲ ಸಣ್ಣ ಕರುವನ್ನು ಅಲ್ಲಿಯೇ ಕಟ್ಟುತ್ತಾ ಇದ್ದದ್ದು ನೆನಪಿದೆ. ಆ ಕರುವನ್ನು ಜಾಲಿನಲ್ಲಿ ಓಡಿಸುವುದು, ಕಿವಿಗೆ ಗಾಳಿ ಹೊಕ್ಕ ಹಾಗೆ ಅದು ಓಡುವುದು, ಗಂಡು ಕರುವನ್ನು ಬ್ಯಾರಿಗೆ ಕೊಟ್ಟಾಗ ಆಗುವ ಬೇಜಾರು ಎಲ್ಲಾ ಮರೆಯಲು ಸಾಧ್ಯವಿಲ್ಲ. ನಮ್ಮ ಮನೆಯಲ್ಲಿ ಅಜ್ಜಂದಿರಿಗೆ ಇಸ್ಪೀಟು ಆಟ ಆಡುವ ಅಭ್ಯಾಸವಿದ್ದಂತೆ ನಮ್ಮ ಮನೆಯ ದೊಡ್ಡಮ್ಮಂದಿರು ಅವರ ಮಕ್ಕಳಿಗೆಲ್ಲಾ ಚದುರಂಗ ಆಡುವ ಅಭ್ಯಾಸ ಇತ್ತು. ಸಮಾರಂಭಗಳಲ್ಲಿ ಎಲ್ಲಾ ಕೆಲಸ ಮುಗಿದ ಮೇಲೆ ಚದುರಂಗ ಆಡುತ್ತಿದ್ದರು. ನಮ್ಮಲ್ಲಿ ಕಾವಿನಕಲ್ಲು ದೊಡ್ಡಮ್ಮ (ಸತ್ಯಭಾಮ) ಬಂದು ಭತ್ತವನ್ನು ಹುರಿದು ಅರಳು ಮಾಡುತ್ತಾ ಇದ್ದದ್ದನ್ನು ನೋಡಿದ ನೆನಪು ಮನದಲ್ಲಿದೆ. ನಮ್ಮ ಅಜ್ಜನ ಕಾಲದಲ್ಲಿ ವರ್ಷವಿಡೀ ಹಬ್ಬದ ಆಚರಣೆಗಳು, ಯುಗಾದಿಯ ದಿನ ಗುಡ್ಡೆಯಿಂದ ತಂದ ನಮ್ಮ ತೋಟದ ಗೇರುಮರದಲ್ಲಿ ಆದ ಹಸಿ ಗೇರುಬೀಜ ಹಾಕಿದ ಹೆಸರು ಪಾಯಸ, ಮಗ್ಗ ಅನಂತರಾಯರ ಅಂಗಡಿಯಿಂದ ತಂದ ಹೊಸ ಬಟ್ಟೆ ಧರಿಸುವ ಸಂಭ್ರಮ. ಗದ್ದೆಗೆ ಉಡಿ ತುಂಬಿಸುವಾಗ ಶಾಮಿಗೆ, ಕೆಡ್ಡಸದ ದಿನ ಹುರಳಿ ಮಣ್ಣಿ, ಮನೆ ತುಂಬಿಸುವ ದಿನ ಹಾಲಿನ ಪಾಯಸ, ನಾಗರಪಂಚಮಿಯ ದಿನದ ಹಾಲುಬಾವೆ, ಗಣೇಶ ಚತುರ್ಥಿ ದಿನ ಮೂಡೆ – ಮೋದಕ, ಅಷ್ಟಮಿಯ ದಿನ ಉಂಡೆ,– ಚಕ್ಕುಲಿ– ಮೂಡೆ, ಮನೆಯವರೆಲ್ಲಾ ಕೂತು ಉಂಡೆ, ಚಕ್ಕುಲಿ ಮಾಡುವ ಸಂಭ್ರಮ. ರಾತ್ರಿ ಚಂದ್ರ ಉದಯದ ನಂತರ ಮನೆಯಲ್ಲಿ ಪೂಜೆ, ರಾತ್ರಿ ಊಟ. ಮಕ್ಕಳ ಕೋಣೆಯಲ್ಲಿ ಪ್ರತ್ಯೇಕ ಪೂಜೆ, ನೂಲಹುಣ್ಣಿಮೆ ದಿನ ಶಾಮಿಗೆ, ಪುಸ್ತಕ ಪೂಜೆಯ ಸಂಭ್ರಮ. ದೀಪಾವಳಿಯ ದಿನ ಎಲ್ಲಾ ಅಜ್ಜಂದಿರು ಎಣ್ಣೆ ಹಾಕಿಸಿಕೊಳ್ಳುವ ಸಂಭ್ರಮ. ಬಲಿಂದ್ರ ಪೂಜೆಯ ತಯಾರಿ. ಗೋಪೂಜೆಗೆ ದನ ಕರುಗಳನ್ನು ಸ್ನಾನ ಮಾಡಿಸಿ, ಬೇಲಿಯಲ್ಲಿ ಸಿಕ್ಕಿದ ಹೂವಿನ ಮಾಲೆ ಹಾಕಿ ಮೈಗೆಲ್ಲಾ ತಟ್ಟೆಯಿಂದ ಮುದ್ರೆ ಹಾಕಿ ಸಿಂಗರಿಸುವ ಕೆಲಸ, ತುಳಸಿ ಪೂಜೆಯ ಪ್ರತಿದಿನ ಸಂಕೀರ್ತನೆ,

ಕಡೇ ದಿನ – ಉತ್ಥಾನ ದ್ವಾದಶಿ ದಿನ ಬೆಳಿಗ್ಗೆ ಬೇಗ ಪೂಜೆ ನಂತರ ಹಿಂದಿನ ದಿನ ಗದ್ದೆಯಿಂದ ತಂದ ಕೋಳೆ, ತಾವರೆ ಹೂಗಳನ್ನು ಮಾಲೆ ಮಾಡುವ, ಚಪ್ಪರವನ್ನು ಅಲಂಕಾರ ಮಾಡುವ ಕೆಲಸ, ರಾತ್ರಿ 12–1 ಗಂಟೆಯ ಸುಮಾರಿಗೆ ನಡೆಯುವ ತುಳಸೀ ಪೂಜೆ, ತುಳಸಿ ಸಂಕೀರ್ತನೆಗೆ ಬಂದ ಊರವರು ಕಡೆಯ ಓಡುಸುತ್ತಿನಲ್ಲಿ ಅಲಂಕಾರವನ್ನು ಹಾಳು ಮಾಡುತ್ತಾರೆಂದು ನನ್ನ ಅಜ್ಜ ಮಧ್ಯದಲ್ಲಿ ಕೈ ಅಗಲ ಮಾಡಿ ನಿಲ್ಲುತ್ತಿದ್ದದ್ದು ಎಲ್ಲಾ ಮನಸ್ಸಿನಲ್ಲಿ ಹಸಿರಾಗಿದೆ.

1986ನೇ ಇಸವಿ ಜೂನ್ 11ನೇ ತಾರೀಖು ಕಾರ್ಯಕ್ರಮಕ್ಕೆಂದು ತಿಪಟೂರು ಸದಾನಂದ ಮಾವನಲ್ಲಿಗೆ ಹೋಗಿ ಬಂದ ಅಜ್ಜ ಸ್ವಲ್ಪ ಜ್ವರ ಇದ್ದರೂ 12ನೇ ತಾರೀಖಿಗೆ ಉಪೇಂದ್ರ ರಾಯರಲ್ಲಿ ವೈದೀಕಕ್ಕೆ ಹೋಗಿ ಬಂದಿದ್ದರು. ನಂತರ ಸಂಜೆ ಸಿಟಿ ಲಂಚ್ ಹೋಂ ರಮಾನಂದ ಮಾವನ ಕಾರಿನಲ್ಲಿ ಅಜ್ಜನನ್ನು ಕರೆದೊಯ್ದು ಡಾಕ್ಟರ್ ದಿನೇಶ್‌ರಾಯರು ಸೂಚಿಸಿದಂತೆ ಮಂಗಳೂರಿನ ತಾರಾ ಕ್ಲಿನಿಕ್‌ಗೆ ಅಡ್ಮಿಟ್ ಮಾಡಿ ಬಂದರು. ಡಾಕ್ಟರ್ 4 ದಿನ ಪರೀಕ್ಷೆಗಾಗಿ ಇಲ್ಲಿ ಇರಲಿ ಎಂದ ಪ್ರಯುಕ್ತ ಅಪ್ಪ, ಅಮ್ಮ ಆಸ್ಪತ್ರೆಯಲ್ಲಿ ನಿಂತರು. 2 ದಿನ ಮನೆಯಿಂದ ನಾನೂ ಊಟ ತಗೊಂಡು ಹೋಗಿ ಕೊಟ್ಟು ಬಂದಿದ್ದೇನೆ. ಆಸ್ಪತ್ರೆಗೆ ಅಜ್ಜ ಅಡ್ಮಿಟ್ ಆಗಿದ್ದಾರೆಂದು ಕೇಳಿ ಊರವರು ಅಜ್ಜನನ್ನು ನೋಡಲು ಆಸ್ಪತ್ರೆಗೆ ಬಂದರೆ ಅವರೊಡನೆ ಹಾಸ್ಯಭರಿತವಾಗಿ ಮಾತಾಡುತ್ತಾ ಇದ್ದರು. 17ನೇ ತಾರೀಖು ಡಾಕ್ಟರ್ ಅಜ್ಜನನ್ನು ಪರೀಕ್ಷಿಸಿ ನಾಳೆ ಮನೆಗೆ ಕಳಿಸುವ ಎಂದು ಹೇಳಿದ್ದರಂತೆ. ಆ ದಿನ ರಾತ್ರಿ 10.30ರ ಹೊತ್ತಿಗೆ ಅಜ್ಜನಿಗೆ ಆರೋಗ್ಯ ಸ್ವಲ್ಪ ಹದಗೆಟ್ಟು ಬಾತ್‌ರೂಂ ಗೆಂದು ಹೋದವರು ಅಲ್ಲಿಯೇ ಕುಸಿದು ಬಿದ್ದು ದೈವಾಧೀನರಾದರು. ಅಜ್ಜ ಅಮ್ಮನ ಬಳಿ ಮಂಗಳವಾದ್ಯ ಕೇಳುತ್ತಾ ಇದೆ ಎಂದು ಹೇಳುತ್ತಾ ಇದ್ದರಂತೆ. ಆ ದಿನ ಜಯಪದ್ಮ ಬಸ್ಸಿನಲ್ಲಿ ಅಜ್ಜನನ್ನು ನೋಡಲಿಕ್ಕೆ ಹರಿಹರದಿಂದ ನಾಗೇಂದ್ರ ಮಾವ, ಲಕ್ಷ್ಮಮ್ಮತ್ತೆ ಬಂದು ಮನೆ ಮುಟ್ಟಿದ್ದರಷ್ಟೇ. ಆಗ ತಾರಾ ಕ್ಲಿನಿಕ್‌ನಿಂದ ಅಜ್ಜ ನಿಧನ ಹೊಂದಿದ ಮಾಹಿತಿ ಬಂದಿತ್ತು. ನಾನು ಪಕ್ಕದ ಮನೆ ಪೇಜಾವರ ನಾರಾಯಣ ಆಚಾರ್ ದಂಪತಿಗಳು ಕಾಶಿ, ಬದರಿಗೆ ಯಾತ್ರೆ ಹೋಗಿದ್ದ ಪ್ರಯುಕ್ತ ಅವರ ಮನೆಯಲ್ಲಿ ಮಲಗಿದ್ದೆ. ಅಲ್ಲಿಗೆ ಬಂದು ನನ್ನ ಅಜ್ಜನ ನಿಧನ ವಾರ್ತೆಯನ್ನು ತಿಳಿಸಿದರು. ನಾರಾಯಣ ಆಚಾರ್ಯರು ಯಾತ್ರೆ ಹೋಗುವಾಗ ಬಂದು ಅಜ್ಜನ ಆಶೀರ್ವಾದವನ್ನು ಪಡೆದಿದ್ದರು. ಯಾತ್ರೆ ಮುಗಿಸಿ ಬರುವಾಗ ಅಜ್ಜ ಸ್ವರ್ಗಸ್ಥರಾಗಿದ್ದರು. ಅಜ್ಜನ ಮೃತದೇಹದೊಟ್ಟಿಗೆ ಮನೆಗೆ ಬಂದ ದಿನೇಶ ಡಾಕ್ಟರ್ ಹೇಳುತ್ತಿದ್ದ ಮಾತು – ಆಚಾರ್ಯರು ನಮ್ಮನ್ನು ಮೋಸ ಮಾಡಿದರು ಎಂದು. ಮಿಥುನ ಶುದ್ಧ ಏಕಾದಶಿ ತಿಥಿ ರಾತ್ರಿಯೇ ನಮ್ಮ ಕೆರೆಯ ಪಕ್ಕದ ಏತದ ಬಾವಿಯ ಪಕ್ಕದ ಜಾಗದಲ್ಲಿ ಅಜ್ಜನ ಭೌತಿಕ ದೇಹವನ್ನು ಸಂಸ್ಕಾರ ಮಾಡಿ ಭಕ್ತಿಪೂರ್ವಕವಾಗಿ ನಮನ ಸಲ್ಲಿಸಲಾಯಿತು. ವಿಚಿತ್ರವೆಂದರೆ ಅಗ್ನಿ ಸ್ಪರ್ಶದ ನಂತರ ಬೆಂಕಿಯ ಕೆನ್ನಾಲಿಗೆಯಲ್ಲಿ ಅಜ್ಜನ ಬಲಗೈ ಕಟ್ಟಿಗೆ ಅಡಿಯಿಂದ ಮೇಲೆದ್ದು ನಮ್ಮನ್ನೆಲ್ಲಾ ಆಶೀರ್ವದಿಸಿದಂತೆ ಕಂಡು ಬಂತು. ಮಳೆಗಾಲ ವಾದ್ದರಿಂದ ನಮ್ಮ ಜಾಲಿಗೆ, ನಾರಾಯಣ ಅಜ್ಜನ ಮನೆ ಜಾಲಿಗೆ ಮಂಗಳೂರಿನ ಗಟ್ಟಿಯವರನ್ನು ಕರೆಸಿ ಮಡಲಿನ ವೈಯಪ್ಪರವನ್ನು ಹಾಕಿ, ಅವರ ಕ್ರಿಯಾ ಭಾಗವನ್ನೂ, ವೈಕುಂಠ ಸಮಾರಾಧನೆಯನ್ನೂ, ಬ್ರಾಹ್ಮಣಾರಾಧನೆಯನ್ನೂ ಶ್ರದ್ಧಾಪೂರ್ವಕವಾಗಿ ನೆರವೇರಿಸಲಾಯಿತು. ಕಡೇ ದಿನ ರಾತ್ರಿ ನಮ್ಮನ್ನು ಶುದ್ಧ ಮಾಡಲೆಂಬಂತೆ ಭಾರೀ ಮಳೆ ಬಂದು ಮನೆಯೆಲ್ಲಾ ಸೋರಿದ್ದು ಸೋಜಿಗವೇ ಸರಿ. ಇಲ್ಲಿಗೆ ಸಿಹಿಯನ್ನು ಹಂಚಿ, ಕಹಿಯನ್ನು ಉಂಡ ನಂಜುಂಡೇಶ್ವರನಂತೆ ನನ್ನ ಅಜ್ಜ **ದೊಡ್ಡ ಅಜ್ಜನ (ಹಿಟ್ಲರ್ ಆಚಾರ್)** ಯುಗ ಅಂತ್ಯವಾಯಿತು. 78 ವರ್ಷಗಳ ತುಂಬು ಜೀವನದಲ್ಲಿ ಅನೇಕ ಆದರ್ಶಗಳನ್ನು ನನಗೆ ಕಲಿಸಿದ ಅಜ್ಜನೊಡನೆ 12 ವರ್ಷಗಳ ಕಾಲ ಒಟ್ಟಾಗಿ ಇದ್ದೆ ಎಂಬುದೇ ಹೆಮ್ಮೆ. ಇಂತಹ ವ್ಯಕ್ತಿ ಹಿಂದೆಯೂ ಹುಟ್ಟಿಲ್ಲ, ಮುಂದೆಯೂ ಹುಟ್ಟಲಾರರು.

“ ಅನಾಯಾಸೇನ ಮರಣಂ, ವಿನಾ ದೈನ್ಯೇನ ಜೀವನಂ । ದೇಹಿಮೇ ತನಯಂ ಕೃಷ್ಣಃ ತ್ವಯಿ ಭಕ್ತಿ ನಚಂಚಲ ”ಅಜ್ಜ ಪ್ರತಿನಿತ್ಯ ಈ ಮಂತ್ರವನ್ನು ಹೇಳಿ 2 ಹೊತ್ತು ದೇವರಿಗೆ ನಮಸ್ಕಾರ ಮಾಡುತ್ತಿದ್ದರು. ನನ್ನ ಅಜ್ಜ – ದೊಡ್ಡ ಅಜ್ಜನಂತವರು ನಭೂತೋ ನಃಭವಿಷ್ಯತಿ.

"ಹಿಟ್ಲರ್ ಆಚಾರ್"

ಹೆಸರಿನಿಂದ ಪ್ರಸಿದ್ಧರಾದ
ಕೆ. ವೆಂಕಟಕೃಷ್ಣ ಆಚಾರ್ಯರು.



ರಮಾನಂದ ಆಚಾರ್

ಕಾವಿನಕಲ್ಲು ಕುಟುಂಬದಲ್ಲಿ ಕೀರ್ತಿಶೇಷರಾದ ವೆಂಕಟರಾಯ ಆಚಾರ್ಯರ ನಾಲ್ಕುಮಂದಿ ಗಂಡುಮಕ್ಕಳಲ್ಲಿ ಹಿರಿಯರಾದ ಕೀರ್ತಿಶೇಷ ಶ್ರೀವಾದಿರಾಜ ಆಚಾರ್ಯರ ಒಂಬತ್ತು ಮಂದಿ ಗಂಡುಮಕ್ಕಳಲ್ಲಿ ಹಿರಿಯವರೇ ಶ್ರೀ ಕೆ. ವೆಂಕಟಕೃಷ್ಣ ಆಚಾರ್ಯರು. ಇವರೆಲ್ಲರೂ ಆಂಗೀರಸ ಬೃಹಸ್ಪತಿ ಭಾರದ್ವಾಜ ಪ್ರವರಾನ್ವಿತ ವಂಶದವರು. ಕೆ . ವೆಂಕಟಕೃಷ್ಣ ಆಚಾರ್ಯರ ಎಂಟುಮಂದಿ ತಮ್ಮಂದಿರಲ್ಲಿ ನಾನು ಏಳನೆಯವನು, ಅಂದರೆ ಶ್ರೀ ವಾದಿರಾಜ ಆಚಾರ್ಯರ ಅಷ್ಟಮ ಪುತ್ರನು. ನಾನು "ರಮಾನಂದ" ನಾಮಾಂಕಿತನು. ನಮ್ಮ ತಂದೆಯವರು ಅವರ ಅರವತ್ತನೆಯ ಜನ್ಮದಿನ ಆಚರಿಸಿ ಮರುದಿನವೇ ಅಂದರೆ ಸಾವಿರದ ಒಂಬೈನೂರ ಮೂವತ್ತಾರನೇ ಇಸವಿ, ಮೀನ ಮಾಸದಲ್ಲಿ ಸಕ್ಕರೆ ಕಾಯಿಲೆಯಿಂದ ತೀರಿಕೊಂಡರು.

ಶ್ರೀಯುತ ಕೆ. ವೆಂಕಟಕೃಷ್ಣ ಆಚಾರ್ಯರು ಸಾವಿರದ ಒಂಬೈನೂರ ಎಂಟರಲ್ಲಿ ಶ್ರೀಯುತ ವಾದಿರಾಜ ಆಚಾರ್ಯ ಮತ್ತು ಅವರ ಸೌಭಾಗ್ಯವತಿ ಮಹಾಲಕ್ಷ್ಮಿ ಅಮ್ಮನ ಪ್ರಥಮ ಪುತ್ರರಾಗಿ ಜನಿಸಿದರು. ಶ್ರೀ ಮಹಾಲಕ್ಷ್ಮಿ ಅಮ್ಮನವರು ಹೊಸಬೆಟ್ಟು ಗ್ರಾಮದ ವಿಶ್ವಾಮಿತ್ರಗೋತ್ರದ ಮುಖ್ಯಪ್ರಾಣ ಭಟ್ಟರವರ ಇಬ್ಬರು ಹೆಣ್ಣುಮಕ್ಕಳಲ್ಲಿ ಹಿರಿಯವರು. ಇವರ ನಾಲ್ಕುಮಂದಿ ಅಣ್ಣತಮ್ಮಂದಿರೆಲ್ಲರೂ ಕೇರಳದ ದೇವಸ್ಥಾನಗಳಲ್ಲಿ ಶಾಂತಿಕರ್ಮ ಮಾಡಿಕೊಂಡಿದ್ದವರು.

ಶ್ರೀ ವೆಂಕಟಕೃಷ್ಣ ಆಚಾರ್ಯರಿಗೆ ಅವರ ತಂದೆಯವರು ತೀರಿಕೊಂಡಾಗ 28 ವರ್ಷ ವಯಸ್ಸಾಗಿತ್ತು. ಅವರು ಸುಮಾರು 1926 ಇಸವಿಯಲ್ಲಿ ಅಂದರೆ ಅವರ ಹದಿನೆಂಟನೆಯ ವಯಸ್ಸಿನಲ್ಲಿ ಉಪಾಧ್ಯ ಕುಟುಂಬದ ಕಮಲಮ್ಮ ಎಂಬ 16 ವರ್ಷದ ಯುವತಿಯನ್ನು ಮದುವೆಯಾಗಿದ್ದರು. ಆದರೂ ಅವರಿಗೆ ಸಂತಾನಭಾಗ್ಯ ಪ್ರಾಪ್ತಿಯಾದದ್ದು 1937ರಲ್ಲಿ ಪುತ್ರಿ ಹಾಗೂ 1939ರಲ್ಲಿ ಪುತ್ರ, ಅವರೇ ಈಗ ಪ್ರಸಿದ್ಧರಾಗಿರುವ ಹೆಚ್. ಗುರುರಾಜ ಆಚಾರ್ಯರು ಹಾಗೂ ಅವರ ಕುಟುಂಬ ಸದಸ್ಯರು.

ನನ್ನ ಜನನ 1930 ಜೂನ್ತಿಂಗಳಲ್ಲಿ ಆಯಿತು. ಅಂದರೆ ನನಗೂ, ನನ್ನ ಹಿರಿಯಣ್ಣ ಶ್ರೀಯುತ ವೆಂಕಟಕೃಷ್ಣ ಆಚಾರ್ಯರಿಗೂ, ಇಪ್ಪತ್ತೆರಡು ವಯಸ್ಸಿನ ಅಂತರ. ನಮ್ಮ ತಂದೆಯವರ ಅಕಾಲ ಮರಣದಿಂದಾಗಿ ವೆಂಕಟಕೃಷ್ಣ ಆಚಾರ್ಯರಿಗೆ ಎಂಟು ಮಂದಿ ತಮ್ಮಂದಿರು ಹಾಗೂ ಓರ್ವ ತಂಗಿಯನ್ನು ನೋಡಿಕೊಳ್ಳುವ ಗುರುತರ ಜವಾಬ್ದಾರಿ ಬಂತು. ನಮ್ಮ ತಾಯಿಯಾದರೂ ಒಟ್ಟು ಒಂಬತ್ತು ಗಂಡು ಮತ್ತು ಮೂರು ಹೆಣ್ಣುಮಕ್ಕಳನ್ನು ಹೆತ್ತವರಾಗಿದ್ದು ಇಬ್ಬರು ಹೆಣ್ಣು ಮಕ್ಕಳು ತಂದೆಯವರ ಕಾಲದಲ್ಲಿಯೇ ತೀರಿಕೊಂಡಿದ್ದರು. ನಮ್ಮ ತಂದೆಯವರು ತೀರಿಕೊಂಡಾಗ ಒಂಬತ್ತನೆಯವನಾದ ನನ್ನ ತಮ್ಮ ಸೀತಾರಾಮ ಆಚಾರ್ಯರಿಗೆ (ಮುಂದೆ ಅವರೇ ಡಾ. ಸೀ.ಹೊಸಬೆಟ್ಟು ಎಂದು ಪ್ರಸಿದ್ಧರಾದವರು) ಎರಡುವರೆ ವರ್ಷ ಪ್ರಾಯವಾಗಿತ್ತು. ನನಗೆ ಗರ್ಭಾಷ್ಟಮದಲ್ಲಿ ಅಂದರೆ ಸುಮಾರು 1938 ರಲ್ಲಿ ಮನೆಯಲ್ಲಿಯೇ ಪುರೋಹಿತರ ಸಮಕ್ಷಮ ಉಪನಯನವನ್ನು ಶ್ರೀಯುತ ವೆಂಕಟಕೃಷ್ಣ ಆಚಾರ್ಯರೇ ನಡೆಸಿದವರು.

ಉಪನಯನದ ಸಂಭ್ರಮ ಎಷ್ಟಿತ್ತೆಂದರೆ ಊಟಕ್ಕೆ ಸುಮಾರು ಹದಿನೈದು ಜನ ಸೇರಿರಬಹುದು. ಷೋಡಶ ಕರ್ಮದಲ್ಲಿ ಒಂದಾದ ಉಪನಯನ ಕರ್ಮವೇ ಮುಖ್ಯಹೊರತು ಸಂಭ್ರಮದ ಊಟವಲ್ಲ ಎಂಬ ಅಭಿಪ್ರಾಯದ ಕಾಲವಾಗಿತ್ತು. ನಮ್ಮ ತಂದೆ ಶ್ರೀಯುತ ವಾದಿರಾಜ ಆಚಾರ್ಯರು ಕುಟುಂಬ ಸಮೇತರಾಗಿ ಮಲಬಾರಿನಲ್ಲಿ ವಾಸವಾಗಿದ್ದು ಅಲ್ಲಿ ಸಂಪಾದಿಸಿದ ಹಣದಿಂದ ಊರಿಗೆಬಂದು ಹತ್ವಾರ್ಕುಟುಂಬದ ಸದಸ್ಯರೊಬ್ಬರಿಂದ ಸುಮಾರು ಮೂರು ಎಕರೆ ನೀರು ನಿಲ್ಲುತ್ತಿದ್ದ ಜೌಗು ನೆಲ ಮತ್ತು ಹಾಡಿಯನ್ನು ಖರೀದಿಸಿ ಅಲ್ಲಿ ಮನೆಕಟ್ಟಿ ಶ್ರೀ ವೆಂಕಟಕೃಷ್ಣ ಆಚಾರ್ಯರ ಉಪನಯನ ಮತ್ತು ಗೃಹಪ್ರವೇಶ ಸುಮಾರು 1916 ಇಸವಿಯಲ್ಲಿ ಮಾಡಿದ್ದರಂತೆ. ನಂತರದಲ್ಲಿ ಅವರು ಊರಲ್ಲೇ ಉಳಿದು, ಶ್ರೀ ವೆಂಕಟಕೃಷ್ಣ ಆಚಾರ್ಯ ಹಾಗೂ ಅವರ ತಮ್ಮಂದಿರಾದ ದಿವಂಗತ ಶ್ರೀ ನಾರಾಯಣ ಆಚಾರ್ಯ ಹಾಗೂ ಶ್ರೀ ಶ್ರೀನಿವಾಸ ಆಚಾರ್ಯರನ್ನು ಕೇರಳಕ್ಕೆ ಕಳುಹಿಸಿ ಕೊಟ್ಟು ಅಲ್ಲಿ ಅವರು ಶಾಂತಿಕರ್ಮವನ್ನು ಮುಂದುವರಿಸಿದರು. ಕೆಲವು ವರ್ಷಗಳ ನಂತರ ಶ್ರೀಯುತ ವೆಂಕಟಕೃಷ್ಣ ಆಚಾರ್ಯರು ತಮ್ಮ ತಮ್ಮಂದಿರಿಗೆ ಕೇರಳದಲ್ಲಿನ ಜವಾಬ್ದಾರಿಯನ್ನು ವಹಿಸಿ ಊರಿಗೆ ಬಂದು ನಮ್ಮ ತಂದೆಯವರ ಜೊತೆಯಲ್ಲಿ ಇದ್ದರಂತೆ.

ನನ್ನ ಹಿರಿಯಣ್ಣ ಶ್ರೀಯುತ ವೆಂಕಟಕೃಷ್ಣ ಆಚಾರ್ಯರು ಶಾಲೆಗೆ ಹೋದವರಲ್ಲ. ಕನ್ನಡಭಾಷೆ ಬರೆಯಲು ಬರುತ್ತಿರಲಿಲ್ಲ ಆದರೆ ಓದುವಷ್ಟು ತಿಳಿದಿದ್ದರು. ಅವರ ವ್ಯವಹಾರಗಳೆಲ್ಲ ತುಳುಲಿಪಿ, ಮಲಯಾಳ ಭಾಷೆ ಮತ್ತು ಸಂಸ್ಕೃತದಲ್ಲಿ. ಇವರ ವಿದ್ಯಾಭ್ಯಾಸವೆಲ್ಲ ನಮ್ಮ ತಂದೆಯವರಿಂದಲೇ ಹಾಗೂ ಚಿತ್ರಾಪುರ ಮಠದ ಶ್ರೀಶ್ರೀಶ್ರೀ ವಿದ್ಯಾಪೂರ್ಣ ತೀರ್ಥ ಸ್ವಾಮೀಜಿಯವರಿಂದ ಆಗಿದ್ದಿರಬಹುದು. ಅವರು ಮನೆಯ ಎಲ್ಲ ಖರ್ಚುವೆಚ್ಚಗಳನ್ನು ತುಳುಭಾಷೆಯಲ್ಲಿ ಬರೆಯುತ್ತಿದ್ದರು. ಓಲೆಗರಿಯಲ್ಲಿ ತುಳುಭಾಷೆಯಲ್ಲಿ ಬರೆದಿದ್ದಂತಹ ಮಂತ್ರಗಳನ್ನು ಅವರು ಓದುತ್ತಿದ್ದರು. ನನ್ನ ಹಿರಿಯ ಅಣ್ಣನವರಿಗೆ, ಎಲ್ಲ ವಿಶೇಷ ಸಂದರ್ಭಗಳಲ್ಲಿ ಇಸ್ಪೀಟ್ ಆಡುವ ಹವ್ಯಾಸವಿತ್ತು. ಹಾಗೆ ಅವರು ಅಶೋಕನಗರದಲ್ಲಿ ಅಲ್ಲಿನ ತರುಣವೃಂದದವರೊಂದಿಗೆ ಇಸ್ಪೀಟ್ ಆಡುವಾಗ ಇವರ ಆಟದ ಚಮತ್ಕಾರವನ್ನು ನೋಡಿ ಅವರಲ್ಲೊಬ್ಬರು "ಯಲಾ ಹಿಟ್ಲರ್ " ಎಂದು ಸಂಬೋಧಿಸಿದರಂತೆ. ಅಲ್ಲಿಂದ ನನ್ನ ಹಿರಿಯಣ್ಣನವರು "ಹಿಟ್ಲರ್ ಆಚಾರ್ಯ" ಎಂದೇ ಪ್ರಸಿದ್ಧರಾದರು. ನನ್ನ ಹಿರಿಯಣ್ಣ ಗುಣದಲ್ಲಿ ಸಮಾಧಾನಿಯಾಗಿದ್ದರು. ಇತರರಿಗೆ ಸಹಾಯ ಹಸ್ತಕರಾಗಿದ್ದರು. ಊರಲ್ಲಿ ನಮ್ಮ ಸಮಾಜದಲ್ಲಿ ಮದುವೆ ವಯಸ್ಸಿಗೆಬಂದ ತರುಣತರುಣಿಯರನ್ನು ಕಂಡರೆ, ಅವರ ಮದುವೆಯನ್ನ ತನ್ನ ಚಾಣಕ್ಯತಂತ್ರಗಳಿಂದ ನೆರವೇರಿಸುತ್ತಿದ್ದರು. ನಮ್ಮ ಎಲ್ಲಾ ಅಣ್ಣತಮ್ಮಂದಿರ ಪೈಕಿ ನನ್ನನ್ನು ಹಾಗೂ ನನ್ನ ತಮ್ಮ ಸೀತಾರಾಮನನ್ನು ಹೈಸ್ಕೂಲುವರೆಗೆ ಓದಿಸಲು ಕಾರಣಕರ್ತರಾಗಿದ್ದರು. ಅದು ಅಲ್ಲದೆ ನಾನು ಈಗ ವಾಸಿಸುತ್ತಿರುವ ಮನೆಯನ್ನು ಅವರೇ ನಿಂತು ಕಟ್ಟಿಸಿ ನನಗೆ ಹಸ್ತಾಂತರಿಸಿದ್ದರು. ಇನ್ನು ಅವರ ಗುಣ ವಿಶೇಷಗಳನ್ನು ಎಷ್ಟು ಬರೆದರೂ ಬರೆಯಬಹುದು. ಅದೂ ಅಲ್ಲದೆ ನಮ್ಮ ಸಮಾಜದಲ್ಲಿ ಯಾರಾದರೂ ಮೃತಪಟ್ಟ ಸಮಾಚಾರ ಕೇಳಿದರೆ ಅಲ್ಲಿಗೆ ಧಾವಿಸಿ ಅಲ್ಲಿನ ಮರಣೋತ್ತರ ಕ್ರಿಯೆಗಳ ಜವಾಬ್ದಾರಿ ವಹಿಸಿಕೊಂಡು ಎಲ್ಲರಿಂದಲೂ ಮೆಚ್ಚಿಸಿಕೊಂಡವರು. ತಮ್ಮಿಂದಾದ ಹಣ ಸಹಾಯವನ್ನು ಅಕ್ಕಪಕ್ಕದ ಎಲ್ಲಾ ಜಾತಿಯವರಿಗೂ ಮಾಡುತ್ತಿದ್ದರು. ಅಂತೂ ನಮ್ಮಣ್ಣ ವೆಂಕಟಕೃಷ್ಣ ಆಚಾರ್ಯರು ನಮ್ಮ ಸಮಾಜದ ಎಲ್ಲರಿಗೂ ಆಪ್ತರಾಗಿದ್ದು, ತನ್ನ ತಮ್ಮಂದಿರನ್ನು ತಂದೆಯ ಸ್ಥಾನದಲ್ಲಿ ನಿಂತು ನೋಡಿಕೊಂಡವರು. ಇಂತಹ ನಮ್ಮ ಹಿರಿಯಣ್ಣ, ಬರೆ ಮೂರು ದಿನದ ಅನಾರೋಗ್ಯದಿಂದ ವೈದ್ಯಕೀಯ ಶುಶ್ರೂಷೆಗೆ ಒಳಗಾಗಿ ಚಿಕಿತ್ಸೆ ಫಲಕಾರಿಯಾಗದೆ ನಮ್ಮನ್ನೆಲ್ಲ ಬಿಟ್ಟು ಅಗಲಿದರು. ಅಂತೂ "ಶರಣರ ಗುಣ ಮರಣದಲ್ಲಿ ನೋಡು" ಎಂಬುದು ಸತ್ಯವಾಯಿತು.

****



ನನ್ನ ತಂದೆಯ ಕುರಿತು

ಗುರುರಾಜ ಆಚಾರ್

ನಾನು ಹುಟ್ಟಿದ್ದು 1939ನೇ ಇಸವಿ ಫೆಬ್ರವರಿ 15ನೇ ತಾರೀಕಿನಂದು. ನಾನು ಹುಟ್ಟುವ ಮೊದಲು ನನ್ನ ಅಪ್ಪನಿಗೆ ಒಂದು ಮಗಳು ಹುಟ್ಟಿದ್ದಳು. ಅವಳೇ ನನ್ನ ಅಕ್ಕ ಲಕ್ಷ್ಮಿ. ನಾನು ಹುಟ್ಟುವ 13 ದಿನ ಮೊದಲು ಚಿಕ್ಕಪ್ಪ ನಾರಾಯಣ ಆಚಾರ್‌ಗೆ ಒಂದು ಹೆಣ್ಣು ಮಗು ಹುಟ್ಟಿದಳು. ಅವಳ ಹೆಸರು ರಮಾ. ಅವರ ಬಳಿಕ ಹುಟ್ಟಿದವನೇ ನಾನು. ನಾನೇ ಮನೆಗೆ ಮೊದಲ ಗಂಡು ಮಗು. ಬಳಿಕ ಜಿತೇಂದ್ರಿಯ ಚಿಕ್ಕಪ್ಪನಿಗೆ ಮಾಧವ ಹುಟ್ಟಿದ ಬಳಿಕ ನಾರಾಯಣ ಚಿಕ್ಕಪ್ಪನಿಗೆ ಮಗ ವಾದಿರಾಜ (ರಾಜ) ಹುಟ್ಟಿದ. ನಮಗೆಲ್ಲ ಒಂದೊಂದು ವರ್ಷದ ವ್ಯತ್ಯಾಸ. ನನಗೂ ಹಾಗೂ ರಾಜನಿಗೆ ಒಟ್ಟಿಗೆ ಜೋಡು ಉಪನಯನವಾಯಿತು. ನಾನು ಹುಟ್ಟಿ ಬೆಳೆಯುವ ಕಾಲದಲ್ಲಿ ನಮ್ಮ ಮನೆಯಲ್ಲಿ ಊಟಕ್ಕೆ ಮಕ್ಕಳು ಸೇರಿ 27 ಜನರಿದ್ದರು. ಆಗ ಅನ್ನ ಮಾಡುವುದು ಈಗಿನ ಚೆರಿಗೆ ಆಕಾರದ ಮಡಕೆಯಲ್ಲಿ. ಆ ಕಾಲದಲ್ಲಿ ನಮ್ಮ ಗೋಂಟುಸಾಲು ಗದ್ದೆಯಲ್ಲಿ ಉದ್ದು ಹಾಕುತ್ತಿದ್ದರು. ಕೊಯ್ಲಿಗೆ ಬಂದಾಗ ಎಲ್ಲಾ ಮಕ್ಕಳು ಅಮ್ಮ ಚಿಕ್ಕಮ್ಮಂದಿರು ಅದನ್ನು ಗದ್ದೆಯಿಂದ ಹರಿದು ತಲೆಯಲ್ಲಿ ಹೊತ್ತು ತಂದು ಹಾಕುತ್ತಿದ್ದರು. ಆಗ ತಂದೆಯವರು ಎಲ್ಲರಿಗೂ ಈಗನ ಲಾಡಿನಂತೆ ಉಪ್ಪಿಟ್ಟನ್ನು ಉಂಡೆ ಮಾಡಿಕೊಡುತ್ತಿದ್ದರು. ಅದು ಎಷ್ಟು ರುಚಿಯೆಂದರೆ ಹೇಳಲು ಸಾಧ್ಯವಿಲ್ಲ. ಅದರಲ್ಲಿ ಪ್ರೀತಿ ಮಮತೆಯ ರುಚಿ ಇರುತ್ತಿತ್ತು. ಪ್ರತಿ ಶುಕ್ರವಾರ ಬೆಣ್ಣೆ ಕಾಯಿಸುತ್ತಿದ್ದರು. ಅದನ್ನು ಕರವಸ್ತ್ರದಲ್ಲಿ ಹಿಂಡಿ ತುಪ್ಪದ ಕುಪ್ಪಿಗೆ ಹಾಕಿ ಅವರ ಕೊಜಂಟಿಯನ್ನು ತಿನ್ನಲು ಎಲ್ಲಾ ಮಕ್ಕಳಿಗೆ ಕೊಡುತ್ತಿದ್ದರು. ಆಗಿನ ಕಾಲದಲ್ಲಿ ದ್ವೇಷ, ಅಸೂಯೆ ಏನೆಂದು ಗೊತ್ತಿರಲಿಲ್ಲ. ದೊಡ್ಡವರ ಮಾತು ಎಂದರೆ ದೇವರ ವಾಕ್ಯವೆಂದು ನಂಬುತ್ತಿದ್ದೆವು. ನಮ್ಮಲ್ಲಿ ಹಬ್ಬ ಹುಣ್ಣಿಮೆಗಳಿಗೆ ಒಟ್ಟಿಗೆ ಬಟ್ಟೆ ತರುವ ಪದ್ಧತಿಯಿತ್ತು. ಹಬ್ಬದ ಮುಂಚಿನ ದಿನ ಎಲ್ಲರೂ ಸೀರೆ ಆರಿಸಿ ತೆಗೆದುಕೊಂಡ ನಂತರ ಕೊನೆಗೆ ಉಳಿದದ್ದು ನನ್ನ ಅಮ್ಮ ತೆಗೆದುಕೊಳ್ಳುತ್ತಿದ್ದರು. ಅದರಲ್ಲಿ ಯಾರಲ್ಲೂ ವಿರಸ ಇರುತ್ತಿರಲಿಲ್ಲ. ಮರ್ಲ್‌ಕಾಡಿನಿಂದ 1 ಕಟ್ಟು ಕಬ್ಬು ವರ್ಷಕ್ಕೆ ತಲೆ ಮೇಲೆ ಇಟ್ಟು ಹೊತ್ತು ತರುತ್ತಿದ್ದರು. ಇನ್ನು ಗುಜ್ಜೆಯನ್ನು ಮಹಾಬಲ ಮಾಸ್ತ್ರ ಮನೆ ಹಾಗೂ ಮೀನಾಕ್ಷಿ ಟೀಚರ್ ಮನೆಯಿಂದ ಹೊತ್ತು ತರುತ್ತಿದ್ದರು. ತಿಂಗಳಿಗೆ 20 ದಿನ ನಮ್ಮಲ್ಲಿ ಸತ್ಯನಾರಾಯಣ ಪೂಜೆ, ಶನಿ ಪೂಜೆ, ದುರ್ಗಾ ನಮಸ್ಕಾರ ಅಥವಾ ತಿಲಹೋಮ ಏನಾದರೂ ಇರುತ್ತಿತ್ತು. ಹೆಚ್ಚಾಗಿ ಮೊಗವೀರರದ್ದು. ಪಡ್ಲಾಗಿ ಒಬ್ಬರು ಗುರುವ ಜೋಯಿಸರೆಂಬವರು ಇದ್ದರು. ಮೊಗವೀರ ಸಮಾಜದವರು ಅವರೊಡನೆ ಜ್ಯೋತಿಷ್ಯ ಕೇಳಲು ಹೋಗುತ್ತಿದ್ದಾಗ ಅವರು ಹೇಳಿದ ಪೂಜೆಯುನ್ನು ನಮ್ಮಲ್ಲಿ ಮಾಡಿಸುತ್ತಿದ್ದರು. ಯಾಕೆಂದರೆ ಅವರು ನಮ್ಮಲ್ಲಿಗೆ ಬಂದು ಭಟ್ರೆ ಇಂತಹಾ ಪೂಜೆ ಆಗಬೇಕು. ಎಷ್ಟಾಗುತ್ತದೆ ? ಎಂದು ಕೇಳಿದರೆ ನನ್ನ ಅಪ್ಪ ಕೇಳುತ್ತಿದ್ದದ್ದು – ನಿನಟ ಏತು ಉಂಡು ? ಆತು ಕೊರು. ನಿಕ್ಲೆನ್ ಬುಡಿಯರೆ ಆಪುಂಡ ಎಂದು. ಹಾಗಾಗಿ ಅವರಿಗೆ ನನ್ನ ಅಪ್ಪನ ಮೇಲೆ ತುಂಬಾ ವಿಶ್ವಾಸ. ನನ್ನ ಅಪ್ಪ ಯಾರಲ್ಲಿಯೂ ಕಡ್ಡಾಯವಾಗಿ ಇಷ್ಟೇ ಹಣ ಕೊಡಬೇಕೆಂದು ಹೇಳಿದ್ದಿಲ್ಲ. ಕೊಟ್ಟದ್ದರಲ್ಲಿ ತೃಪ್ತಿಪಡುತ್ತಿದ್ದರು. 8ನೇ ಕ್ಲಾಸಿನಲ್ಲಿ ಇರುವಾಗ ವಿದ್ಯೆ ನನ್ನ ತಲೆಗೆ ಹತ್ತದ ಕಾರಣ ನಾನು ನಾಸಿಕಕ್ಕೆ ಕೃಷ್ಣರಾಯರೊಂದಿಗೆ ಹೊರಟಾಗ

ನನ್ನ ಅಪ್ಪ ನನ್ನನ್ನು ತಡೆಯಲಿಲ್ಲ. ಅಥವಾ ನೀನು ಪುರೋಹಿತ ಮಂತ್ರ ಕಲಿಯಬೇಕೆಂದು ಒತ್ತಾಯಿಸಲಿಲ್ಲ. ನಾನು ನಾಸಿಕದಲ್ಲಿ ಇರುವ ಕಾಲದಲ್ಲಿ ನಾರಾಯಣ ಚಿಕ್ಕಪ್ಪನ ಮಗಳು ರಮಕ್ಕನನ್ನು ಹಂದಿಗೋಡಿನ ಜಮೀನ್ದಾರ ಮನೆತನದ ಹರಿಶ್ಚಂದ್ರರಾಯರಿಗೆ ಕೊಡುವುದೆಂದು ನಿಶ್ಚಿತವಾಗಿತ್ತು. ಆ ಕಾಲದಲ್ಲಿ ನನ್ನ ಅಪ್ಪನ ಕಿವಿಗೆ ಆಚಾರ್ರು – ತಮ್ಮನ ಮಗಳಾದ್ದರಿಂದ ಘಟ್ಟಕ್ಕೆ ಕೊಡಲು ಒಪ್ಪಿದರು, ಸ್ವಂತ ಮಗಳಾದರೆ ಕೊಡುತ್ತಿದ್ದರಾ ? ಎಂಬ ಅಪವಾದ ಕೇಳಿ ಬಂತು. ಅದಕ್ಕೆ ಹಠದಿಂದ ತೀರ್ಥಹಳ್ಳಿ ಸಮೀಪದ ದಂಟುಕ ಗ್ರಾಮದವರಾದ ನಾಗೇಂದ್ರರಾಯರೊಂದಿಗೆ ತನ್ನ ಮಗಳಾದ ಲಕ್ಷ್ಮಿಯನ್ನು ಕೊಡುವುದು ಎಂದು ತೀರ್ಮಾನಿಸಿ ನಮ್ಮ ಮನೆಯಲ್ಲೇ ಜೋಡು ಮದುವೆ ಮಾಡಿ ಇಬ್ಬರನ್ನೂ ಮದುವೆ ಮಾಡಿಕೊಟ್ಟರು. ಆ ಕಾಲದಲ್ಲಿ ಹೋಗಿ ಬರಲಿಕ್ಕೆ ಇಷ್ಟು ವಾಹನ ವ್ಯವಸ್ಥೆ ಇರಲಿಲ್ಲ. ಒಬ್ಬಳೇ ಮಗಳು ಎಂದು ಮದುವೆ ಮಾಡಿಕೊಡಲು ಹಿಂಜರಿಯಲಿಲ್ಲ. ಅಪವಾದಕ್ಕೆ ಹೆದರಿದರು.

ತನ್ನ ಸೋದರ ಮಾವನ ಮಕ್ಕಳಲ್ಲಿ ಯಾರನ್ನಾದರೂ ತಮ್ಮ ಮನೆಗೆ ತಂದುಕೊಳ್ಳಬೇಕು ಎಂಬ ಉದ್ದೇಶದಿಂದ ತಮ್ಮಂದಿರಿಗೆ ಕೇಳಿದಾಗ ಅವರು ಒಪ್ಪಲಿಲ್ಲ. ಆ ಕಾಲದಲ್ಲಿ ಹಠಕ್ಕೆ ಬಿದ್ದು ನನ್ನ ಮಗನಿಗೆ ಮದುವೆ ಮಾಡಿಸುತ್ತೇನೆ ಎಂದು ನನ್ನ ಮದುವೆಯನ್ನು ಅವರ ಮಾವ ಪದ್ಮನಾಭರ ಮಗಳಾದ ಇಂದುಮತಿಯೊಂದಿಗೆ ಮಾಡಿಸಿದರು. ನಾನು ಅವಳನ್ನು ನೋಡಿದ್ದೇ ಮದುವೆ ಮನೆಯಲ್ಲಿ. ಆವಾಗ ಅವಳು ಇನ್ನು ಋತುಮತಿಯಾಗಿರಲಿಲ್ಲ. ಆದರೆ ಕೊಟ್ಟ ಮಾತಿಗೆ ತಪ್ಪಬಾರದೆಂಬ ಉದ್ದೇಶದಿಂದ ಆಡುವ ಮಾತಿಗೆ ತುಂಬಾ ಬೆಲೆ ಕೊಡುತ್ತಿದ್ದರು ನನ್ನ ಅಪ್ಪ. ಆವಾಗ ನಾನು ಹರಿಹರಕ್ಕೆ ಬಂದು ವ್ಯವಹಾರ ಪ್ರಾರಂಭಿಸಿಯಾಗಿತ್ತು. ಆ ಮೇಲೆ ಅವರು ಆಗಾಗ ಹರಿಹರಕ್ಕೆ ಬರುತ್ತಿದ್ದರು. ಯಾಕೆಂದರೆ ಆ ಕಾಲದಲ್ಲಿ ನನ್ನ ಅತ್ತೆ ವಾಗ್ದೇವಿ ಅವರು ಹರಿಹರದಲ್ಲಿದ್ದರು. ನನ್ನ ರಮಾನಂದ ಚಿಕ್ಕಪ್ಪ ಹರಿಹರದಲ್ಲಿದ್ದರು. ನನ್ನ ಅಕ್ಕ ನನ್ನ ಒಟ್ಟಿಗೆ ಇದ್ದರು. ಹೀಗಾಗಿ ಎರಡು ಮೂರು ಸಲ ಹರಿಹರಕ್ಕೆ ಬಂದಿದ್ದರು. ಒಮ್ಮೆ ನಾನು ವ್ಯವಹಾರದಲ್ಲಿ ನಷ್ಟ ಆಗಿ ಅಪ್ಪನ ಹತ್ತಿರ ಸಾಲ ಕೇಳಿದಾಗ ಅಪ್ಪ ಕೊಟ್ಟಿರಲಿಲ್ಲ. ಬಳಿಕ ಶ್ರೀಧರ ಚಿಕ್ಕಪ್ಪ ಹೇಳಿದರು ಎಂದು ನನ್ನಿಂದ ಪ್ರಾಮಿಸರಿ ನೋಟು ಬರೆದು ತೆಗೆದುಕೊಂಡು ದುಡ್ಡು ಕೊಟ್ಟಿದ್ದರು. ದುಡ್ಡಿನ ವ್ಯವಹಾರದಲ್ಲಿ ಬಹಳ ಕಟ್ಟುನಿಟ್ಟು ನನ್ನ ಅಪ್ಪ. ಆ ಮೇಲೆ ನಾನು ಹೆಚ್ಚು ಇದ್ದದ್ದು ಹರಿಹರದಲ್ಲಿ. ಮನೆಯಲ್ಲಿ ಯಾವುದೇ ವಿಶೇಷ ಸಮಾರಂಭಗಳಲ್ಲಿ ಬಂದು ಭಾಗವಹಿಸುತ್ತಿದ್ದೆ.

1984ನೇ ಇಸವಿಯಲ್ಲಿ ಅಪ್ಪನ ಒತ್ತಡ ಹೆಚ್ಚಾಗಿ ಊರಲ್ಲಿ ಬಂದು ನೆಲೆನಿಂತೆ. 1985ನೇ ಇಸವಿಯಲ್ಲಿ ನಮ್ಮ ಜಾಗ ಮಾರಾಟವಾಗಿ ಬಂದ ದುಡ್ಡಿನಲ್ಲಿ ಅಪ್ಪನ ನಿರ್ದೇಶನದಂತೆ ಉಡುಪಿಯಲ್ಲಿ ಸರ್ವಸೇವೆ ಮಾಡಿಸಿದೆ. ಮನೆಯಲ್ಲಿ ಚಂಡಿಕಾಹೋಮ ಮಾಡಿಸಿ ಪ್ರತ್ಯಕ್ಷ ದಶದಾನಗಳನ್ನು ಅವರ ಕೈಯಿಂದ ಕೊಡಿಸಿದ ತೃಪ್ತಿ ನನಗಿದೆ. ಅವರ ಬಾಯಿಂದ ಕೇಳಿದ ವಿಚಾರ ಅವರಿಗೆ **ಹಿಟ್ಲರ್** ಎಂದು ಬಿರುದು ಬಂದಿದ್ದು. ಬೋಳೂರು ಗ್ರಾಮಸ್ಥರಾದ ಮೇಲ್ಮನೆ ರಾಜರ ಮನೆಯಲ್ಲಿ ಒಂದು ದಿನ ವಿಶೇಷ ಕಾರ್ಯಕ್ರಮದ ದಿವಸ ಊಟವಾದ ಬಳಿಕ ಇಸ್ಪೀಟು ಆಡುವ ಸಂದರ್ಭ. ಒಬ್ಬರು ಕೈಯಲ್ಲಿ ಜಾತಿಯ ಕಾರ್ಡು ಇದ್ದರೂ ರಾಂಗ್ ಕಟ್ ಮಾಡಿದರು. ಆ ಕಾಲದಲ್ಲಿ ತಂದೆ ಅವರ ಕೈ ಹಿಡಿದು ತಪ್ಪು ಆಟ ಆಡುತ್ತೀಯಾ ? ಎಂದು ಕೇಳಿದರು. ಅದನ್ನು ನೋಡಿ ರಾಜರು **ಓ, ಹಿಟ್ಲರ್ ಆಚಾರ್ಯರೇ** ಎಂದರು. ಹಾಗೇ ಅವರಿಗೆ ಆ ಬಿರುದು ಬಂದಿತು.

ನನ್ನ ತಂದೆಯವರು 17–06–1986ರಂದು ಮಂಗಳೂರಿನ ತಾರಾ ಕ್ಲಿನಿಕ್‌ನಲ್ಲಿ ತೀರಿಕೊಂಡರು.

ನೆನಪಿಡಬೇಕಾದ ಅವರ ಕಿವಿ ಮಾತು :

ಏನೇ ಸಮಾರಂಭ ಮಾಡಿದರೂ 12.30ಯ ಒಳಗೆ ಎಲೆ ಹಾಕಬೇಕು. ಬಂದವರು ಯಾರಾದರೂ ಊಟಕ್ಕೆ ಇನ್ನೂ ಆಗಲಿಲ್ಲವಾ ಎಂದು ಕೇಳಿದರೆ ಅದು ಅವರು ಆಡುವ ಮಾತಲ್ಲ. ಅವರ ಹೃದಯದಲ್ಲಿದ್ದ ಅನ್ನಬ್ರಹ್ಮನು ಮಾತನಾಡುತ್ತಿರುವುದು ಎಂದು ತಿಳಿದುಕೋ ಎಂದು ನನಗೆ ಹೇಳಿದ್ದಾರೆ. ಅದರಂತೆ ನಾನು ನಡೆದುಕೊಳ್ಳುತ್ತಿದ್ದೇನೆ.

ವೆಂಕಟಕೃಷ್ಣ ಆಚಾರ್ಯರು



ರಚನೆ: ಕು। ಧೃತಿ

ಸುಪ್ರಸಾದಃ ಪ್ರಸನ್ನಾತ್ಮಾ ವಿಶ್ವಧೃಗ್ವಿಶ್ವಭುಗ್ವಿಭುಃ । ಸತ್ಕರ್ತಾ ಸತ್ಕೃತಃ ಸಾಧುರ್ಜಹ್ನುರ್ನಾರಾಯಣೋ ನರಃ ॥ ೨೬ ॥

ನನ್ನ ಅಜ್ಜ ವೆಂಕಟಕೃಷ್ಣ ಆಚಾರ್ರು

–ಹೇಳಿಕೊಳ್ಳಲು ಹೆಮ್ಮೆ



ಯಚ್. ವಿನಯ ಆಚಾರ್

ನಾನು ಹುಟ್ಟಿದ್ದು ಹರಿಹರದಲ್ಲಿ ಆದ್ದರಿಂದ ಊರಿಗೆ ಬರುವವರೆಗೆ ಇಲ್ಲಿ ಯಾರಿದ್ದಾರೆ ? ಇಲ್ಲಿಯ ವಾತಾವರಣ ಏನೂ ಎಂಬ ಕಲ್ಪನೆಯೂ ಇರಲಿಲ್ಲ. ಐದನೇ ತರಗತಿಗೆ ಊರಿಗೆ ಬಂದಾಗ ನಮ್ಮ ದೊಡ್ಡ ಮನೆಯಲ್ಲಿ ಮೂರು ಜನ ಅಜ್ಜಂದಿರು, ಮೂರು ಜನ ದೊಡ್ಡಮ್ಮಂದಿರು. ತೋಟ, ಗದ್ದೆ, ಹಟ್ಟಿ, ಮನೆ ತುಂಬಾ ಜನ ನೋಡಿ ದಿಗ್ಭ್ರಾಂತನಾಗಿದ್ದೆ. ಭರ್ಜರಿ ದೇಹದ ಅಜಾನುಬಾಹು ನನ್ನ ಅಜ್ಜ ವೆಂಕಟಕೃಷ್ಣ ಆಚಾರ್. ಕಚ್ಚೆ ಹಾಕಿ ಮೈಮೇಲೊಂದು ಬೈರಾಸ್ ಹಾಕಿದರೆ ಮಧ್ವರಾಯರ ಅಂಗಡಿ, ಸಂಜೀವರಾಯರ ಅಂಗಡಿಗೂ ಹೋಗಿಬರುತ್ತಿದ್ದರು. ಮಧ್ವರಾಯರ ಅಂಗಡಿಯಲ್ಲಿ ಪೇಪರ್ ಓದುವಾಗ, ರಾಮ ಮಾಸ್ಟ್ರು (ಕ್ರಾಫ್ಟ್) ಸೇರಿಕೊಳ್ಳುತ್ತಿದ್ದರು. ಮೂರು ಅಜ್ಜಂದಿರಿಗೆ ತಿಂಡಿ. ನಮಗೆ ಗಂಜಿ. ಹರಿಹರದಲ್ಲಿದ್ದ ಕಾರಣ ಈ ಗಂಜಿ ಸೇರದು ಎಂದು ಹಟ ಮಾಡಿದ ನನಗೆ ದೊಡ್ಡಜ್ಜನಿಂದ ತಿಂಡಿ ಕೊಡುವಂತೆ ಆರ್ಡರ್. ಬೆಳಗ್ಗೆ ಪೂಜೆ ಮಾಡಿ ಚಾವಡಿಯ ಮುಂದೆ ಕುಳಿತರೇ ಅಂಗಳದಲ್ಲಿ ಯಾರೋ ಬಂದರು ಎಂದು ಗೊತ್ತಾಗುವುದು ಅವರ ನಗು ಮತ್ತು ಜೋರಾದ ಧ್ವನಿಯಿಂದ. ಯಾರೇ ಬಂದರೂ ಬೆಲ್ಲ ನೀರು ಅಥವಾ ಕಾಫಿ ಟೀ ಕುಡಿಯದೇ ಹಿಂದೆ ಹೋಗುವ ಹಾಗಿಲ್ಲ. ಮೊಗವೀರರು ಬೊಂಬಾಯಿಯಿಂದ ಬಂದವರು ಸತ್ಯನಾರಾಯಣ ಪೂಜೆ, ಶನಿ ಪೂಜೆ, ಗಣಹೋಮಕ್ಕೆ, ಬೊಜ್ಜಕ್ಕೆ ಮಾತಾಡಲು ಬರುತ್ತಿದ್ದರು. ಬಂದಾಗಲೇ ಅವರು ಯಾಕೆ ಬರುವುದೆಂದು ಮೊದಲೇ ತಿಳಿದವರಂತೆ ದಾದ ಆವೋಡು ? ಏತ್ ಜನಕೊ ? ಎನ್ನುತ್ತಿದ್ದರು. ಬೊಜ್ಜವಾದರೆ ಏತ್? ನೂದ್ ಜನನಾ, ತಿಲ ಹೋಮ, ಹೋಳಿಗೆ, ವಡೆ, ಪಾಯಸ ಮಲ್ಪುಗ ಎನ್ನುತ್ತಿದ್ದರು. ಏತಾಪುಂಡು ಕೇಳಿದರೆ, ನಿನಡ ಏತುಂಡು ? ನೂತ್ತೈವ ಉಂಡು ಅಂದರೆ ಆವು ಕೊರ್ದು ಪೋಲ ಎಂದು ಹೇಳಿ ಅವರ ಕಾರ್ಯಕ್ರಮದ ದಿನ ತಾವೇ ಓಡಾಡಿ, ಬಳಸಿ, ತಮ್ಮ ಮನೆಯ ಕಾರ್ಯಕ್ರಮದಂತೆ ಸಂತೋಷದಿಂದ ಮಾಡುತ್ತಿದ್ದರು. ನನ್ನ ಅಜ್ಜ 'ಹೋಗಿ ಗುಡ್ಡೆ ನಾರಾಯಣನಿಗೆ ನಾಳೆ ಬೆಳಗ್ಗೆ ಬರಲು ಹೇಳಿ, ವೆಂಕಟಕೃಷ್ಣನಿಗೆ ರಿಕ್ಷಾ ತರಲು ಎಂಟು ಗಂಟೆಗೆ ಹೇಳು' ಎಂದಾಗ ನಾವು ಓಡಿ ಹೋಗಿ ಹೇಳಿ ಬರುವುದು.

ಊಟಕ್ಕೆ ಹೋದಲ್ಲಿ ದಕ್ಷಿಣೆ ಸಿಕ್ಕರೆ ಕವಾಟಿನ ಮೇಲೆ ಎಲ್ಲರೂ ತಂದಿಡಬೇಕು. ಅದನ್ನು ತುಳು ಮಲಯಾಳಿ ಭಾಷೆಯಲ್ಲಿ ಲೆಕ್ಕ ಬರೆದಿಡುತ್ತಿದ್ದರು. ಗದ್ದೆಗೆ ತಟ್ಟೆ ಹಿಡಿದುಕೊಂಡು ಎಲ್ಲರೂ ಹೋಗಿ ನೀರು ಹಾಕಲೇಬೇಕು. ಮನೆಯಲ್ಲಿ ಕಾರ್ಯಕ್ರಮವಾದರೇ ಕಡೆಗೆ ಅಜ್ಜನೇ ಸಿಹಿತಿಂಡಿ, ಪಾಯಸ ಬಳಸುವುದು. ದೊಡ್ಡ ಸೌಟು, ಪಾಯಸದ ಮೇಲೆ ಸಕ್ಕರೆ ಮತ್ತು ತುಪ್ಪ ಹಾಕಿ ಅಂತ ಹೇಳುತ್ತಾ ಬಳಸುತ್ತಿದ್ದರೆ, ಎಲ್ಲರೂ ಸಂತೋಷದಿಂದ ತಿನ್ನುತ್ತಿದ್ದುದನ್ನು ಕಂಡಿದ್ದೇನೆ. ಪಿ.ಸಿ. ಮಾಸ್ಟರ ಮನೆಗೆ, ಐ.ಕೆ. ದೊಡ್ಡಪ್ಪನ ಮನೆಗೆ, ಕಾವಿನಕಲ್ಲು ದೊಡ್ಡಮ್ಮನ ಮನೆಗೆ ಹೋಗುವಾಗೆಲ್ಲ

ಅವರ ಜೊತೆ ಹೋಗಬೇಕು. ಹರಿ ನಿವಾಸ ವಾಸುದೇವರಾಯರ ಎರಡನೇ ಮದುವೆ ಅರಸಿಕೆರೆಯಲ್ಲಿ ಆದಾಗ ನನ್ನನ್ನು ಜೊತೆ ಬಾ ಎಂದು ಕರೆದುಕೊಂಡು ಹೋಗಿದ್ದರು. ಆಟದ ಮೇಲೆಲ್ಲಾ ಇವರಿಗೆ ವಿಶೇಷ ಪ್ರೀತಿ. ಊಟ ಆದ ಮೇಲೆ ಇಸ್ಪೀಟ್ ಆಡಿದ್ದು ನೆನಪಿದೆ. ಮನೆಯಲ್ಲೂ ಹಾಗೆ ದೊಡ್ಡಜ್ಜ, ಶ್ರೀಧರಜ್ಜ, ನಾರಾಯಣಜ್ಜ ಒಂದು ಪಾರ್ಟಿ. 4 ಪ್ಯಾಕ್‌ನಲ್ಲಿ 56 ಆಡುತ್ತಿದ್ದರು. ನಾರಾಯಣಜ್ಜ ಭಾರೀ ಲೆಕ್ಕಾಚಾರದವರು. ಎಷ್ಟೋ ಬಾರಿ ಗಲಾಟೆ ಆದದ್ದೂ ಇದೆ. ಕ್ಷಣಮಾತ್ರದಲ್ಲಿ ಮರೆತು ಆಟ ಮುಂದು ವರಿಸುತ್ತಿದ್ದರು. ಪತ್ರೊಡೆ ಮಾಡಿದರೆ ಇಸ್ಪೀಟ್ ಉಂಟೇ ಉಂಟು. ಗೋಪಾಲ ಮಾಸ್ಟ್ರು, ಅಚ್ಚುತರಾಯರು ಖಾಯಂ ಸದಸ್ಯರು. ಇನ್ನೊಂದು ಅಜ್ಜನ ಗುಣ ಪುರೋಹಿತಕ್ಕೆ ಹೋದ ಮನೆಯಲ್ಲಿ ಪುರೋಹಿತ ಮಾತ್ರ ಮಾಡುವುದಲ್ಲದೆ ನೇರ ಅಡಿಗೆ ಮನೆಗೆ ಹೋಗಿ ಎಷ್ಟು ಅಡುಗೆ ಮಾಡಿದ್ದಿ ಎಂದು ಕೇಳಿ ಹೊರ ಬಂದು ಸಭೆ ನೋಡಿ ಹೋಗಿ ಪುನಃ ಇಷ್ಟು ಸೇರು ಅನ್ನ ಮಾಡು ಎಂದು ಆರ್ಡರ್ ಮಾಡುತ್ತಿದ್ದರು (ಬೇರೆಯವರ ಮನೆಯಲ್ಲಿ). ಅಡಿಗೆಯವರು ಬಾರದ ಸಮಯದಲ್ಲಿ ಅಡುಗೆಯನ್ನೂ ಮಾಡಿದ್ದರಂತೆ. ಅವರ ಮಾತಿಗೆ ಅಷ್ಟು ತೂಕ ಇತ್ತು. ಸತ್ಯನಾರಾಯಣ ಪೂಜೆ, ಶನಿ ಪೂಜೆ ಆಗುವಾಗ ಮಂತ್ರ ಹೇಳಬೇಕು. ರಜೆಯಲ್ಲಿ ಮಂತ್ರ ಕಲಿಯಲು ನನ್ನನ್ನು ನರಿಕೊಂಬಿಗೆ ವಿಜಯಣ್ಣನೊಡನೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಪರಿಚಯದ ಶ್ರೀಧರ ಟಿ.ಎನ್. ಮತ್ತು ರಾಘವೇಂದ್ರನೊಡನೆ ರಾತ್ರೋರಾತ್ರಿ ನದಿ ದಾಟಿ ಬಂದದ್ದು, ವಿಷಯ ತಿಳಿದು ಶ್ರೀಧರಜ್ಜ ಹೊಡೆಯಲು ಬಂದಾಗ ದೊಡ್ಡಜ್ಜ ತಡೆದು ಏನು ತೊಂದರೆ ಆಯಿತು? ಅಂತ ಸಮಾಧಾನದಿಂದ ಕೇಳುತ್ತಿದ್ದುದು ನೆನಪಿದೆ. ಹೊಸಬೆಟ್ಟು ಗ್ರಾಮ ಸಂಘದಲ್ಲಿ ಹರಿಕಥೆ ನಡೆಯುವಾಗ ಎದುರಿನಲ್ಲಿ ಕುಳಿತುಕೊಳ್ಳುತ್ತಿದ್ದರು. 1986ನೇ ಇಸವಿ ತಿಪಟೂರಿಗೆ ಹೋಗಿ ಹಿಂದೆ ಬರುವಾಗ ಯಾರು ಹೇಳಿದರೂ ಆಸ್ಪತ್ರೆಗೆ ಹೋಗಲು ಒಪ್ಪದ ಅವರನ್ನು ರಮಾನಂದ ಮಾವ ಹೇಳಿದಾಗ ಕೂಡಲೇ ಒಪ್ಪಿದ್ದರು. ಗ್ಯಾಸ್ ತರುವುದಕ್ಕೆ, ಬಂದರಿಗೆ ಹೋಗುವುದಕ್ಕೆ ಅವರ ಕಾರಿನಲ್ಲೇ ಹೋಗುತ್ತಿದ್ದ ಕಾರಣವೋ ಏನೋ ಅವರ ಮೇಲೆ ಬಹಳ ಪ್ರೀತಿಯಿತ್ತು. ಆಸ್ಪತ್ರೆಗೆ ಹೊರಟಾಗ ಜೊತೆಯಿರಲು ದೊಡ್ಡಮ್ಮ ಹೊರಡುವಾಗ ಏನೂ ಬೇಡ. ವಿನಯ ಬರಲಿ ಎಂದದ್ದು, ಮೂರು ದಿನ ಆಸ್ಪತ್ರೆಯಲ್ಲಿ ಬರುತ್ತಿದ್ದ ಜನರನ್ನು ಮಾತನಾಡಿಸಿ ನಗಿಸುತ್ತಿದ್ದದ್ದು. ಗ್ಲುಕೋಸ್ ಹಾಕಿದ ಕೈ ಅಲ್ಲಾಡಿಸಬಾರದೆಂದು ಪ್ಲಾಸ್ಟಿಕ್ ಕವರ್ ಹಾಕಿದ್ದರೆ ಗುಡ್ಡೆ ನಾರಾಯಣ ರಾಯರಿಗೆ ತೋರಿಸಿ ನೋಡು ನಿನಗೆ ಎಲ್ಲಾ ಸಮಿದೆ ಮಾಡಲು ಗೊತ್ತುಂಟು. ಈ ಬ್ರಹ್ಮಕಪಾಲ ಮಾಡಲು ಗೊತ್ತುಂಟಾ ಕೇಳಿದ್ದು. ಅಡಿಗೆ ಕೇಶವ ಮಯ್ಯರು ಬಂದ ಮೇಲೆ ನೂರು ಜನಕ್ಕೆ ಅಡಿಗೆ, ಒಂದು ಗುಳ್ಳ ಬೋಳು ಹುಳಿ, ಸಾರು, ಒಂದು ಪಲ್ಯ ಮಾಡಿ ಸಾಕು ಮತ್ತೆ ಇಸ್ಪೀಟ್ ಆಡ್‌ಲಿಕ್ಕುಂಟು ಅಂತ ಹೇಳುತ್ತಿದ್ದುದು, 17ನೇ ತಾರೀಕು ರಾತ್ರಿ ನಾವು ಅಸ್ಪತ್ರೆಯಿಂದ ಬಂದುದು, ಹರಿಹರದಿಂದ ಅತ್ತೆಯವರು – ಬಂದವರಿಗೆ ಬೆಳಿಗ್ಗೆ




ಅಜ್ಜನನ್ನು ಡಿಸ್ಚಾರ್ಜ್ ಮಾಡುತ್ತಾರೆಂದು ಡಾ। ದಿನೇಶ್ ರಾವ್ ಹೇಳಿದ್ದಾರೆ ಎಂದು ಹೇಳಿದ್ದು, ಬೆಳಗ್ಗೆ ನೋಡುವಾ ಅಂತ ಹೇಳಿ ಮಲಗಿದ ಸ್ವಲ್ಪ ಹೊತ್ತಿಗೆ ಫೋನ್ ಬಂದದ್ದು. ಅಜ್ಜ ಇನ್ನಿಲ್ಲ ಅಂತ ಆ ರಾತ್ರಿಯಲ್ಲೂ ಭಾರಿ ಜನ ಸೇರಿದ್ದು. ಯಾವುದಕ್ಕೂ ಅಳದ ವ್ಯಾಸ ಚಿಕ್ಕಪ್ಪನೂ ಕಣ್ಣೀರು ಹಾಕಿದ್ದು. ಸುಡುವಾಗ ಬೆಂಕಿಯಿಂದ ಕೈ ಮೇಲೆದ್ದು ಬಂದುದು. ಸೇರಿದವರು ಓ ಆಚಾರ್ರು ಆಶೀರ್ವಾದ ಮಾಡುತ್ತಿದ್ದಾರೆ ಅಂತ ಹೇಳಿದ್ದು. ಬೆಳಿಗ್ಗೆ ಡಾಕ್ಟರ್ ಬಂದು ಅಂತೂ ಆಚಾರ್ರು ನಮ್ಮನ್ನು ಹುಷಾರಿದ್ದೇನೆ ಅಂತ ನಂಬಿಸಿಯೇ ಹೋದರು ಅಂತ ದುಃಖಿಸಿದ್ದು, ಎಲ್ಲವೂ ಹಚ್ಚಹಸಿರಾಗಿದೆ. ದಾಸಜ್ಜನ ಬೊಜ್ಜವನ್ನು ವೈಭವದಿಂದ ಮಾಡಿಸಿದ್ದು, ಅವರೊಂದಿಗೆ ಸುರತ್ಕಲ್ ವಾಮನ ಕಾಮತ್ರ ಪೈಂಟ್ ಅಂಗಡಿ, ಹೊಗೆಸೊಪ್ಪಿನ ಅಂಗಡಿಗೆ ಹೋದದ್ದು ಎಲ್ಲವೂ ನೆನಪಾಗುತ್ತದೆ.

ಪೌರೋಹಿತ್ಯದಲ್ಲಿ ಆಸಕ್ತಿ ಇಲ್ಲದ ಅಪ್ಪನಿಗೆ ಕಡೇ ಪಕ್ಷ ಅನ್ನದಾನ ಮಾಡು ಅಂತ ಹೇಳಿದ್ದು. ಅಂತೆಯೇ ಅಪ್ಪ ನಡೆದುಕೊಳ್ಳುತ್ತಿರುವುದು, ಹೈದ್ರಾಬಾದ್‌ನಿಂದ ಬರುವಾಗ ವಾಚ್ ತಂದು ಇದರಲ್ಲಿ ಹೇಗೆ ಮುಳ್ಳು ತಿರುಗುತ್ತಿದೆ ಎಂದು ವಿಸ್ಮಯ ಪಟ್ಟದ್ದು. ಅಲ್ಲಿ ಟಿವಿ ನೋಡಿದ್ದನ್ನು ಕುರಿತು ಆಶ್ಚರ್ಯ ವ್ಯಕ್ತಪಡಿಸಿದ್ದು. ನಾಸಿಕ ಕೃಷ್ಣರಾಯರ ಮನೆಯಿಂದ ಬರುವಾಗ ನಾನು ಹೊಸಬೆಟ್ಟಲ್ಲಿ ಬಸ್ ಇಳಿಯದೇ ಪಣಂಬೂರಿನವರೆಗೆ ಹೋದಾಗ ಯಜ್ಞೇಶಣ್ಣ, ವ್ಯಾಸ ಚಿಕ್ಕಪ್ಪ ಸೈಕಲ್‌ನಲ್ಲಿ ಕರೆದುಕೊಂಡು ಬಂದದ್ದು, ಬರುವಾಗ ಅಜ್ಜ ಅಶ್ವತ್ಥಕಟ್ಟೆಯಲ್ಲಿ ಗಾಬರಿಯಿಂದ ನಿಂತದ್ದು, ಮಾವನ ಅರವತ್ತರ ಶಾಂತಿ ಆಗುವಾಗ ಪೊನ್ನೆಲ್ ದಾಸಪ್ಪಯ್ಯ ಬಂದು ಆಚಾರ್ರೇ 'ನಿಮಗೆ ಅಮೆ ಅಂದಾಗ, ಯಾರು ಹೆತ್ತಿದ್ದು? ಎಲ್ಲಿ ಹೆತ್ತದ್ದು? ಯಾವಾಗ ಹೆತ್ತದ್ದು? ಎಲ್ಲ ತಿಳಿದುಕೊಂಡು ಬಂದು ಹೇಳು – ನಡಿ' ಎಂದದ್ದು. ಹೊಸದುರ್ಗದಿಂದ ನಾರಾಯಣ ಅಜ್ಜ ತೀರಿ ಹೋದರು ಎಂದು ಸುದ್ದಿ ಬಂದಾಗ ನಾರಾಯಣ ಹೇಗೆ ಸತ್ತ ಅಥವಾ ಲೀಲಾವತಿ ಸತ್ತಿದ್ದಾ? ಈ ಸಂಜೀವ ತಪ್ಪು ತಪ್ಪು ಹೇಳಿರಬೇಕು ಎಂದು ಗಾಬರಿಗೊಂಡದ್ದು– ಒಂದೇ ಎರಡೇ ಹೇಳುತ್ತಾ ಹೋದರೆ ಒಂದು ದಿನವಾದರೂ ಬೇಕಾದೀತು.

ಅವರ ಕುರಿತು, ದಿ.ಆನಂದ ಹತ್ವಾರ್, ಮಧುಸೂದನ ರಾವ್, ಕೇಶವ ರಾವ್, ಗಿರಿಧರ ಹತ್ವಾರ್, ಅಚ್ಚುತ ರಾವ್, ವೆಂಕಟ ರಾವ್, ಅನಂತಯ್ಯ ಮಾಸ್ಟರ್‌ರಂತವರು ಈಗಲೂ ಅವರನ್ನು ನೆನಪಿಸಿಕೊಳ್ಳುತ್ತಿರುವುದನ್ನು ಕಂಡಾಗ ನಾನೆಂತಾ ಭಾಗ್ಯವಂತ– ಅವರ ಮೊಮ್ಮಗನಾಗಿ ಹುಟ್ಟಿದ್ದೇನಲ್ಲಾ ಅಂತ ಹೆಮ್ಮೆ ಅನ್ನಿಸುವುದುಂಟು.

ತುಂಬಿದ ಸಂಸಾರವನ್ನು ಏಕಾಂಗಿಯಾಗಿ ನಿರ್ವಹಿಸಿ, ಊರಿನ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸೂಚಿಸಬಲ್ಲಂತಹ ಉಪಕಾರಿ ವ್ಯಕ್ತಿ **ಹಿಟ್ಲರ್ ಆಚಾರ್ಯ**ರೆಂದೇ ಖ್ಯಾತರಾದ ವೆಂಕಟಕೃಷ್ಣ ಅಜ್ಜನ ಆಶೀರ್ವಾದ ನಮ್ಮ ಮೇಲಿರಲಿ ಎಂದು ಕೇಳಿಕೊಳ್ಳುತ್ತಾ ಹೀಗೊಂದು ಪುಸ್ತಕ ಮಾಡಲು ವಿನೋದನಿಗೆ ಅವರದೇ ಪ್ರೇರಣೆಯಿರಬೇಕೆಂದು ಕೊಂಡು, ಅಜ್ಜನ ಪ್ರೀತಿಗೆ ಕೃತಜ್ಞತೆ ಅರ್ಪಿಸುತ್ತೇನೆ.


****







“ಅಗ್ನಿಮೀಳೇ ಪುರೋಹಿತಂ”



ತೋಕೂರು ಸುಬ್ರಹ್ಮಣ್ಯ ಭಟ್

“ಪುರೋಹಿತ” ಅದ್ಭುತ ಮೈನವಿರೇಳಿಸುವ ಶಬ್ದ. ಏಕೆ? ಏನು? ಏಕೆಂದರೆ ಋಗ್ವೇದ ಪ್ರಾರಂಭ ವಾಗುವುದೇ “ಅಗ್ನಿಮೀಳೇ ಪುರೋಹಿತಂ”. ಅದು ವೈದಿಕ ಶಬ್ದ. ಯಾರು ಪುರೋಹಿತ ? ಲೋಕರಕ್ಷಕ, ರಾಷ್ಟ್ರಹಿತಚಿಂತಕ, ಸಮಾಜದ ಸ್ವಾಸ್ಥ್ಯ ಬಯಸುವವ, ಮನೆಗೆ ಹಿತ ಪ್ರಾಪಕ, ಮನಸ್ಸಿಗೆ ಶಾಂತಿ, ನಿರಾಳತೆ ನೀಡುವವ. ಆಗ ನಮಗೆ ಕಣ್ಣೆದುರು ನಿಲ್ಲುವವ “ಭಗವಾನ್ ಶ್ರೀಕೃಷ್ಣ”. ಇವನಲ್ಲದೆ ಇನ್ನಾರು ಶ್ರೇಷ್ಠ. ಪುರೋಹಿತ “ಯಜ್ಞಸ್ಯದೇವಂ” ಎಲ್ಲಾ ಆರಾಧನೆಗಳ ಆರಾಧ್ಯ ದೈವ. ಆ ಮೇಲೆ, ಪುರೋಹಿತರು ಬ್ರಹ್ಮಾದಿ ದೇವತೆಗಳು. ಅವರೇ ಅಲ್ಲವೇ ಭಗವಂತನ ಸೃಷ್ಟಿಯ ವಿಸ್ತಾರವನ್ನು ಭಗವದಾಣತಿಯಂತೇ ಪೋಷಿಸುತ್ತಾ, ರಕ್ಷಿಸುತ್ತಾ, ಕರ್ತವ್ಯ ಕರ್ಮದಂತೆ ನಡೆಯುವವರು.

“ಭೀಷಾऽಸ್ಮಾದ್ವಾತಃ ಪವತೇ
ಭೀಷೋऽದೇತಿ ಸೂರ್ಯಃ”.

ಆ ಮೇಲೆ ಕಾಣುವವರು, ವಸಿಷ್ಠ ವಿಶ್ವಾಮಿತ್ರಾದಿ ಋಷಿಗಳು. ಭಗವಂತನನ್ನು ವೇದಮಂತ್ರಗಳಿಂದ ಕಂಡು ಬೆರಗಾಗಿ ನಿರಂತರ ತಪಸ್ಸಿನಿಂದ ಅವನನ್ನು ಆರಾಧಿಸಿ ರಾಷ್ಟ್ರನಿರ್ಮಾಣದ, ಸಮಾಜ ಸ್ವಾಸ್ಥ್ಯದ ಚಿಂತಕರಾಗಿ ರಾಷ್ಟ್ರ ರಾಜಕಾರಣದ ಬೆನ್ನೆಲುಬಾಗಿ ನಿಂತು ರಾಜಾಧಿರಾಜರನ್ನೆಲ್ಲಾ ಧರ್ಮದ ಚೌಕಟ್ಟಿನಲ್ಲಿ ಕಟ್ಟಿ ಸಮೃದ್ಧ ರಾಷ್ಟ್ರ ನಿರ್ಮಾಣದ ಮುಂಚೂಣಿಯಲ್ಲಿ ನಿಂತವರು. “ರಾಜಾರಾಷ್ಟ್ರ ಕೃತಂ ಪಾಪಂ ರಾಜಪಾಪಂ ಪುರೋಹಿತಃ”. ಇಂಥಾ ಋಷಿ ಪರಂಪರೆಯನ್ನು ಮುಂದುವರೆಸುತ್ತಾ ಅಂದಿನಿಂದ ಇಂದಿನವರೆಗೆ ಸಮಾಜದ ಹಿತಚಿಂತಕರಾಗಿ, ಯಜಮಾನ ಶ್ರೇಯೋಭಿಲಾಷಿಗಳಾಗಿ ನಿರಪೇಕ್ಷವಾಗಿ ಸಮಾಜ ಗೌರವ ಆದರಗಳಿಂದ ನೀಡಿದ ದಕ್ಷಿಣೆಯನ್ನು ಪಡೆದು, ಪ್ರೀತಿಯಿಂದ ಮನಃಪೂರ್ವಕ ನೂರ್ಕಾಲ ಸಂಪತ್ತು, ಸಂತೋಷ, ನೆಮ್ಮದಿಯಿಂದ ಬದುಕಿ ಎಂದು ಭಗವಂತನಲ್ಲಿ ಪ್ರಾರ್ಥಿಸಿ ಹರಸುವ ಪುರೋಹಿತರು ಎಂದೆಂದಿಗೂ ಪ್ರಾತಃಸ್ಮರಣೀಯರು. ಪ್ರಥಮಸ್ತುತ್ಯರು. ಯಜಮಾನನ ಜೀವನದ ಕಷ್ಟಕಾರ್ಪಣ್ಯಗಳಲ್ಲಿ, ದುಃಖ ದುಮ್ಮಾನಗಳಲ್ಲಿ, ಜಾತಕರ್ಮಾದಿ ವಿವಾಹಾಂತ ಮಂಗಲ ಮಹೋತ್ಸವಗಳಲ್ಲಿ, ರೋಗ, ರುಜಿನ, ಆಸನ್ನ ಕಾಲದಲ್ಲಿ, ಅಂತ್ಯೇಷ್ಟಿ ಯಜ್ಞದಲ್ಲಿ, ಜೀವನದ ದಿಕ್ಕು ದಿಸೆಯನ್ನೇ ಬದಲಾಯಿಸಬಲ್ಲ ಆತ್ಯಂತಿಕ ಬಯಕೆಗಳನ್ನು ದಕ್ಕಿಸಿಕೊಡಬಲ್ಲ, ವೇದೋಕ್ತ ಕರ್ಮಗಳನ್ನು ವಿಧಿವತ್ತಾಗಿ ಮಾಡಬಲ್ಲ, ಆತ್ಮಬಲ, ತಪೋಬಲ, ಮನೋಬಲಗಳುಳ್ಳ ಪುರೋಹಿತರನ್ನು ಪುರಾಣೇತಿಹಾಸಗಳಲ್ಲಿ ಕಂಡಿದ್ದೇವೆ. ಇಂದಿಗೂ ಅಂಥವರನ್ನೇ ವಿರಳವಾಗಿಯಾದರೂ ನೋಡ ಬಹುದು. ವೈವಸ್ವತ ಮನುವಿನ ಮಗಳಾಗಿ ಹುಟ್ಟಿದ ಇಳಾಳನ್ನು ಸುದ್ಯುಮ್ನನೆಂಬ ಮಗನಾಗಿ ಲಿಂಗ ಪರಿವರ್ತನೆ ಮಾಡಿದ ಇತಿಹಾಸದ ಏಕೈಕ ಪುರೋಹಿತರು ವಸಿಷ್ಠರು. ಸಶರೀರವಾಗಿ ಸ್ವರ್ಗ ಏರಬಯಸಿದ ತ್ರಿಶಂಕುವಿಗೆ ಪ್ರತಿ ಸ್ವರ್ಗವನ್ನೇ ಸೃಷ್ಟಿಸಿದ ಪುರೋಹಿತ ವಿಶ್ವಾಮಿತ್ರ ಯಜಮಾನನ ಮೇಲೆ ಕಾರುಣ್ಯ ಎನಿತೋ ಅಷ್ಟೇ ಉದ್ಧಟನಾದರೆ ಪುರೋಹಿತನ ಕೋಪಕ್ಕೆ ಕಾರಣನಾಗಿ ಸರ್ವವನ್ನೂ



ಕಳಕೊಂಡ ನಿದರ್ಶನವೂ ಇದೆ. ಅಷ್ಟೇ ಅಲ್ಲ. ಸಾತ್ವಿಕನಾದ ಯಜಮಾನನ ಆಗ್ರಹಕ್ಕೆ ಕಾರಣನಾಗಿ ಪುರೋಹಿತನೂ ನಾಶ ಹೊಂದಿದ ಕಥೆಯೂ ಇದೆ. ಅದು ಇತಿಹಾಸ. ಜನಕ ವಂಶೀಯ ನಿಮಿಯಿಂದ ಶಪಿಸಲ್ಪಟ್ಟ ವಸಿಷ್ಠರು ದೇಹ ತೊರೆಯಬೇಕಾದ ಪ್ರಸಂಗ ಬಂತು. ಆದ್ದರಿಂದಲೇ ಪುರಾಣಗಳಲ್ಲಿ ಬಂದ ಮಾತು. ನರಕಕ್ಕೆ ಹೋಗಬೇಕೋ "ಪೌರೋಹಿತ್ಯಂ ಸಮಾಚರ " ಅದು ಕುತ್ಸಿತ ಮಾತಲ್ಲ. ಆ ವೃತ್ತಿ ಅಷ್ಟು ಹೊಣೆಗಾರಿಕೆಯದು, ಎತ್ತರದ್ದು. ಹೊಣೆಗೇಡಿಗಲ್ಲ, ದ್ರವ್ಯಲೋಭಿಗಲ್ಲ, ರುಚಿ ಮರುಳನಿಗಲ್ಲ.

ಪುರೋಹಿತ ಮಾಡುವ ಕರ್ಮ ಇಂದ್ರಿಯಾತೀತನ ಕುರಿತು ಮಾಡುವ ಕರ್ಮದ ಗತಿಯೂ ಇಂದ್ರಿಯಾತೀತ. ಮಾಡಿದ ಕರ್ಮದ ಫಲವೂ ಇಂದ್ರಿಯಾತೀತ ಕರ್ಮದ ಸಂಪಾದನೆ ಪಾಪ, ಪುಣ್ಯ, ಇಂದ್ರಿಯಾತೀತ ಮಾಡಿದ ಕರ್ಮಕ್ಕೆ ಪಡೆದ ದಕ್ಷಿಣೆ ಇದೊಂದೇ ಇಂದ್ರಿಯಾಗೋಚರ. ಉಳಿದೆಲ್ಲವೂ ಅದೃಷ್ಟ. ಅದರಿಂದ ಬದುಕಿದ ಅದೇ ಬದುಕಿನ ದಾರಿ ಎಂದು ಕೊಂಡರೆ ಅದು ಬದುಕನ್ನೇ ಕಸಿಯಬಲ್ಲ ದುರಂತ. ಮಾಡಿದ ಕರ್ಮ ಯಾಕೆ ಫಲ ಕೊಟ್ಟಿಲ್ಲ ಎಂಬ ಪ್ರಶ್ನೆ ಬಂದರೆ ಈಗ ನಿನ್ನ ಗ್ರಹಗತಿ ನೆಟ್ಟಗಿಲ್ಲ, ಮುಂದೆ ಸರಿ ಆಗಲಿದೆ. ಮುಂದಕ್ಕೆ ಫಲ ಸಿಗಬಹುದು. ಇಲ್ಲಿ ನಿನ್ನ ಪ್ರಾರಬ್ಧ ದೊಡ್ಡದು, ಇಲ್ಲಿ ಪೂರ್ವಿಕರ ದೋಷ, ಆ ದುರಿತ ಈ ದೋಷ. ಎಲ್ಲವೂ ಅದೃಷ್ಟಗಳೇ ಅನಿಷ್ಟ ಅನಾಥ. ಕಣ್ಣಿಗೆ ಕಾಣುವ, ಅನುಭವವೇದ್ಯ ಇಂದಿಯಗೋಚರ ಸಂಗತಿಗಳಲ್ಲಿ ಪ್ರಮಾದವಾದರೆ ತಿದ್ದಿಕೊಳ್ಳಲು ಅವಕಾಶ ಇದೆ. ಕಣ್ಣಿಗೆ ಕಾಣದ ದೇವರು, ಪುಣ್ಯ ಪಾಪ, ಸ್ವರ್ಗ, ನರಕ, ಕರ್ಮಫಲ, ಮುಂತಾದ ಅತೀಂದ್ರಿಯ ವಿಷಯಗಳಲ್ಲಿ ಪ್ರಮಾದ ತಿದ್ದಿಕೊಳ್ಳಲು ಅವಕಾಶವೇ ಇಲ್ಲದಂತೆ ಅಧಃಪಾತಕ್ಕೆ ಕಾರಣವಾಗುತ್ತದೆ. ತಿಳಿದೂ ತಿಳಿದು ಮಾಡಿದ ತಪ್ಪು ಕರ್ಮ ಘೋರ ನರಕದ ದುರಂತ. ಮರಳಿ ಬಾರದ ಅಂಧ ತಮಸ್ಸಿನೆಡೆಗೆ.

ಒಂದೊಮ್ಮೆಗೆ ಪೌರೋಹಿತ್ಯ ಕರ್ಮ ಮಾಡುತ್ತಾ ಇರುವ ಕಾಲಕ್ಕೆ ಹತ್ತು ಜನರ ಮುಂದೆ ನೀ ಮಾಡಿದ ಕರ್ಮ ಸರಿ ಇಲ್ಲ, ತಪ್ಪು ಇದು ಅಕ್ಷಮ್ಯ ಎಂದು



ಕರ್ಮಾಭಿಮಾನಿ ದೇವತೆ ಎದ್ದು ಬಂದು ಒದ್ದು ಬುದ್ಧಿ ಹೇಳಿದರೇ? ಇಲ್ಲ ಮುಂದೆ ಈ ಕಾಯಕಕ್ಕೆ ಯಾರು ಇಲ್ಲ.

ಭೂತದ ಬಗ್ಗೆ ಗೊತ್ತಿಲ್ಲ. ವರ್ತಮಾನ ಸ್ವಲ್ಪ ತಿಳಿದಿದೆ. ಭವಿಷ್ಯ ಗೊತ್ತಿಲ್ಲ. ಭವ್ಯ ಭವಿಷ್ಯತ್ತಿನ ಬಗ್ಗೇನೇ ಮನುಕುಲದ ಸಹಜ ಚಿಂತೆ. ಎಂದೆಂದಿಗೂ ಸುಖವೇ ಇರಲಿ. ದುಃಖ ಬೇಡವೇ ಬೇಡ. ಅದೂ ಕಣ್ಣಿಗೆ ಕಾಣದು. ಆದ್ದರಿಂದ ಅದೃಷ್ಟ ಭಾಗ್ಯದ ಚಿಂತೆಯಿಂದ ಭಾಗ್ಯದೇವತೆಯ ಓಲೈಕೆಗಾಗಿ ಬಗೆಬಗೆಯ ಕರ್ಮ ವಿಸ್ತಾರ. ಅದರ ನೆರವೇರುವಿಕೆಗಾಗಿ ವೇದಜ್ಞರು, ಕರ್ಮ ಮೀಮಾಂಸಕರು, ಜ್ಯೋತಿಷಿಗಳು, ಪುರೋಹಿತರು, ಧರ್ಮಶಾಸ್ತ್ರಜ್ಞರು, ಮಾಂತ್ರಿಕರು, ಪುರಾಣಿಕರು, ತಂತ್ರಶಾಸ್ತ್ರಜ್ಞರು ಎಲ್ಲರೂ ಸಮಾಜದ ಸ್ವಾಸ್ಥ್ಯಕ್ಕಾಗಿ ಸಮೃದ್ಧ ಜೀವನದ ನಡೆಗಾಗಿ, ಮನುಕುಲದ ಏಳ್ಗೆಗಾಗಿ.

ಜೀವನದ ಹೋರಾಟದಲ್ಲಿ ಮನೆಮಂದಿಗಾಗಿ, ಸಮಾಜದಲ್ಲಿ ಕೀರ್ತಿ ಪ್ರತಿಷ್ಠೆಗಾಗಿ, ಏನಾದರೂ ಮಾಡಿ ಧನವಂತನಾಗುವ ಅವಸರದಲ್ಲಿ ಮಾಡಬಾರದ ಕರ್ಮ ಮಾಡುತ್ತಾ, ಕೊನೆಗೆಂದೇ ಭಯಕ್ಕೆ ಕಾರಣವಾಗಿ ಭವಿಷ್ಯದಲ್ಲಿ ಒಳಿತು ಬಯಸಿ ದೈವ ಬಲದ ನಿರೀಕ್ಷೆಯಲ್ಲಿ ಪೂಜಾ ಎನ್ನುವ ಲಂಚದ ಆಮಿಷ ಕೊಟ್ಟರೆ ದೇವ ಒಳಿತು ಮಾಡುವನೇನೋ ಮರುಳ? ಒಳಿತು ಮಾಡಿದವ ಒಳಿತನ್ನೇ ಪಡೆಯುತ್ತಾನೆ. ಕೆಡುಕು ಮಾಡಿದವ ಕೆಡುಕನ್ನೇ ಪಡೆಯುತ್ತಾನೆ. ಅಂತಿಮವಾಗಿ ಇದು ಗೀತಾಚಾರ್ಯನ ಮಾತು.

ಆದ್ದರಿಂದ ಜೀವನದಲ್ಲಿ ಯಾವ ಕರ್ಮವನ್ನೇ ಮಾಡು ಅದು ಭಗವತ್ ಪೂಜೆಯಾಗಲಿ. ಆಗ ಅಪ್ರಾಮಾಣಿಕತೆಗೆ ಎಡೆ ಇಲ್ಲ. ಮೋಸ, ವಂಚನೆ, ಡಾಂಭಿಕತನ, ಸುಳ್ಳು, ಕಾಪಟ್ಯಗಳಿಗೆ ಎಡೆ ಇಲ್ಲ. ಸಂತೃಪ್ತ ಮನ, ಸಂತೋಷದ ನೆಲೆ. ಆನಂದದ ಸೆಲೆ. ಭಗವಂತನ ಆಡೊಂಬಲ. ಎಲ್ಲ ಕರ್ಮಗಳ ಕೊನೆಗೆ ಮಾಡಿದೆಲ್ಲ ಕರ್ಮಗಳು ಕರ್ಮಾಧ್ಯಕ್ಷನಿಗೆ ಅರ್ಪಿತವಾಗಲಿ, ಪ್ರೀತಿಯಾಗಲಿ, ಮಾನವ ಜನಾಂಗಕ್ಕೆ ಒಳಿತಾಗಲಿ, ದೇಶವನ್ನಾಳುವ ಧುರೀಣರು ದರೋಡೆಕೋರರಾಗದೇ, ಸತ್ಯ ಪ್ರಾಮಾಣಿಕ ದೇಶಹಿತ ಬಯಸುವವರಾಗಲಿ, ಜೀವಕೋಟಿಗೆ ಎಂದೆಂದೂ ಮಂಗಲವಾಗಲಿ, ಲೋಕಕ್ಕೇ ಒಳಿತಾಗಲಿ, ಸಮೃದ್ಧಿಯಿರಲಿ ಎನ್ನುವ ಪ್ರಾರ್ಥನೆ. ಪುರೋಹಿತರು ಮಾಡುವ ಎಲ್ಲಾ ಪೂಜಾ ವಿಧಾನಗಳ ಅಂತ್ಯದಲ್ಲಿ ಹೇಳುವ ರಾಷ್ಟ್ರಗೀತೆ – ಇಂಥ ಉದಾತ್ತ ಆಶಯ ಹೊತ್ತ ಹಿಂದಿನವರು ನಮ್ಮ ಕಣ್ಮುಂದೆ ಬಹಳಷ್ಟು ಜನ ಇದ್ದರು. ಇಂದೂ ವಿರಳವಾಗಿ ಅಲ್ಲಲ್ಲಿ ಇದ್ದಾರೆ. ಮುಂದೆ ಬೆರಳೆಣಿಕೆಯಾಗಬಹುದೇನೋ ?

ಹಾಗಾಗದಿರಲಿ, ಹಾಗಾಗಲಾರದು, ಏಕೆಂದರೆ ಇದು ರಾಮಕೃಷ್ಣರ ಅವತಾರ ಭೂಮಿ. ಉದಾರಚರಿತರಾದ ರಾಜರ ಕರ್ಮಭೂಮಿ. ಋಷಿಮುನಿಗಳ ತಪೋಭೂಮಿ. ಶ್ರೇಷ್ಠ ಪುರೋಹಿತರ, ರಾಷ್ಟ್ರಹಿತ ಚಿಂತಕರ, ಸಮಾಜಸುಧಾರಕರ, ಮನೆಯ ಹಿತ ಬಯಸುವವರ, ಮನಕ್ಕೆ ಶಾಂತಿ ನೆಮ್ಮದಿ ನೀಡಿದವರ ನೆಲೆ. ಇದು ನಮ್ಮ ಶ್ರೇಷ್ಠ ಭಾರತ. ಇದು ವೇದದ ಮಾತು, "ಶ್ರೇಷ್ಠಂ ಯವಿಷ್ಠ ಭಾರತಾಗ್ನೇ ದ್ಯುಮಂತಂ ಆಭರ".

ಸಮೃದ್ಧ ಜೀವನಕ್ಕಾಗಿ, ಸಂಪದ್ಭರಿತ ರಾಷ್ಟ್ರ ನಿರ್ಮಾಣಕ್ಕಾಗಿ ಪ್ರಾಮಾಣಿಕ, ಸತ್ಯಧರ್ಮ, ನ್ಯಾಯ, ನಿಷ್ಠೆ, ತಪಸ್ಸು ಮೊದಲಾದ ಸದ್ಗುಣ ಸಂಪಾದನೆ ಎಲ್ಲವನ್ನೂ ಕೊಡಬಲ್ಲ ಭಗವಂತನಲ್ಲಿ ಮನಸಾ ಪ್ರಾರ್ಥಿಸೋಣ.

"ನಮೋ ಬ್ರಹ್ಮಣ್ಯದೇವಾಯ "



ಗುರು ವೆಂಕಟಕೃಷ್ಣ ಆಚಾರ್ಯರು



ಚಿತ್ರಾಪುರ ರಾಮಚಂದ್ರ ಆಚಾರ್

ಹೊಸಬೆಟ್ಟಿನ ಪರಿಸರದಲ್ಲಿ 'ಹಿಟ್ಲರ್ ಆಚಾರ್' ಎಂದು ಪರಿಚಿತರಾದ ವೆಂಕಟಕೃಷ್ಣ ಆಚಾರ್ಯರು ಶಿಸ್ತುಬದ್ಧವಾದ ಜೀವನ ನಡೆಸುವಲ್ಲಿ ಮತ್ತು ಮನೆಯವರೆಲ್ಲರೂ ಒಗ್ಗಟ್ಟಿನಿಂದ ಬಾಳಿ ಬದುಕುವುದರಲ್ಲಿ ಹೆಸರುವಾಸಿಯಾಗಿದ್ದರು. ಆದ್ದರಿಂದಲೇ 'ಹಿಟ್ಲರ್ ಆಚಾರ್' ಎಂಬ ಹೆಸರು ಅವರಿಗೆ ಸಾರ್ಥಕವಾಗಿತ್ತು. ಊರಿನಲ್ಲಿ ನಡೆಯುವ ವಿಶೇಷ ಭೋಜನಾದಿಗಳಲ್ಲಿ ಸಿಕ್ಕಿದ ದಕ್ಷಿಣೆಯನ್ನು ಮನೆಮಂದಿಯೆಲ್ಲ ಅವರಿಗೆ ಒಪ್ಪಿಸಬೇಕಾಗಿತ್ತು. ಮಾತ್ರವಲ್ಲದೆ ಮನೆಗೆ ತಿಂಡಿತಿನಿಸುಗಳನ್ನು ಅಥವಾ ಹಣ್ಣುಗಳನ್ನು ತಂದಿದ್ದರೆ ಅವನ್ನು ಎಲ್ಲರಿಗೂ ಸರಿಸಮಾನವಾಗಿ ಹಂಚುತ್ತಿದ್ದರು. ಹಬ್ಬದ ಸಮಯದಲ್ಲಿ ಮನೆಯ ಯಜಮಾನನಾದ ವೆಂಕಟಕೃಷ್ಣ ಆಚಾರ್ಯರು ಮನೆಯವರೆಲ್ಲರಿಗೂ ಸೀರೆ, ಬಟ್ಟೆಗಳನ್ನು ತಂದು ಕೊಡುತ್ತಿದ್ದರು. ಪೌರೋಹಿತ್ಯಕ್ಕೆ ತಮ್ಮ ತಮ್ಮಂದಿರಾದ ಶ್ರೀಧರ ಆಚಾರ್ ಮತ್ತು ನಾರಾಯಣ ಆಚಾರ್‌ರೊಂದಿಗೆ ತಾನು ಮುನ್ನಡೆದು ಹಿಂದಿನಿಂದ ಆ ತಮ್ಮಂದಿರು ಜತೆಯಾಗಿ ನಡೆದುಕೊಂಡು ಹೋಗುವ ಚಂದವನ್ನು ಮರೆಯಲಾದೀತೇ? ಊರಲ್ಲಿ ಯಾರ ಮನೆ ಯಲ್ಲಾದರೂ ಮದುವೆ – ಉಪನಯನ – ಮರಣ ಸಂಬಂಧ ಕಾರ್ಯಕ್ರಮಗಳಲ್ಲಿ ತಾನೇ ಸ್ವತಃ ಭಾಗಿಯಾಗಿ ಅಲ್ಲಿನ ಪೌರೋಹಿತ್ಯ ಕಾರ್ಯಕ್ರಮದ ತಯಾರಿಯೊಂದಿಗೆ, ಊಟೋಪಚಾರದ ವಿಚಾರಗಳಲ್ಲೂ ಗಮನಹರಿಸಿ, ಎಷ್ಟು ಜನರ ಊಟದ ಸಾಹಿತ್ಯ, ಭಕ್ಷ್ಯ ಭೋಜ್ಯಗಳೇನು ? ಅಡುಗೆಯವರು ಯಾರು? ಎಂದೆಲ್ಲಾ ವಿಚಾರಿಸಿ ಪೂರ್ವ ತಯಾರಿಯನ್ನು ಯಜಮಾನನಂತೆ ತಾವೇ ಮುನ್ನಡೆದು ಸಹಕರಿಸುತ್ತಿದ್ದರು. ಅವರ ವ್ಯಕ್ತಿತ್ವಕ್ಕೆ "ಹಿಟ್ಲರ್" ಪ್ರವೃತ್ತಿ ನಿಜವಾಗಿಯೂ ಘನತೆಯನ್ನು ತಂದುಕೊಟ್ಟಿತು.

ಊಟದ ವಿಚಾರದಲ್ಲಿ ಅವರು ಬಹಳ ಕಟ್ಟುನಿಟ್ಟಿನ ವ್ಯಕ್ತಿ. ಯಾವುದೇ ಸಮಾರಂಭ ಚೊಕ್ಕದಾಗಿ ನಡೆಯಬೇಕು. ಆ ಕಾರ್ಯಕ್ರಮಕ್ಕೆ ದೂರದ ಊರಿನಿಂದ ಬರುವ ಅತಿಥಿಗಳು ಅಥವಾ ಯಾರೇ ಆದರೂ ಹಸಿವು ಎಂದು ಹೇಳಲಾರದೆಂಬ ವಿಚಾರವನ್ನು ಗಮನದಲ್ಲಿರಿಸಿಕೊಂಡು ಮಧ್ಯಾಹ್ನ 12ರಿಂದ 12.15ರೊಳಗೆ ಎಲೆ ಹಾಕಿ ಊಟ ನೀಡಬೇಕೆಂಬುದು ಅವರ ಆಶಯ. ಹೀಗಾಗಿ ತನ್ನ ಪರಿಸರದಲ್ಲಿ – ಒಡನಾಟದವರಲ್ಲಿ – ಸಂಬಂಧಿಗಳಲ್ಲಿ –ತಮ್ಮದೇ ವರ್ಚಸ್ಸಿನಿಂದ ಅಡುಗೆ ಶಾಲೆಗೆ ನೇರ ದಿಟ್ಟತನದಿಂದ ಪ್ರವೇಶಿಸಿ ಆತ್ಮೀಯ ಮಾತುಗಳಿಂದ ಅವರನ್ನು ತನ್ನತ್ತ ಸೆಳೆದು – ಎಷ್ಟಕ್ಕೆ ಊಟ ತಯಾರಿ? ಎಷ್ಟು ಸೇರು ಅಕ್ಕಿ ಹಾಕಿದ್ದೀರಿ? ಅದು ಕಡಿಮೆಯಾದಲ್ಲಿ ಇನ್ನು ಇಷ್ಟು ಸೇರು ಅನ್ನ ಮಾಡಿ, ಅಂತ ಸಭೆ ನೋಡಿಕೊಂಡು ಬಂದು ನಿರ್ದೇಶನ ನೀಡುವ ಅವರ ವ್ಯಕ್ತಿತ್ವವೇ ಒಂದು ಆದರ್ಶ. ಹಿಂದೆ ವಿಶೇಷ ಕಾರ್ಯಕ್ರಮಗಳ ಊಟೋಪಚಾರದಲ್ಲಿ, ಕಾರ್ಯದ ಪೂರ್ವಭಾವಿ ತಯಾರಿಯಲ್ಲಿ ಊರ ಹಿರಿಯರು ಮತ್ತು ಗೆಳೆಯರು ಸ್ವಯಂ ಪ್ರೇರಿತರಾಗಿ ಸಹಕರಿಸುತ್ತಿದ್ದರು. ಮತ್ತು ಕಾರ್ಯಕ್ರಮಗಳಿಗೆ ಲೋಪ ಬರದಂತೆ ನೋಡಿಕೊಳ್ಳುತ್ತಿದ್ದರು. ಒಮ್ಮೆ ಊರಿನ ಜವನ್ರು (ವಯಸ್ಕ ಹುಡುಗರು) ಊಟದ ಸಮಯಕ್ಕೆ ಸರಿಯಾಗಿ ಬಂದು ಊಟಕ್ಕೇ ಕುಳಿತದ್ದನ್ನು ನೋಡಿ, ಆ ಕಾರ್ಯಕ್ರಮದ ಯಜಮಾನರ ಮೂಲಕ ಆ ಜವನ್ರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಊಟಕ್ಕೂ ಮೊದಲು ಕಾಫಿ ಕೊಡಿಸಿ,

ಬೆನ್ನು ತಟ್ಟಿ ಬಡಿಸುವ ಕಾರ್ಯಕ್ಕೆ ತೊಡಗಿಸಿಕೊಂಡರು ಎನ್ನುವುದನ್ನೂ ಕೇಳಿದ್ದೇವೆ. ನನ್ನ ಚಿಕ್ಕಪ್ಪ ಹರಿನಾರಾಯಣ ಆಚಾರ್ಯರ ಮದುವೆಯನ್ನು ಅವರ ಮನೆಯಲ್ಲೇ ಮಾಡಿಸಿದ್ದರು. ಅವರ ಮನೆಯ ಎದುರು ಭಾಗದಲ್ಲಿ ನಿರ್ಮಿಸಿದ ಶೆಡ್ಡಿನಲ್ಲಿ (ವಿಶಾಲ ಜಾಗವಿತ್ತು) ಹೂವಿನಕೆರೆಯ ಹುಡುಗನಿಗೂ ಕೇರಳದ (ಮಟ್ಟಾಗಿ) ಹುಡುಗಿಗೂ ಮದುವೆ ಮಾಡಿಸಿದ್ದರು. ಈಗಿನ ಹಾಗೆ ಮದುವೆ ಹಾಲ್‌ಗಳು, ದೇವಸ್ಥಾನ ಹಾಲ್‌ಗಳು ಇಲ್ಲದ ಸಂದರ್ಭದಲ್ಲಿ ತಮ್ಮನ್ನು ನಂಬಿದ ಯಾವುದೇ ವ್ಯಕ್ತಿಗಳಿಗೆ, ಅದರ ಖರ್ಚು ವೆಚ್ಚ ನೋಡದೆ ತನ್ನ ಮನೆಯ ಕಾರ್ಯಕ್ರಮವೆಂದೇ ಭಾವಿಸಿ, ಹಲವಾರು ಮದುವೆ – ಮುಂಜಿ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿದ್ದಿದೆ.

ಮನೆಯಲ್ಲಿ ದಿನವೂ ನಡೆಯುವ ನಿತ್ಯಪೂಜಾ ಸಂದರ್ಭದಲ್ಲಿ ಪೂಜೆ ಜರಗುವಾಗ ಮನೆಯ ಹಿರಿ – ಕಿರಿಯ ಸದಸ್ಯರೆಲ್ಲರೂ ತಪ್ಪದೇ ಹಾಜರಿರಬೇಕಾಗುತ್ತಿತ್ತು. ಪೂಜೆಗೆ ಬಾರದಿರುವವರನ್ನು ಬೈದು ತಂದು ಪೂಜೆಯಲ್ಲಿ ಭಾಗಿಯಾಗುವಂತೆ ಮಾಡುತ್ತಿದ್ದರು. ಮುಂದೆ ಅಂತಹ ತಪ್ಪುಗಳನ್ನು ಯಾರೂ ಮಾಡುತ್ತಿರಲಿಲ್ಲ. ಈ ಪೂಜಾ ಸಂದರ್ಭದಲ್ಲಿ ಎಲ್ಲರೂ "ನೆರೆ ನಂಬಿದೆ ಮದ್ಹೃದಯ ಮಂಟಪದೊಳು ಪರಿಶೋಭಿಸುತಿರು ಪಾಂಡುರಂಗ , ..., ಸುಖವಾಗಲಿ ದುಃಖವಾಗಲಿ ಸಖ ನೀನಾಗಿರು ಪಾಂಡುರಂಗ । ನಿಖಿಲಾಂತರ್ಗತ ವ್ಯಾಸ ವಿಠಲ ತನ । ಮುಖ ಪಂಕಜ ತೋರೋ ಪಾಂಡುರಂಗ ॥ ಮತ್ತು "ಲಾಲಿ ಗೋವಿಂದ ಲಾಲಿ" ಪದ್ಯವನ್ನು ತಪ್ಪದೇ ಹೇಳಿಸುತ್ತಿದ್ದರು – ತಾನೂ ಹಾಡುತ್ತಿದ್ದರು. ಕೃಷಿ ಚಟುವಟಿಕೆ, ಅದರೊಂದಿಗೆ ವೈದಿಕ ವೃತ್ತಿ, ಅದರೊಂದಿಗೆ ಸಮಾಜಸೇವೆಯನ್ನು ಪರರ ಕಿಂಕರತೆಯಲ್ಲಿ ಮಿಳಿತಗೊಳಿಸಿ ಶ್ರೀದೇವರ ಪೂರ್ಣ ಕೃಪೆಗೆ ಪಾತ್ರರಾಗಿ ನಮಗೆಲ್ಲರಿಗೂ ದಾರಿದೀಪವಾಗಿ ಬಾಳಿದರು ಶ್ರೀ ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು. ಅವರಿಗಿದೋ ನಮನ, ಪ್ರತಿ ನಮನ.



ವೇದಮೂರ್ತಿ ಶ್ರೀ ವೆಂಕಟಕೃಷ್ಣ ಆಚಾರ್ಯರು



ಪ್ರೊ। ಯಚ್. ಗಿರಿಧರ ಹತ್ವಾರ್

ಹೊಸಬೆಟ್ಟಿನ ಶ್ರೇಷ್ಠ ಮನೆತನ ಕಾವಿನಕಲ್ಲು ಕುಟುಂಬದ ಹಿರಿಯ ಚೇತನ ವೇದಮೂರ್ತಿ ವೆಂಕಟಕೃಷ್ಣ ಆಚಾರ್ಯರು ನಮ್ಮೆಲ್ಲರ ಹೃದಯದಲ್ಲಿ ಇಂದಿಗೂ ಶಾಶ್ವತವಾಗಿ ಉಳಿದಿದ್ದಾರೆ. ಇವರು ವಾದಿರಾಜ ಆಚಾರ್ಯ ಮತ್ತು ಶ್ರೀಮತಿ ಮಹಾಲಕ್ಷ್ಮಿಯವರ ಜ್ಯೇಷ್ಠ ಪುತ್ರರು. ಹಿಟ್ಲರ್ ಆಚಾರ್ಯರೆಂಬ ಖ್ಯಾತಿಯನ್ನು ಪಡೆದ ಇವರು ತುಂಬು ಕುಟುಂಬದ ನೆಚ್ಚಿನ ನೇತಾರರು. ಅಳಿಯುವುದು ಕಾಯ ಉಳಿಯುವುದು ಕೀರ್ತಿ ಎಂಬಂತೆ ಅವರ ಆದರ್ಶ ವ್ಯಕ್ತಿತ್ವದ ಸಂಸ್ಮರಣೆ ಇಂದು ನಮಗೆ ಸತ್ಪ್ರೇರಣೆಯನ್ನು ನೀಡುತ್ತಿದೆ; ಉತ್ಸಾಹವನ್ನು ತುಂಬುತ್ತಿದೆ.

ಶ್ರೀ ವೆಂಕಟಕೃಷ್ಣ ಆಚಾರ್ಯರದು ಅವಿಭಕ್ತ ಕುಟುಂಬ. 8 ಜನ ಸೋದರರು ಹಾಗೂ ಒಬ್ಬಳು ತಂಗಿ. ಹಿರಿಯಣ್ಣ ವೆಂಕಟಕೃಷ್ಣ ಆಚಾರ್ಯರು ಎಲ್ಲರಿಗೂ ಉತ್ತಮ ಶಿಕ್ಷಣವನ್ನು ಕೊಡಿಸಿ, ಸಕಾಲದಲ್ಲಿ ಅವರಿಗೆ ಮದುವೆ ಮಾಡಿಸಿ ಅವರ ಏಳಿಗೆಯಲ್ಲಿ ಸಂತಸವನ್ನು ಕಾಣುತ್ತಾ ಬಹಳ ಆತ್ಮೀಯತೆಯಿಂದ ಸಂಸಾರವನ್ನು ಮುನ್ನಡೆಸಿದರು. ಅವರ ಮಾತನ್ನು ಯಾರೂ ಮೀರುತ್ತಿರಲಿಲ್ಲ.

ಇನ್ನು ಊರಿನ ಯಾವುದೇ ಕಾರ್ಯಕ್ರಮವಿರಲಿ ಅಲ್ಲಿ ಆಚಾರ್ಯರದ್ದೇ ನೇತೃತ್ವ. ಮದುವೆ ಸಮಾರಂಭಗಳಿಗೆ ಅಗತ್ಯವಾದ ಚಪ್ಪರವನ್ನು ಹಾಕಿಸಿ ಬಳಿಕ ಮೃಷ್ಟಾನ್ನ ಭೋಜನದ ವ್ಯವಸ್ಥೆ ಬಳಿಕ ನಿರ್ಮಲೀಕರಣ ಹೀಗೆ ಪ್ರತಿಯೊಂದು ಕಾರ್ಯಕ್ರಮಕ್ಕೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರು. ಕಿರಿಯರಲ್ಲಿ ಉತ್ಸಾಹವನ್ನು ತುಂಬುತ್ತಿದ್ದರು. ಪಾದರಸದಂತೆ ಬಹಳ ಚುರುಕಿನ ಓಡಾಟದಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಸಮಾಜದ ಏಳಿಗೆಗಾಗಿ ನಿರಂತರ ಶ್ರಮಿಸುತ್ತಿದ್ದರು. ಸದಾ ಹಸನ್ಮುಖಿಗಳಾದ ಆಚಾರ್ಯರು ಪರೋಪಕಾರಿಗಳು ಮದುವೆಯ ಸಂಬಂಧಗಳನ್ನು ಕೂಡಿಸುತ್ತಿದ್ದರು. ಯಕ್ಷಗಾನದ ಮೇಲೆ ವಿಶೇಷ ಆಸಕ್ತಿ ಇದ್ದ ಅವರು ನೂರಾರು ಕಲಾವಿದರಿಗೆ ಆರ್ಥಿಕ ನೆರವು ನೀಡುತ್ತಿದ್ದರು.

ಇನ್ನು ಅವರ ಮನೆಯಲ್ಲಿ ಜರಗುತ್ತಿದ್ದ ಊಟ ಉಪಚಾರಗಳಲ್ಲಿ ಆಚಾರ್ಯರೇ ಸ್ವತಃ ನಿಂತು ಎಲ್ಲರನ್ನೂ ಸಂತಸಪಡಿಸುತ್ತಿದ್ದರು. ಆಗ ಜರಗುತ್ತಿದ್ದ ಇಸ್ಪೀಟು ಕೂಟಗಳಲ್ಲಿ ಆಚಾರ್ಯರ ವಿಶಿಷ್ಟ ನಗೆ ಹಾಗೂ ಗದ್ದಲವನ್ನು ಈಗಲೂ ಅವರ ಶಿಷ್ಯರು ನೆನಪಿಸಿಕೊಳ್ಳುತ್ತಾರೆ. ಆಗಿನ ಗಮ್ಮತ್ತನ್ನು ವರ್ಣಿಸಲಾಗದು.

ಇಂದು ಆಚಾರ್ಯರ ಸುಪುತ್ರ ಹಾಗೂ ಮೊಮ್ಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ಸೇವಾ ಮನೋಭಾವನೆಯಿಂದ ದುಡಿಯುತ್ತಿದ್ದು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ.

ಶ್ರೇಷ್ಠ ದಾರ್ಶನಿಕ ಡಾ। ಡಿ.ವಿ.ಜಿ. ಯವರ ನುಡಿಮುತ್ತುಗಳನ್ನು ನೆನಪಿಸಿಕೊಳ್ಳುತ್ತೇನೆ. “ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ, ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ, ಎಲ್ಲರೊಳಗೊಂದಾಗು – ಮಂಕುತಿಮ್ಮ”.

ಹೀಗೆ ಎಲ್ಲರೊಳಗೊಂದಾಗಿ ಬಾಳಿ ಬೆಳಗಿದ ಆಚಾರ್ಯರ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ನುಡಿನಮನಗಳನ್ನು ಸಲ್ಲಿಸಿ ವಿರಮಿಸುತ್ತೇನೆ.



ಐ. ಗೋಪಾಲ ರಾವ್

ಆದರಣೀಯ ಆಚಾರ್ಯರು

ಊರಿನ ಜನರ ಪ್ರೀತಿಗೆ ಪಾತ್ರರಾದವರು ಆಚಾರ್ಯರು. ಅವರದು ತುಂಬು ಸಂಸಾರ. ಎಂಟು ಜನ ಸಹೋದರರಲ್ಲಿ ಹಿರಿಯರಾಗಿ ಕಿರಿಯರನ್ನು ಒಮ್ಮತದಿಂದ ಭೇದಭಾವವಿಲ್ಲದೆ ನಡೆಸಿದ್ದ ಧುರೀಣ. ಎಲ್ಲಾ ಸಹೋದರರ ಪ್ರೀತಿಗೆ ಒಳಗಾಗಿದ್ದರು. ತಮ್ಮನಾದ ಶ್ರೀಧರಾಚಾರ್ಯರಲ್ಲಿ ತುಂಬಾ ಹೆಚ್ಚಿನ ಮಮತೆ. ಅವರ ಮಾತಿಗೇ ತಥಾಸ್ತು ಎನ್ನುತ್ತಿದ್ದರು.

ಹಿಂದೆ ಊರಿನ ಕಾರ್ಯಕ್ರಮಗಳೆಲ್ಲಾ ಊರವರ ಸಹಕಾರದಿಂದಲೇ ನಡೆಯುತ್ತಿತ್ತು. ಕಸ ಗುಡಿಸುವುದರಿಂದ ಹಿಡಿದು ಚಪ್ಪರ, ಅಡಿಗೆ ಕಾರ್ಯಗಳೆಲ್ಲ ಊರವರ ಒಗ್ಗೂಡಿಕೆಯಿಂದಲೇ ನಡೆಯುತ್ತಿತ್ತು. ಅಲ್ಲೂ ಆಚಾರ್ಯರು ಹಾಜರಿ. ಉಣ್ಣುವುದರಲ್ಲೂ ಪ್ರವೀಣರಾದರೆ ಇತರರಿಗೆ ತಿನ್ನಿಸುವುದರಲ್ಲೂ ಜಾಣರು. ಹಿಂದೆ ಪಾಯಸವು ಪ್ರಧಾನವಾಗಿತ್ತು. ಅವರು ಮೊದಲು ಊಟ ಮಾಡಿದರೂ, ಬಳಸಿದವರಿಗೆ ಕೈಮರಿಗೆಯಲ್ಲೇ ಪಾಯಸ ಬಡಿಸಿ ತಿನಿಸುವುದರಲ್ಲೂ ಪ್ರವೀಣ ರಾಗಿದ್ದರು. ಸಿಹಿ ತಿಂಡಿ ತಿನಿಸುವುದರಲ್ಲೂ ಜಾಣರು. ಒಮ್ಮೆಲೇ ಹಾಕದೇ ಒಂದೊಂದಾಗಿ ಬಡಿಸಿ ತಿನ್ನಿಸುತ್ತಿದ್ದರು.

ಹತ್ವಾರರ ಮನೆಯಲ್ಲಿ ಉಪ್ಪಿಜೆ ರಾಮಚಂದ್ರ ರಾಯರಿಗೆ 35 ಜಿಲೇಬಿಯನ್ನು ಬಡಿಸುತ್ತಾ ಜಿಲೇಬಿ ತಿನ್ನಿಸಿದರು. ಊರಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರಲ್ಲದೆ ಕಾರ್ಯ ಕರ್ತರನ್ನು ಹುರಿದುಂಬಿಸುತ್ತಿದ್ದರು. ಅವರಿಗೆ ಇಸ್ಪೀಟು ಆಟದಲ್ಲಿ ತುಂಬಾ ಉತ್ಸಾಹ. ನಮಗೂ ಉತ್ಸಾಹವಿತ್ತು. ಹೆಚ್ಚಾಗಿ ರಜಾ ದಿನಗಳಲ್ಲಿ ಈ ಇಸ್ಪೀಟು ಕಾರ್ಯಕ್ರಮವಿರುತ್ತಿತ್ತು. ಅವರು, ನಾರಾಯಣಾ ಚಾರ್ಯರು, ದಾಸಪ್ಪ ಆಚಾರ್ಯರು ಒಂದು ಪಾರ್ಟಿ. ನಾನು ಅಚ್ಚುತರಾಯರು, ಸೀತಾ ರಾಮಾಚಾರ್ಯರು ಒಂದು ಪಾರ್ಟಿ. ಅವರದು ದೊಡ್ಡ ಕುಟುಂಬವಾದ್ದರಿಂದ ವರ್ಷದಲ್ಲಿ 1–2 ಕಾರ್ಯಕ್ರಮ ನಡೆಯುತ್ತಾ ಇತ್ತು. ಆ ದಿವಸ ರಾತ್ರಿ ಬೆಳಗಿನವರೆಗೂ ಕಾರ್ಯಕ್ರಮ ನಡೆಯುತ್ತಿದ್ದು, ಅವರ ಮನಸ್ಸಿಗೆ ಸರಿಯಾಗೇ ಕೆಲಸ ನಡೆಯದಿದ್ದರೆ ತಟ್ಟನೆ ತಪ್ಪೆಂದು ಹೇಳುತ್ತಿದ್ದರು. ಇಂತಹ ಒಂದು ಕಾರ್ಯಕ್ರಮವನ್ನು ನೀವೇ ನಡೆಸಬೇಕೆಂದು ಹೇಳಿದರೆ ಅದನ್ನು ಮನಃಪೂರ್ವಕವಾಗಿ ನೆರವೇರಿಸಿ ಕೊಡುತ್ತಿದ್ದರು.

ಪ್ರೊ. ಜಿ.ಕೆ. ರಾಯರು, ಸಿಟಿ ರಮಾನಂದ ರಾಯರು ಕೂಡಾ ಈ ಇಸ್ಪೀಟ್ ಆಟದಲ್ಲಿ ಭಾಗವಹಿಸುತ್ತಿದ್ದರು.

ನಾಸಿಕ ಕೃಷ್ಣರಾಯರು ಇವರ ಮಿತ್ರರಾಗಿದ್ದರು. ಅವರ ಮನೆ ಬೈಕಂಪಾಡಿಯಲ್ಲಿತ್ತು. ತಮ್ಮ ಮಗಳ ಮದುವೆಯನ್ನು ಆಚಾರ್ಯರು ನಡೆಸಿ ಕೊಡಬೇಕೆಂದು ಕೇಳಿದಾಗ ಆಚಾರ್ಯರು ಸಹಾಯಕ್ಕಾಗಿ ನಮ್ಮೆಲ್ಲರನ್ನು ಬರಹೇಳಿದ್ದರು. ಕೃಷ್ಣರಾಯರಿಗೆ ಸ್ವಲ್ಪ ದೊಡ್ಡಸ್ತಿಕೆ ಇತ್ತು. ಬಡವರನ್ನು ತಾತ್ಸಾರ ಭಾವದಿಂದ ಕಾಣುತ್ತಿದ್ದರು. ನಾವು ಏಳೆಂಟು ಜನ ಹೋದಾಗ ತಾತ್ಸಾರದಿಂದ ಕಂಡರು. ಇದು ನಮಗೆ ಬೇಸರವಾಯಿತು. ನಾವು ಸುಮ್ಮನೆ ಹೋಗಿ ಕುಳಿತುಕೊಂಡೆವು. ಇದು ಆಚಾರ್ಯರಿಗೆ ತಿಳಿಯಿತು. ಅವರು ಯಜಮಾನರನ್ನು ಕರೆದು ತಂದು ನಮ್ಮೊಡನೆ ಕಾರ್ಯಕ್ರಮ ನಡೆಸಿಕೊಡಿ ಎಂದು ಹೇಳಿಸಿದರು. ಇದರಿಂದ ಅವರ ಗುಣ ಏನೆಂದು ತಿಳಿಯುತ್ತದೆ.

ಕೊನೆಯವರೆಗೂ ಊರಪರವೂರ ಜನರ ಪ್ರೀತಿಗೆ ಪಾತ್ರರಾದ ಆಚಾರ್ಯರು ಆದರಣೀಯರು.



ನಮ್ಮ ಚಿಕ್ಕಪ್ಪ – ವೆಂಕಟಕೃಷ್ಣ ಆಚಾರ್ಯರು



ಐ.ಕೆ. ನಾರಾಯಣ ರಾವ್, ಅತಿಕಾರಿ ಮನೆ

ಹೊಸಬೆಟ್ಟು ವೆಂಕಟಕೃಷ್ಣ ಆಚಾರ್ಯರು ನನ್ನ ಅಮ್ಮ (ಲಕ್ಷ್ಮಿ) ನ ತಂಗಿ (ಕಮಲ) ಯ ಗಂಡ. ಹಾಗೆ ಅವರು ನನಗೆ ಚಿಕ್ಕಪ್ಪ. ನನ್ನ ಅಪ್ಪ (ಅತಿಕಾರಿ ಕೃಷ್ಣರಾಯರು) ನನ್ನ 14ನೇ ವಯಸ್ಸಿಗೆ ತೀರಿಕೊಂಡರು. ಸ್ವಲ್ಪ ಆಸ್ತಿಪಾಸ್ತಿ ಇದ್ದುದರಿಂದ ಅದನ್ನು ನೋಡಿಕೊಳ್ಳಲು ನಾವು ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಚಿಕ್ಕವರಾದ್ದರಿಂದ ಚಿಕ್ಕಪ್ಪ ವೆಂಕಟಕೃಷ್ಣ ಆಚಾರ್ಯರೇ ನಮ್ಮ ಮನೆಯ ಎಲ್ಲ ಕೆಲಸ ಕಾರ್ಯಗಳಿಗೆ ಮುಂದೆ ನಿಂತು ಮಾಡಿಸಿಕೊಟ್ಟು ಹೋಗುತ್ತಿದ್ದರು. ಆಗಿನ ಕಾಲದಲ್ಲಿ ಸಂಬಂಧಗಳಿಗೆ ಹೆಚ್ಚು ಮಹತ್ವವಿತ್ತು. ಪರಸ್ಪರ ಕಷ್ಟಸುಖಕ್ಕೂ ಕೈ ಜೋಡಿಸಿ ಖುಷಿ ಪಡುವ ಕಾಲವಾಗಿತ್ತು. ನೋವು ನಲಿವಿಗೆ ಸ್ಪಂದಿಸುವ ಸದ್ಭಾವನೆಯಿತ್ತು. ಈಗ ಬಿಡಿ ಕಾಲ ಬದಲಾಗಿದೆ.

ಹೀಗೆ ನಮ್ಮ ಚಿಕ್ಕಪ್ಪ ಹಿಟ್ಲರ್ ಆಚಾರ್ಯರೆಂದೇ ಪ್ರಸಿದ್ಧಿ ಪಡೆದ ವೆಂಕಟಕೃಷ್ಣ ಆಚಾರ್ಯರನ್ನು ನಾನು ಮರೆಯುವ ಹಾಗಿಲ್ಲ. ನನ್ನ ಮೂರೂ ಜನ ತಂಗಿಯರ ಮದುವೆ (ಸುನಂದ, ನಾಗವೇಣಿ, ಕುಮುದ), ನನ್ನ ಮದುವೆ (ಕಡ್ಲಾಡಿ ನಾಗರತ್ನ – ನನ್ನ ಹೆಂಡತಿ) ಎಲ್ಲಾ ನಡೆಸಿಕೊಟ್ಟದ್ದು ಅವರು. ಆಗಿನ ಕಾಲದಲ್ಲಿ ಘಟ್ಟದಿಂದ ನಮ್ಮೂರಿಗೆ ಮೊದಲ ಹುಡುಗಿ ತಂದದ್ದು ನಮ್ಮ ಮನೆಗೆ. ಕಾರಣ ವೆಂಕಟಕೃಷ್ಣ ಆಚಾರ್ಯರ ಮಗಳು ಲಕ್ಷ್ಮಮ್ಮ ಮತ್ತು ನಾರಾಯಣಾಚಾರ್ಯರ ಮಗಳು ರಮಾಳನ್ನು ತೀರ್ಥಹಳ್ಳಿ ಕಡೆಗೆ ಮದುವೆ ಮಾಡಿಕೊಟ್ಟದ್ದರಿಂದ ಮತ್ತು ನನ್ನ ಹೆಂಡತಿಯ ಅಣ್ಣ ಕೆ. ಸತ್ಯನಾರಾಯಣ ವೆಂಕಟಕೃಷ್ಣ ಆಚಾರ್ಯರ ಮನೆಯಲ್ಲಿದ್ದುಕೊಂಡು ವಿದ್ಯಾದಾಯಿನೀ ಶಾಲೆಗೆ ಹೋದದ್ದರಿಂದ ಆ ಕಡೆಯ ಹುಡುಗಿಯನ್ನು ನಮ್ಮೂರಿಗೆ ಅಂದರೆ ನನಗೆ ಮೊದಲು ತರುವಂತಾಯಿತು. ಇದೆಲ್ಲಾ ವೆಂಕಟಕೃಷ್ಣ ಆಚಾರ್ಯರ ಪ್ರಯತ್ನ.

ಚಿಮಿಣಿ, ಗ್ಯಾಸ್‌ಲೈಟ್ ಇದ್ದ ಆ ಕಾಲದಲ್ಲಿ (ಕರೆಂಟ್ ಬಂದಿರಲಿಲ್ಲ) ನಮ್ಮ ಮನೆಯ ಯಾವುದೇ ಕಾರ್ಯಕ್ರಮವಿರಲಿ ಅದಕ್ಕೆ ಲಾಟೀನು ಹಿಡಿದುಕೊಂಡು ಬಂದು ರಾತ್ರಿಯೆಲ್ಲಾ ನಿಂತು ಬೇಕಾದ ತಯಾರಿಗಳನ್ನು ನಡೆಸಿ, ಎಲ್ಲಾ ಸರಿಯಿದೆ ಎಂದ ಮೇಲೆಯೇ ಅವರು ಮತ್ತೆ ಮನೆಗೆ ಹೋಗುತ್ತಿದ್ದುದು. "ಕರೆದರೆ ಬರಬಾರದೆ" ಎನ್ನುವ ದಾಸರ ಪದ ಇವರಿಗೆ ಚೆನ್ನಾಗಿ ಒಪ್ಪುತ್ತಿತ್ತು. ಅಂದರೆ ಕಾರ್ಯಕ್ರಮದ ಬಾಬ್ತು ಅವರನ್ನು ನೆನಸಿಕೊಂಡರೆ ಸಾಕು ಅವರು ಪ್ರತ್ಯಕ್ಷ. ಅವರ ಆಳೆತ್ತರದ ದೇಹ, ಕಚ್ಚೆಯ ಮೇಲೊಂದು ಶಾಲಿನ ಹೊದಿಕೆ, ಕನ್ನಡಕದೊಳಗಿನ ತೀಕ್ಷ್ಣ ನೋಟ, ನಮ್ಮವರೆಂಬ ಆತ್ಮೀಯ ಬಂಧನದ ಹಿಡಿತ ಯಾರನ್ನೂ ಸಮ್ಮೋಹನಗೊಳಿಸದಿರಲಾರದು. ನಮ್ಮ ಮನೆಯ ಮಟ್ಟಿಗೆ ಹೇಳುವುದಾದರೆ ಅಗತ್ಯದ ಸಂದರ್ಭಗಳಲ್ಲಿ ಹಣದ ಸಹಾಯವನ್ನೂ ಮಾಡಿ ತನ್ನ ಆದರ್ಶವನ್ನು ಮೆರೆದಿದ್ದಾರೆ.

ನಮ್ಮದು ಕೃಷಿ ಮನೆತನ. ಜೊತೆಗೆ ಅಧ್ಯಾಪನ ವೃತ್ತಿ. ನಮ್ಮ ತಂದೆ ಅತಿಕಾರಿ ಕೃಷ್ಣರಾಯರೂ ವಿದ್ಯಾದಾಯಿನೀ ಶಾಲೆಯಲ್ಲಿ ಮಾಸ್ಟರಾಗಿದ್ದರು. ನಾನೂ, ವಿದ್ಯಾದಾಯಿನೀ ಶಾಲೆಯಲ್ಲಿ ಮಾಸ್ಟರಾಗಿ, ಹೆಡ್ಮಾಸ್ಟರಾಗಿ ನಿವೃತ್ತನಾದೆ. ನನ್ನ ಭಾವನವರಿಂದ (ಹೊಸಬೆಟ್ಟು ಸುಂದರ ರಾವ್ ಯಾನೆ ವೆಂಕಟರಾವ್) ತಬ್ಲಾ ಕಲಿತಿದ್ದರಿಂದ ವೆಂಕಟಕೃಷ್ಣ ಆಚಾರ್ಯರ ತಮ್ಮ ಶ್ರೀಧರ ಆಚಾರ್ಯರ ಜೊತೆ ಹರಿಕಥೆಗೆ ಸಾಥಿಯಾಗಿ ಅವರೊಂದಿಗೆ ಹತ್ತಾರು ಕಡೆ ಸುತ್ತಿ ದೇಶ – ಕೋಶ ನೋಡಿರುವುದು ನನ್ನ ಸೌಭಾಗ್ಯ. ಹರಿದಾಸ ಶ್ರೀಧರಾಚಾರ್ಯರು ತನ್ನ ಗುರು ಚಿತ್ರಾಪುರ ಶ್ರೀ ಶ್ರೀ ಶ್ರೀ ವಿದ್ಯಾಪೂರ್ಣ ತೀರ್ಥರನ್ನು ಸ್ಮರಿಸದೆ ಹರಿಕಥೆ ಆರಂಭಿಸಲಾರರು. "ಎಂತು ವರ್ಣಿಪೆ ಗುರುವಿನ ಕೀರ್ತಿಯನು" ಎಂಬ ತನ್ನ ಸ್ವಂತ ಕೃತಿಯಿಂದಲೇ ಆರಂಭಿಸಿ ಮುಂದೆ ಹೋಗುವವರು. ತನ್ನ ಗುರುವಿನ ಅನುಗ್ರಹ ಮತ್ತು ಅಣ್ಣ ವೆಂಕಟಕೃಷ್ಣ ಆಚಾರ್ಯರ

ಆಶೀರ್ವಾದದಿಂದ ನಾಡಿನಾದ್ಯಂತ ಹರಿಕಥೆಯು ಪ್ರಸಿದ್ಧಿಯಲ್ಲಿ ಕೀರ್ತನಾ ಕೇಸರಿ ಬಿರುದು ಪಡೆದು ಧನ್ಯರಾದವರು ಶ್ರೀಧರಾಚಾರ್ಯರು. ಅವರ ತಾಳ – ಮೇಳಗಳಿಗೆ ನನ್ನದೂ ಒಂದಿಷ್ಟು ಅಳಿಲ ಸೇವೆ ಎಂಬಂತೆ ತಬ್ಲಾ ಸಾಥಿ ನನಗೂ ಕೀರ್ತಿ ತಂದಿತು. ಇದರ ಹಿಂದೆ ನನ್ನನ್ನು ಬೆಳೆಸುವಲ್ಲಿ – ಹರಸುವಲ್ಲಿ ಹಿಟ್ಲರ್ ಪ್ರಸಿದ್ಧಿಯ ವೆಂಕಟಕೃಷ್ಣ ಆಚಾರ್ಯರ ಪೂರ್ಣಾಶೀರ್ವಾದವೂ ನನ್ನ ಮೇಲಿತ್ತು ಎಂದು ಸದ್ವಿನಯದಿಂದ ಭಾವಿಸುತ್ತೇನೆ.

ವೆಂಕಟಕೃಷ್ಣ ಆಚಾರ್ಯರ "ಸುಧಾರಿಕೆ" ಎಂದರೆ ಅದು ಮಧ್ಯಾಹ್ನ 12 ಗಂಟೆಗೇ ಆರಂಭಿಸುವ ಊಟ. ಹಸಿದವರನ್ನು ಕಾಯಿಸಬಾರದು ಎನ್ನುವ ಮತ್ತು ಆಗಿನ ಕಾಲದಲ್ಲಿ ಯಾರ ಮನೆಯಲ್ಲಿಯೂ ಬೆಳಗ್ಗೆ ತಿಂಡಿ ತೀರ್ಥಗಳಿಲ್ಲದ ಕಾಲದಲ್ಲಿ ಮಧ್ಯಾಹ್ನದ ಭೋಜನ ಆದಷ್ಟು ಬೇಗ ಆಗಬೇಕು ಎಂಬುದು ಅವರ ಧೋರಣೆ ಮತ್ತು ವಾದ. ಇದನ್ನು ತನ್ನ ಮನೆಯಲ್ಲೂ ಹಾಗೂ ತಾನು ಹೋದ ಮನೆಯಲ್ಲೂ ನಡೆಯುವಂತೆ ಮಾಡಿದವರು. ಹಾಗಾಗಿ ಹೊಸಬೆಟ್ಟು ಸುತ್ತಮುತ್ತಲೆಲ್ಲ ಊಟದ ಮನೆಗೆ ಜನರು 11 ಗಂಟೆಯ ಒಳಗೆ ಹಾಜರು.

ಭೋಜನವೆಲ್ಲಾ ಮುಗಿದ ಮೇಲೆ ಇವರು ಕೂತು ಅಂದರೆ ಭಾಗವಹಿಸಿ ಆಡುವ ಇಸ್ಪೀಟ್ ಆಟ. ಆ ಆಟದೊಳಗೊಂದು ಲೆಕ್ಕಾಚಾರದ ನೋಟ. ಆ ನೋಟದೊಳಗೊಂದು ನಗುವಿನ ಆರ್ಭಟ. ಇಸ್ಪೀಟ್ ಆಟ ಗೊತ್ತಿಲ್ಲದವರೂ ಈ ಆಟದ "ಕಳ" ದ ಗಾಂಭೀರ್ಯವನ್ನು ನೋಡಲು ನಿಲ್ಲುತ್ತಿದ್ದರು. ಅಂತೂ, ಆ ಸಮಾರಂಭ ಗೌಜಿ ಗಮ್ಮತ್ತಿನಲ್ಲಿ, ಸಾಂಗವಾಗಿ ಎಲ್ಲರಿಗೂ ಖುಷಿ ಕೊಡುವಂತೆ ನಡೆಯಬೇಕೆನ್ನುವುದು ವೆಂಕಟಕೃಷ್ಣ ಆಚಾರ್ಯರ ಆಶಯವಾಗಿತ್ತು. ಅದರಂತೆ ಅವರು ನಡೆದಿದ್ದರು – ಊರ ಮಂದಿಗಳೂ ಕೂಡಾ ಅತ್ಯಂತ ಗೌರವದಿಂದ ಆಚಾರ್ಯರನ್ನು ಕಾಣುತ್ತಿದ್ದರು.

ಇಂತಹ "ಹಿಟ್ಲರ್ ಗಿರಿ" ಯನ್ನು ಎಲ್ಲರ ಮನೆ – ಮನದಲ್ಲೂ ನಡೆಸುತ್ತಾ, ಊರಿನಲ್ಲಿ ಕಾರುಬಾರು ಮಾಡುತ್ತಾ, ಎಲ್ಲರ ಪ್ರೀತಿಗೆ ಪಾತ್ರರಾಗುತ್ತಾ, ಮೊಗವೀರ ಮಿತ್ರರಿಗೆ "ವಿಟ್ಲರಾಚಾರ್" ಎಂದೇ ಸುಪರಿಚಿತರಾದ ನನ್ನ ಚಿಕ್ಕಪ್ಪ ವೆಂಕಟಕೃಷ್ಣ ಆಚಾರ್ಯರಿಗೆ ಇದೋ ನಮನ.





ವೈ. ರಮಾನಂದ ರಾವ್ ಮತ್ತು ನಾಗವೇಣಿ

ನಮ್ಮ ಮಾವ – ಹಿಟ್ಲರ್ ಆಚಾರ್ರು

ಹಿಟ್ಲರ್ ಆಚಾರ್‌ರ ತಂದೆ ವಾದಿರಾಜ ಆಚಾರ್ ಮಣಲೂರಿನಿಂದ ಹೊಸಬೆಟ್ಟಿಗೆ ಬಂದು ನೆಲೆಸಿದವರು. ವಾದಿರಾಜ ಆಚಾರ್‌ರ ಹಿರಿಯ ಮಗನೆ ವೆಂಕಟಕೃಷ್ಣ ಆಚಾರ್. ಕಾವಿನಕಲ್ಲು ಕುಟುಂಬಕ್ಕೆ ಸೇರಿದವರು. ನಾನು (ಎಕ್ಕಾರು ರಮಾನಂದ – ಸಿಟಿ ಲಂಚ್ ಹೋಮ್, ಸುರತ್ಕಲ್) ವಿದ್ಯಾದಾಯಿನಿ ಶಾಲೆಗೆ ಹಿಟ್ಲರ್ ಆಚಾರ್ ಮನೆಯ ಎದುರಿಗಿದ್ದ ಸರಳಾಯರ ಮನೆಯಿಂದ (ರಾಮಕೃಷ್ಣ ಸರಳಾಯರು ನನ್ನ ಅಕ್ಕ ಶ್ಯಾಮಲನ ಗಂಡ – ನನ್ನ ಭಾವ) ಹೋಗಿ ಬರುತ್ತಿದ್ದುದರಿಂದ, ನನ್ನ ಮದುವೆಗಿಂತಲೂ ಮುಂಚೆಯೇ ವೆಂಕಟಕೃಷ್ಣ ಆಚಾರ್‌ರ ಪರಿಚಯವಿತ್ತು. 1965ರ ಸಮಯದಲ್ಲಿ ಈ ಹಿಟ್ಲರ್‌ರಿಗೆ ತನ್ನ ತಮ್ಮ ದಾಸಪ್ಪ ಆಚಾರ್‌ರ ಮಗಳು ನಾಗವೇಣಿಯನ್ನು ಈ ರಮಾನಂದನಿಗೆ (ನನಗೆ) ಯಾಕೆ ಮದುವೆ ಮಾಡಿಸಬಾರದು? ಎಂದು ಯೋಚಿಸಿ, ಸರಳಾಯರ ಮನೆ ಪಕ್ಕದಲ್ಲಿದ್ದ ಕಾವಿನಕಲ್ಲು ವಾಸುದೇವ ಆಚಾರ್‌ರ ಮಗ ರಘುರಾಮ ರಾವ್ ಅವರೊಡನೆ (ಅನಸೂಯ ಟೀಚರ್‌ರ ಗಂಡ) ಪ್ರಸ್ತಾಪ ಮಾಡಿದರು. ಅದೇ ಸಮಯದಲ್ಲಿ ತೋಡಬಳಿ ರಾಮಕೃಷ್ಣರಾಯರ ಮನೆಯಲ್ಲಿ ಏನೋ ಒಂದು ಫಂಕ್ಷನ್. ಅಲ್ಲಿ ರಘುರಾಮ ರಾಯರೊಡನೆ ಉಪ್ಪಜೆ ನಾರಾಯಣ ರಾವ್ ಮೂಲಕ ನನ್ನನ್ನು ವಿಚಾರಿಸಿದರು. ಹಾಗೆಯೇ ಮುಂದುವರಿದು ಇಬ್ಬರ ಜಾತಕವನ್ನು ಪರಿಶೀಲಿಸಿ, ಮದುವೆ ಮಾಡಿಸಿಯೇ ಬಿಟ್ಟರು. ತನ್ನ ತಮ್ಮ ದಾಸಪ್ಪನನ್ನೂ ಕೇಳಲಿಲ್ಲ – ನಾಗವೇಣಿಯನ್ನೂ ಕೇಳಲಿಲ್ಲ. ತಾನು ನೋಡಿ ಸೈ ಎಂದ ಮೇಲೆ ದಾಸಪ್ಪನಿಗೆ ತಿಳಿಸಿ, ಮದುವೆ ಏರ್ಪಾಟು ಮಾಡಿದ್ದರು. ಅದೂ ಎಂಥಾ ಮದುವೆ ! ನಾಲ್ಕು ದಿನಗಳ ಮದುವೆ. ಆನೆ ಕಟ್ಟಿ ಸಾಕಿದ ಸರಳಾಯರ ಮನೆಯಿಂದ ವರನ ದಿಬ್ಬಣ – ಮಾರ್ಗದ ಪಡುಬದಿ ಇರುವ ವಧುವಿನ ಮನೆಗೆ ಅದ್ದೂರಿಯ ನಡಿಗೆಯೊಂದಿಗೆ. ವರನ ಕಡೆಯವರಿಗೆಲ್ಲಾ ತನ್ನ ಇನ್ನೊಬ್ಬ ತಮ್ಮ ರಮಾನಂದ ಆಚಾರ್‌ರ ಹೊಸ ಮನೆಯಲ್ಲಿ ಕಾಫಿ – ಟಿಫಿನ್. ಅದೂ ಎಂತಹದು ! ಇಡ್ಲಿ – ರಾಗಿಮಾಲ್ಟ್ – ಸ್ವೀಟ್. ಆ ಕಾಲದಲ್ಲಿ ಶುಭ ಸಮಾರಂಭಗಳಿಗೆ ಉದ್ದಿನ ವಸ್ತುಗಳನ್ನು ಮಾಡುತ್ತಿರಲಿಲ್ಲ. ಈ ಹಿಟ್ಲರ್‌ರ ದರ್ಬಾರಿನಲ್ಲಿ ಹಾಗೂ ತನ್ನ ತಮ್ಮ ದಾಸಪ್ಪ ಮೈಸೂರಿನಲ್ಲಿ ಹೋಟೇಲ್ ಇಟ್ಟುಕೊಂಡವನು ಎನ್ನುವ ಅಭಿಮಾನದಿಂದ ಈ ಪ್ರಸಂಗಕ್ಕೆ ಕೈ ಹಾಕಿದ್ದರಂತೆ. ಹೊಸಬೆಟ್ಟು ಸುತ್ತಮುತ್ತಲಿನವರೆಗೆ ಸಮಾರಂಭಗಳಲ್ಲಿ ರಾಗಿಮಾಲ್ಟ್ ಕುಡಿದೇ ಗೊತ್ತಿಲ್ಲ – ಅಬ್ಬಬ್ಬಾ !! ಎಂಥಾ ಸಾಹಸ. ಹೀಗೆ ಹೊಸತು ಹೊಸತನ್ನು ತನ್ನ ಯಜಮಾನಿಕೆಯ ಮೂಲಕ ಸಮಾಜ ಬಾಂಧವರಿಗೆ ಪರಿಚಯಿಸಿದವರು ಈ ವೆಂಕಟಕೃಷ್ಣ ಆಚಾರ್‌ರು.

ವೆಂಕಟಕೃಷ್ಣ ಆಚಾರ್ಯರು ತಮ್ಮ 70ರ ಶಾಂತಿಯನ್ನು 77ನೇ ವಯಸ್ಸಿನಲ್ಲಿ ಆಚರಿಸಿದವರು. ಆ ಸಂದರ್ಭದಲ್ಲಿ ತನ್ನ ಮತ್ತು ತಮ್ಮಂದಿರ ಎಲ್ಲಾ ಮಕ್ಕಳಿಗೂ ರೂ. 500/– ರ ಇನಾಮನ್ನು ನೀಡಿ



ಬೇಕಾದ್ದನ್ನು ತೆಗೆದುಕೊಳ್ಳಿ ಎಂದು ಹೇಳಿದವರು. ನಾಗವೇಣಿ ಆ 500/- ರೂ. ನಿಂದ ಬೆಳ್ಳಿ ಗಿಂಡಿಯನ್ನು ನೆನಪಿಗಾಗಿ ತೆಗೆದುಕೊಂಡದ್ದನ್ನು ಕೇಳಿ, "ಇನ್ನು ಮುಂದೆ ನಮ್ಮ ಮನೆಯಲ್ಲಿ ನಡೆಯುವ ಎಲ್ಲಾ ಮದುವೆ ಸಮಾರಂಭಗಳಲ್ಲಿ ಆ ಗಿಂಡಿಯನ್ನೇ ಕಲಶ ಕನ್ನಡಿ ಹಿಡಿಯುವುದಕ್ಕೆ ಉಪಯೋಗಿಸಬೇಕು ಎಂದು ಆಜ್ಞೆ ಮಾಡಿ ಹೇಳಿದರು. ಅದರಂತೆ ವ್ಯಾಸನ ಮದುವೆಯಲ್ಲಿ ಹಾಗೂ ಅನಂತರದ ಎಲ್ಲಾ ಮದುವೆಯಲ್ಲೂ ಈ ಗಿಂಡಿಯೇ ಬಳಕೆಯಾಗುತ್ತಿದೆ. ಅವರ ಈ ಶಾಂತಿಯ ಸಂದರ್ಭದಲ್ಲಿ ತನ್ನ ತಂಗಿಯ ಮೇಲಿನ ಮಮಕಾರಕ್ಕಾಗಿ ಶ್ರೀ ಯಜ್ಞೇಶನಿಗೆ ಭೂದಾನವನ್ನೂ ಮಾಡಿದರು ವೆಂಕಟಕೃಷ್ಣ ಆಚಾರ್ಯರು.

ಆಚಾರ್ಯರು ತನ್ನ ಜೀವಮಾನದಲ್ಲಿ ಆಸ್ಪತ್ರೆಯಲ್ಲಿ ಇದ್ದುದು ಕೇವಲ 3 ದಿನ. ಅದೂ ಕೊನೆಯ ಘಟ್ಟದಲ್ಲಿ. ನನ್ನ ತಮ್ಮ ಸದಾನಂದನ ಮಗನ ಉಪನಯನಕ್ಕೆ ತಾನೇ ಹೋಗುವುದೆಂದು ನಿರ್ಣಯಿಸಿ ಉಳಿದ ತಮ್ಮಂದಿರಿಗೆಲ್ಲಾ ಆದೇಶಿಸಿದರು. ಯಾವಾಗಲೂ ಇಂತಹ ಸಂದರ್ಭಗಳಲ್ಲಿ ದೂರದ ಊರಿಗೆ ನೀನು ಹೋಗಪ್ಪಾ ಎಂದು ತಮ್ಮಂದಿರಿಗೆ ಹೇಳುತ್ತಿದ್ದರೆ, ಅದೇಕೋ ಸದಾನಂದನ ಮಗನ ಉಪನಯನಕ್ಕೆ ತಾನೇ ಹೋಗಿ ಬರಬೇಕೆಂದು ನಿಶ್ಚಯಿಸಿದರು. ಉಪನಯನವೆಲ್ಲಾ ಮುಗಿಸಿ, ಹಿಂತಿರುಗಿದ ಮೇಲೆ ಏನೋ ಆರೋಗ್ಯದಲ್ಲಿ ವ್ಯತ್ಯಾಸವಾಗಿ ಅವರು ತಾರಾ ಕ್ಲಿನಿಕ್‌ಗೆ ಸೇರಬೇಕಾಯಿತು. ಅದನ್ನು ಅವರು ಮೊದಲಿಗೆ ಒಪ್ಪಲಿಲ್ಲ. ಆಸ್ಪತ್ರೆಯಲ್ಲೂ ಮನೆಗೆ ಹೋಗುವಾ, ರಮಾನಂದ ಬರಲಿ ಎಂದೇ ಹೇಳುತ್ತಿದ್ದರು. ಅಲ್ಲೂ ವೀಳ್ಯದೆಲೆ ತಿನ್ನುವುದನ್ನು ಬಿಟ್ಟಿರಲಿಲ್ಲ. ನಾಗವೇಣಿಯವರು ವೀಳ್ಯದೆಲೆಯನ್ನು ಹಿಡಿದುಕೊಂಡು ಬಂದಾಗ, ದೊಡ್ಡಪ್ಪಾ... ವೀಳ್ಯದೆಲೆ ತಂದಿದ್ದೇನೆ ಬೇಕಾ - ಎಂದು ಕೇಳಿದಾಗ, ಏನೇ ನೀನು ಗಂಡನ ಹತ್ತಿರ ಹೆಂಡತಿ ಬೇಕಾ ಅಂತ ಕೇಳಿದ ಹಾಗೆ ನನ್ನ ಹತ್ತಿರ ವೀಳ್ಯದೆಲೆಯನ್ನು ಕೇಳುತ್ತೀಯಲ್ಲಾ" ಎಂದು ತನ್ನ ಹಾಸ್ಯವನ್ನು ಮೆರೆದದ್ದು ಮರೆಯಲಾಗದು. ಆಗಾಗ ಅಲ್ಪಸ್ವಲ್ಪ ಮನಸ್ತಾಪ ಆಚಾರ್ಯರಿಗೂ ನಮಗೂ ಆದರೂ, ಅದನ್ನೆಲ್ಲಾ ಮರೆತು ಎಲ್ಲಿಗೆ ಹೋಗುವದಿದ್ದರೂ, ಮಂಗಳೂರಿನಿಂದ ಬಾಳೆ ಎಲೆ, ಸಾಮಾನು, ಇತರ ವಸ್ತುಗಳನ್ನು ತರುವುದಿದ್ದರೂ "ರಮಾನಂದ ಬಾ" ಅಂತ ನನ್ನದೇ ಕಾರಿನಲ್ಲಿ ಹೋಗುವುದು ಮತ್ತು ವಸ್ತುಗಳನ್ನು ತರಿಸುವುದು ಅವರ ಪ್ರೀತಿಗೆ ಸಾಕ್ಷ್ಯವಾಗಿತ್ತು. 1982ರ ಕಾಲದಲ್ಲಿ ಮಂಗಳೂರಿಗೆ ಗ್ಯಾಸ್ ಬಂದುದರ ಹೊಸತು. ನಾನೂ ಕೂಡಾ ಮಂಗಳೂರಿನಿಂದಲೇ ಗ್ಯಾಸ ತರಬೇಕಿತ್ತು. ಆಗ ಆಚಾರ್ಯರು ನನಗೂ ಒಂದು ಸಿಲಿಂಡರ್ ತರಿಸು ಎಂದು ಹೇಳಿ, ಮುಂದೆ ಗ್ಯಾಸ್ ಮುಗಿದಾಗಲೂ ನನ್ನ ಕಾರಿನಲ್ಲೇ ಅವರ ಮನೆಗೆ ಗ್ಯಾಸ್ ಸಿಲಿಂಡರ್ ಬರುತ್ತಿತ್ತು. ಮನೆಯ ಹೊರಗಿನ ಎಲ್ಲಾ ವ್ಯವಹಾರಗಳಿಗೂ ಅವರಿಗೆ ರಮಾನಂದ (ನಾನು) ಒಬ್ಬ ಗಟ್ಟಿ ಜನ. ಅಷ್ಟು ವಿಶ್ವಾಸ - ನಂಬುಗೆ. ಮನೆಯ ಒಳಗಿನ ಸಮಾರಂಭದ ಕಾರ್ಯಗಳಿಗೆ ಕೋಟೆಕಾರು ವಾದಿರಾಜ ರಾವ್ (ಶ್ರೀಕಾಂತನ ತಂದೆ) ನಂಬಿಗಸ್ಥ. ಅಡುಗೆ - ಊಟ, ಹೆಚ್ಚು ಕಡಿಮೆ ಆಗುವುದಕ್ಕೆಲ್ಲ ಅವರನ್ನೇ ಕೇಳುತ್ತಿದ್ದರು.

ಯಾವುದೇ ಚಿಕ್ಕ ದೊಡ್ಡ ಸಮಾರಂಭವಿರಲಿ - 2ನೇ ಪಂಕ್ತಿ ಊಟ ಆದ ನಂತರ ಇಸ್ಪೀಟ್ ಆಟ ಆಡಲೇಬೇಕು. ಆ ಕೂಟದ ಅಜೀವ ಸದಸ್ಯರು ಹಿಟ್ಲರ್ ಆಚಾರ್, ಅವರ ತಮ್ಮ ನಾರಾಯಣ ಆಚಾರ್, ನಾನು, ಅಚ್ಚುತ ರಾವ್, ಗೋಪಾಲ ರಾವ್, ಸೀತಾರಾಮಾಚಾರ್. ಸೀತಾರಾಮ ಆಚಾರ್ ಬರದಿದ್ದಲ್ಲಿ ಹರಿನಿವಾಸದ ನಾರಾಯಣ ರಾವ್. ಇದು ಇಸ್ಪೀಟ್ ಜೋಡಿಕೂಟ. ಆಟ - ಇಸ್ಪೀಟ್ 112. ಇದು ದುಡ್ಡಿಗಾಗಿ ಆಡುವ ಆಟವಲ್ಲ - ಖುಷಿಗಾಗಿ, ಸಂತೋಷಕ್ಕಾಗಿ ಆಡುವ ಆಟ. ಅವರ ಮನೆಯಲ್ಲಿ ದೊಡ್ಡ ಸಮಾರಂಭಗಳಿದ್ದರೆ, ಆ ರಾತ್ರಿ ಇಡೀ ಇಸ್ಪೀಟ್ ಆಟ. ಪಾಠದ ಜೊತೆಗೆ ಆಟ ಇದ್ದ ಹಾಗೆ ಊಟದ ಜೊತೆಗೆ ಇಸ್ಪೀಟ್ - ಇದು ಹಿಟ್ಲರ್ ಆಚಾರ್ ಮನೆಯಲ್ಲಿ ಮಾತ್ರ ಸಾಧ್ಯ. ಇಂತಹ ಶಿಸ್ತಿನ, ನಿಯಮ ಪ್ರಕಾರ ನಡೆಯುವ, ಪೈಸೆ ಪೈಸೆಗೂ ಲೆಕ್ಕ ಇಡುವ, ಬಡವರ ಹತ್ತಿರ ಹಣ ಕೇಳದೆ ನಿನ್ನ ಹತ್ರ ಎಷ್ಟು ಹಣ ಉಂಟು ? (ನಿನಡ ಏತು ಉಂಡ್) ಅಂತ ಕೇಳಿ, ಯಾವುದೇ ಕಾರ್ಯಕ್ರಮವನ್ನು ಮೊಟಕುಗೊಳಿಸದೆ,



ಭಂಗ ತರದೆ ತನ್ನದೇ ದರ್ಬಾರಿನಲ್ಲಿ "ಸಮಾಜಕ್ಕೂ ಇಷ್ಟು" ಅಂತ ಸೇವೆ ಸಲ್ಲಿಸಿದ ಮಹನೀಯರು ಇವರು.

ನನ್ನ ಮಾವ ದಾಸಪ್ಪ ಆಚಾರ್ಯರಿಗೆ ಗ್ಯಾಂಗ್ರಿನ್ ಆಗಿ ತೀರಿಕೊಂಡ ಸಂದರ್ಭದಲ್ಲಿ ಅವರನ್ನು ಎಲ್ಲಿ ದಹನ ಮಾಡುವುದೆಂದು ಯೋಚಿಸುತ್ತಿರುವಾಗ (ಮನೆಯಲ್ಲಿರುವ ಶ್ರೀಧರ ಆಚಾರ್ಯರಿಗೂ – ದಾಸಪ್ಪ ಆಚಾರ್ಯರಿಗೂ ವೈಮನಸ್ಸು ಇತ್ತು), ವೆಂಕಟಕೃಷ್ಣ ಆಚಾರ್ಯರು ಗಟ್ಟಿ ಮನಸ್ಸು ಮಾಡಿ ಶವ ಬರುವ ಸಮಯದಲ್ಲಿ ಮಾರ್ಗದ ಬದಿಯಲ್ಲಿ ನಿಂತು ತನ್ನ ಮನೆಯ ಜಾಗದಲ್ಲೇ ದಹನ ಆಗಬೇಕೆಂದು ಹೇಳಿ, ನಂತರದ ಕ್ರಿಯೆಗಳಿಗೆ ಗೋಕರ್ಣಕ್ಕೆ ಹೋಗುವುದು ಎಂದು ಹೇಳಿದಾಗ ಅದಕ್ಕೂ ಬಿಡದೆ ತನ್ನ ಮನೆಯಲ್ಲೇ ಯಾರದೇ ವಿರೋಧವಿದ್ದರೂ – ನಡೆಸಿದ ಸದ್‌ಭಾತೃ ಇವರು. ದಾಸಪ್ಪ ಆಚಾರ್ (ನನ್ನ ಹೆಂಡತಿಯ ತಂದೆ – ನನಗೆ ಮಾವ) ಅವರು ಮೈಸೂರಿನಲ್ಲಿ ಹೋಟೇಲ್ ಉದ್ಯಮಿ. ದೊಡ್ಡ ಹೆಸರು ಮಾಡಿದವರು. ಮಕ್ಕಳೂ ಅದೇ ರೀತಿಯಲ್ಲಿ ಬೆಳೆದವರು. ಅವರಿಗೆ ಈ ತೀರಿಕೊಂಡ ಸಮಯದಲ್ಲಿ – ಸಾಮಾನ್ಯವಾಗಿ ದಿನಾಲೂ ಬೆಳಗ್ಗೆ – ಸಂಜೆ ಉಪ್ಪಿಟ್ಟು ಅವಲಕ್ಕಿ ಮಾಡುವುದು – ಇದನ್ನು ಪರಿಗಣಿಸದೆ, ಅಡುಗೆ ಭಟ್ಟರಾದ ಕೇಶವ ಮಯ್ಯರ ಹತ್ತಿರ "ಮಕ್ಕಳಿಗೆ ಉಪ್ಪಿಟ್ಟು ಅವಲಕ್ಕಿ ತಿಂದು ಗೊತ್ತಿಲ್ಲ. ಹೊತ್ತು ಹೊತ್ತಿಗೆ ಬೇರೆ ಬೇರೆ ತಿಂಡಿ ಮಾಡು" ಎಂದು ತಾಕೀತು ಮಾಡಿ ಹೊಟ್ಟೆಗೂ – ಜುಟ್ಟಿಗೂ ಸಂಬಂಧವಿಲ್ಲ ಎಂದು ಮಾಡಿ ತೋರಿಸಿದವರು ಆಚಾರ್ಯರು.

ಶಿಸ್ತು, ನಿಯಮ, ನಿಷ್ಠೆ ಇವುಗಳಿಗೆ ಹಿಟ್ಲರ್‌ರದ್ದೇ ವ್ಯಾಖ್ಯಾನ – ಜೀವನಕ್ಕೊಂದು ಶಿಸ್ತು ಬೇಕು, ಶಿಸ್ತಿಗೊಂದು ನಿಯಮ ಬೇಕು, ನಿಯಮಕ್ಕೊಂದು ನಿಷ್ಠೆ ಬೇಕು. ಈ ಮೂರೂ ವಿಷಯಗಳು ಒಂದಕ್ಕೊಂದು ಹೊಂದಿಕೊಂಡರೆ ಜೀವನ ಸರಾಗ – ನೆಮ್ಮದಿಯ ಸಂಸಾರ. ಇದು ಹಿಟ್ಲರ್ ಆಚಾರ್ಯರ ತತ್ವ – ನಾನು ಕಂಡ ಹಾಗೆ.

ಇಸ್ಪೀಟ್ ಆಟಕ್ಕೆ ನಮ್ಮಲ್ಲಿ ಆ ಕಾಲದಲ್ಲಿ ಸಿಗುತ್ತಿದ್ದುದು ಪೇಪರ್ ಎಲೆ. ಅದಕ್ಕಾಗಿ ಆಚಾರ್ಯರು ತನ್ನ ತಮ್ಮ ಜಿತೇಂದ್ರಿಯ ಆಚಾರ್ಯರ ಮಗಳು ನೀರದಾ ಮಸ್ಕತ್ ಇದ್ದಳು – ಅವಳಿಂದ 4 ಪ್ಯಾಕ್ ಪ್ಲಾಸ್ಟಿಕ್ ಕೋಟೆಡ್ ಇಸ್ಪೀಟನ್ನು ತರಿಸಿದ್ದರು. ಅವರ ಉತ್ತರ ಕ್ರಿಯೆಯ ಸಂದರ್ಭದಲ್ಲಿ ಅದನ್ನು ನನಗೆ ದಾನವಾಗಿ ಕೊಟ್ಟರು.

ಹಿಟ್ಲರ್‌ರ ಹಳೆಯ ಮನೆಯನ್ನು ನೆನಪಿಸಿಕೊಳ್ಳಿ. ಪಡುಬದಿಯ ಜಗಲಿಯಲ್ಲಿ ಒಂದು ಬೆಂಚು. ಆ ಬೆಂಚಿನಲ್ಲಿ ಅವರು ಕುಳಿತರಾದರೆ, ಅದರ ಅಕ್ಕಪಕ್ಕದಲ್ಲಿ ಯಾರೂ ಕುಳಿತುಕೊಳ್ಳುತ್ತಿರಲಿಲ್ಲ. ಯಾರೇ ತಮ್ಮಂದಿರರಾದರೂ ಕೆಳಗೆ ಜಗಲಿಯಲ್ಲೇ ಕುಳಿತುಕೊಳ್ಳುತ್ತಿದ್ದರು. ಅವರ ಪ್ರಕಾರ ಅದು ಯಜಮಾನನ ಸ್ಥಾನ. ಅಲ್ಲಿ ಯಜಮಾನ ಮಾತ್ರ ಕುಳಿತುಕೊಳ್ಳಬೇಕು.

ಕೃಷಿ ಅವರ ವೃತ್ತಿ, ಪೌರೋಹಿತ್ಯ ಅವರ ಪ್ರವೃತ್ತಿ. ಅವರ ತಂದೆ ವಾದಿರಾಜಯ್ಯನವರು ಮಲಬಾರಿನಿಂದ ಹೊಸಬೆಟ್ಟಿಗೆ ಬಂದು ಹತ್ವಾರ್ ನಾಗಪ್ಪಯ್ಯರಿಂದ ಸಣ್ಣ ಜಾಗವನ್ನು ತೆಗೆದುಕೊಂಡು ನಂತರ ಅಕ್ಕಪಕ್ಕದ ಜಾಗಗಳನ್ನು ನಿಧಾನವಾಗಿ ಖರೀದಿಸುತ್ತಾ ಬಂದರು. ಮಲಬಾರಿನ ಹಿರಿಯರ ಜಾಗದಲ್ಲಿ ಆಚಾರ್ಯರ ತಮ್ಮ ಶ್ರೀನಿವಾಸ ಆಚಾರ್ಯ ವಾಸಿಸುತ್ತಿದ್ದಾರೆ. ಉಳಿದವರೆಲ್ಲರೂ ಇಲ್ಲಿಗೆ ಬಂದು ಹಿಟ್ಲರ್ ಜೊತೆ ಕೈಜೋಡಿಸಿ ಕೃಷಿ, ಪೌರೋಹಿತ್ಯದೊಂದಿಗೆ ಹೋಟೆಲ್ ಉದ್ಯಮ, ಇತರ ವ್ಯವಹಾರಕ್ಕೂ ತೊಡಗಿಸಿಕೊಂಡರು.

ವೆಂಕಟಕೃಷ್ಣ ಆಚಾರ್ಯರ ಪೌರೋಹಿತ್ಯದ ವಿಶೇಷತೆ ಏನೆಂದರೆ – ವೈದಿಕ ಕಾರ್ಯಭಾಗ ಲೋಪ ಆಗಬಾರದು. ಆದರೆ ಅದೇ ದೊಡ್ಡ ವಿಷಯವಾಗಬಾರದು. ಕಡಿಮೆ ಖರ್ಚಿನಲ್ಲಿ ಪೂರ್ಣತೆ ಕಾಣಬೇಕು. ಜೊತೆಗೆ ಸಮಯಕ್ಕೆ ಸರಿಯಾಗಿ ಊಟೋಪಚಾರ. ಮಧ್ಯಾಹ್ನ 12 ಗಂಟೆಗೆ ಊಟಕ್ಕೆ ಎಲೆ ಕೊಡಬೇಕು. ಅಷ್ಟರೊಳಗೆ ಅಡುಗೆ ತಯಾರಾಗಬೇಕು. ಪೌರೋಹಿತ್ಯದ ಮಧ್ಯೆ ಅವರು ಅಡುಗೆ ಮನೆಗೆ ಆಗಾಗ ಬಂದು ಇಣುಕಿ ಹೇಗೆ

ತಯಾರಿ ನಡೆಯುತ್ತಿದೆ? ಎಲ್ಲಾ ವಸ್ತುಗಳು ಸಾಕಾಗುತ್ತವೆಯೇ? 12 ಗಂಟೆಗೆ ಊಟ ಪ್ರಾರಂಭಿಸಬಹುದೇ ಎಂದು ಕೇಳಿ ಹೋಗುತ್ತಿದ್ದರು. ಒಮ್ಮೆ ತಣ್ಣೀರುಬಾವಿಯ ಚಾತ್ರ ಮನೆಯಲ್ಲಿ ಇವರ ಪೌರೋಹಿತ್ಯದ ಕಾರ್ಯಕ್ರಮ. ಪೌರೋಹಿತ್ಯ ಮುಗಿದರೂ ಅಡುಗೆಯವರು ಕಾಣುವುದಿಲ್ಲ. ಆಗ ತಾವೇ ಅಡುಗೆಗೆ ಉಪ್ಪು – ಹುಳಿ ಹಾಕಿ ಸಕಾಲದಲ್ಲಿ ಭೋಜನ ಸಿದ್ಧಪಡಿಸಿದರಂತೆ. ಅದಕ್ಕಾಗಿ ಇವರಿಗೆ "ಹಿಟ್ಲರ್" ಪದವಿ ಬಂತೆಂದು ನಾನು ಊಹಿಸಿದ್ದೆ.

ಮನೆಯ ಒಳವಾರ್ತೆ, ಹೊರವಾರ್ತೆಗೆ (ಅಂದರೆ ದಿನನಿತ್ಯದ ಕೆಲಸಗಳಿಗೆ) ಕೆಲಸಗಳನ್ನು ವಿಭಜಿಸಿ ಅವರವರ ಕರ್ತವ್ಯಗಳನ್ನು ಹಂಚುತ್ತಿದ್ದರು. ಬೆಳಗ್ಗೆ ಎದ್ದಾಗಿನಿಂದ ಮನೆ ಗುಡಿಸಿ, ತುಳಸಿಗೆ ದೀಪ ಹಚ್ಚುವುದರಿಂದ – ಬಚ್ಚಲಿಗೆ ಬೆಂಕಿ ಹಾಕುವುದರಿಂದ – ಬೆಳಗ್ಗಿನ ಉಪಾಹಾರದಿಂದ (ದೊಡ್ಡವರಿಗೆ ಮಾತ್ರ ತಿಂಡಿ, ಸಣ್ಣವರಿಗೆ ಮತ್ತು ಹೆಂಗಸರಿಗೆ ಗಂಜಿ) ಬಟ್ಟೆ ತೊಳೆಯುವುದು, ಮನೆ ಶುಭ್ರವಾಗಿರಿಸುವುದು, ತೋಟದಿಂದ ತರಗೆಲೆ ತರುವುದು, ಕಟ್ಟಿಗೆ ಒಟ್ಟು ಮಾಡುವುದು, ಮಧ್ಯಾಹ್ನ ಊಟ ತಯಾರಿ, ನಂತರ ಅಂಗಡಿ ಸಾಮಾನುಗಳನ್ನು ಶುದ್ಧೀಕರಿಸುವುದು, ಗದ್ದೆಯ ಕೆಲಸಕ್ಕೆ ಒತ್ತು ಕೊಡುವುದು, ಊರಿನಲ್ಲಿ ನಡೆಯುವ ಸಮಾಜ ಬಾಂಧವರ ಮನೆಯ ಕಾರ್ಯಕ್ರಮಗಳಿಗೆ ಯಾರಾರು ಯಾರಾರು ಹೋಗುವುದು? – ಹೀಗೆ ಆ ದಿನದಲ್ಲಿ ಆ ಮಂದಿಯವರಿಗೆ (ಒಟ್ಟು 27–30 ಮಂದಿಯಿದ್ದರು) ಘಳಿಗೆ ಘಳಿಗೆಯ ಕೆಲಸವನ್ನು ಇವರೇ ನಿಗದಿ ಮಾಡುತ್ತಿದ್ದರು. ಊಟದ ಮನೆಯಲ್ಲಿ ದೊರೆತ ದಕ್ಷಿಣೆಯನ್ನು ಪ್ರತಿಯೊಬ್ಬರೂ ಇವರ ಹತ್ತಿರ ತಂದುಕೊಡತಕ್ಕದ್ದು. ಅಲ್ಲಿ ಹಿಡಿದ ಭಕ್ಷ್ಯವನ್ನು ಎಲ್ಲರೂ ಸಮಾನವಾಗಿ ಹಂಚಿ ತಿನ್ನತಕ್ಕದ್ದು. ಇದು ಅವರ ಆದೇಶ. ಬಂದಂತಹ ಈ ದಕ್ಷಿಣೆಯನ್ನು ಆಚಾರ್ಯರು ಒಂದು ಪುಸ್ತಕದಲ್ಲಿ ಮಲೆಯಾಳಿ ಲಿಪಿಯಲ್ಲಿ ಬರೆದಿಡುತ್ತಿದ್ದರು. ಇದು ಎಲ್ಲರ ಸಂಪಾದನೆ. ಅದನ್ನು ದೀಪಾವಳಿ ಸಮಯದಲ್ಲಿ ಬಟ್ಟೆ ತರಲು, ಮನೆಯಲ್ಲಿ ನಡೆಯುವ ಸಮಾರಂಭದ ಖರ್ಚಿಗೆ ಉಪಯೋಗಿಸುತ್ತಿದ್ದರು. ಅಂದರೆ ವ್ಯವಹಾರ ಕುಶಲತೆಯಲ್ಲಿ ನಿಷ್ಕಲ್ಮತೆಯನ್ನು ಮೆರೆಯುತ್ತಿದ್ದರು.

ಯಾರಾದರೂ ನೆಂಟರಿಷ್ಟರು ಮನೆಗೆ ಬರುತ್ತಿದ್ದಂತೆಯೇ ಹೋಳ್ಳ್..... ಎಂಬ ದೀರ್ಘ ನಗುವನ್ನು ಬಿತ್ತರಿಸಿ ರಾಮಚಂದ್ರ (ವ್ಯಕ್ತಿಯ ಹೆಸರು) ಬಾ, ಬಾ ಅಂತ ಕರೆಯುವ ರೀತಿ ವಿಶಿಷ್ಟವಾದದ್ದು.



ಬೆಳಗ್ಗೆ ಮತ್ತು ರಾತ್ರಿ ಮನೆ ದೇವರ ಪೂಜಾ ಸಂದರ್ಭದಲ್ಲಿ ನೈವೇದ್ಯವನ್ನು ಅವರೇ ಮಾಡುವುದು. ಪ್ರಸನ್ನ ಪೂಜೆಯ ಕಾಲಕ್ಕೆ ಅವರು ದೇವರ ಘಂಟಾಮಣಿ ಅಲ್ಲಾಡಿಸಿದ ತಕ್ಷಣ ಮನೆಯವರೆಲ್ಲರೂ ತಪ್ಪದೆ ಪೂಜೆಗೆ ಹಾಜರಿರಬೇಕು (ತಕ್ಕದ್ದು). ಪ್ರತಿಯೊಬ್ಬರೂ ಪೂಜೆಯಲ್ಲಿ ಭಾಗಿಯಾಗಿ ಆರತಿ ತೆಗೆದುಕೊಂಡು (ಮೊದಲಿಗೆ ದೊಡ್ಡವರಿಂದ ಸಣ್ಣವರವರೆಗೆ) ನಂತರ ತೀರ್ಥ ಪ್ರಸಾದ ಅವರಿಂದ ಪಡಕೊಂಡು ಅವರವರ ಕೆಲಸಕ್ಕೆ ಹೋಗಬೇಕಷ್ಟೆ. ಸಂಜೆಯ ಭಜನೆಯಲ್ಲಿ ಎಲ್ಲರೂ ಭಾಗವಹಿಸಬೇಕು. ಅದು ಒಂಥರಾ ಕಟ್ಟುನಿಟ್ಟು. ಇದಕ್ಕೆ ಅವರು "ಇದು ನಮ್ಮ ಮನೆಯ ಸಂಪ್ರದಾಯ".

ಮನೆಗೆ ಯಾರೇ ನೆಂಟರು – ಇಷ್ಟರು ಬರಲಿ, ತನಗಿಂತ ದೊಡ್ಡವರಾದರೆ ಎಲ್ಲರೂ ಅವರಿಗೆ ನಮಸ್ಕರಿಸಲೇ ಬೇಕು. ಹೋಗುವಾಗಲೂ ಅವರಿಗೆ ನಮಸ್ಕರಿಸಲೇ ಬೇಕು. ಇದಕ್ಕೆ ಒಪ್ಪದವರನ್ನು, ಪೂಜೆಯಲ್ಲಿ ಭಾಗಿಯಾಗದವರನ್ನು ಅವರು ಹಿಗ್ಗಾಮುಗ್ಗಾ ಬೈದು – ಸರಿದಾರಿಗೆ ತರುತ್ತಿದ್ದರು. ಆದರೆ ಒಂದು ಮಾತು. ತನ್ನ ಹೆಂಡತಿ ಕಮಲ ಮತ್ತು ತಂಗಿ ವಾಗ್ದೇವಿಗೆ ಅವರು ಎಂದೂ ಬೈದದ್ದಿಲ್ಲ. ಅವರು ಹಾಗೆ ಮಾಡುತ್ತಲೂ ಇರಲಿಲ್ಲವೆಂಬುದೇ ವಿಶೇಷಾಶ್ಚರ್ಯ!!

ದಾಸ ಮಾವನ (ನಾಗವೇಣಿಯ ತಂದೆ) ಬೊಜ್ಜದ ಸಂದರ್ಭದಲ್ಲಿ ಇಡೀ ಅಂಗಳಕ್ಕೆ ಕಲ್ಲುಕಂಬ ತಂದು ಮಕ್ಕಳ ಹತ್ತಿರ ಹೊಂಡ ಮಾಡಿಸಿ ನೆಟ್ಟದ್ದು – ಅದರಿಂದ ಕೃಪಾಕರ ಮತ್ತು ಮಕ್ಕಳ ತಂಡಕ್ಕೆ 'ತಂಡೇಲ' ಬಿರುದು ಕೊಟ್ಟದ್ದು, ಹೆಣ್ಣು ಮಕ್ಕಳಿಂದ ಚೌಕಾಬಾರ, ಚದುರಂಗ ಪಗಡಿ ಆಟವಾಡಿ ಸುತ್ತಿದ್ದುದು, ಮಕ್ಕಳಿಗೂ ಇಸ್ಪೀಟ್ ಆಟ ಕಲಿಸುತ್ತಿದ್ದುದು, ದೇವರ ನಾಮ – ಸಂಕೀರ್ತನೆ ಗಳನ್ನು ಹೇಳಿ ಕೊಡಿಸುತ್ತಿದ್ದುದನ್ನು ನಾವೆಂದೂ ಮರೆಯುವುದಿಲ್ಲ.

ಜೊತೆಗೆ ನೆಂಟರ ಕಡೆಯ (ಹಂದಿಗೋಡಿನ ಕೆಲವು ಮಂದಿ) ಕೆಲವು ಹುಡುಗರು, ಊರಿನ ಕೆಲವು ಹುಡುಗರು ಆಚಾರ್ಯರ ಮನೆಯಲ್ಲೇ ಇದ್ದುಕೊಂಡು ಶಾಲೆಗೆ ಹೋಗುತ್ತಿದ್ದರು. ಅಂದರೆ, ಸಂಬಂಧಿಕರೋ, ಇಷ್ಟದವರೋ, ಪರವೂರಿನವರೋ ಯಾರೇ ಆಗಲಿ ಬಂದು ಆಚಾರ್ಯರೇ ನಮಗೆ ನಿಮ್ಮಿಂದ ಇಂತಹ ಉಪಕಾರ ಆಗಬೇಕಿತ್ತು ಎಂದು ಹೇಳುವುದೇ ತಡ – ಜೈ ಎಂಬುದೇ ಇವರ ಉತ್ತರ. ನಕಾರಕ್ಕೆ ಅವಕಾಶವೇ ಇಲ್ಲ. ಅಂತಹ ಪರೋಪಕಾರದ ಗುಣ ವೆಂಕಟಕೃಷ್ಣ ಆಚಾರ್ಯ ರಲ್ಲಿತ್ತು. ಅವರಿಂದ ಯಾವ ಪ್ರತಿಫಲಾಪೇಕ್ಷೆಯೂ ಇವರಲ್ಲಿಲ್ಲವಾಗಿತ್ತು.

ಮನೆ ನಡೆಸುವ ಜವಾಬ್ದಾರಿಯನ್ನು ಆಚಾರ್ಯರಿಂದ ನಾವು ಕಲಿಯಬೇಕು. ದಿನ ಬೆಳಗ್ಗಿನ ತಿಂಡಿ ಏನು? ಮಧ್ಯಾಹ್ನದ ಪದಾರ್ಥಕ್ಕೇನು? ಆ ದಿನದ ಪ್ರತಿಯೊಬ್ಬರ ಕೆಲಸ ಕಾರ್ಯಗಳೇನು? ಸಂಜೆಯೊಳಗೆ ಏನೇನು ಆಗಬೇಕು ಎಂಬುದನ್ನು ನಿಖರವಾಗಿ ಹೇಳಿ ಅದರ ಮೇಲುಸ್ತುವಾರಿ ಮಾಡುತ್ತಿದ್ದರು. "ದುಡಿದು ತಿನ್ನಿ, ಯಾರಿಗೂ ಮೋಸ ಮಾಡಬೇಡಿ" ಎಂಬುದು ಅವರ ತತ್ವವಾಗಿತ್ತು.



ಅವರ ಯೋಚನಾ ಲಹರಿಗೆ ಇತಿಮಿತಿ ಇರಲಿಲ್ಲ. ತಾನು ಹೇಳಿದ್ದು – ತಾನು ಮಾಡಿದ್ದು ಎಂಬ ಹಿಟ್ಲರ್ ನೀತಿ ಅವರಿಗೆ ಹೇಗೋ ಚಿಕ್ಕಂದಿನಿಂದಲೇ ಒಗ್ಗಿಕೊಂಡಿತ್ತು. ಹಾಗಂತ ಯಾರಿಗೂ ನೋವು ಉಂಟು ಮಾಡುವ ಕೆಲಸ ಮಾಡುತ್ತಿರಲಿಲ್ಲ. ಇಸ್ಪೀಟ್ ಆಟದಲ್ಲಿ ಯಾರಾದರೂ ತಪ್ಪಾಟವಾಡಿ ಆಟ ಹಾಳು ಮಾಡಿದಲ್ಲಿ ತನಗೆ ಬಂದ ಕೋಪವನ್ನು ಸೀದಾ ಗದ್ದೆಹುಣಿಗೆ ಹೋಗಿ ಬಿಟ್ಟು ಬರುತ್ತಿದ್ದರು. ನಾರಾಯಣ ಆಚಾರ್ಯರೂ ಕೂಡಾ ಹೀಗೆ ಮಾಡುತ್ತಿದ್ದರು.

ಒಂದು ಮದುವೆಯಲ್ಲಿ ಹುಡುಗಿ ಕಡೆಯವರು ಯಾಕೋ ಮದುವೆ ಮುರಿದಾಗ (ಆ ಹುಡುಗಿ ಹೆಸರು ಅರುಂಧತಿ) ಆ ಹುಡುಗನಿಗೆ ಬೇರೆ

ಹುಡುಗಿಯನ್ನು ನಾಲ್ಕು ದಿನದೊಳಗೆ ಗೊತ್ತು ಮಾಡಿ ವಸಂತಿ ಎಂದು ಹೆಸರು ಬದಲಿಸಿ ಮದುವೆ ಮಾಡಿಸಿದರು. ಅವರ ಮದುವೆಯ ಕ್ರಮ ಹೇಗಿತ್ತೆಂದರೆ, ಯಾವುದೋ ಊರ ಸಮಾರಂಭದಲ್ಲಿ, ನೆಂಟರಲ್ಲಿ ವರ – ವಧುಗಳಿದ್ದಲ್ಲಿ ಇವರೇ ಅವರ ಪ್ರಾಯ ಲೆಕ್ಕ ಹಾಕಿ ತಾಳೆ ಮಾಡಿ, ತಾನೇ ಅವರ ಮನೆಗಳಿಗೆ ಹೋಗಿ ನೋಡಿ ನಿಮ್ಮ ಮಗ/ಮಗಳು ಇಂತಹ ಹುಡುಗ/ಹುಡುಗಿಗೆ ಸರಿಯಾದ ಜೋಡಿಯಾಗುತ್ತದೆ. "ಕಾಯಬೇಡಿ, ಮುಂದುವರಿಸಿ ದೇವರಿದ್ದಾನೆ" ಎಂದು ಹೇಳಿ ಪುಸಲಾಯಿಸಿ, ಅದ್ಯಾವ ಚಾಣಾಕ್ಷ್ಯದಿಂದಲೋ ಏನೋ ಮದುವೆ ನಡೆಸಿಬಿಡುತ್ತಿದ್ದರು. ಅವರ ಈ ಪುಣ್ಯ ಕಾರ್ಯ 99% ಸಕ್ಸೆಸ್. ಕೆಲವೊಂದು ಮದುವೆ ಮುಂಜಿಗಳನ್ನು ತನ್ನ ಮನೆಯಲ್ಲೆ, ತನ್ನದೇ ದರ್ಬಾರಿನಲ್ಲಿ, ತನ್ನದೇ ಖರ್ಚಿನಲ್ಲಿ ನಡೆಸಿದ್ದಿದೆ. ಒಟ್ಟಾರೆ ತನ್ನಿಂದ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬುದೇ ಇವರ ಮನದಾಳವಾಗಿತ್ತು. ಆ ಕಾಲಕ್ಕೆ ಕುಂದಾಪುರಕ್ಕೆ, ಘಟ್ಟಕ್ಕೆ (ಅಂದರೆ ಶೃಂಗೇರಿ, ತೀರ್ಥಹಳ್ಳಿ ಕಡೆ) ಹುಡುಗಿ ಕೊಡುತ್ತಿರಲಿಲ್ಲ. ಆ ಕ್ರಮವನ್ನು ಮುರಿದು ತನ್ನ ಮಗಳನ್ನೇ ತೀರ್ಥಹಳ್ಳಿ ಕಡೆಗೆ ಕೊಟ್ಟು ಮದುವೆ ಮಾಡಿದರು.

ಹಿಂದಿನ ಕಾಲದಲ್ಲಿ ಮನೆಗೆ ನೆಂಟರು ಬಂದಲ್ಲಿ ವಿಶೇಷ ತಿಂಡಿ ಎಂದರೆ ಪತ್ರೊಡೆ, ಶ್ಯಾಮಿಗೆ, ಪಾಯಸ ಮಾಡುವುದು. ಆಚಾರ್ಯ ಮನೆಯಲ್ಲಿ ಮೊದಲೇ 25–30 ಜನ. ಅದರ ಮೇಲೆ ನೆಂಟರು – ಇಷ್ಟರು ಬಂದರೆ, ಅವರೆಲ್ಲ ಸೇರಿ 40–45 ಜನ. ಅವರಿಗೆಲ್ಲ ಈ ತಿಂಡಿ ತೀರ್ಥಗಳು ಎಷ್ಟೆಲ್ಲಾ ಆಗಬೇಡ !! ಅದರ ಜವಾಬ್ದಾರಿ ನಾರಾಯಣ ಆಚಾರ್ಯರಿಗೆ. ಶ್ಯಾಮಿಗೆ ಆದರೆ ಒತ್ತುವ ಕೆಲಸ ನಾರಾಯಣ ಆಚಾರ್ಯರಿಗೆ. ಅದೂ ಆ ಕಾಲದಲ್ಲಿ ಶ್ಯಾಮಿಗೆ ಮಣೆ ಮರದ್ದು. ಅದನ್ನು ಹಾರಿ ಹಾರಿ ಒತ್ತಬೇಕು. ಹಿಟ್ಟಿನ ಉಂಡೆ ಬಿಸಿ ಬಿಸಿ ಇರುವಾಗಲೇ ಒತ್ತಬೇಕು. ನಾರಾಯಣ ಆಚಾರ್ಯರು ಹಾಕಿ ಹಾಕಿ ಎಂದು ಹೇಳುವುದು – ಹೆಂಗಸರು ಆಯ್, ಆಯ್, ಬಿಸಿ ಬಿಸಿ ಅಂತ ಹಿಟ್ಟಿನ ಉಂಡೆ ಶ್ಯಾಮಿಗೆ ಮಣೆಗೆ ಹಾಕುವುದು – ಅದನ್ನು ನಾರಾಯಣ ಆಚಾರ್ಯರು ಹಾರಿ ಹಾರಿ ಒತ್ತುವುದು



– ಈ ದೃಶ್ಯ ನೋಡಲು ತುಂಬಾ ಚೆನ್ನಾಗಿರುತ್ತಿತ್ತು.

ಹಾಗೆಯೇ ಅಷ್ಟಮಿಗೆ ಚಕ್ಕುಲಿ ಉಂಡೆ ಕೂಡಾ ರಾಶಿ ರಾಶಿ ಆಗಬೇಕು. ಮನೆ ಮಂದಿಗೆ ತಿನ್ನಲೂಬೇಕು – ಊರವರಿಗೆ ಕೆಲಸದವರಿಗೆ ಹಂಚಲೂ ಬೇಕು. ಅಷ್ಟನ್ನೂ ಲೆಕ್ಕ ಪ್ರಕಾರ ತಯಾರು ಮಾಡಲು 'ಹಿಟ್ಲರ್' ಹೇಳುತ್ತಿದ್ದರು.

ಒಟ್ಟಿನಲ್ಲಿ ಇದ್ದುದರಲ್ಲಿ ಚೆನ್ನಾಗಿ ಬಾಳಿ ಬದುಕುತ್ತಾ, ಪರರಿಗೆ ಸಹಾಯ – ಉದಾರತೆ ತೋರುತ್ತಾ ಕ್ಷಮಯಾಧರಿತ್ರಿಯಾಗಿ, ತನ್ನೊಳಗಿನ ಛಲ, ಶಿಸ್ತು, ನಿಯಮ ನಿಷ್ಠೆಗಳನ್ನು ಬಿಡದೆ ಸಂಸ್ಕಾರದ ಸಂಸಾರವನ್ನು ನಡೆಸುತ್ತಾ ಸಮಾಜಕ್ಕೆ ಆದರ್ಶರಾಗಿ ಬಾಳಿ ಬದುಕಿದವರು ವೆಂಕಟಕೃಷ್ಣ ಆಚಾರ್ಯರು – ಹಿಟ್ಲರ್ ಎಂಬ ಬಿರುದಿಗೆ ತಕ್ಕಂತೆ ನಡೆದು ಕೊಂಡವರು. ಅವರ ನೆನಪೇ ಸವಿ – ಹೆಜ್ಜೇನಿನ ಸವಿಯಂತೆ.

ಶ್ರೀ ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು



ಯಚ್.ಯು. ಅನಂತಯ್ಯ ಉಪ್ಪಚೆ

ಶುಭಶೋಭನ ಕಾರ್ಯಗಳಿರಲಿ, ಔರ್ಧ್ವ ದೈಹಿಕ ಕಾರ್ಯಕ್ರಮಗಳಿರಲಿ, ಸಾಮಾಜಿಕ ಕಾರ್ಯಕ್ರಮಗಳಿರಲಿ, ಪೂಜೆ, ಕಥಾಕ್ರಮಗಳಿರಲಿ ಯಾವುದೇ ಸಾಂಸಾರಿಕ ಕಾರ್ಯಕ್ರಮಗಳಿರಲಿ ಪ್ರತಿಯೊಂದರಲ್ಲಿಯೂ ಫಲಾಪೇಕ್ಷೆಯಿಲ್ಲದೆ, ಶ್ರದ್ಧಾಪೂರ್ವಕವಾಗಿ ಯಾರ ಮನಸ್ಸಿಗೂ ನೋವಾಗದಂತೆ ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ನಡೆಸಿ ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾದ ವ್ಯಕ್ತಿಯೆಂದರೆ ಕಾವಿನಕಲ್ಲು ಶ್ರೀ ವೆಂಕಟಕೃಷ್ಣ ಆಚಾರ್ಯರು ಎಂದರೆ ಅತಿಶಯೋಕ್ತಿ ಯಾಗಲಾರದು.

ಹೊಸಬೆಟ್ಟಿನ ಆಸುಪಾಸಿನ ಗ್ರಾಮಗಳಲ್ಲಿ ಜರಗುವ ಕಾರ್ಯಕ್ರಮಗಳು ನಡೆಯುವುದಿದ್ದರೆ ನಾಲ್ಕು ದಿನ ಮುಂಚಿತವಾಗಿ ಅವರ ಮನೆಗೆ ಹೋಗಿ ಕಾರ್ಯಕ್ರಮದ ರೂಪುರೇಷೆಗಳನ್ನು ತಿಳಿದು, ಅದನ್ನು ಹೇಗೆ ಗುರಿ ಮುಟ್ಟಿಸಬಹುದೆಂಬ ತಂತ್ರವನ್ನು ಮನೆಯ ಯಜಮಾನನಿಗೆ ತಿಳಿಸಿ ಎಷ್ಟು ಬೇಕು, ಎಷ್ಟು ಸಾಕು ಎಂಬ ವಿಚಾರವನ್ನು ವಿವರವಾಗಿ ತಿಳಿಸಿ ತಾನೇ ಮುಂದಾಗಿ ನಿಂತು ಕುಟುಂಬದ ಯಜಮಾನನನಿಗೆ ತೃಪ್ತಿಯಾಗುವಂತೆ, ಬಂದ ಅತಿಥಿ ಅಭ್ಯಾಗತರಿಗೆ ಎಳ್ಳಷ್ಟೂ ನೋವಾಗದಂತೆ ಸಂತೋಷದಿಂದ ನಗುನಗುತ್ತಾ ಓಡಾಡಿಕೊಂಡು ಜನಮೆಚ್ಚುಗೆ ಪಡೆದವರು ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು. ಅವರು ಕಾರ್ಯಕ್ರಮಕ್ಕೆ ಆಗಮಿಸಿದರೆಂದರೆ ಎಲ್ಲರೂ ಅವರ ಮಾತಿಗೆ ಎದುರಾಡದೆ, ಯಾವುದರಲ್ಲಿಯೂ ಕೊರತೆಯಾಗದಂತೆ ನಡೆಸಿಕೊಟ್ಟು ಮನೆಯವರಿಗೆ ಶುಭ ಹಾರೈಸಿ ಹೋಗುವವರು ಆಚಾರ್ಯರು. ಅವರೆಂದರೆ ಎಲ್ಲರಿಗೂ ಅತೀವ ಗೌರವ. ಅವರು ಹೇಳಿದಂತೆ ನಡೆದು ಅವರ ಶಹಬ್ಬಾಸ್‌ಗಿರಿ ಪಡೆಯಲು ಪ್ರತಿಯೊಬ್ಬನೂ ಪ್ರಯತ್ನಿಸುತ್ತಿದ್ದನು. ಇದರಲ್ಲಿ ಯಾರಾದರೂ ತಪ್ಪಿದರೆ ಕೂಡಲೇ ಕರೆದು ತಪ್ಪನ್ನು ತಿದ್ದಿ ಸರಿದಾರಿಗೆ ತರುವುದರಲ್ಲಿ ಅವರದು ಎತ್ತಿದ ಕೈ. ಅವರ ಕಾರುಬಾರಿಗೆ ಎದುರಾಡುವವರು ಯಾರೂ ಇಲ್ಲವೆಂದರೂ ತಪ್ಪಾಗದು.

ಗ್ರಾಮದಲ್ಲಿ ಸ್ವರ್ಗಸ್ಥರಾದರೆ ಅವರು ವಿಚಾರ ತಿಳಿದೊಡನೆ ತನ್ನ ಕೆಲಸಗಳನ್ನೆಲ್ಲಾ ಬದಿಗಿಟ್ಟು ಅಲ್ಲಿನ ಸಂಸ್ಕಾರ ಇತ್ಯಾದಿಗಳಿಗೆ ಏನಾಗಬೇಕು, ಹೇಗೆ ನಡೆಸಬೇಕೆಂದು ವಿಚಾರಿಸಿ, ಧೈರ್ಯ ತುಂಬಿಸಿ ಸದ್ಗತಿಯ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವಲ್ಲಿ ಅವರಿಂದ ಕಲಿತವರು ನಾವು. ಚಿಕ್ಕವರಾಗಿರಲಿ, ದೊಡ್ಡವ ರಾಗಿರಲಿ ಅವರಿಂದ ಆದ ತಪ್ಪುಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳಿ ಸರಿದಾರಿಯನ್ನು ಬೋಧಿಸುತ್ತಿದ್ದರು. ಈ ಕಾರಣದಿಂದಲೇ ಜನರು ಅವರಿಗೆ "ಹಿಟ್ಲರ್" ಆಚಾರ್ಯರೆಂದೇ ಕರೆಯುತ್ತಿದ್ದರು.

ನನ್ನ ಕೆಲವು ಅನಿಸಿಕೆಗಳು / ನೆನಪುಗಳು



ಡಾ। ನರೇಂದ್ರ ಹತ್ವಾರ್ ಹೊಸಬೆಟ್ಟು

ಇದು ಪ್ರಾಯದಲ್ಲಿ ತುಂಬ ಚಿಕ್ಕವನಾಗಿದ್ದರೂ 1970–85 ದಶಕದಲ್ಲಿ ವೆಂಕಟಕೃಷ್ಣ ಆಚಾರ್ಯರೊಂದಿಗೆ ಮತ್ತು ಅವರ ಮನೆಯವರೊಂದಿಗೆ ನಮ್ಮ ಪರಿಚಯ ಮತ್ತು ಒಡನಾಟ ತುಂಬಾ ಇತ್ತು. ಅವರ ಮನೆಯಲ್ಲಿ ಏನು ಕಾರ್ಯಕ್ರಮ ಇದ್ದರೂ ನನಗೆ ಹೇಳಿಕೆ ಇರುತ್ತಿತ್ತು. ಇದಕ್ಕೆ ಕಾರಣ ಬಾಂಧವ್ಯ + ಇಸ್ಪೀಟು ಆಟ. ಅವರ ಮನೆಯಲ್ಲಿ ಅವರ ತಮ್ಮಂದಿರಾದ ಶ್ರೀ ನಾರಾಯಣ ಆಚಾರ್, ಡಾ। ಸೀತಾರಾಮ ಆಚಾರ್ ಹಾಗೂ ನಾರಾಯಣ ಆಚಾರ್ಯರ ಪುತ್ರ ರಾಜಾಚಾರ್ ಅವರೆಲ್ಲರಿಗೂ ಕಾರ್ಡ್ (ಆಗ 4 Pack Cards) ತುಂಬಾ ಪ್ರಿಯ. ನಮ್ಮ ಮನೆಯಲ್ಲಿ ನಾವು ಸಣ್ಣವರಿಂದಲೇ ಆಡುತ್ತಿದ್ದೆವು. ನನ್ನ ತಂದೆಯವರಿಗೂ ಇಷ್ಟ ಇತ್ತು. ನಮ್ಮ ಮನೆಯಲ್ಲಿ ದಾಡ್‌ಫೀಡ್ ಆಡುತ್ತಿದ್ದೆವು. ತಂದೆ ಮತ್ತು ಚಿಕ್ಕಪ್ಪರೊಂದಿಗೆ ಮೊದಮೊದಲು ಇಡ್ಯದ ಅಜ್ಜನೂ ಪ್ರತೀ ಆದಿತ್ಯವಾರ ಬರುತ್ತಿದ್ದರು.

ಆಚಾರ್ಯರ ಮನೆಯಲ್ಲಿ ಮಧ್ಯಾಹ್ನ ಊಟ ಆದಮೇಲೆ ಇಸ್ಪೀಟು ಆಡುತ್ತಿದ್ದೆವು. ಅತಿಕಾರಿ ಮಾವ ಮತ್ತು ಅಚ್ಚುತ ರಾವ್ ಅವರೂ ಬರುತ್ತಿದ್ದರು. ನಾರಾಯಣ ಆಚಾರ್ರ್ ತುಂಬಾ ಬ್ರಿಲಿಯಂಟ್. ಶ್ರೀ ವೆಂಕಟಕೃಷ್ಣ ಆಚಾರ್ ತುಂಬಾ ಚೆನ್ನಾಗಿ ಆಡುತ್ತಿದ್ದರು. ಅವರು ಆಡುವ style / ವೈಖರಿಯೇ ಬೇರೆ. ಅವರಿಗೂ ನಮ್ಮ ಹಾಗೆ ಒಮ್ಮೊಮ್ಮೆ ತಪ್ಪು ಆಗುತ್ತಿತ್ತು. ಆದರೆ ಸಿಟ್ಟು ಮಾಡುತ್ತಿರಲಿಲ್ಲ. ಅವರ ನಗೆಯೇ ಒಂದು style. ಒಮ್ಮೊಮ್ಮೆ ಶ್ರೀ ಶ್ರೀಧರ ಆಚಾರ್ರು ಕೂಡಾ ನಮ್ಮೊಡನೆ ಸೇರುತ್ತಿದ್ದರು. Actually, ಸೀತಾರಾಮ ಆಚಾರ್ ಊರಿಗೆ ಬಂದ ಮೇಲೆ ನಮ್ಮ ಒಡನಾಟ ಹೆಚ್ಚಾಯಿತು. (ಒಮ್ಮೊಮ್ಮೆ ಆಗ ಪ್ರಿನ್ಸಿಪಾಲ್ ಜಿ.ಕೆ. ರಾವ್ ಆಡುತ್ತಿದ್ದರು.) ರಾಜಾಚಾರ್ ತುಮಕೂರಿನಿಂದ ಬಂದಾಗ ಆಡಲಿಕ್ಕೆ ಇತ್ತೇ ಇತ್ತು. ಶ್ರೀಯುತ ದಾಸಪ್ಪಾಚಾರ್ರು ಒಮ್ಮೊಮ್ಮೆ ಆಡುತ್ತಿದ್ದರು.

ಆಚಾರ್ರು ತುಂಬಾ ಸರಳ ಆದರೆ ತುಂಬಾ dynamic. ಅವರು ಕಾರ್ಯಕ್ರಮದ management ನಲ್ಲಿ ತುಂಬಾ ಹುಶಾರು. ಎಲ್ಲಾ ವಿಷಯದಲ್ಲೂ ಅವರಿಗೆ knowledge ಇತ್ತು. ಗ್ರಾಮದ ಕಾರ್ಯಕ್ರಮಗಳಲ್ಲಿ ತುಂಬಾ ಉತ್ಸುಕತೆ. ಅವರಲ್ಲಿ ತುಳಸಿ ಪೂಜೆ ತುಂಬಾ ಗೌಜಿ. ಆಗ ತುಳಸಿ ಪೂಜೆ ಸಂಜೆ 6.00–6.30 ಕ್ಕೆ ಶುರುವಾಗಿ ಬೆಳಗ್ಗೆ 3.30–4.00 ಗಂಟೆಯವರೆಗೆ ನಡೆಯುತ್ತಿತ್ತು. ಪಡ್ಲಾಗಿ ಕಕ್ಕೆಸಾಲಿನಲ್ಲಿ ಶುರುವಾಗಿ ನಾವೆಲ್ಲಾ 10–15 ಮನೆಯವರು ಸೇರಿ ಮಾಡುತ್ತಿದ್ದೆವು. ನಾನು ಊರಿನಲ್ಲಿ ಇರುವವರೆಗೆ–1985ರವರೆಗೆ ಭಾರೀ ಒಗ್ಗಟ್ಟಿನಿಂದ ಇದೇ ರೀತಿ ನಡೆಯುತ್ತಿತ್ತು. ಆಚಾರ್ರ್ ಶುರುವಿನ ಮನೆಯಿಂದ ಕೊನೆಯವರೆಗೂ ಇರುತ್ತಿದ್ದರು. ತುಂಬಾ ಚೆನ್ನಾಗಿ ಗೋವಿಂದ ಭಜನೆ ಹಾಡುತ್ತಿದ್ದರು. ಹಾಗೆಯೇ, ನಮ್ಮ ಗ್ರಾಮಸಂಘದ ವಾರ್ಷಿಕ ಭಜನಾ ಮಂಗಲೋತ್ಸವದಲ್ಲಿ ಸೇರುತ್ತಿದ್ದರು.

ಆಗಿನ ಕಾಲದಲ್ಲಿ ಊರಿನಲ್ಲಿ ನಮ್ಮ ಕುಟುಂಬ ಪರಿವಾರದಲ್ಲಿ ಮದುವೆ ಮುಂಜಿ ಆದಾಗ, ಮೊದಲಿನ ಸಂಜೆ/ರಾತ್ರಿ ಸೇರಿ ಅಲ್ಲಿ ಸುಧಾರಿಕೆ ಮಾಡಿ ಆಮೇಲೆ 2–3 ಗಂಟೆ ಕಾರ್ಡ್ಸ್ ಆಡುವ ಹವ್ಯಾಸ ಇತ್ತು. ಈ ಎಲ್ಲಾ ಕಾರ್ಯಕ್ರಮಕ್ಕೆ ಆಚಾರ್ರು ಬಂದೇ ಬರುತ್ತಿದ್ದರು. ಅಲ್ಲದೆ ಮನೆಯವರೊಂದಿಗೆ ಎಲ್ಲಾ arrangement ಬಗ್ಗೆ ವಿಚಾರಿಸಿ, ಏನಾದರೂ ಕಮ್ಮಿ ಕಂಡರೆ ಸ್ವತಃ arrange ಮಾಡುತ್ತಿದ್ದರು. ಅವರ supervision (ಮದುವೆ ಹಾಲ್ ಮತ್ತು ಅಡುಗೆಯ ಉಸ್ತುವಾರಿ) ನೋಡುವಂತದ್ದು ಪ್ರಶಂಸನೀಯ.

ಆಚಾರ್ರೆಂದರೆ ನನಗೆ ತುಂಬಾ ಗೌರವ ಹಾಗೂ ಪ್ರೀತಿ ಇತ್ತು. ನಾನು ಆಗ ಗ್ರಾಮಸಂಘದ, ಭಜನಾ ಮಂಡಳಿಯ ಹಾಗೂ ಊರಿನ ಕಾರ್ಯಕ್ರಮಗಳಲ್ಲಿ ತುಂಬಾ involvement ಆಗುತ್ತಿದ್ದೆ. ಆಚಾರ್ರು ಆಗ ನಮ್ಮನ್ನು ತುಂಬಾ ಹುರಿದುಂಬಿಸಿ, ನರೇಂದ್ರ ಎಂತಹದಕ್ಕೂ ಸಂಕೋಚ ಪಡಬೇಡ. ಏನಾದರೂ ನನ್ನಿಂದ ಸಹಾಯ ಬೇಕಿದ್ದರೆ ಕೂಡಲೇ ಹೇಳು ಅಂತ. ಅವರು ನಮ್ಮೊಂದಿಗೆ ಬೆರೆತು ಕಾರ್ಯಕ್ರಮಗಳಲ್ಲಿ involve ಆಗುತ್ತಿದ್ದರು.

ಆಗಿನ ಮಟ್ಟಿಗೆ 1970's ಅವರೊಂದು revolutionary thinker ಅಂತ ಹೇಳಿದರೂ ತಪ್ಪಾಗಲಾರದು. ಅವರು ಸ್ವತಃ ದೊಡ್ಡ ಪುರೋಹಿತರಾಗಿದ್ದರು. ಮನೆಯೇ ಊರಿನವರ ಪರಿಸ್ಥಿತಿಗೆ ಅನುಗುಣ ಮಾಡಿಕೊಂಡು ಕಾರ್ಯಕ್ರಮ ಮಾಡುತ್ತಿದ್ದರೂ ಬಡವರಾದರೆ ಎಷ್ಟು ಬೇಕೋ ಅಷ್ಟೇ ಬಡ್ಜೆಟ್‌ನಲ್ಲಿ ಪೂಜೆ ಪುನಸ್ಕಾರ ಮಾಡಿಸುತ್ತಿದ್ದರು. ಅವರ ಮನೆಯೂ ಹಾಗೂ ಮನವೂ ದೊಡ್ಡದಾಗಿತ್ತು.

ನಮ್ಮ ಊರಿನ ಪರಿಸರದಲ್ಲಿ ಅವರ 'ಸುಧಾರಿಕೆ' ತುಂಬಾ famous ಆಗಿತ್ತು. ನನಗೆ personally ಗೊತ್ತಿದ್ದ ಹಾಗೆ ಕೆಲವು ಧಾರ್ಮಿಕ ಕಾರ್ಯಕ್ರಮಗಳಲ್ಲಿ (ಮುಖ್ಯವಾಗಿ ಬಡ ಬ್ರಾಹ್ಮಣರ ಅಂತ್ಯವಿಧಿ + connected religious rites) ಅವರು ದಕ್ಷಿಣೆ ತಕ್ಕೊಳ್ಳದೆ ಪುರೋಹಿತತ್ವ ಮಾಡುತ್ತಿದ್ದರು. ಆಗಿನ ಕಾಲದಲ್ಲಿ ಅವರು ಹೇಳಿದ್ದು ಈಗಲೂ ನನಗೆ ನೆನಪಿನಲ್ಲಿದೆ. 'ನರೇಂದ್ರ, ಪುರೋಹಿತರಿಗೆ ಇದಕ್ಕೆಲ್ಲಾ ಕಾಯಬೇಕೆಂತಿಲ್ಲ. ದೇವರ ನಾಮ ಹೇಳಿಕೊಂಡು ಮನೆಯವರು ಮುಂದುವರಿಸಬಹುದು' ಅಂತ. ಒಂದು ವೇಳೆ ಕುಲಪುರೋಹಿತರು ಬರದಿದ್ದರೆ, ನನಗೆ ಹೇಳು. ನಾನು ಬಂದು ಮಾಡಿಕೊಡುತ್ತೇನೆ ಅಂತ.

ನಮಗೆಲ್ಲಾ ಆಚಾರ್ರ ಅಣ್ಣ ತಮ್ಮಂದಿರ ಮನೆಯವರ ಒಗ್ಗಟ್ಟು ಮತ್ತು ಪ್ರೀತಿ ಒಂದು ಆದರ್ಶ. ಅದೊಂದು ಸಮಾಜಕ್ಕೆ ಮಾದರಿಯಾಗಿತ್ತು. ಅವರ ಮನೆಯ function ಗಳಲ್ಲಿ ಎಲ್ಲರೂ ಸೇರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ನಡೆಸಿಕೊಡುವ ರೀತಿ impressive. ಹಿರಿಯ ಆಚಾರ್ರು ಇದರಲ್ಲಿ ದೊಡ್ಡ ಲೀಡರ್.

ಇನ್ನೂ ಒಂದು ಸಂತಸದ ಸಂಗತಿಯೆಂದರೆ ನನ್ನ ಮದುವೆಯಲ್ಲಿ (1983) ಅವರು ಹುಡುಗಿಯ ಕಡೆ (ವಂದನರ) ಪುರೋಹಿತರಾಗಿದ್ದರು. ನಮಗೆ ಆಗ ಪಾವಂಜೆ ಗಣಪತಿ ಭಟ್ರು ಪುರೋಹಿತರು. ಅವರು ಕೂಡಾ ಪೂಜ್ಯನೀಯರು.

ಹಾಗಾಗಿ ನನ್ನ ಮತ್ತು ವಂದನನ ಮದುವೆ ಮಾಡಿಸಿದವರು ಇವರು.




ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು
ರಚನೆ: ಡಾ। ಯಚ್. ವಸಂತ

ಹಿಟ್ಲರ್ ಆಚಾರ್ಯರ, ಕುಟುಂಬದ ಅಪರೂಪದ ಛಾಯಾ ಚಿತ್ರಗಳು



ಸ್ವಾಪನಃ ಸ್ವವಶೋ ವ್ಯಾಪೀ ನೈಕಾತ್ಮಾ ನೈಕಕರ್ಮಕೃತ್ । ವತ್ಸರೋ ವತ್ಸಲೋ ವತ್ಸೀ ರತ್ನಗರ್ಭೋ ಧನೇಶ್ವರಃ ॥ ೫೦ ॥

ಹಿಟ್ಲರ್ ಆಚಾರ್ಯರ, ಕುಟುಂಬದ ಅಪರೂಪದ ಛಾಯಾ ಚಿತ್ರಗಳು











ಹಿಟ್ಲರ್ ಆಚಾರ್ಯರ, ಕುಟುಂಬದ ಅಪರೂಪದ ಛಾಯಾ ಚಿತ್ರಗಳು







ಗಭಸ್ತಿನೇಮಿಃ ಸತ್ತ್ವಸ್ಥಃ ಸಿಂಹೋ ಭೂತಮಹೇಶ್ವರಃ । ಆದಿದೇವೋ ಮಹಾದೇವೋ ದೇವೇಶೋ ದೇವಭೃದ್ಗುರುಃ ॥ ೫೨ ॥













ಹಿಟ್ಲರ್ ಆಚಾರ್ಯರ, ಕುಟುಂಬದ ಅಪರೂಪದ ಛಾಯಾ ಚಿತ್ರಗಳು











ಹಿಟ್ಲರ್ ಆಚಾರ್ಯರ, ಕುಟುಂಬದ ಅಪರೂಪದ ಛಾಯಾ ಚಿತ್ರಗಳು















ಹಿಟ್ಲರ್ ಆಚಾರ್ಯರ, ಕುಟುಂಬದ ಅಪರೂಪದ ಛಾಯಾ ಚಿತ್ರಗಳು











ಹಿಟ್ಲರ್ ಆಚಾರ್ಯರ, ಕುಟುಂಬದ ಅಪರೂಪದ ಛಾಯಾ ಚಿತ್ರಗಳು















ಹಿಟ್ಲರ್ ಆಚಾರ್ಯರ, ಕುಟುಂಬದ ಅಪರೂಪದ ಛಾಯಾ ಚಿತ್ರಗಳು











ಹಿಟ್ಲರ್ ಆಚಾರ್ಯರ, ಕುಟುಂಬದ ಅಪರೂಪದ ಛಾಯಾ ಚಿತ್ರಗಳು














ಕೂಡುಕುಟುಂಬ ಮತ್ತು ಬಂಧುಮಿತ್ರರು



ಕೂಡುಕುಟುಂಬ ಮತ್ತು ಬಂಧುಮಿತ್ರರು

ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು

ತ್ರಿಸಾಮಾ ಸಾಮಗಃ ಸಾಮ ನಿರ್ವಾಣಂ ಭೇಷಜಂ ಭಿಷಕ್ । ಸಂನ್ಯಾಸಕೃಚ್ಛಮಃ ಶಾಂತೋ ನಿಷ್ಠಾ ಶಾಂತಿಃ ಪರಾಯಣಃ ॥ ೬೨ ॥



ಶೃತಿ, ವಿನೋದ್ ಆಚಾರ್, ವನಿತಾ, ಧೃತಿ

ಶುಭಾಂಗಃ ಶಾಂತಿದಃ ಸ್ರಷ್ಟಾ ಕುಮುದಃ ಕುವಲೇಶಯಃ । ಗೋಹಿತೋ ಗೋಪತಿರ್ಗೋಪ್ತಾ ವೃಷಭಾಕ್ಷೋ ವೃಷಪ್ರಿಯಃ ॥ ೬೩ ॥



॥ ಬ್ರಾಹ್ಮಣ ಆರ್ಷೇಯ ಉದ್ಧರೇತ್ ॥

– ರವೀಂದ್ರ ಅತ್ತೂರು

ಲೋಕದ (ಮಾನುಷ ವರ್ಗ) ಸಮುದಾಯಗಳಲ್ಲಿ (ಜಾತಿ–ವರ್ಗ) ಆಯಾಯ ಪ್ರದೇಶಕ್ಕನುಗುಣವಾಗಿ ಆಚರಣೆಗಳು, ನಿಯಮಗಳು, ಪದ್ಧತಿಗಳು, ವೈವಿಧ್ಯ ಸಂಪ್ರದಾಯಗಳು, ಆರಾಧನಾ ವೈಶಿಷ್ಟ್ಯಗಳು ....ಇವೆಲ್ಲವೂ ಜೀವನಕ್ರಮದಲ್ಲಿ ಹಾಸು–ಹೊಕ್ಕಾಗಿರುವುದನ್ನು ನಾವು ಕಾಣುತ್ತೇವೆ.

ತಮ್ಮತನವನ್ನು ಅಭಿವ್ಯಕ್ತಗೊಳಿಸುವಂತಹದ್ದು (Draw the attention) ಚರಾಚರ ಜೀವಿಗಳ ಗುಣಧರ್ಮ.

ನಮ್ಮ ಪೂರ್ವಜರು ಲೋಕಹಿತದೃಷ್ಟಿ, ಸಮಾಜಸ್ವಾಸ್ಥ್ಯಕ್ಕಾಗಿ ಧರ್ಮವೆಂಬ ಅಧಿಷ್ಠಾನವನ್ನು (ನೆಲಗಟ್ಟು = Platform) ಸಂರಚಿಸಿ, ರಕ್ಷಿಸಿ ಪೀಳಿಗೆಯಿಂದ ಪೀಳಿಗೆಗೆ ದಾಟಿಸಿಕೊಂಡು ಬಂದಿರುವುದನ್ನು ಲೋಕಮುಖದಲ್ಲಿ ನಾವು ಕಾಣುತ್ತಿದ್ದೇವೆ .

ಭಾರತೀಯ ಸನಾತನಧರ್ಮವು, ಪಾಶ್ಚಾತ್ಯ ದೇಶಗಳಲ್ಲಿ ತಮ್ಮ ಅಸ್ಮಿತೆಯ ಕುರುಹು ಎಂಬುವುದಾಗಿ ಸಮಷ್ಟಿ ನೆಲೆಯಲ್ಲಿ ಪ್ರಕಟಗೊಳಿಸುವ 'ಸಂಸ್ಕೃತಿ'ಯೆಡೆಗೆ ಹೆಚ್ಚು ಒಲವು ಕೊಡದೆ, ವ್ಯಷ್ಟಿ ನೆಲೆಯಲ್ಲಿ – ಮಾನವನ ಬಾಹ್ಯಾಂತರ ಔನ್ನತ್ಯ ದೃಷ್ಟಿಯಲ್ಲಿ "ಸಂಸ್ಕಾರ" ದ ಕಡೆಗೆ ಗುರುತರ ಒತ್ತು ಕೊಟ್ಟದ್ದು ಉಪನಿಷತ್ತು, ಪುರಾಣ, ಇತಿಹಾಸ, ಸ್ಮೃತಿ, ಸಂಹಿತೆಗಳಿಂದ .....ವೇದ್ಯವಾಗುತ್ತದೆ.

ಉಪನೀತನಾದ ವಟುವು, ವಿದ್ಯಾರ್ಥಿಯಾಗಿ – ಸಮಿತ್ಪಾಣಿಯಾಗಿ ಗುರುವಿನ ಬಳಿಗೆ ತೆರಳಿ ವಿದ್ಯೆಯನ್ನು ಬೋಧಿಸಬೇಕು ಎಂಬುವುದಾಗಿ ಬಿನ್ನವಿಸಿ ಕೊಳ್ಳುವಂತಹದ್ದು.

"ಘೃತಮಿವ ಪಯಸಿ ನಿಷಕ್ತಂ ಭೂತೇ ಭೂತೇಚ ವಸತಿ ವಿಜ್ಞಾನಮ್ ।
ಸತತಂ ಮಂಥಯಿತವ್ಯಂ ಮನಸಾ ಮಂಥಾನ ಭೂತೇನ ॥"

ತುಪ್ಪವು, ಹಾಲಿನಲ್ಲಿ ಅಡಗಿರುವಂತೆ ಪ್ರತಿಯೊಬ್ಬನಲ್ಲೂ ಅರಿವು ಅಡಗಿದೆ; ಅದು ಅಭಿವ್ಯಕ್ತವಾಗಬೇಕಾದರೆ ಮನಸ್ಸಿನಲ್ಲಿ ನಿರಂತರ ಮಥನ ಕ್ರಿಯೆಯನ್ನು ನಡೆಸಬೇಕು.

ಎಂಬಂತೆ,

ಶಿಷ್ಯನನ್ನು ಗುರುವು, ಶಿಷ್ಯನ ಪ್ರಕೃತಿ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಶಾಸ್ತ್ರಾಭ್ಯಾಸ–ಸಂವಾದದೊಂದಿಗೆ ಶಿಕ್ಷಣದ ಎರಡು ಅಂಗಗಳಾದ ಜ್ಞಾನ ಮತ್ತು ಸಂಸ್ಕಾರಗಳಿಂದ ಪರಿಪಕ್ವಗೊಳಿಸುತ್ತಾನೆ.

"ವೇದಮನೂಚ್ಯಾಚಾರ್ಯೋಽಂತೇ ವಾಸಿನ ಮನುಶಾಸ್ತಿ । ಸತ್ಯಂವದ । ಧರ್ಮಂಚರ । .....ಸತ್ಯಾನ್ನ ಪ್ರಮದಿತವ್ಯಮ್ । ಧರ್ಮಾನ್ನ ಪ್ರಮದಿತವ್ಯಮ್ । ....ಯಥಾತೇ ತತ್ರ ವರ್ತೇರನ್ । ತಥಾ ತತ್ರ ವರ್ತೇಥಾಃ । .....ಏಷ ಆದೇಶಃ । ಏಷ ಉಪದೇಶಃ । ...ಏವಮುಚೈತದುಪಾಸ್ಯಮ್ ॥ "

– ತೈತ್ತಿರೀಯೋಪನಿಷತ್

ಇವೇ ಮೊದಲಾದುವುಗಳು, ಗುರುವು ಶಿಷ್ಯನಿಗೆ ವೇದಾಧ್ಯಾಪನೆಯನ್ನು ಮಾಡಿದ ಬಳಿಕ ಬೋಧಿಸುವ ತೈತ್ತಿರೀಯ ಉಪನಿಷತ್ತಿನ ಉಪದೇಶ ವಾಕ್ಯಗಳು .
ಯಾವುದು ಧರ್ಮ ? ಯಾವುದು ಸತ್ಯ ? ಯಾವುದನ್ನು ಆಚರಿಸಬೇಕಾದದ್ದು ? ಯಾವ ಮಾರ್ಗದಲ್ಲಿ ನಡೆಯಬೇಕಾದದ್ದು ? ಯಾವುದು ಪೂರ್ವಪರಂಪರೆ ? ಬ್ರಹ್ಮವನ್ನು ತಿಳಿಯುವ ಬಗೆ ಹೇಗೆ ?.....ಹೀಗೆ ಸಾಗುತ್ತದೆ ಉಪನಿಷತ್ತಿನ ಚಿಂತನೆ.

ಇಲ್ಲಿ, ಜ್ಞಾನೋಪಾಸನ ಸೋಪಾನಕ್ರಮಗಳನ್ನು ಉಪನಿಷತ್ತು ಉಪದೇಶಿಸುತ್ತಿದೆ;
ಮೊದಲಿಗೆ "ಅನ್ನಂ ಬ್ರಹ್ಮೇತಿ ವ್ಯಜಾನಾತ್। ..... ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ । ಸತಪೋಽತಪ್ಯತ । ಸ ತಪಸ್ತಪ್ತ್ವಾ ॥
ಮುಮುಕ್ಷುವು, ಅನ್ನವು ಬ್ರಹ್ಮ ಎಂದು ತಿಳಿದುಕೊಂಡನು;..... (ಮತ್ತೆ ಗುರುವನ್ನು ಸಮೀಪಿಸಿ) ಹೇ ಭಗವಂತನೇ ಬ್ರಹ್ಮನನ್ನು ಉಪದೇಶಿಸು; (ಆಗ ಗುರುವು) ತಪಸ್ಸಿನಿಂದ ಬ್ರಹ್ಮವನ್ನು ತಿಳಿದುಕೋ.
" ಸ ತಪಸ್ತಪ್ತ್ವಾ । ಪ್ರಾಣೋ ಬ್ರಹ್ಮೇತಿ ವ್ಯಜಾನಾತ್ । " ಅವನು ತಪಸ್ಸನ್ನು ಮಾಡಿ ; ಪ್ರಾಣವು ಬ್ರಹ್ಮವೆಂದು ತಿಳಿದುಕೊಂಡನು. (ಮತ್ತೆ ತಪಸ್ಸನ್ನಾಚರಿಸಿ) " ಮನೋ ಬ್ರಹ್ಮೇತಿ ವ್ಯಜಾನಾತ್ । " ಮನಸ್ಸು ಬ್ರಹ್ಮವೆಂದು ತಿಳಿದುಕೊಂಡನು. " ವಿಜ್ಞಾನಂ ಬ್ರಹ್ಮೇತಿ ವ್ಯಜಾನಾತ್ । " ವಿಜ್ಞಾನವನ್ನು ಬ್ರಹ್ಮವೆಂದು ತಿಳಿದುಕೊಂಡನು. ಆನಂದೋ ಬ್ರಹ್ಮೇತಿ ವ್ಯಜಾನಾತ್ ।..... ಸೈಷಾ ಭಾರ್ಗವೀವಾರುಣೀ ವಿದ್ಯಾ । ಪರಮೇವ್ಯ್ಯೋಮನ್ ಪ್ರತಿಷ್ಠಿತಾ । ಸ ಯ ಏವಂ ವೇದ ಪ್ರತಿತಿಷ್ಠತಿ ॥ "ಆನಂದವು, ಬ್ರಹ್ಮವೆಂದು ತಿಳಿದುಕೊಂಡನು..... ಈ ಭಾರ್ಗವೀ ವಾರುಣೀ ವಿದ್ಯೆಯು ಪರಮವ್ಯೋಮದಲ್ಲಿ ಪ್ರತಿಷ್ಠಿತವಾಗಿರುವುದು, ಯಾರು ಹೀಗೆ ತಿಳಿದುಕೊಳ್ಳುವನೋ ಅವನು ಅದರಲ್ಲಿ ಪ್ರತಿಷ್ಠಿತವಾಗುತ್ತಾನೆ.

ಇನ್ನು ಉಪನಿಷತ್ತು, ಲೋಕ ಹಿತದೃಷ್ಟಿಯಲ್ಲಿ ಸಂಸ್ಕಾರವನ್ನೂ ತಿಳಿಹೇಳುತ್ತಾ ಉಂಟು.
"ಶ್ರದ್ಧಯಾ ದೇಯಮ್ । ಅಶ್ರದ್ಧಯಾಽದೇಯಮ್ । ಶ್ರಿಯಾ ದೇಯಮ್ । ಹ್ರಿಯಾ ದೇಯಮ್ । ಭಿಯಾ ದೇಯಮ್ । ಸಂವಿದಾ ದೇಯಮ್ । ಅಥ ಯದಿ ತೇ ಕರ್ಮ ವಿಚಿಕಿತ್ಸಾ ವಾವೃತ್ತ ವಿಚಿಕಿತ್ಸಾವಾ ಸ್ಯಾತ್ ॥.....
ಶ್ರದ್ಧೆಯಿಂದ ಕೊಡಬೇಕು, ಅಶ್ರದ್ಧೆಯಿಂದ ಕೊಡಬಾರದು..... ಮಿತ್ರಭಾವದಿಂದ ಕೊಡಬೇಕು, ಕರ್ಮ ಮತ್ತು ಆಚಾರದ ವಿಷಯದಲ್ಲಿ ಸಂಶಯ ತಲೆದೋರಿದಾಗ ಆಗ ವಿಚಾರದಕ್ಷರೂ, ಕರ್ಮಪ್ರವೃತ್ತಕರೂ, ಅಕ್ರೂರರೂ, ಅಕಾಮಹತರೂ ಆದ ಬ್ರಾಹ್ಮಣರು ಹೇಗೆ ವರ್ತಿಸುತ್ತಾರೋ ಹಾಗೆ ನೀನು ಅಲ್ಲಿ ವರ್ತಿಸು.
" ಅನ್ನಂ ನ ನಿಂದ್ಯಾತ್ । ಅನ್ನವನ್ನು ನಿಂದಿಸಬಾರದು, ಅನ್ನಂ ನ ಪರಿಚಕ್ಷೀತ । ಅನ್ನವನ್ನು ನಿರಾಕರಿಸಬಾರದು, ಅನ್ನಂ ಬಹು ಕುರ್ವೀತ । ಅನ್ನವನ್ನು ಬಹಳವಾಗಿ ಮಾಡಬೇಕು, ನ ಕಂಚನ ವಸತೌ ಪ್ರತ್ಯಾಚಕ್ಷೀತ । ವಸತಿಗಾಗಿ ಯಾರಾದರೂ ಬಂದರೆ ಅವನನ್ನು ನಿರಾಕರಿಸಬಾರದು.
ಇನ್ನು,
"ಶಮೋದಮಸ್ತಪ: ಶೌಚಂ ಕ್ಷಾಂತಿರಾರ್ಜವಮೇವಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್ ॥"
ಭಕ್ತಿ, ಇಂದ್ರಿಯ ನಿಗ್ರಹ, ತಪಸ್ಸು, ನೈರ್ಮಲ್ಯ, ಸೈರಣೆ, ಅಸ್ಖಲಿತ ನಡೆ – ನುಡಿ, ಅರಿವು, ಸಂಶೋಧನಾ ದೃಷ್ಟಿ, ನಂಬಿಕೆ ಇವು ಬ್ರಾಹ್ಮಣ ಸ್ವಭಾವಸಹಜ ಕರ್ಮಗಳು ; ಎಂದು ಗೀತಾಚಾರ್ಯನ ನುಡಿ.
ಇವುಗಳು ಸಂಸ್ಕಾರದಿಂದ ಬ್ರಾಹ್ಮಣನಲ್ಲಿ ಜಾಗ್ರತವಾಗುವ ಸ್ವಭಾವಗಳು.
" ಪರೋಪಕಾರ ನಿರತೋ ಜಪಪೂಜಾದಿ ತತ್ಪರ: ।
ಅಮೋಘವಚನ: ಶಾಂತೋ ವೇದವೇದಾರ್ಥ ಪಾರಗ : ॥
ಯೋಗಮಾರ್ಗಾನು ಸಂಧಾಯೀ ದೇವತಾತ್ತ್ವದಯಂಗಮ: ।
ಇತ್ಯಾದಿ ಗುಣಸಂಪನ್ನೋ ಗುರುರಾಗಮಸಂಮತ: ॥ "

ಇವೇ ಮೊದಲಾದುವುಗಳು ಗುರುವಿನ ಸ್ವಭಾವಗಳು.

ಈ ರೀತಿಯ ಜ್ಞಾನ–ಸಂಸ್ಕಾರ–ಸ್ವಭಾವಗಳಿಂದ, ತಿಳಿವೆಂಬ ಬೆಳಕಿನೆಡೆಗೆ – ಸನ್ನಡೆತೆಯೆಂಬ ಋಜುಮಾರ್ಗದೆಡೆಗೆ ಕೈಹಿಡಿದು ನಡೆಸಿದ, " ಪ್ರತಿಬಧ್ನಾತಿಹಿ ಶ್ರೇಯ: ಪೂಜ್ಯಪೂಜಾವ್ಯತಿಕ್ರಮ: " ಎಂದು ದಿಲೀಪ ಚಕ್ರವರ್ತಿಯನ್ನು ಎಚ್ಚರಿಸಿ, ದೋಷನೀಗಿ ಅನುಗ್ರಹಿತನಾಗುವಲ್ಲಿ ಕಾರಣರಾದ ವಸಿಷ್ಠಾದಿ ಕುಲಪುರೋಹಿತರನ್ನು ಲೋಕ ಕಂಡಿದೆ.

ಯಾವತೀರ್ವೈದೇವತಾಸ್ತಾಸ್ಸರ್ವಾ ವೇದವಿದಿ ಬ್ರಾಹ್ಮಣೇ ವಸಂತಿ....." – ತೈತ್ತಿರೀಯ ಆರಣ್ಯಕ: ॥
ಎಂದು ವೇದವಿದ್ಬ್ರಾಹ್ಮಣರ ಹೃದಯಕಮಲದಲ್ಲಿ ನೆಲೆನಿಂತಿರುವ ದೇವತಾ ಸಮೂಹವನ್ನು ಋಷಿಯು ದರ್ಶಿಸಿದಂತೆ;
ಅಂತೆಯೇ,
" ಉಚ್ಚೈರ್ಗತಿರ್ಜಗತಿ ಸಿದ್ಧ್ಯತಿ ಧರ್ಮತಶ್ಚೇತ್ತಸ್ಯ ಪ್ರಮಾ ಚ ವಚನೈಃ ಕೃತಕೇತರೈಶ್ಚೇತ್ ।
ತೇಷಾಂ ಪ್ರಕಾಶನದಶಾ ಚ ಮಹೀಸುರೈಶ್ಚೇತ್ತಾನಂತರೇಣ ನಿಪತೇತ್ಕ್ವನುಮತ್ಪ್ರಣಾಮಃ ॥ "
ಊರ್ಧ್ವಗತಿಯನ್ನು ತಿಳಿಸುವಂತಹದ್ದು ಧರ್ಮ, ಧರ್ಮವು ವೇದ ವಾಙ್ಮಯಗಳಲ್ಲಿ ಅಡಕವಾಗಿದೆ. ಧರ್ಮಸೂಕ್ಷ್ಮವನ್ನು ಅರಿತು ಲೋಕಕ್ಕೆ ತಿಳಿಸುವವರು ಅಕೃತ್ರಿಮ ಬ್ರಾಹ್ಮಣರು.
ಅಂತಹ ವೇದಜ್ಞರನ್ನು ನೋಡಿದಾಕ್ಷಣ ಆಸ್ತಿಕರು (ಅಯೋಚಿತವಾಗಿ) ಎದ್ದುನಿಂತು ನಮಿಸುತ್ತಾರೆ. ಈ ನನ್ನ ನಮನವು ವೇದವಿದರಿಗಲ್ಲದೆ ಮತ್ತಾರಿಗೆ.....
ಎಂದು ಕವಿ ಭೋಜರಾಜನು ತನ್ನ " ಚಂಪೂರಾಮಾಯಣಮ್ " ಕಾವ್ಯದಲ್ಲಿ ಮಂಗಲಾಚರಣೆಯಲ್ಲಿ ಉದ್ಗರಿಸಿದಂತೆ ;
ಆರ್ಷಪರಂಪರೆಯಲ್ಲಿ ಅಸಿಧಾರಾ ವ್ರತದಂತೆ ಬದುಕಿ, ಶ್ರದ್ಧಾಳುಗಳನ್ನು ಸನ್ಮಾರ್ಗದೆಡೆಗೆ ಕೈಹಿಡಿದು ನಡೆಸಿದ, ನಡೆಸುತ್ತಿರುವ ಪುರೋಹಿತ ಪರಂಪರೆಗೆ ನುತಿ ನಮನಗಳು.

॥ ರಾಷ್ಟ್ರಸೂಕ್ತಮ್ ॥

"ಆ ಬ್ರಹ್ಮನ್ ಬ್ರಾಹ್ಮಣೋ ಬ್ರಹ್ಮವರ್ಚಸೀ ಜಾಯತಾಮಾಽಸ್ಮಿನ್ ರಾಷ್ಟ್ರೇ ರಾಜನ್ಯ ಇಷವ್ಯಃ ಶೂರೋ ಮಹಾರಥೋ ಜಾಯತಾಂ ದೋಗ್ಧ್ರೀರ್ಧೇನುರ್ವೋಢಾಽನಡ್ವಾನಾಶುಃ ಸಪ್ತಿಃ ಪುರಂಧಿರ್ಯೋಷಾ ಜಿಷ್ಣೂ ರಥೇಷ್ಠಾಃ ಸಭೇಯೋ ಯವಾಽಸ್ಯ ಯಜಮಾನಸ್ಯ ವೀರೋ ಜಾಯತಾಂ ನಿಕಾಮೇನಿಕಾಮೇ ನಃ ಪರ್ಜನ್ಯೋವರ್ಷತು ಫಲಿನ್ಯೋ ನ ಓಷಧಯಃ ಪಚ್ಯಂತಾಂ ಯೋಗಕ್ಷೇಮೋ ನಃ ಕಲ್ಪತಾಮ್ ॥"

–ತೈತ್ತಿರೀಯ ಸಂಹಿತಾ 7–5–18–44

"ನಮ್ಮ ರಾಷ್ಟ್ರದಲ್ಲಿ ಆಧ್ಯಾತ್ಮಿಕ ಚಿಂತನಾಪರರಾದವರು ಬ್ರಹ್ಮಸಿದ್ಧಿಯನ್ನು ಪಡೆಯಲಿ. ಈ ರಾಷ್ಟ್ರದಲ್ಲಿ ಶೂರರಾದ, ಧೀರರಾದ ಮಹಾರಥಿಗಳು ಹುಟ್ಟಲಿ (ಜಾಗ್ರತ ಧರ್ಮರಕ್ಷಕರು), ಕ್ಷೀರಸಮೃದ್ಧ ಗೋಸಂಪತ್ತು, ಬಲಶಾಲಿ ಎತ್ತುಗಳು (ಉಳುವುದಕ್ಕಾಗಿ), ಜವದಿಂದೋಡುವ ಕುದುರೆಗಳು, ಸುಮಂಗಲೀ ಸ್ತ್ರೀಯರು, ಜಯಶೀಲತ್ವವನ್ನ ಹೊಂದಿರುವ ರಥಿಕರು, ಸಭೆಗಳಲ್ಲಿ ನಿರ್ಭೀತಿಯಿಂದ ವಾದಮಂಡಿಸುವ ಯುವತೆ ಇವೆಲ್ಲವೂ ಸಮೃದ್ಧವಾಗಲಿ. ಕಾಲಕ್ಕನುಗುಣವಾಗಿ ಮಳೆಸುರಿಯಲಿ, ಸುಪಕ್ವ ಫಲವೃಕ್ಷಗಳೂ ಓಷಧಿಗಳೂ ಸಮೃದ್ಧಿಸಲಿ, ನಮ್ಮಲ್ಲಿ ಯೋಗ (ಐಕಮತ್ಯ) ಕ್ಷೇಮ (ಸುಭಿಕ್ಷೆ)ಗಳುಂಟಾಗಲಿ.

ಏಕದಂತನೇ...



ರಚನೆ: ಕು। ಶೃತಿ

ನಮ್ಮ ಮಾವ – ಹಿಟ್ಲರ್



ಬಿ. ಚಕ್ರೇಶ ಯಡಿಯಾಳ, ಬರೆಗುಂಡೆ

1953ನೇ ಇಸವಿ, ನಾನು 6ನೇ ತರಗತಿಯಲ್ಲಿ ಕುಳ್ಳಾ ಶಾಲೆಯಲ್ಲಿ ಕಲಿಯುತ್ತಿರುವಾಗ, ಒಂದು ದಿನ ನಮ್ಮ ಅಜ್ಜನ ಮನೆಗೆ ಬಂದ ಹೊಸಬೆಟ್ಟು ವೆಂಕಟಕೃಷ್ಣ ಆಚಾರ್ (ಹಿಟ್ಲರ್ ಆಚಾರ್) ರವರು "ಬರೆಗುಂಡೆ" ಮಾಣಿಗೆ ಈ ವರ್ಷವೇ ಉಪನಯನವಾಗಿದೆ ಅಲ್ಲವೇ, ಜಪ ಸರಿಯಾಗಿ ಮಾಡುತ್ತಾನಲ್ಲ. ನಾಳೆ ಮಧ್ಯಾಹ್ನ ನಮ್ಮ ಮನೆಗೆ "ಬ್ರಹ್ಮಚಾರಿ" ಯಾಗಿ ಊಟಕ್ಕೆ ಬರಬೇಕು ಎಂದು ನಮ್ಮ ಅಜ್ಜ ಲಕ್ಷ್ಮೀನಾರಾಯಣ ಆಚಾರ್ಯರ ಹತ್ತಿರ ಹೇಳಿದ ಮಾತು ನನ್ನ ಕಿವಿಯಲ್ಲಿ ಈಗಲೂ ಗುಯಿಗುಟ್ಟುತ್ತಿದೆ. ಲಕ್ಷ್ಮೀನಾರಾಯಣ ಆಚಾರ್ಯರು ಹಿಟ್ಲರ್ ಆಚಾರ್ಯರ ಚಿಕ್ಕಪ್ಪ. ನಾನು ಲಕ್ಷ್ಮೀನಾರಾಯಣ ಆಚಾರ್ಯರ ಮಗಳು ದ್ರೌಪತಿಯ ಮಗ. ನಮ್ಮ ಮನೆ ಕುಂದಾಪುರದಿಂದ 45 ಕಿ.ಮೀ. ದೂರ ಇರುವ ಮಲೆನಾಡಿನ ಸರಹದ್ದಿನ ಗ್ರಾಮ ಕಮಲಶಿಲೆಯ "ಬರೆಗುಂಡೆ" ಯವರು. ಆಗ ನಮ್ಮ ಊರಿನಲ್ಲಿ ಯಾವ ತರದ ಶಾಲೆಗಳು ಇಲ್ಲದ ಕಾರಣ "ಐಗಳ ಮಠ" ದಲ್ಲಿ ನಾನು 1–2ನೇ ತರಗತಿ ಮುಗಿಸಿ 1950–51ರಲ್ಲಿ ಕುಳ್ಳಾಯ ಅಜ್ಜನ ಮನೆಗೆ ಬಂದು ಇಲ್ಲಿ ಕುಳ್ಳಾ ಶಾಲೆಯಲ್ಲಿ 3ನೇ ತರಗತಿಗೆ ಸೇರಿ 1958–59ರಂದು ವಿದ್ಯಾದಾಯಿನೀ ಹೈಸ್ಕೂಲ್‌ನಲ್ಲಿ 11ನೇ ತರಗತಿ (ಎಸ್.ಎಸ್.ಎಲ್.ಸಿ.) ಯನ್ನು ಮುಗಿಸಿದೆನು.

ಈ ಒಂಬತ್ತು ವರ್ಷಗಳ ಕಾಲ ನಾನು ಅಜ್ಜನ ಮನೆಯಲ್ಲಿಯೇ ಇದ್ದ ಕಾರಣ ಅವರ ಅಣ್ಣನ ಮಗ ವೆಂಕಟಕೃಷ್ಣ ಆಚಾರ್‌ರ ಮನೆಗೆ ಆಗಾಗ ಹೋಗಿ ಬರುತ್ತಿದ್ದದ್ದು. ಅಲ್ಲದೆ ನೂರಾರು ಬ್ರಹ್ಮಚಾರಿ ಊಟವನ್ನು ಮಾಡಿದ್ದೆನು. ಆದಿತ್ಯವಾರ ದಿನವಾದರೆ ಬೇಗನೇ ಅವರ ಮನೆಗೆ ಹೋಗಿ ಅವರು ಹೇಳುತ್ತಿರುವ "ಸತ್ಯನಾರಾಯಣ ಕತೆ" ಯನ್ನು ತುಳುವಿನಲ್ಲಿ ಕೇಳುತ್ತಿದ್ದೆನು. ಅದಲ್ಲದೆ ಅವರ ತಮ್ಮ ಶ್ರೀಧರ ಆಚಾರ್ಯರು ಹರಿಕಥಾ ವಿದ್ವಾಂಸರು. ರಜಾದಿನಗಳಲ್ಲಿ ಆಸುಪಾಸು ನಡೆಯುತ್ತಿದ್ದ ಹರಿಕಥೆಗೂ ಸಹ ಹೋಗುತ್ತಿದ್ದೆನು. ಆದುದರಿಂದ ಅವರ ಮನೆ ನನಗೆ ಮತ್ತೊಂದು ಮಾವನ ಮನೆಯಾಗಿದ್ದಿತು.

ವರ್ಷಕ್ಕೆ ಒಮ್ಮೆ ಜರಗುವ ತುಳಸಿ ಹಬ್ಬಕ್ಕೆ ಕೊನೆಯ ದ್ವಾದಶಿ ದಿನ ಯಾರ ಮನೆಯಲ್ಲಿ ಬೈಲಾರೆಯಿಂದ ಕೋಳೆ ಹೂ ತಂದು ಹೆಚ್ಚು ಹೆಚ್ಚು ಮಾಲೆಗಳನ್ನು ಮಾಡುತ್ತಿದ್ದರು ಎಂದು ನೋಡುವುದೇ ಕುತೂಹಲವಾಗಿತ್ತು. ಅಲ್ಲದೆ ಸಂಜೆಯಿಂದ ಬೆಳಗಿನ ಜಾವದ ತನಕ ನಮ್ಮವರ ಮನೆ ಮನೆಗೆ ಹೋಗುತ್ತಾ, ಅಲ್ಲಿ ತುಳಸಿ ಸಂಕೀರ್ತನೆ ಮಾಡುತ್ತಾ, ಅಲ್ಲಿ ಕೊಡುವ ಪನಿವಾರಗಳನ್ನು ಮೆಲ್ಲುತ್ತಾ ಪಾನಕಗಳನ್ನು ಕುಡಿಯುತ್ತಾ ಸಾಗುತ್ತಿದ್ದೆವು. ಅಂದು ನಡೆಯುತ್ತಿದ್ದ ತುಳಸಿ ಕೀರ್ತನೆಯಲ್ಲಿ ಮಕ್ಕಳದ್ದೇ ಪ್ರತ್ಯೇಕ ಸಾಲು ಮಾಡಿ ತುಳಸೀ ಸಂಕೀರ್ತನೆಗಳನ್ನು ಬೇರೆ ಬೇರೆ ರೀತಿಯ ಕುಣಿತಗಳಲ್ಲಿ ಮಾಡಿಸುತ್ತಿದ್ದವರು ನಮ್ಮ ಮಾವ ಹಿಟ್ಲರ್ ಆಚಾರ್ಯರು. ಇದಲ್ಲದೆ ದೊಡ್ಡವರು ಪ್ರತ್ಯೇಕ ಇಸ್ಪೀಟ್ ಆಡುತ್ತಿರುವಾಗ ಮಕ್ಕಳನ್ನು ಪ್ರತ್ಯೇಕ ಕುಳ್ಳಿರಿಸಿ ಅವರಿಗೆ "ಕತ್ತೆಯ" ಆಟವನ್ನು ಹೇಳಿಕೊಟ್ಟವರೂ ಅವರೇ. ಅಲ್ಲದೆ ನಮ್ಮೊಂದಿಗೆ ಈ ಆಟ ಆಡಿ ಹೆಚ್ಚು "ಕತ್ತೆ" ತಾವೇ ಆಗುತ್ತಿದ್ದು ನಮಗೆಲ್ಲರಿಗೂ ಸಂತೋಷವನ್ನುಂಟು ಮಾಡುತ್ತಿದ್ದರು. ನಮ್ಮ ತಂದೆ ಪಟೇಲ್ ದೇವರಾಯರಿಗೂ ಅವರಿಗೂ ಭಾವನಂಟರ ದೋಸ್ತಿ. ನಮ್ಮ ತಂದೆಯವರು ಕುಳಾಯಿಗೆ ಬಂದಾಗಲೆಲ್ಲಾ ಅವರ ಮನೆಗೆ ಹೋಗಲೇಬೇಕು. ಹರಟೆ ಹೊಡೆಯುತ್ತಾ ನಮ್ಮ ತಂದೆಯವರು ತಿನ್ನುತ್ತಿದ್ದ "ತಾಂಬೂಲ" ವನ್ನು ಅವರು ಸಹಾ ಒಟ್ಟಿಗೆ ತಿನ್ನುತ್ತಿದ್ದರು. ಅದಲ್ಲದೆ ಅವರ ಮನೆಯಲ್ಲಿ ಜರಗುವ ಮದುವೆ, ಉಪನಯನ ಸಮಾರಂಭಗಳಿಗೆ ನಮ್ಮ ಬರೆಗುಂಡೆಯಿಂದ ಬಾಳೆಲೆ, ಬಾಳೆಕಾಯಿ ಹಾಗೂ ತರಕಾರಿ, ಬೇಸಿಗೆಯಲ್ಲಿ ಹಲಸಿನ ಹಣ್ಣುಗಳನ್ನು ಮಂಗಳೂರಿಗೆ ಅಡಿಕೆ ತರುವ ಲಾರಿಗಳಲ್ಲಿ ಮೊದಲೇ ಹಾಕಿ ಕಳುಹಿಸುತ್ತಿದ್ದರು.

ಹಿಟ್ಲರ್ ಆಚಾರ್ಯರು 1986ರಲ್ಲಿ ತೀರಿಕೊಂಡ ವಿಷಯ ಒಂದು ವಾರದ ನಂತರ ನಮ್ಮ ಅಪ್ಪಯ್ಯನಿಗೆ ತಿಳಿಯಿತಷ್ಟೆ. ಇದರಿಂದ ಬೇಸರಗೊಂಡ ನಮ್ಮ ಅಪ್ಪಯ್ಯ ನನಗೆ ವಿಷಯವನ್ನು ಕೂಡಲೇ ತಿಳಿಸಲಿಲ್ಲ ಎಂದು ಕೊಂಡು ಆಚಾರ್ಯರ ಮನೆಗೆ ಬಂದು ಮಕ್ಕಳಿಗೆ ಸಾಂತ್ವನ ಹೇಳಿ ಬಂದರು. ಹೀಗಿತ್ತು ನಮ್ಮ ಹಿಟ್ಲರ್ ಮಾವ ಮತ್ತು ಬರೆಗುಂಡೆ ಪಟೇಲರ ಸ್ನೇಹ ಬಾಂಧವ್ಯ.

ಹಿಟ್ಲರ್ ಸಾಮ್ರಾಜ್ಯ



ಬಾಕ್ರ

ಏನೋ ತಮಾಷೆಗೆ ಹೊಡೆದ ಚಟಾಕಿ ಬೀಸುದೊಣ್ಣೆಯಾದೀತೆಂದು ನಾನು ಭಾವಿಸಿರಲಿಲ್ಲ. ಸ್ವಲ್ಪ ಸಮಯದ ನಂತರ ವಿನೋದ ಆಚಾರ್ಯರಿಂದ ಫೋನ್ – ಅಜ್ಜನ ಬಗ್ಗೆ ಪುಸ್ತಕ ಆಗಬೇಕು. ಮಾತನಾಡಲಿಕ್ಕೆ ಬರುತ್ತೇನೆ ಎಂದರು. ಸರಿ ವಿಷಯವನ್ನು ಅಲ್ಲಿಗೇ ಬಿಟ್ಟೆ. ನಾಲ್ಕು ದಿನದ ನಂತರ ಮನೆಗೆ ಬಂದು "ಇದು ನನ್ನ ನಿರ್ಧಾರ. ಪುಸ್ತಕದ ಪ್ರಕಟಣೆಯ ಜವಾಬ್ದಾರಿ ನಿಮ್ಮದು. ಪೂರ್ಣ ಸಹಕಾರ ನನ್ನದು. ಅದಕ್ಕೆ ಏನೆಲ್ಲ ಆಗಬೇಕೋ ಅದನ್ನು ಮುಂದುವರಿಸಿ" ಎಂದರು. ಇತ್ತೀಚೆಗೆ ಯಾಕೋ ನಾನು "ಪುಸ್ತಕ–ಪ್ರಕಟಣೆ–ಸಂಪಾದನೆ" ಯಿಂದ ವಿಮುಖನಾಗುವ ಪ್ರಯತ್ನದಲ್ಲಿದ್ದಾಗ ಇದೊಂದು ರೀತಿಯ 'ಹಿಟ್ಲರ್ ಶಾಕ್' ಆಯಿತು. ನನ್ನಂತಹ useless fellowಗೆ ಇದೆಲ್ಲಾ ಇನ್ನು ಯಾಕೆ ? ಎಂದು ಹೇಳಬೇಕೆಂದುಕೊಳ್ಳುವಷ್ಟರಲ್ಲಿ, "ನೀವೂ ಕುಳಾಯಿಯವರೇ, ಅಜ್ಜನ ಚಿಕ್ಕಪ್ಪನ ಮೊಮ್ಮಗ. ನೀವೂ ಅಜ್ಜನನ್ನು ಕಂಡಿದ್ದೀರಿ, ನಿಮ್ಮಿಂದ ಈ ಕೆಲಸ ಆಗಬೇಕು" ಎಂದು ವಿನಂತಿಸಿದಾಗ, ನನ್ನಿಂದ ಒಲ್ಲೆ ಎನ್ನಲಾಗಲಿಲ್ಲ. ಪ್ರಯತ್ನಿಸೋಣ ಎಂದೆ.

ಮತ್ತೆ ಕೋವಿಡ್ ಬಂತು. ಹಿಟ್ಲರ್ ಮರೆತು ಹೋದರೆಂದುಕೊಂಡೆ. ಇಲ್ಲ ಮತ್ತೆ ಹುಟ್ಟಿ ಬಂದರು ನವಂಬರದಲ್ಲಿ (2020). ಮುಂದಿಟ್ಟ ಹೆಜ್ಜೆಗೆ ಹಿಂತನವಿಲ್ಲ. ನನ್ನಜ್ಜನಂತೆ ನನ್ನ ಹೆಜ್ಜೆ ಎಂದು ಹೇಳುವ ವಿನೋದರ ಆಣತಿಯನ್ನು ಪ್ರತಿಗ್ರಹಿಸಿ ಲೇಖನ ಸಂಗ್ರಹ, ತಿದ್ದುವಿಕೆ, ಸಂದರ್ಶನ, ಹಿಂ–ನೆನಪುಗಳಿಗೆ ಸ್ಫುಟತೆಯ ರಂಗೋಲಿ ಇಡುವುದಕ್ಕೆ ಎಳಸಿದ್ದೇನೆ.

ವೆಂಕಟಕೃಷ್ಣ ಆಚಾರ್ಯರ ಚಿಕ್ಕಪ್ಪ (ತಂದೆಯ ಕೊನೆಯ ತಮ್ಮ) ನನ್ನಜ್ಜ – ಲಕ್ಷ್ಮೀನಾರಾಯಣ ಆಚಾರ್ಯರು (ನನ್ನ ತಾಯಿಯ ತಂದೆ). ಅನ್ಯ ಕಾರಣದಿಂದ ನಾನು ಹುಟ್ಟಿ ಬೆಳೆದದ್ದು ಕುಳಾಯಿಯ ಲಕ್ಷ್ಮೀನಾರಾಯಣ ಆಚಾರ್ಯ ಅಜ್ಜನ ಮನೆಯಲ್ಲಿ. ನನ್ನ ಅಜ್ಜನ ಮನೆ ಹೊನ್ನೆಕಟ್ಟೆ ಬಸ್‌ಸ್ಟಾಂಡ್ ಹತ್ತಿರ ರಾಷ್ಟ್ರೀಯ ಹೆದ್ದಾರಿಗೆ ತಾಗಿ ಆಗ ಇದ್ದ ಅಶ್ವತ್ಥಕಟ್ಟೆಯ ಪಕ್ಕದಲ್ಲಿತ್ತು. ಹಾಗಾಗಿ ಹೆದ್ದಾರಿ ರಸ್ತೆಯಲ್ಲಿ ಹೋಗಿ ಬರುವ "ನಮ್ಮವರು" ಆಗಾಗ ನಮ್ಮಜ್ಜನ ಮನೆಯನ್ನು ಇಣುಕಿ ಏನು ಆಚಾರ್ರೇ, ಏನು ಜಲಜಕ್ಕ ಅಂತ ಮಾತನಾಡಿಸಿ ಹೋಗುವ ದೃಶ್ಯ ಕಣ್ಣಿಗೆ ಕಟ್ಟುವಂತಿದೆ. ಈ ಗುಂಪಿನಲ್ಲಿ ನಮ್ಮವರೇ ಆದ ವೆಂಕಟಕೃಷ್ಣ ಆಚಾರ್ಯರು ಮತ್ತು ಅವರ ಮನೆಯವರೆಲ್ಲರೂ ನಮ್ಮಜ್ಜನ ಮನೆಯವರನ್ನು ದಾರಿಯಲ್ಲಿ ನಿಂತಾದರೂ ಮಾತನಾಡಿಸಿಕೊಂಡು ಹೋಗುತ್ತಿದ್ದುದು ಅಂದಿನ ಸಂಬಂಧಗಳನ್ನು ಮತ್ತೆ ನೆನಪಿಸುತ್ತಿವೆ.

ವೆಂಕಟಕೃಷ್ಣ ಆಚಾರ್ಯರ ಮನೆ ಹೊನ್ನೆಕಟ್ಟೆ ಬಸ್‌ಸ್ಟಾಂಡ್ ಮತ್ತು ಹೊಸಬೆಟ್ಟು ಬಸ್‌ಸ್ಟಾಂಡ್‌ಗಳ ಮಧ್ಯೆ ಪಡುಬದಿಯಲ್ಲಿದೆ. ಹೆಚ್ಚಾಗಿ ಈ ಮಧ್ಯೆ ಇರುವವರೆಲ್ಲರೂ ಬಸ್ ಹತ್ತಲು ಹೊನ್ನೆಕಟ್ಟೆ

ಬಸ್‌ಸ್ಟಾಂಡ್‌ಗೇ ಬರುತ್ತಿದ್ದರು. ಹಾಗಾಗಿ ಬಂದು ಹೋಗುವವರೆಲ್ಲರೂ ನಮ್ಮಂತಹ ಮಾಣಿಗಳನ್ನು ಮಾತನಾಡಿಸುತ್ತಿದ್ದರು. ಚಿಕ್ಪಯ್ಯಾ....... ಅಂತ ಗಟ್ಟಿ ಸ್ವರದಲ್ಲಿ ಕಚ್ಚೆ ಹಾಕಿದ ಶಾಲು ಹೊದೆದ ಬೋಳುತಲೆಯ ಕನ್ನಡಕಧಾರಿ ಬಂದರೆಂದರೆ ಅವರು ಹಿಟ್ಲರೇ ಇರಬೇಕು. ಆಗ ಕೂಡಲೇ ನಾವು (ಅಂದರೆ ನಮ್ಮ ಮನೆಯಲ್ಲಿ ಬರೆಗುಂಡೆ ದೊಡ್ಡಮ್ಮನ ಮಕ್ಕಳೂ ಇಲ್ಲೇ ಶಾಲೆಗೆ ಹೋಗುತ್ತಿದ್ದರು.) ಹಿಟ್ಲರ್ ಬಂದರಜ್ಜಾ...... ಅಂದರೆ ಏಯ್, ಹಾಗೆ ಹೇಳಬೇಡಿರೋ, ಅವರನ್ನು ಮಾವ ಅಂತನೇ ಕರೆಯಿರಿ ಎಂದು ಬೈದು ಹೇಳುತ್ತಿದ್ದರು. ಹಿಟ್ಲರ್ ಗೊಳ್‌ಳ್..... ಎಂದು (ಅವರು ಇದು ಸ್ಪೆಶಲ್ ನಗು) ನಕ್ಕು ಮಕ್ಕಳಲ್ವಾ ಚಿಕ್ಕಪ್ಪಾ ಎಂದು ತೇಲಿಸಿಬಿಡುತ್ತಿದ್ದರು. ನಾವಂತೂ ವೆಂಕಟಕೃಷ್ಣ ಆಚಾರ್ಯರನ್ನು ಮಾವ ಅಂತಲೇ ಕರೆಯುತ್ತಾ ಬಂದೆವು.

ಹಿಟ್ಲರ್ ಆಚಾರ್ಯರ ಮನೆಯನ್ನು ನಾವು ವಾದಿರಾಜ ಆಚಾರ್ಯರ ಮನೆ ಎಂದು ಕರೆಯುವುದು ವಾಡಿಕೆಯಾಗಿತ್ತು. ಸಣ್ಣದಿಂದಲೂ ನನ್ನಜ್ಜ/ದೊಡ್ಡಮ್ಮ(ಅಜ್ಜಿ) ಅವರ ಮನೆಗೆ ಆಗಾಗ ಕಾರ್ಯಕ್ರಮಕ್ಕಾಗಲೀ ಅಥವಾ ಹೀಗೆಯೇ ಆಗಲಿ (ಈಗಿನ Walking/Talking) ಅವರಲ್ಲಿ ಹೋಗಿ ಬರುತ್ತಿರುವುದರಿಂದ, ಸಂಬಂಧದ ಮನೆಗಿಂತ ಹತ್ತಿರದ ಮನೆಯವರೆಂದು ಭಾವಿಸಿದ್ದೆವು. ಶ್ರೀಧರಾಚಾರ್ಯರ ಮಕ್ಕಳು, ನಾರಾಯಣಾ ಚಾರ್ಯರ ಮಕ್ಕಳು ಅಂದಿನ ನಮ್ಮ ಸಹಪಾಠಿಗಳು. ಅದರಲ್ಲೂ ಹಯವದನ ಆಚಾರ್ಯರು ನನಗಿಂತ ಹಿರಿಯರಾದರೂ, PUC, Degree ಯಲ್ಲಿ ಬೆಂಚ್‌ಮೇಟು ಮತ್ತು ಎಲ್ಲಾ ವಿಷಯಗಳಲ್ಲಿ ನಾವು ಒಟ್ಟಿಗೆ. ಅವರೊಂದಿಗಿನ ಆ 4 ವರ್ಷಗಳನ್ನು ನಾನು ಮರೆಯಲಾರೆ. ಹಿಟ್ಲರ್ ಆಚಾರ್ಯರ ಮನೆ ಯಲ್ಲಿರುವ ಎಲ್ಲಾ ಮಕ್ಕಳೊಂದಿಗೂ ನಾನು, ನನ್ನ ದೊಡ್ಡಮ್ಮನ ಮಕ್ಕಳು ಬೆರೆತುಕೊಂಡಿದ್ದೆವು. ಅವರ ಮನೆಯಲ್ಲಿನ ದೊಡ್ಡ ಅಂಗಳ – ವಿಶಾಲ ಹಿತ್ತಿಲು ನಮ್ಮ ಆಟದ ರಂಗಸ್ಥಳವಾಗಿತ್ತು. ನಮ್ಮ ಅಜ್ಜ/ದೊಡ್ಡಮ್ಮನ ಬಾಲವಾಗಿದ್ದ ನಾವು ಆಚಾರ್ಯರ ಮನೆಗೆ ಹೋಗುವುದೆಂದು ಗೊತ್ತಾದ ಕೂಡಲೇ ನಾ ಮುಂದು – ತಾ ಮುಂದು ಎಂದು ನಮ್ಮೊಳಗೆ ಜಗಳವಾಡುತ್ತಿದ್ದೆವು. ಹೊಸಬೆಟ್ಟಿನ ಸರಳಾಯರ ಮನೆ (ಶ್ಯಾಮಲಕ್ಕ), ಪಡ್ಲಾಕಾಡು (ಕೃಷ್ಣರಾಯರ ಮನೆ), ಹೊಸಬೆಟ್ಟು ಶ್ಯಾನುಭಾಗ್ ಸಂಜೀವ ರಾಯರು, ಕಮಲ ದೊಡ್ಡಮ್ಮನ ಮನೆ, ಕುಳಾಯಿಯ ಸಂಭಟ್ರ ಒಳಚಿಲು (ನಮ್ಮ ಅಜ್ಜನ ಮನೆಯ ಸುತ್ತಮುತ್ತ) ಇವೆಲ್ಲಾ ನಮ್ಮ ಇಷ್ಟದ ಮನೆಗಳು. ಇಲ್ಲಿಗೆಲ್ಲಾ ಎಷ್ಟು ಬಾರಿ ಹೋಗಿ ಬಂದಿದ್ದೇವೋ, ತಿಂದುಂಡು ಬಂದಿದ್ದೇವೋ, ಬೈಸಿಕೊಂಡು – ಕೈಕಾಲುಗಳಿಗೆ ಗಾಯ ಮಾಡಿಕೊಂಡು, ಒಳ್ಳೆಯ ವಿಷಯಗಳಿಗೆ ಹೊಗಳಿಸಿಕೊಂಡು ಬಂದಿದ್ದೇವೋ ತಿಳಿಯದು.

ಚಿಕ್ಪಯ್ಯಾ...... ನಿಮ್ಮ ಪುಳ್ಳಿ ಲಲಿತನ ಮಗ... ಇದ್ದಾನಲ್ಲಾ, ಭಯಂಕರ ಪೋಕರಿ. ಕಡ್ಡಿ ಹಾಗೆ ಇದ್ದಾನೆ, ಸ್ವಲ್ಪ ಜಾಗ್ರತೆ. ಅಂತ ಅಜ್ಜನ ಹತ್ತಿರ ಈ ಹಿಟ್ಲರ್ ಹೇಳಿದ್ದನ್ನು ಕೇಳಿದ್ದೇನೆ. ಮರುದಿನ ಬೆಳಗ್ಗೆ ಬಂದು ಇದೇ ಹಿಟ್ಲರ್ ಆಚಾರ್ಯರು ನಾಡಿದ್ದು ಆದಿತ್ಯವಾರ ಮಕ್ಕಳೇ, ಮನೆಗೆ ಬನ್ನಿ, ಬ್ರಹ್ಮಚಾರಿ ಇದೆ ಅಂತ ಹೇಳಿ ಹೋಗುವಾಗ (ಇದು ಉಪನಯನ ವಾದ ಮಕ್ಕಳಿಗೆ ಮಾತ್ರ ಹೇಳಿಕೆ) ಏಯ್... ಬಾಲ... ಬಾ ಇಲ್ಲಿ... ಎಂದು ಕರೆದು ಮೈಮುಟ್ಟಿ ಗಟ್ಟಿಯಾಗಬೇಕೋ ಅಂತ ಎಷ್ಟೋ ಬಾರಿ ಬೆನ್ನು ತಟ್ಟಿ ಹೋದದ್ದೂ ನೆನಪಾಗುತ್ತದೆ.

ಅವರ ಮನೆಯಲ್ಲಿ ಬ್ರಹ್ಮಚಾರಿ ಊಟ ಮಾತ್ರ ಮಾಡಿ ಬರುವುದಲ್ಲ. ಬ್ರಹ್ಮಚಾರಿ ಮಕ್ಕಳು ಭೋಜನದ ನಂತರ ಉಳಿದ ಮಂದಿಗೆ ಬಡಿಸಬೇಕು (ಬಾಲ ಬ್ರಹ್ಮಚಾರಿ ಅಂದರೆ ತುಂಬಾ ಚಿಕ್ಕ ಮಕ್ಕಳನ್ನು ಬಿಟ್ಟು ಉಳಿದವರು). ಊಟಕ್ಕೆ ಬಡಿಸುವುದನ್ನು ಅವರ ಮನೆಯಲ್ಲಿ ನಾವು ಕಲಿತದ್ದು. ಎಲೆಗೆ ಪಾಯಸ ಎಲ್ಲಿ ಹಾಕಬೇಕು. ಉಪ್ಪು ಎಲ್ಲಿ ಹಾಕಬೇಕು. ಪಲ್ಯ, ಚಟ್ನಿ, ಕೋಸಂಬರಿ, ಚಿತ್ರಾನ್ನ, ಸಪಾದ ಭಕ್ಷ್ಯ, ಹಣ್ಣು ಹಂಪಲುಗಳು, ನೈವೇದ್ಯ ಎಲ್ಲಿ ಹಾಕಬೇಕು – ಎಷ್ಟು ಹಾಕಬೇಕು, ಹೇಗೆ ಬಡಿಸಬೇಕು ಎಂಬುದಕ್ಕೆ ಹೊಸಬೆಟ್ಟು ಸುತ್ತಮುತ್ತಲಿನ ಬ್ರಾಹ್ಮಣ ವಟುಗಳಿಗೆ ಹಿಟ್ಲರ್ ಮನೆ ಒಂದು training centre.

ಕೆಲವೊಮ್ಮೆ 2ನೇ ಪಂಕ್ತಿಗಳಿಗೆ item ಕಡಿಮೆಯಾಗುವುದೂ ಉಂಟು. ಅದನ್ನು ನೋಡಿಕೊಂಡು ಅವರು ಹೇಳಿದಂತೆ ಬಡಿಸಬೇಕು. ಅವರ ಮನೆಯಲ್ಲಿ ಯಾವುದೇ ಪೂಜೆ ಪುನಸ್ಕಾರಗಳಿರಲಿ ಮಧ್ಯಾಹ್ನದ ಊಟ 12 ಗಂಟೆಗೆ. ತಡಮಾಡಿ ಹೋದಲ್ಲಿ 2ನೇ ಪಂಕ್ತಿಗೇ ಚಾನ್ಸ್. ಹಾಗಾಗಿ ಅವರ ಮನೆಗೆ ನಾವೆಲ್ಲರೂ 11 ಗಂಟೆಗೇ ಹೋಗಿಬಿಡುತ್ತಿದ್ದೆವು. ಕಾರಣ – (1) ಸಮಯ ನಿಷ್ಠೆ (2) ಅಲ್ಲಿರುವ ಮನೆ ಮಕ್ಕಳ ಜೊತೆ ಆಟವಾಗುವ ಹಂಬಲ. ಊಟದ ನಂತರ ಹಿಟ್ಲರ್‌ರ ಇಸ್ಪೀಟ್ ಆಟದ ಕಳ. ಆರು ಜನ ಕೂತು ನಗು – ಹರಟೆ – ಹಾಸ್ಯ – ಅಬ್ಬರ – ಬೊಬ್ಬೆಯ ಮಧ್ಯೆ ನನ್ನಂತಹ ಕತ್ತೆ ಆಟ ಮಾತ್ರ ಗೊತ್ತಿರುವ ಪೇಚಿಗನಿಗೆ ಅವರ ಗೊಳ್ಳ್... ನಗು – ಆಟದ ಬಿರುಸೋ, ರಂಗೋ ತಿಳಿಯದಾಗಿತ್ತು. ಈ ಆಟದಲ್ಲಿ ಕೆಲವೊಮ್ಮೆ ನಮ್ಮ ಪ್ರಿನ್ಸಿಪಾಲ್ ಗೋಪಾಲಕೃಷ್ಣರಾಯರು ಜತೆಗೂಡುತ್ತಿದ್ದರು. ನನಗಂತೂ ಆಶ್ಚರ್ಯವಾಗುತ್ತಿತ್ತು – ಪ್ರಿನ್ಸಿಪಾಲರೂ ಇಸ್ಪೀಟ್ ಆಟ ಆಡುವುದಾ ಅಂತ !!

ಆ ಕಾಲದ ಅವರ ಮನೆಯಲ್ಲಿ ನಡೆಯುವ ಮದುವೆ ಉಪನಯನದ ಸಂಭ್ರಮಕ್ಕೆ ಎಣೆಯೇ ಇರುತ್ತಿರಲಿಲ್ಲ. 2 ದಿನದ ಉಪನಯನ, 4 ದಿನದ ಮದುವೆ, ಜೋಡು ಮದುವೆ, ಪಕ್ಕದ ಮನೆಯಿಂದ ದಿಬ್ಬಣ ಬರುವ ಗೌಜಿ. ಅಡುಗೆಗಾಗಿ ತರಕಾರಿಗಳ ರಾಶಿ, ಬಾಳೆ ಎಲೆ, ಅಡಿಕೆ, ವೀಳ್ಯದೆಲೆಯ ಗಂಟುಗಳು. ಇದನ್ನೆಲ್ಲಾ ಸರಿಯಾಗಿ ವಿಂಗಡಿಸಿ ಜೋಡಿಲು ಸೇರುವ ಗ್ರಾಮದ ಹಿರಿಯರು. ಅವರೆಲ್ಲರ ಕೆಲಸ ಕಾರ್ಯಗಳ ಮಧ್ಯೆ – ನಮ್ಮಂತಹ ಹುಡುಗರ ಓಡುವ – ಪಾಡಾಟ. ಎಷ್ಟು ಬೊಬ್ಬೆ ಹಾಕಿದರೂ, ಓಡಿದರೂ, ಬಿದ್ದು ಎದ್ದರೂ ಅವರೆಲ್ಲ ಅವರವರ ಪಾಡಿಗೆ ಕೆಲಸಗಳಲ್ಲಿ ಬ್ಯುಸಿಯಾಗಿರುತ್ತಿದ್ದರು. ಇಂದಿಗೆ ಇವೆಲ್ಲಾ ಮೆಲುಕು ಮಾತ್ರ. ಇವೆಲ್ಲಾ ದೃಶ್ಯಗಳನ್ನು ಹಿಟ್ಲರ್ ಮನೆಯಲ್ಲಿ ಮಾತ್ರ ನೋಡಲು ಸಾಧ್ಯ.

ಕಾವಿನಕಲ್ಲು ಕುಟುಂಬಕ್ಕೆ ಅಮೆ ಸೂತಕ ಬಂದರೆ ಪಡ್ಲಾಗಿ ಇರುವ ಲಕ್ಷ್ಮೀವೆಂಕಟೇಶ ಭಜನಾ ಮಂದಿರದ ಪೂಜೆಗೆ ಹಲವಾರು ಬಾರಿ ನನ್ನನ್ನು ಕರೆದಿದ್ದರು. ನನಗಂತೂ ಆ ಮಂದಿರದ ಪೂಜೆಗೆ ಹೋಗುವುದೆಂದು ಭಾರೀ ಇಷ್ಟ. ಕಾರಣ ಇಷ್ಟೇ. ಬೆಳಗ್ಗೆ 7 ಗಂಟೆಗೆ ನಮ್ಮ ಮನೆ ಮಾವನ (ಎಂ.ಎಸ್. ಆಚಾರ್) ಸೈಕಲ್ ಹಿಡಿದುಕೊಂಡು ಪಡ್ಲಾಗಿವರೆಗೆ ಸೈಕಲ್ ಬಿಡಲಿಕ್ಕೆ ಆಗುತ್ತದಲ್ಲಾ ಎಂದು. ನೋಡಿ, ಈ ಪೂಜೆಯಲ್ಲೂ ಆಟದ ಲೆಕ್ಕಾಚಾರ. ಆ ದೊಡ್ಡ ಸೈಕಲಿನಲ್ಲಿ ಎಡೆಗೆ ಕಾಲು ಹಾಕಿಕೊಂಡು ಬೈರಾಸು – ಶಾಲಿನಲ್ಲಿ ಪಡ್ಲಾಗಿವರೆಗೆ ಹೋಗಿ ಅಲ್ಲಿ ದೇವರ ಪೂಜೆ ಮುಗಿಸಿಕೊಂಡು ಬರುವುದೇ ಒಂದು ಸಂಭ್ರಮ ನನಗೆ.

ವೆಂಕಟಕೃಷ್ಣ ಆಚಾರ್ಯರ ಸರಳ ದಿರಿಸು ಅಂದರೆ ಒಂದು ಆರು ಮೊಳದ ಕಚ್ಚೆ ಬೈರಾಸು ಮತ್ತು ಮೇಲೊಂದು ಬೈರಾಸು. ಕೈಯಲ್ಲೊಂದು ಕೊಡೆ ಅಥವಾ ದಂಟೆ. ಸಾಮಾನ್ಯವಾಗಿ ಕರಾವಳಿ ಗಂಡಸರ ದಿನನಿತ್ಯದ ವೇಷಭೂಷಣ ಹೀಗಿತ್ತೆಂದರೆ ತಪ್ಪಲ್ಲ. ಕೃಷಿಗಾರಿಕೆಗೆ, ಬೇಸಗೆಯ ಚುಟಿಗೆ, ಮಾಗಿಯ ಸಣ್ಣ ಚಳಿಗೆ ಇವಿಷ್ಟು ಸಾಕಾಗಿತ್ತು. ಆಚಾರ್ಯರು ಈ ವೇಷದಲ್ಲಿ ಗದ್ದೆ ಬದಿಯಲ್ಲಿ ಕೂತು ನಟ್ಟಿ ನಡಿಸುವ ಕ್ರಮ, ಭತ್ತ ಕೊಯ್ಯುವ, ಅದನ್ನು ಮನೆಗೆ ತರಿಸುವಲ್ಲಿ ತಾವೂ ಆ ಮೂಟೆಗಳನ್ನು ಹೊತ್ತು ತರುವಾಗಿನ ದೃಶ್ಯದಲ್ಲಿ ಅವರ ಕಚ್ಚೆ ಎಲ್ಲಿಯೋ ? ಹೊಟ್ಟೆ ಎಲ್ಲಿಯೋ ? ಮುಖವಂತೂ ಕಾಣದಾಗಿತ್ತು. ಗದ್ದೆಯಲ್ಲಿ ಭತ್ತ, ಉದ್ದು, ಹೆಸರು, ತರಕಾರಿಗಳನ್ನು ವರ್ಷಪೂರ್ತಿ ಒಂದಲ್ಲಾ ಒಂದನ್ನು ಮಾಡಿಕೊಂಡು ಕೃಷಿ ವೃತ್ತಿಯಲ್ಲಿ ನಿಷ್ಠೆ, ಪ್ರವೃತ್ತಿಗಾಗಿ ವೈದಿಕ ಕೆಲಸ ಕಾರ್ಯಗಳನ್ನೂ ಮಾಡಿಕೊಂಡು, ಕೂಡು ಕುಟುಂಬದ ಯಜಮಾನನಾಗಿ, ಇಸ್ಪೀಟ್ ಆಟದ ರಾಜನಾಗಿ ಹಿಟ್ಲರ್ ಬಿರುದು ಪಡೆದು, ಬಡ ಅನ್ಯ ವರ್ಗದವರ ನೆಚ್ಚಿನ "ಏಟ್ಲರ್ ಆಚಾರ್" ಆಗಿ ಮೆರೆದರು.

"ತಾನು ನಡೆದ್ದೇ ದಾರಿ, ಆನೆ ಹೋದ್ದೇ ಹಾದಿ" ಎನ್ನುವ ಗಾದೆಯಂತೆ ಆಚಾರ್ಯರು ತನ್ನ ಬದುಕಿನಲ್ಲಿ ತನಗೆ ಕಂಡದ್ದನ್ನು, ಕಾಲಮಾನಕ್ಕೆ ಹೊಂದಿಸಿಕೊಂಡು, ತನ್ನದೇ ಸಮಜಾಯಿಸಿಕೆಯಲ್ಲಿ ಹಲವರ ಮನೆ – ಮನ ಬೆಳಗಿಸಿದ್ದಿದೆ. ಸಂಬಂಧ ಸಂಬಂಧದೊಳಗೆ ಬೆಸುಗೆ ಹಾಕಿದ್ದಿದೆ. 4 ದಿನದೊಳಗೆ

ಹುಡುಗಿ ನೋಡಿ ಮದುವೆ ಮಾಡಿಸಿದ್ದಿದೆ. ಕಷ್ಟದಲ್ಲಿರುವವರ ಆಸ್ತಿಪಾಸ್ತಿಗಳಿಗೆ – ಸರಿ ದಾರಿ ತೋರಿಸಿದ್ದಿದೆ. ಸಂಪ್ರದಾಯಗಳನ್ನು ಮೀರಿ ಆಚಾರ ವಿಚಾರಕ್ಕೆ ಹೊಸ ನಾಂದಿ ಹಾಕಿ ತೋರಿಸಿದ್ದಿದೆ. ಅಬ್ಬಬ್ಬಾ... ನಾವೆಲ್ಲಾ ಜರ್ಮನಿಯ ಹಿಟ್ಲರ್‌ನ ಕತೆ ಕೇಳಿದ್ದೇವೆ. ಆದರೆ ಈ ಹೊಸಬೆಟ್ಟಿನ ಹಿಟ್ಲರ್ ಒಬ್ಬ ಅದೆಷ್ಟು ಹೊಸ ಸಾಮಾಜಿಕ ಬದಲಾವಣೆಗಳನ್ನು ಕಾಲಕ್ಕೆ ತಕ್ಕಂತೆ ಹೊಂದಿಸಿಕೊಂಡು 'ಬಹುಜನ ಹಿತಾಯ' ದ ಕುರಿತಾಗಿ ಚಿಂತಿಸಿದ್ದಿದೆ ! ಎಂದರೆ ಅಚ್ಚರಿ ಪಡಲೇಬೇಕು.

ಯಾರೋ ಒಬ್ಬ ಪಾಪದವನು ಬಂದು ಇಂತಹದೊಂದು ದೇವರ ಕೆಲಸ, ತೀರಿಕೊಂಡ ಸಮಯದ ಕೆಲಸವಾಗಬೇಕು ಎಂದು ಆಚಾರ್ಯರಲ್ಲಿ ವಿಚಾರಿಸಿಕೊಂಡರೆ, "ಆವು... ಮಲ್ಪುಗಾ, ಏತ್ ಜನೊಕು ? ನಿನಡ ಕಾಸ್ ಏತುಂಡು ?" ಎಂದು ಅವನ ಕಷ್ಟ ಸುಖಗಳನ್ನು ವಿಚಾರಿಸಿಕೊಂಡು ಅವರ ಬಡ್ಜೆಟ್‌ಗೆ ಅಥವಾ ಅದಕ್ಕೆ ತನ್ನದನ್ನೂ ಸ್ವಲ್ಪ ಸೇರಿಸಿ, ಆ ಕೆಲಸ ಪೂರೈಸಿಕೊಡುತ್ತಿದ್ದರು. ಅವರಲ್ಲಿ ಯಾಚಿಸಿ ಬಂದವರನ್ನು, ಆಶ್ರಯಿಸಿ ಬಂದವರನ್ನು ಬಿಟ್ಟು ಕೊಡಲೇ ಇಲ್ಲ. ಅದು ಘಟ್ಟದ ಮೇಲಿಂದ ಬಂದ ಶಾಲಾ ಹುಡುಗರಾಗಲೀ, ಸಮುದ್ರ ಬದಿಯ ಮೊಗವೀರ ಬಂಧುಗಳಾಗಲೀ, ಸುತ್ತಮುತ್ತಲಿನ ಸಾಟಿಗರಾಗಲೀ, ಯಾರನ್ನೂ ಕೂಡಾ ಮನ ನೋಯಿಸದೆ, ಸ್ನೇಹಭಾವದಿಂದ ಅವರನ್ನು ಕಂಡು ಅವರಿಗೆ ಸಾರಥಿಯಾಗಿ ಸಹಾಯಕ ರಾಗಿರುತ್ತಿದ್ದರು. ಇಂತಹ ಉದಾಹರಣೆ ಅದೆಷ್ಟೋ ?!

ದೀಪಾವಳಿ ದಿನದಂದು, ತಮ್ಮ ಜನ್ಮ ದಿನದಂದು, ಮನೆಯಲ್ಲಿ ವಿಶೇಷ ಸಮಾರಂಭಗಳು ನಡೆಯುವಂದು ತನ್ನ ಚಿಕ್ಕಪ್ಪನನ್ನು ಅವರು ಎಂದೂ ಮರೆಯಲಿಲ್ಲ. ನನ್ನಜ್ಜ ಲಕ್ಷ್ಮೀನಾರಾಯಣ ಆಚಾರ್ಯರು ಸ್ವಲ್ಪ ಕೋಪಿಷ್ಠನಾದರೂ ವೆಂಕಟಕೃಷ್ಣ ಆಚಾರ್ಯರು ಬಂದು ಚಿಕ್ಪಯ್ಯಾ... ಎಲ್ಲಾ ಮರೆತು ಬಿಡಿ. ನಿಮ್ಮ ಆಶೀರ್ವಾದ ಬೇಕು ಎಂದು ನಮಸ್ಕಾರ ಮಾಡಿದಾಗ ನಮ್ಮಜ್ಜನ ಎಂಥಾ ಕೋಪವೂ ನೀರಾಗಿ



ಬಿಡುತ್ತಿತ್ತು. ನನ್ನ ಸೋದರ ಮಾವ ವೆಂಕಟರಾಯಾಚಾರ್ಯರಿಗೆ ವಾದಿರಾಜ ಆಚಾರ್ಯರ ಮನೆಯೆಂದರೆ ತುಂಬಾ ಪ್ರೀತಿ. ಇದಕ್ಕೆ ಕಾರಣ ಈ ಹಿಟ್ಲರ್, ಶ್ರೀಧರ ಆಚಾರ್ಯರು, ಮತ್ತು ಡಾ। ಸೀತಾರಾಮ ಆಚಾರ್ಯರು. ತನ್ನ ಸಂಶಯಕ್ಕೆ, ಅಥವಾ ಅವರ ಸಂಶಯಗಳಿಗೆ ಹಿಟ್ಲರ್ ಮನೆಯ ಜಗಲಿಯಲ್ಲಿ ಕೂತು ಹ್ನೂ..., ಹೌದೇ... ಅವನಿಗಲ್ಲ... ಅಂತ ವೆಂಕಟರಾಯಾಚಾರ್ಯರು ತನ್ನ ಶೈಲಿಯಲ್ಲಿ ಮಾತನಾಡುವುದೇ ಒಂದು ಮೋಜು. ನೋಡುಗರಿಗೂ, ಕೇಳುಗರಿಗೂ ಅವರೊಬ್ಬ ಪಿರ್ಕಿ ಮಾಸ್ಟ್ರು. ಆದರೆ ವೆಂಕಟರಾಯಾಚಾರ್ಯರ ಅಗಾಧ ಪಾಂಡಿತ್ಯಕ್ಕೆ ನಾಡೇ ಬೆರಗಾಗಿದೆ ಎಂದು ಇಲ್ಲಿ ಹೇಳಲೇಬೇಕು.


ತುಳಸೀಪೂಜೆಯಂದು ತುಳಸೀ ಹಬ್ಬವನ್ನು ಕುಳ್ಯಾ-ಹೊಸಬೆಟ್ಟಿನ ಆಯ್ದ ಕೆಲವು ಮನೆಯವರು ಸಂಜೆಯಿಂದ ಬೆಳಗಿನ ಜಾವದ ತನಕ ಒಬ್ಬೊಬ್ಬರ ಮನೆಯಲ್ಲಿ ಗೋವಿಂದ ನಾಮ ಹೇಳಿಕೊಂಡು ಸವಾರಿ ಭಜನೆ ಮಾಡುವ ಸಂಪ್ರದಾಯವಿತ್ತು. ಈಗಲೂ ಕೆಲವು ಮನೆಗಳಿಗೆ ಇದು ಸೀಮಿತವಾಗಿದೆ. ಆ ಕಾಲದಲ್ಲಿ ಹಿಟ್ಲರ್ ಮನೆಯಲ್ಲಿ ಕುಳ್ಯಾ ಗುಂಪಿನವರು ಮತ್ತು ಹೊಸಬೆಟ್ಟಿನ ಗುಂಪಿನವರು ಬೆಳಗಿನ ಜಾವದ 4 ಗಂಟೆಯ ಸಮಯಕ್ಕೆ ಕೊನೆಯ ಮನೆಯಾಗಿ ಸೇರುತ್ತಿದ್ದರು. ಅಲ್ಲಿ ಕಡೇ ಗೋವಿಂದ ನಾಮ ಸಂಕೀರ್ತನೆ. ಮೋಹನ ರಾಗದ ಕೀರ್ತನೆ, ಉದಯ ರಾಗದ ಗೋವಿಂದ ಕೀರ್ತನೆಗಳೊಂದಿಗೆ ಸಮ್ಮಿಳಿತವಾಗುವ ಈ ಅಖೇರಿಯ ಪೂಜೆ, ಹಾಡು, ನರ್ತನ ನೋಡಲು ತುಂಬಾ ಖುಷಿ. ಅದಕ್ಕಾಗಿ ನಾವು ಆ ಸಮಯಕ್ಕೇ ಅವರ ಮನೆಗೆ ಹೋಗುವುದಿತ್ತು. ಕೊನೆಯಲ್ಲಿ ಮನೆ ನಾರಾಯಣ ಆಚಾರ್ಯರ, ಉಪ್ಪಜೆ ಮಾಧವರಾಯರ, ವೆಂಕಟರಾಯಾಚಾರ್ಯರ ತಮಾಶೆಯ ದರ್ಶನ ಬೆರಗು ಹುಟ್ಟಿಸುತ್ತಿತ್ತು. ಈಗ ಅವೆಲ್ಲಾ ಸವಿ ನೆನಪುಗಳು ಮಾತ್ರ.

ಹಿಟ್ಲರ್ ಆಚಾರ್ಯರ ಮನೆಯ ಪಾಯಸದ ಗುಟ್ಟನ್ನು ಇಲ್ಲಿ ಹೇಳಲೇಬೇಕು. ಯಾವುದೇ ಪಾಯಸ ಮಾಡಲಿ, ಪಾಯಸ ಬಡಿಸಿದ ಮೇಲೆ ಸಕ್ಕರೆಯನ್ನು ಪಾಯಸದ ಮೇಲೆ ಬಡಿಸಬೇಕು. ಪಾಯಸ ಎಷ್ಟೇ ಸಿಹಿಯಾಗಿರಲಿ, ಸಕ್ಕರೆ ಬೀಳದ ಪಾಯಸ ಅದು ಪಾಯಸವೇ ಅಲ್ಲ. ಕೆಲವೊಮ್ಮೆ ಸಕ್ಕರೆಯೊಟ್ಟಿಗೆ ತುಪ್ಪವನ್ನೂ ಹಾಕುವ ಕ್ರಮವಿತ್ತು. ಅವರ ಮನೆಯ "ವರ್ಟಿ" ಪಾಯಸ ಫೇಮಸ್. ನೇಂದ್ರ ಬಾಳೆಹಣ್ಣಿನ ಪಾಯಸ – ಅದು ನೀರಾಗಿದ್ದರೂ ತಿನ್ನಲು ತುಂಬಾ ಟೇಸ್ಟಿ. ಅಂತಹ ವರ್ಟಿ ಪಾಯಸವನ್ನು ಅವರ ಮನೆಯಲ್ಲಷ್ಟೇ ತಿನ್ನಬೇಕು !!!

ನನ್ನ ದೊಡ್ಡಮ್ಮ (ಅಜ್ಜಿ) 1985 ಜೂನ್‌ನಲ್ಲಿ ತೀರಿಕೊಂಡರು. ನಾವಾಗ ಕೃಷ್ಣಾಪುರದ 6ನೇ ಬ್ಲಾಕಿನಲ್ಲಿದ್ದೆವು. ಈ ವಾರ್ತೆಯನ್ನು ವೆಂಕಟಕೃಷ್ಣ ಆಚಾರ್ಯರಿಗೆ ತಿಳಿಸಿದಾಗ, ನಾನೂ ಬರುತ್ತೇನೆ ಎಂದು ನನ್ನ ಸ್ಕೂಟರ್‌ನಲ್ಲಿ ಹೆಂಗಸರು ಕುಳಿತುಕೊಳ್ಳುವ ಹಾಗೆ ಹತ್ತಿ ಕುಳಿತು, ಕೃಷ್ಣಾಪುರಕ್ಕೆ ಬಂದು ಶವ ಸಂಸ್ಕಾರ ನಡೆಸಿಕೊಟ್ಟು ಸಾಂತ್ವಾನ ಹೇಳಿದ್ದಿದೆ. ಹಿಟ್ಲರ್‌ರು ಸಮಾಜವನ್ನು "ತನ್ನವರು" ಎಂದು ಕಂಡುಕೊಂಡವರು. ಹೀಗಾಗಿ ಅವರಿಗೆ ನಾವು – ನೀವು ಎಲ್ಲರೂ ಏಕ ತಕ್ಕಡಿಯವರೇ.

ಕಾವಿನಕಲ್ಲು ಮಠ ಬಹಳ ಹಳೆಯದು. ಅದರ ಉಸ್ತುವಾರಿಯನ್ನು ಕಾವಿನಕಲ್ಲು ವಾಸುದೇವ ಆಚಾರ್ಯರಿಗೆ ಅಂದು ವಾದಿರಾಜ ಆಚಾರ್ಯರ ಹಿರಿಯರು ವಹಿಸಿ ಕೇರಳದ ಮಣಲೂರಿಗೆ ಹೋಗಿ, ಅಲ್ಲಿನ ದೇವಸ್ಥಾನದಲ್ಲಿ ಅರ್ಚಕರಾಗಿ, ಮುಂದೆ ವಾದಿರಾಜ ಆಚಾರ್ಯರು ಮೈರ್ಪಾಡಿ ಗ್ರಾಮದ (ಈಗಿನ ಕುಳಾಯಿ ಗ್ರಾಮ) ಹತ್ತಿರವಿರುವ ಹೊಸಬೆಟ್ಟಿಗೆ ಬಂದು ಇಲ್ಲಿ ನಾಗಪ್ಪಯ್ಯ ಹತ್ವಾರ್‌ರಿಂದ ಸಣ್ಣ ಭೂಮಿ ಖರೀದಿಸಿ, ಮುಂದೆ ವೆಂಕಟಕೃಷ್ಣ ಆಚಾರ್ಯರಿಂದ ಆದಿಯಾಗಿ 8 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳಿಂದ, ಸಂಸಾರ ಸಾಗಿಸುತ್ತಾ, 'ಹಿಟ್ಲರ್' ಬಿರುದಾಂಕಿತರಾಗಿ ಎಲ್ಲೆ ಮೀರಿದ ಸಾಹಸಿಗನಾಗಿ, ಜನಾನುರಾಗಿಯಾಗಿ, ಕೀರ್ತಿಶೇಷರಾದ ವೆಂಕಟಕೃಷ್ಣ ಆಚಾರ್ ಯಾನೆ ಹಿಟ್ಲರ್ ಆಚಾರ್ ಯಾನೆ ವಿಟ್ಲರಾಚಾರ್‌ರನ್ನು ಅವರನ್ನು ನೋಡಿದ, ಒಡನಾಡಿದ ಮಂದಿಗೆ ಜೇನ ಸವಿಯಾದರೂ, ಈಗಿನ ಜನರೇಶನ್‌ಗೆ ಅವರೊಂದು ದಂತಕತೆ ಮಾತ್ರ.

ನಾ ಕಂಡಂತೆ ದಿವಂಗತ ಕಾವಿನಕಲ್ಲು ಹೊಸಬೆಟ್ಟು ವೆಂಕಟಕೃಷ್ಣ ಆಚಾರ್ಯರು (ಹಿಟ್ಲರ್ ಆಚಾರ್ಯರು)



ಯಚ್. ಮಧುಸೂದನ ರಾವ್

ನನ್ನ ಅಜ್ಜ ವೆಂಕಟಕೃಷ್ಣ ಆಚಾರ್ಯರ ಬಗ್ಗೆ ಒಂದು ಚಿಕ್ಕ ಪುಸ್ತಕ ಮುದ್ರಿಸಬೇಕೆಂದು ಆಲೋಚಿಸಿದ್ದೇನೆ. ಅದಕ್ಕೆ ನೀವು ನಿಮ್ಮ ಅನಿಸಿಕೆಯನ್ನು ಬರೆದುಕೊಡಬೇಕೆಂದು, ನನ್ನ ಮಿತ್ರ ವಿನೋದ ಆಚಾರ್ಯರು ಕೇಳಿಕೊಂಡಾಗ ಬಹಳ ಸಂತೋಷದಿಂದ ಒಪ್ಪಿಕೊಂಡೆ. ಆದರೆ ಅವರ ಬಗ್ಗೆ ಲೇಖನ ಬರೆಯುವಷ್ಟು ದೊಡ್ಡ ಲೇಖಕನೇನು ನಾನಲ್ಲವೆಂದು ನನ್ನ ಮನಸ್ಸಿನಲ್ಲಿ ತಳಮಳವಾಯಿತು. ಆದರೂ ಕೆಲವೊಂದು ವಿಚಾರಗಳನ್ನು ಓದುಗರ ಮುಂದೆ ಇಡಲು ಪ್ರಯತ್ನಪಡುತ್ತೇನೆ.

ಆಜಾನುಬಾಹು ಶರೀರ, ಹಣೆಯಲ್ಲಿ ಅಂಗಾರಕ ನಾಮ, ಕೊರಳಿನಲ್ಲಿ ತುಳಸಿಮಣಿ ಮಾಲೆ, ಮೈಯಲ್ಲಿ ದ್ವಾದಶಗೋಪಿ ಚಂದನ ಧಾರಣೆ, ಕಚ್ಚೆ , ಪಂಚೆ, ಮೈಮೇಲೆ ಒಂದು ಶಾಲು, ಕೈಯಲ್ಲಿ ಒಂದು ಕೊಡೆ. ಇದು ಅವರ ಧೀಮಂತ ವ್ಯಕ್ತಿತ್ವ. ನಿಜಹೆಸರಿನಲ್ಲಿ ವೆಂಕಟಕೃಷ್ಣ ಆಚಾರ್ಯರೆಂದು ಇದ್ದರು ಕೂಡಾ, ಹಿಟ್ಲರ್ ಆಚಾರ್ಯರೆಂದೇ ಪ್ರಸಿದ್ಧಿಯನ್ನು ಪಡೆದವರು. ಜರ್ಮನಿಯಲ್ಲಿ ಹಿಟ್ಲರ್ ಹೇಗೆ ತನ್ನ ಸರ್ವಾಧಿಕಾರದಿಂದ ಆಡಳಿತ ನಡೆಸಿಕೊಂಡು ಬಂದು ಚರಿತ್ರೆಯಲ್ಲಿ ಪ್ರಸಿದ್ಧಿಯನ್ನು ಪಡೆದನೋ ಅದರಂತೆ ಹೊಸಬೆಟ್ಟಿನಲ್ಲಿ ವೆಂಕಟಕೃಷ್ಣ ಆಚಾರ್ಯರು ಹಿಟ್ಲರ್ ಆಚಾರ್ಯರೆಂಬ ನಾಮಾಂಕಿತದಿಂದ, ಅವರ ಆದರ್ಶ ನಡೆ ನುಡಿಯಿಂದ ಜನಾನುರಾಗಿಯಾಗಿ ಚಿರಸ್ಥಾಯಿಯಾಗಿ ಉಳಿದರು.

1986ನೇ ಇಸವಿಯಲ್ಲಿ ಶ್ರೀಯುತರು, ತಮ್ಮ $78^1/_2$ ವರ್ಷ ಪ್ರಾಯದಲ್ಲಿ ಮರಣಹೊಂದಿದಾಗ, ನನಗೆ 36 ವರ್ಷ ಪ್ರಾಯ. ಅವರಿಗೆ ಇಸ್ಪೀಟು ಆಟವೆಂದರೆ ಪಂಚಪ್ರಾಣ. ವೈದಿಕ ವೃತ್ತಿಯೊಂದಿಗೆ, ಉಳಿದ ಸಮಯದಲ್ಲಿ ಅವರ ತಮ್ಮಂದಿರೊಂದಿಗೆ, ಊರಿನ ಪ್ರಮುಖರೊಂದಿಗೆ ಸೇರಿ ಇಸ್ಪೀಟು ಆಟ ಆಡುವುದು ಅವರ ಹವ್ಯಾಸ. ನನ್ನ ನೆನಪಿನ ಅಂಗಳದಲ್ಲಿದ್ದಂತೆ ಆ ಸಮಯದಲ್ಲಿ ಅವರ ತಂಡದಲ್ಲಿ ಅವರ ಸಹೋದರರಾದ ದಿವಂಗತ ನಾರಾಯಣ ಆಚಾರ್ಯರು, ದಿವಂಗತ ಶ್ರೀಧರ ಆಚಾರ್ಯರು ಇರಲೇಬೇಕಿತ್ತು. ಶ್ರೀಯುತ ಐ. ಗೋಪಾಲಕೃಷ್ಣ ರಾಯರು (ಗೋಪಾಲ ಮೇಸ್ಟ್ರು), ಶಂಭಟ್ಟರ ಮನೆ ಅಚ್ಚುತರಾಯರು ಅವರ ಗರಡಿಯಲ್ಲಿ ಪಳಗಿದ ಇತರ ಪ್ರಮುಖ ಇಸ್ಪೀಟು ಆಟಗಾರರು. ನಾನು ಮತ್ತು ನನ್ನ ಮಿತ್ರರು ಹಲವು ಬಾರಿ ಅವರ ಮನೆಗೆ ಇಸ್ಪೀಟು ಆಡಲು ಹೋಗುತ್ತಿದ್ದೆವು. ಅವರದು ಹಿರಿಯರ ತಂಡ, ನಮ್ಮದು ಯುವಕರ ತಂಡ. ಅವರು ಆಟದಲ್ಲಿ ನಿಸ್ಸೀಮರು, ಲೆಕ್ಕಾಚಾರದ ಆಟ, ಅಲ್ಲದೆ ಎದುರಾಳಿಯ ತಂಡದವರ ಕೈಯಲ್ಲಿ ಯಾವ್ಯಾವ ಇಸ್ಪೀಟು ಎಲೆಗಳು ಇವೆ ಎಂದು ನಿಖರವಾಗಿ ಹೇಳಬಲ್ಲವರು. ಆಟಗಳಲ್ಲಿ ಅವರದು ಇಂಗ್ಲೀಷಿನಲ್ಲಿ ಹೇಳುವುದಾದರೆ ಡಿಫೆನ್ಸಿವ್, ನಮ್ಮದು ಎಟಾಕಿಂಗ್ ಆಟವಾಗಿತ್ತು. ಹೆಚ್ಚಿನ ಆಟಗಳಲ್ಲಿ ಅವರೇ ಜಯಶಾಲಿಗಳಾಗುತ್ತಿದ್ದರು. ನಾವು ಸೋತಾಗ, ಎಲ್ಲಿ ನಾವು ತಪ್ಪಿದೆವು ಎಂಬುದನ್ನು ನಮಗೆ ತಿಳಿಸಿ,

ನಮ್ಮನ್ನು ಹುರಿದುಂಬಿಸಿ ಆಟ ಆಡಿಸುವ ಚಾಕಚಕ್ಯತೆ ಅವರಲ್ಲಿತ್ತು.

ಇನ್ನು ಮದುವೆ, ಉಪನಯನ ಅಥವಾ ಶ್ರಾದ್ಧದ ಸಮಾರಂಭಗಳಿಗೆ ಯಾರೇ ಆಮಂತ್ರಿಸಿದರೂ, ಹಿಂದಿನ ದಿನವೇ ಮನೆಗೆ ಭೇಟಿ ನೀಡುತ್ತಿದ್ದರು. ಸಾಹಿತ್ಯ ಎಷ್ಟು ಜನರಿಗೆ ಮಾಡುವುದು, ಏನೇನು ಮಾಡುವುದು ಎಂದು ವಿಚಾರ ವಿನಿಮಯ ಮಾಡಿ ಹೋಗುತ್ತಿದ್ದರು. ಮರುದಿನ ಅವರು ಮನೆಗೆ ಬಂದ ಕೂಡಲೇ ಪ್ರಥಮತವಾಗಿ ಭೇಟಿ ನೀಡುವುದು ಅಡುಗೆ ಮನೆಗೆ. ಅಲ್ಲಿ ಅಡುಗೆ ಭಟ್ಟರಲ್ಲಿ ಎಷ್ಟು ಸೇರು ಅನ್ನ ಮಾಡಿದ್ದೀರಿ? ಏನೇನು ಪದಾರ್ಥಗಳೆಂದು ವಿವರ ಪಡೆದುಕೊಂಡು, ಅದರಲ್ಲಿ ಹೆಚ್ಚು ಕಡಿಮೆ ಇದ್ದಲ್ಲಿ, ತಿಳಿಸಿ ಸರಿಪಡಿಸಿಕೊಂಡು ಹೋಗುವಂತಹ ಬಹಳ ದೊಡ್ಡ ಗುಣ ಅವರಲ್ಲಿತ್ತು. "ಹಪ್ಪಳಕ್ಕೆ ಎಣ್ಣೆ ಇಟ್ಟರೆ, ಮುಂದುವರಿಸಿ" ಎಂದು ಊಟಕ್ಕೆ ಬಾಳೆ ಎಲೆ ನೀಡಲು ಆದೇಶ ನೀಡುತ್ತಿದ್ದರು.

ಇನ್ನು, ನಾನು ಅವರ ಮನೆಗೆ ತುಳಸಿ ಪೂಜೆಗೆ ಹೋಗುತ್ತಿದ್ದ ಸಂದರ್ಭ. ಸಂಕೀರ್ತನೆ ಹೇಳುವಾಗ, ಅವರು ಹುರಿದುಂಬಿಸುವ ಶೈಲಿ ನಿಜಕ್ಕೂ ಅನುಕರಣನೀಯ. ಅವರ ನಗುವಿನ ಶೈಲಿಯೇ ಬೇರೆ. ಅದು ಯಾವಾಗಲೂ ನನ್ನಲ್ಲಿ ಅಚ್ಚಳಿಯದೆ ಉಳಿದಿದೆ ಎಂದರೆ ತಪ್ಪಾಗಲಾರದು. ಮೂಗಿನ ತುದಿಯಿಂದ ಅರ್ಧ ಇಂಚು ಮೇಲಕ್ಕೆ ಕನ್ನಡಕವನ್ನು ಧರಿಸಿ ಅವರು ದಿಟ್ಟಿಸಿ ನೋಡುವ ಪರಿ ಸದಾ ಹಚ್ಚ ಹಸುರು.

ಈಗ ಅವರು ನೆನಪು ಮಾತ್ರ. ಅವರ ಒಡನಾಟದ ಸಮಯದ ಮಧುರತೆ ಮಾತ್ರ.





ಈಶ (ಆವಾಸ್ಯ) ಸ್ಮರಣೆ

ರಘುಪತಿ ಭಟ್, ಸಸಿಹಿತ್ಲು
ದ್ವೈತವೇದಾಂತಿ, ಉಪನ್ಯಾಸಕ ಹಾಗೂ ಜ್ಯೋತಿಷಿ

ಜೀವಜಡಾತ್ಮಕವಾದುದೀ ಪ್ರಪಂಚ. ಸ್ಥಾವರ ಜಂಗಮಾತ್ಮಕವೂ ಹೌದು. ಪ್ರಪಂಚವೆಂಬುದು ಜಗಕೆ ಪ್ರಾಜ್ಞರಿತ್ತ ಅಭಿದಾನ. ಲೋಕವೆಂಬುದಿದರ ಪರ್ಯಾಯ ನಾಮ. ಯಾಕಿದು ಪ್ರಪಂಚ? ಅಥವಾ ಲೋಕ? ವಿಚಿಕಿತ್ಸೆಗೆ ತೊಡಗಿದರೆ ಶಬ್ದದ್ವಯಗಳ ಅರ್ಥ ಸಂಪತ್ತಿ ನಮ್ಮನ್ನು ಬೆರಗುಗೊಳಿಸುತ್ತದೆ. ಪ್ರಾಚೀನರು ಶಬ್ದ ಶಬ್ದಗಳಲ್ಲಿ ಅರ್ಥ ವಿಸ್ತೃತಿಯನ್ನು ತುಂಬಿದರು. ಪದಪದಗಳೊಳಗೆ ವೈಚಾರಿಕೆಯನ್ನು ಮೆರೆದರು. ನಮ್ಮನ್ನು ಅಚ್ಚರಿಯ ಕಡಲಲ್ಲಿ ಮಿಂದೇಳುವಂತೆ ಮಾಡಿದರು. ಆದರೆ ನಾವು ಒಳಗಣ್ಣ ತೆರೆದ ಮುಕ್ಕಣ್ಣರಾಗಬೇಕಷ್ಟೇ.

"ಪಂಚಭಿಃ ಪ್ರಕರ್ಷೇಣ ನಿರ್ಮಿತೋಽಯಂ ಪ್ರಪಂಚಃ" ಇದು ಪ್ರಪಂಚ ಶಬ್ದದ ನಿರ್ವಚನ. ಅರ್ಥಾತ್ ಐದರ ಗುಂಪು. ಮಣ್ಣು, ನೀರು, ಗಾಳಿ, ಬೆಂಕಿ, ಆಕಾಶಗಳೆಂಬ ಪಂಚಭೂತಗಳ ಗುಂಪು. ಪೃಥಿವ್ಯಾದಿ ಪಂಚಕಗಳ ಮಹಾ ಸಮ್ಮಿಶ್ರಣ. ಈ ಜಗತ್ತನ್ನು ಪಂಚ ತತ್ವಗಳ ಅಸ್ತಿತ್ವದಿಂದ ಕಾಣಬಹುದಾಗಿದೆ. ಅದಕೆಂದೆ ಇದು ಲೋಕ.

'ಲೋಕ್ಯ-ದರ್ಶನೇ'. ಗೋಚರತ್ವ ವಿಶಿಷ್ಟವಾದ ಪ್ರಪಂಚವೇ ಲೋಕ.

ತಾತ್ತ್ವಿಕವಾಗಿ ಈ ಲೋಕ ಪಂಚಮುಖಿ ಸೃಷ್ಟಿಯೂ ಹೌದು. ಪೃಥಿವ್ಯಾದಿಗಳು ಪಂಚಭೂತಗಳು. ರೂಪರಸಾದಿಗಳು ಪಂಚ ತನ್ಮಾತ್ರೆಗಳು. ತನ್ಮಾತ್ರೆಗಳನ್ನು ಅರಿಯಲು ಆಸ್ವಾದಿಸಲು ಪಂಚೇಂದ್ರಿಯಗಳು. ಅನುಭವದ ಪ್ರವೃತ್ತಿಗೆ ಪಂಚ ಕರ್ಮೇಂದ್ರಿಯಗಳು.

ಜೊತೆಗೆ ಅರಿಕೆಗೆ ಅಧಿಕರಣವೆನಿಸಿದ ಮನಸ್ಸೂ ಪಂಚವಿಧ. ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಚೇತನ. ಬಯಸುವಂತಹದ್ದು ಮನಸ್ಸು. ನಿರ್ಣೈಸುವಂತಹದ್ದು ಬುದ್ಧಿ. ನಾನು, ನನ್ನದೆಂಬ ಪ್ರಾಪಂಚಿಕ ಸಂಬಂಧ ಅಹಂಕಾರ. ಸ್ಮರಣಶಕ್ತಿಯ ಕೇಂದ್ರ ಚಿತ್ತ. ಜನ್ಮಜನ್ಮಾಂತರದ ಸ್ಮರಣಶಕ್ತಿಯ ವಿಸ್ತಾರವೇ ಚೇತನ.

ಈ ಪ್ರಪಂಚದೊಂದಿಗೆ ಜೀವಾತ್ಮನಿಗಾದರೋ ಅವಿನಾಭಾವ ಬೆಸುಗೆ. ಇದು ಆತನ ಕರ್ಮ ಭೂಮಿ. ಇಲ್ಲಿಯ ಬಂಧ-ಬಂಧನಕ್ಕೆ ಮನಸ್ಸೇ ಪ್ರಚೋದಕ. ಮನವೇ ವಿಮೋಚಕ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ". ಚಿತ್ತ ಚೇತನಗಳ ಭಿತ್ತಿಯಲ್ಲಿ ಮಡುಗಟ್ಟಿದೆ ಪುಣ್ಯ ಪಾಪಗಳ ಫಲಾನುಭೂತಿ.

ಇಲ್ಲಿ ಪರಿಪಾಕಗೊಂಡ ಅನುಭಾವದಿಂದ ಮತ್ತೊಮ್ಮೆ ಇಳೆಗಿಳಿವ ಬಯಕೆ. ಪಾರತ್ರಿಕ ಸುಖ ಸಾಮ್ರಾಜ್ಯದಲ್ಲಿ ತೇಲಾಡುವ ಲಲಾಸೆ. ಮತ್ತಷ್ಟು ಪೂತಾತ್ಮನಾಗುವ ಪುಣ್ಯಾತ್ಮನಾಗುವ ವಾಂಛೆ. ಸರಿಜೀವ ಪಾರ್ಥಿವ ಶರೀರ ಧರಿಸಿ ಧರೆಗಿಳಿದ. ಆದರೆ ಬುದ್ಧಿ-ಚಿತ್ತ-ಚೇತನಗಳು ಸ್ತಬ್ಧಗೊಂಡವು. ತನ್ನನ್ನು ತಾ ಮರೆತ. ಮನಸ್ಸು-ಅಹಂಕಾರಗಳು ವಿಜೃಂಭಿಸಿದವು. ಭಗವಂತನನ್ನೂ ಮರೆತ. ಬೇರೇನನ್ನೋ ಇನ್ನಿಲ್ಲದಂತೆ ಹುಡುಕಾಡಿದ, ತಡಕಾಡಿದ. ಹೊರಗಿಂದ ಹೊರಗೆ. ಒಳಗಿಂದ ಒಳಗಲ್ಲ. ಆತ್ಮ ಸಂಬದ್ಧ ಗುಣಗಳಿಗೆ ದಾಸನಾದ. ಸಾಂಸಾರಿಕ ಪಾಶದಲ್ಲಿ ಬಿಗಿಯಾಗಿ ಬಂಧಿಸಲ್ಪಟ್ಟ. ಮತ್ತೆ ಈ ಕರ್ಮ ಪ್ರಪಂಚದ ಕೈಗೊಂಬೆಯಾದ. " ವಾಸನಾವಸಗೋ ಜೀವಃ ".

ಹಾಗಾದರೆ ಈ ಬಂಧನದ ಬಿಡುಗಡೆಯ ಹಾದಿ ಯಾವುದು? ಬಲ್ಲವರೆಂದರು ಅಮಲ ಮನಸ್ಸು. ಹರಿಸ್ಮರಣೆಯೇ ತರಣಿ. ವಿಮಲ ಭಕ್ತಿಯೇ ಸಾಧನ. ಜೀವನಯಾನವೇ ಮಹಾಯಾತ್ರೆ. ದೇಹವೇ ಹೊತ್ತೊಯ್ಯುವ ರಥ. ಆತ್ಮನೇ ರಥಿ. "ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು". ಬುದ್ಧಿಯೇ ಸಾರಥಿ. ಬಯಕೆಗಳ ಗೊಂದಲದ ಗೊಂಚಲಿನ ಮನಸ್ಸೇ ಹಗ್ಗ. " ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹ ಮೇವ ಚ ".
ಆದುದರಿಂದ ಬಯಕೆಗಳ ಅಡಗುದಾಣವಾದ ಮನಸ್ಸನ್ನೇ ಹಗ್ಗವಾಗಿಸಿ ನಿಗ್ರಹಿಸಬೇಕು. ಹದಗೊಳಿಸಬೇಕು. ಚಿತ್ತಚೇತನಗಳ ಭಿತ್ತಿಯನ್ನೊಡೆದು ಒಳಗಿಣುಕಬೇಕು. ಸ್ಮರಣಶಕ್ತಿಯ ಕೇಂದ್ರವನ್ನು ತಲಪಬೇಕು. ತನ್ನನ್ನು ತಾನರಸಬೇಕು. ಅನುಭಾವದ ಮೂಸೆಯಲ್ಲಿ ಹುದುಗಿದ ಭಕ್ತಿಭಾವದ ಸೆಲೆಯ ಹೊರಹರಿಸಬೇಕು. ಹೃನ್ಮಧ್ಯದಲ್ಲಿ ಭಗವಂತನನ್ನು ಪ್ರತಿಷ್ಠಾಪಿಸಬೇಕು. ಆತನಲ್ಲಿ ಮನಸ್ಸನ್ನು ನೆಲೆಗೊಳಿಸಬೇಕು. ಆತನ ನಾಮಸ್ಮರಣೆಯ ಬಲದಿಂದ ಬಲಿಷ್ಠರಾಗಬೇಕು.
ಅದಕ್ಕಾಗಿಯೇ ಶ್ರೀಮದಾಚಾರ್ಯರು "ಸ್ಮೃತ್ವಾ ವಿಷ್ಣುಂ ಸಮುತ್ಥಾಯ" ಎಂದರು. ಭಗವಂತನ ಸ್ಮರಣೆಯೊಂದಿಗೆ ಬೆಳಕು ಹರಿಯಲೆಂದರು. ಅದಕ್ಕೆ ಆಲಸ್ಯ ಬಿಟ್ಟ ಭಗೀರಥರಾಗಬೇಕು ನಾವು. " ಧ್ಯಾಯೇದ್ವಿಷ್ಣುಂ ಅತಂದ್ರಿತಃ ". ಹರಿಯಚರಣಕೆರಗಿರೋ, ಸ್ಮರಿಸಿ ಬದುಕಿರೆಂದರು ದಾಸರು. ನವವಿಧ ಭಕುತಿಯಲ್ಲೂ ಸ್ಮರಣೆಗೆ ಮೊದಲ ಪ್ರಾಶಸ್ತ್ಯ ಸಿಕ್ಕಿತು. "ಸ್ಮರಣಂ ಕೀರ್ತನಂ ವಿಷ್ಣೋಃ".
ನಿರಂತರ ಸ್ಮರಣೆಗೆ ಯಾವುದೋ ಮಂತ್ರದ ಅನಿವಾರ್ಯತೆ ಇಲ್ಲ.
"ನಾಹಂ ಕರ್ತಾ ಹರಿಃಕರ್ತಾ" ಎಂಬ ಅನುಕ್ಷಣದ ಅನುಸಂಧಾನ. ಶರೀರ ಚೇಷ್ಟೆಗಳೆಲ್ಲ ಭಗವದಾರಾಧನೆಯಾಗಲೆಂಬ ಮಾನಸ ಪಕ್ವತೆ. ಭಗವಂತನ ಸರ್ವೋತ್ತಮತ್ತ್ವದ ಸರ್ವನಿಯಾಮಕತ್ತ್ವದ ಪ್ರಜ್ಞೆ, ಇದೇ ಹರಿ ಸ್ಮರಣೆ. ಇದೇ ಬಾಳಿನ ಬಿಡುಗಡೆಯ ಬಗೆ. ಜನ್ಮಜನ್ಮಾಂತರದ ಪಾಪಪರಿಹಾರಕ ದಾರಿ. ಮುಂದೆ ಬಂಧನಕ್ಕೊಳಗಾಗದಂತೆ ತಡೆವ ಶ್ರೀಹರಿಯ ಶ್ರೀರಕ್ಷೆ. "ತದಧಿಗಮ ಪೂರ್ವೋತ್ತರಾಘಯೋರಶ್ಲೇಷವಿನಾಶೌ."

ತದನಂತರ ಇಂದ್ರಿಯಾಭಿಮಾನಿಗಳ ಸಂಸ್ಮರಣೆ. ಪದಾರ್ಥೇಂದ್ರಿಯಗಳ ಸನ್ನಿಕರ್ಷವೇ ಬೇಕು – ಬೇಡಗಳಿಗೆ ಹೇತು. ನಮ್ಮ ಬೇಕುಗಳು ಅಂತ್ಯವಿಲ್ಲದ ಅನಂತಾವತಾರ. ಆದುದರಿಂದಲೇ "ಇಂದ್ರಿಯಾಣಿ ಹಯಾನ್ಯಾಹುಃ". ಇವು ಗುರಿ ಮುಟ್ಟಿಸುವ ಕುದುರೆಗಳಲ್ಲ. ಬಿಸಿಲುಗುದುರೆಯ ಹಿಂಬಾಲಿಸುವ ಹುಚ್ಚುಗುದುರೆಗಳು. ಇವುಗಳನ್ನು ಕಟ್ಟಿ ಹಾಕುವಂತೆ ಇಂದ್ರಿಯಾಭಿಮಾನಿಗಳ ಸ್ಮರಣೆ. "ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವ ಹಿ". ಧರ್ಮಮಾರ್ಗದಲ್ಲಿ ನಡೆವ ಬಗೆ ನಮ್ಮದಾಗಲಿ. ದೇವರು ಮೆಚ್ಚುವ ಬದುಕು ನಮ್ಮದಾಗಲೆಂಬ ಪ್ರಾರ್ಥನೆ.

ಹರಿಯನ್ನೂ ಹರಿಕಿಂಕರರನ್ನೂ ಸ್ಮರಿಸಿದ್ದಾಯಿತು. ಈಗ ಕಿಂಕರೋತ್ತಮನ ಸ್ಮರಣೆ. ಪುರುಷೋತ್ತಮನೆಡೆಗೆ ಅಡಿಯಿಡಲು ಜೀವೋತ್ತಮನ ಸ್ಮರಣೆ. ಹನುಮ–ಭೀಮ–ಮಧ್ವರ ಸ್ಮರಣೆ. ದುರ್ಮಾರ್ಗದಿಂದ ವೈಷ್ಣವತ್ತ್ವದ ಸನ್ಮಾರ್ಗದತ್ತ ನಡೆಸಲು ಸ್ಮರಣೆ. ಅದಕೆಂದೆ ಸನಕಾದಿಗಳಿಂದ ಅಖಂಡ ಗುರುಪರಂಪರೆಯ ಸ್ಮರಣೆ. ಪ್ರಯೋಜನ ನಾಲ್ಕು. ಆಯುಷ್ಯ–ವಿದ್ಯೆ–ಯಶಸ್ಸು–ಬಲಗಳ ಪ್ರಾಪ್ತಿ. "ಚತ್ವಾರಿತಸ್ಯ ವರ್ಧಂತೇ ಆಯುರ್ವಿದ್ಯಾಯಶೋಬಲಂ".
ಆತ್ಮೇಂದ್ರಿಯಮನಃಶುದ್ಧಿಗೆ ಇವಿಷ್ಟೇ ಸಾಲದು. ಪತಿವ್ರತಾಸ್ಮರಣೆ, ಪುಣ್ಯಶ್ಲೋಕರ ಸ್ಮರಣೆ, ಪುಣ್ಯಕ್ಷೇತ್ರಾದಿ ಸ್ಮರಣೆ, ದೇವತಾರ್ಚನೆಯ ಮೂಲಕ ದೇವಋಣದ ಸ್ಮರಣೆ, ಬ್ರಹ್ಮಚರ್ಯ, ದೇವರ್ಷಿ ತರ್ಪಣದಿಂದ ಋಷಿಋಣದ ಸ್ಮರಣೆ. ಪಿತೃತರ್ಪಣ, ಷಣ್ಣವತಿ ಶ್ರಾದ್ಧಗಳಿಂದ ಪಿತೃಋಣದ ಸ್ಮರಣೆ. "ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿಃ ಋಣವಾನ್ ಜಾಯತೇ".

ಹೀಗೆ ಬಾಳಬಂಡಿ ಸಾರ್ಥಕಗಮ್ಯದತ್ತ ಸಾಗಲು ಸ್ಮರಣೆಯೊಂದೇ ಸಾಲದೇ? ಹರಿ ಸ್ಮರಣೆಯಿಂದ ಮನಃಶುದ್ಧಿಯ ಸಾಧಿಸಬೇಕು. ಹೃನ್ಮಂಟಪದಲ್ಲಿ ಶ್ರೀಕಾಂತನನ್ನು ಕುಳ್ಳಿರಿಸಬೇಕು. ಬಾಳನೌಕೆಯ ಸಾರಥ್ಯವನ್ನು ಪಾರ್ಥಸಾರಥಿಗೆ ವಹಿಸಬೇಕು. ಹರಿಯ ಹಸಾದವೆಂದು ಬಗೆದು ಬದುಕ ಸವೆಸಬೇಕು. ಇದೇ ಯಜ್ಞವೆನಿಪ ಬದುಕು. ಧನ್ಯತೆಯ ಬದುಕು.

" ಮೇರುದಂಡ " ದ ವೆಂಕಟಕೃಷ್ಣ ಆಚಾರ್

ನಮ್ಮ ಮನೆಯಲ್ಲಿ (ಹೊಸಬೆಟ್ಟಿನಲ್ಲಿ) ತಂದೆಯನ್ನು ಅಪ್ಪಯ್ಯ ಎಂದು ಕರೆಯುವ ರೀತಿ. ಹಾಗೇ ವೆಂಕಟಕೃಷ್ಣಾಚಾರ್ಯರು – ನನಗೆ ದೊಡ್ಡಪ್ಪಯ್ಯ. ಅವರು ಗುರುರಾಜಣ್ಣ ಮತ್ತು ಲಕ್ಷ್ಮೀ ಅಕ್ಕನನ್ನು ಬಿಟ್ಟರೆ, ಎಲ್ಲರಿಗೂ ದೊಡ್ಡಪ್ಪಯ್ಯನೇ.

ನನಗೆ ಅವರ ಸಹವಾಸ ಹೆಚ್ಚಿಗೆ ಸಿಗಲಿಲ್ಲ. ನಾನು ಕಾಶಿಯಲ್ಲಿ ಬೆಳೆದವಳು. ಆದರೆ 5–6 ವರ್ಷದ ಪ್ರಾಯದಲ್ಲಿ 2 ವರ್ಷ ಅಮ್ಮನ ಅಸ್ವಾಸ್ಥ್ಯದಿಂದಾಗಿ, ಊರಲ್ಲಿ ಮನೆಯಲ್ಲಿ ಇದ್ದೆ. ಆವಾಗದ್ದೂ ಮತ್ತು ಮುಂದೆ ಅವರನ್ನು ಸಿಕ್ಕಿದಾಗಲೆಲ್ಲ, ಅನುಭವಗಳು, ವಿಚಾರ ಮಾಡುವಾಗ – ಅವರ ವಲಯ, ಪ್ರಭಾವ, ಅವರ ವ್ಯಕ್ತಿತ್ವವನ್ನು ಸ್ಪಷ್ಟ ತೋರಿಸುತ್ತದೆ.

ದೊಡ್ಡ ಪರಿವಾರದ ಜವಾಬ್ದಾರಿ ಅವರ ಮೇಲೆ ಸಣ್ಣ ಪ್ರಾಯದಲ್ಲಿಯೇ ಬಿತ್ತು. 7 ಜನ ತಮ್ಮಂದಿರು, 1 ತಂಗಿ. ಕಡೇ ತಮ್ಮ $2^1/_2$ ವರ್ಷ ಪ್ರಾಯ, ತಂದೆ, ಬೇಗ ತೀರಿಹೋದದ್ದರಿಂದ ಇವರೇ ಎಲ್ಲರಿಗೂ ತಂದೆಯಂತೆ. ಎಲ್ಲರ ಶಿಕ್ಷಣ, ಜೀವಿಕೆ, ಮದುವೆ, ಎಲ್ಲಾ ಜವಾಬ್ದಾರಿ ಇವರ ಹೆಗಲ ಮೇಲೆ. ಅದರಲ್ಲಿ ತಂಗಿ ಮದುವೆಯಾದರೂ – ತಾಯಿ ಮನೆಯಲ್ಲಿ ಬಂದು ಇರುವ ಪರಿಸ್ಥಿತಿ. ಮುದ್ದಿನ ಒಂದು ತಂಗಿ. ಅವಳ ಮನಸ್ಸನ್ನು ನೋಯಿಸದೇ ಅವಳಿಗೆ ಅಡುಗೆ ಮನೆಯ ಕೆಲಸಗಳಲ್ಲಿ, ಸಣ್ಣ ಪುಟ್ಟ ಕೆಲಸಗಳ ಜವಾಬ್ದಾರಿಯನ್ನು ಕೊಟ್ಟು, ಅವಳ ಮನಸ್ಸನ್ನು ವಿಚಲಿತವಾಗದಂತೆ, ನೋಡಿಕೊಳ್ಳುವ ಪ್ರಯಾಸ.

ಇನ್ನು ಕೇವಲ ಮನೆಯವರಲ್ಲದೇ, ಪರವೂರಿನಿಂದ ಎಷ್ಟೋ ಮಕ್ಕಳು, ದೂರದ ಸಂಬಂಧ, ಪರಿಚಯದ ಮುಖಾಂತರ ಶಿಕ್ಷಣಕ್ಕಾಗಿ ಮನೆಯಲ್ಲಿ ಒಟ್ಟಿಗೆ ಇರುತ್ತಿದ್ದರು. ಅವರೆಲ್ಲರನ್ನೂ ಮನೆಮಕ್ಕಳಂತೆ ಸೇರಿಸಿಕೊಂಡು ಸಮತೋಲನದಿಂದ, ಮನೆ ನಡೆಸುವಂಥಾ ಕ್ರಮ, ಶಿಸ್ತು ಎಲ್ಲಾ ನೆನಪಾಗುತ್ತದೆ.



ಪದ್ಮೇಶ ಮತ್ತು ನೀರದಾ

ಗದ್ದೆ, ತೋಟದ ಕೆಲಸ, ಪೌರೋಹಿತ್ಯ, ಪೂಜೆ, ಪುನಸ್ಕಾರಗಳು ಮನೆಯಲ್ಲಿ ಯಾವಾಗಲೂ ವಿಜೃಂಭಣೆಯಿಂದ ನಡೆಯುತ್ತಿರುತ್ತಿತ್ತು. ನಾವೆಲ್ಲರೂ ತುಂಬಾ ಸಂತೋಷ, ಆನಂದದಿಂದ ಇದ್ದದ್ದು ಇವರಿಂದಾಗಿಯೇ, ಅವರು ಆ ಮನೆಯ "ಮೇರುದಂಡ".

ದೊಡ್ಡಪ್ಪಯ್ಯನವರು ಮನೆ ಮಾತ್ರವಲ್ಲ, ಆಗಿನ ಸಮಾಜಕ್ಕೇ, ಮೇರುದಂಡವೆಂದು ಹೇಳಬಹುದು. ಎಲ್ಲರ ಕಷ್ಟ, ಸುಖಗಳಲ್ಲಿ ಭಾಗವಹಿಸಿ, ಉಚಿತ ಸಲಹೆಗಳನ್ನು ನೀಡಿದವರು. ಎಷ್ಟೋ ಮದುವೆಗಳನ್ನು, ವಧೂ–ವರರನ್ನು ಪರೀಕ್ಷಿಸಿ ಮಾಡಿಸಿದವರು. ಯಾರಿಗಾದರೂ ಕಷ್ಟವಿದೆ, ಸ್ಥಳವಿಲ್ಲ, ದುಡ್ಡಿನ ತಾಪತ್ರಯವಿದೆ ಎಂದಾಗ ತಮ್ಮ ಮನೆಯಲ್ಲಿಯೇ ಕಾರ್ಯಕ್ರಮವನ್ನು ಮಾಡಿ ನಡೆಸಿಕೊಂಡು ಹೋಗುತ್ತಿದ್ದರು.

ನಮ್ಮ ಮನೆಯ ಹೊರಗೆ, ದಾರಿಬದಿಯಲ್ಲಿ ಒಂದು ಅಶ್ವತ್ಥ ಮರವಿತ್ತು (ಈಗಿನವರೆಗೆ) ಅದರಲ್ಲಿ ಎಷ್ಟೋ ಪಕ್ಷಿಗಳು ವಾಸವಾಗಿರುತ್ತಿತ್ತು. ಅದರ ನೆರಳಲ್ಲಿ ದಾರಿಹೋಗುವವರೂ ವಿಶ್ರಮಿಸುತ್ತಿದ್ದರು. ಸುತ್ತಮುತ್ತಲಿನವರು ಅದರ ಮಡಿಲಲ್ಲಿ ಕೂತುಕೊಂಡು ಸುಃಖ ದುಃಖದ ಆದಾನ – ಪ್ರದಾನ ಮಾಡುತ್ತಿದ್ದರು.

ಹಾಗೆಯೇ ನಮ್ಮ ಮನೆ ಒಳಗಿನ ಅಶ್ವತ್ಥ ವೃಕ್ಷವೆಂದರೆ – ನಮ್ಮ ದೊಡ್ಡಪ್ಪಯ್ಯ – ಶ್ರೀ ವೆಂಕಟಕೃಷ್ಣ ಆಚಾರ್ಯರು.

ನಾವು ಕಂಡಂತೆ



ಯಚ್. ಕೃಷ್ಣ ಭಟ್ ಮತ್ತು ಸಾವಿತ್ರಿ

ಹಳೆ ಮನೆಯ ದೊಡ್ಡ ಜಗುಲಿಯ ತುದಿಯ ಕಂಬದ ಹತ್ತಿರ ವೀಳ್ಯದೆಲೆ ಹರಿವಾಣವನ್ನಿಟ್ಟುಕೊಂಡು, ಅಡಕತ್ತರಿಯಿಂದ ಪುಡಿ ಮಾಡಿ ಬಾಯಿಯಲ್ಲಿ ಜಗಿಯುತ್ತಾ, ಯಾರೇ ಮನೆಗೆ ಬಂದರೂ ಆತ್ಮೀಯತೆಯಿಂದ ಕರೆದು ಮಾತನಾಡಿಸುವಂತಹ ವ್ಯಕ್ತಿತ್ವದವರು ನಮ್ಮ ದೊಡ್ಡಪ್ಪ ವೆಂಕಟಕೃಷ್ಣ ಆಚಾರ್ಯರು. ಇವರು ನೋಡಲು ಆಜಾನುಬಾಹು, ಬೋಳುತಲೆ, ಗಾಂಧೀಜಿಯಂತೆ ಸಣ್ಣ ಕಚ್ಚೆ, ಮೈ ಮೇಲೊಂದು ಶಲ್ಯ, ಅಕ್ಷತೆ ಅಂಗಾರಕ ನಾಮ, ಕನ್ನಡಕಧಾರಿ, ಸರಳ ವ್ಯಕ್ತಿತ್ವದ ಅಗಾಧ ಪ್ರೌಢಿಮೆಯ ಅಪರೂಪದ ನಾವು ಕಂಡಂತಹ ನಮ್ಮ ದೊಡ್ಡಪ್ಪ.

ಇವರನ್ನು ಆಗಿನ ಕಾಲದಲ್ಲಿ ಎಲ್ಲರೂ ಹಿಟ್ಲರಾಚಾರ್ಯರು ಎಂದೇ ಕರೆಯುತ್ತಿದ್ದರು. ಈ ಹೆಸರನ್ನು ಅವರಲ್ಲಿ ಸುಪ್ತವಾಗಿದ್ದಂತಹ ಅಗೋಚರ ಶಕ್ತಿಯನ್ನು ಕಂಡು ಜನರೆಲ್ಲ ಸಂಬೋಧಿಸಿದಂತೆ ನಮಗೆ ಮೇಲು ನೋಟಕ್ಕೆ ಕಾಣುತ್ತದೆ. ಆದರೆ HITLER ಎಂಬ ಪದದಲ್ಲಿ ನಾನು ಮತ್ತು ನಮ್ಮ ಯಜಮಾನರು ಈ ರೀತಿ ವಿಶ್ಲೇಷಿಸಿ ಅರ್ಥೈಸಿದೆವು.

H – Humanity and Hospitality (ಮಾನವೀಯತೆ, ಆದರಾತಿಥ್ಯ)

I - Intelligence (ಬುದ್ಧಿವಂತಿಕೆ)

T – Time-keeper (ಸಮಯಪ್ರಜ್ಞೆ)

L - Leadership (ನಾಯಕತ್ವ)

E - Economist (ಅರ್ಥಶಾಸ್ತ್ರಜ್ಞ)

R – Royal-look (ರಾಜಗಾಂಭೀರ್ಯತೆ)

Humanity and Hospitality : ನಮ್ಮ ಹಿರಿಮನೆಯಲ್ಲಿ ಹೊರಗಿನವರದ್ದೇ 50ಕ್ಕಿಂತಲೂ ಹೆಚ್ಚು ಮದುವೆಗಳು, ಉಪನಯನಗಳು ನಡೆದಿರಬಹುದು. ಸತ್ಯನಾರಾಯಣ, ಶನಿಪೂಜೆ, ದುರ್ಗಾನಮಸ್ಕಾರ ಪೂಜೆ, ಸಂಧಿಶಾಂತಿಗಳು, ಉತ್ತರಕ್ರಿಯಾದಿ ಕಾರ್ಯಕ್ರಮಗಳು ದಿನಾ ನಡೆಯುತ್ತಲೇ ಇರುತ್ತಿತ್ತು. ಇದಕ್ಕೆಲ್ಲ ಇಷ್ಟೇ ಹಣ ಕೊಡಬೇಕು, ಇಷ್ಟೇ ಜನಕ್ಕೆ ಊಟ ಹಾಕುವುದು ಎಂಬ ನಿರ್ಬಂಧನೆಗಳಿರಲಿಲ್ಲ. ಯಾವುದೇ ಒತ್ತಾಯ ಮಾಡದೇ, ಪರಪೀಡನೆ ಇಲ್ಲದೆ ಅವರು ಕೊಟ್ಟಂತಹ ದುಡ್ಡಿನಲ್ಲಿ ಅಚ್ಚುಕಟ್ಟಾಗಿ ಕೆಲಸ ಕಾರ್ಯಗಳನ್ನು ಸಂತೋಷದಿಂದ, ಮಾನವೀಯತೆಯಿಂದ ಮಾಡಿಕೊಡುತ್ತಿದ್ದರು.

ಯಾವುದೇ ಜಾತಿ, ಧರ್ಮದವರೇ ಮನೆಗೆ ಬಂದರೂ ಆತ್ಮೀಯತೆಯಿಂದ ಮಾತನಾಡಿಸಿ, ಕುಡಿಯಲು ಏನಾದರೂ ಬೇಕಾ ಎಂದು ಕೇಳಿಯೇ ಅವರು ಯಾವ ವಿಷಯ ಮಾತನಾಡಲು ಬಂದವರೆಂದು ವಿಚಾರಿಸುತ್ತಿದ್ದರು. ಆದರಾತಿಥ್ಯವನ್ನು ನಮ್ಮ ದೊಡ್ಡಪ್ಪನವರಿಂದಲೇ ನೋಡಿ ಕಲಿಯಬೇಕು. ಒಮ್ಮೆ ದೀಪಾವಳಿ ಹಬ್ಬಕ್ಕೆ ಹಂದಿಗೋಡಿನಿಂದ ಗಣೇಶರಾಯರು, ಗೋಪಾಲರಾಯರು, ಶ್ರೀನಿವಾಸ ರಾಯರು, ಹರಿಶ್ಚಂದ್ರ ಭಾವ – ನಾಲ್ಕೂ ಜನರು ಒಟ್ಟಾಗಿ ನಮ್ಮ ಮನೆಗೆ ಬಂದಿದ್ದರು. ಅವರಿಗೆಲ್ಲಾ ಬೆಳಿಗ್ಗೆ ತಾನೇ ಎಣ್ಣೆ ಹಚ್ಚಿ, ಬಿಸಿನೀರಿನ ಅಭ್ಯಂಜನ ಮಾಡಿಸಿ, ಮಧ್ಯಾಹ್ನ ಹೋಳಿಗೆ, ಮಾವಿನ ಹಣ್ಣಿನ ಸೀಕರಣೆ ಭೋಜನ ಮಾಡಿಸಿ, ಶಾಲು, ಪಂಚೆ ಉಡುಗೊರೆ ಮಾಡಿ ಆತಿಥ್ಯ ಮಾಡಿದ್ದು ನನಗೆ ಈಗಲೂ ನೆನಪಿನಲ್ಲಿದೆ.

Intelligence : ಬುದ್ಧಿವಂತಿಕೆಯಲ್ಲಿ ನಮ್ಮ

ದೊಡ್ಡಪ್ಪನನ್ನು ಮೀರಿಸುವವರೇ ಇಲ್ಲ ಎನ್ನಬಹುದು. ಹಲವಾರು ಮದುವೆಗಳನ್ನು ಮಾಡಿಸುವಾಗ ಹುಡುಗ ಹುಡುಗಿಯರನ್ನು ಭೇಟಿ ಮಾಡಿಸಿ ಒಪ್ಪಿಸುವಲ್ಲಿ ತನ್ನ ಮಾತಿನ ಬುದ್ಧಿವಂತಿಕೆಯಿಂದಲೇ ಸಂಬಂಧ ಕುದುರುವಂತೆ ಮಾಡುತ್ತಿದ್ದರು. ಎಷ್ಟೋ ಕುಟುಂಬಗಳ ಜಗಳ, ಗಂಡ ಹೆಂಡತಿಯರ ನಡುವಿನ ವಿರಸಗಳನ್ನೂ ತನ್ನ ಮಾತಿನ ಚಾಕಚಕ್ಯತೆಯಿಂದಲೇ ಪರಿಹರಿಸುತ್ತಿದ್ದರು.

Time-keeper : ಸಮಯದ ಮಹತ್ವವನ್ನು ನಾವೆಲ್ಲರೂ ಅವರಿಂದಲೇ ಕಲಿತಿರುವುದು. ಬೆಳಿಗ್ಗೆ 4.30 ಕ್ಕೆ ಏಳುವುದು, ನಂತರ ಸ್ನಾನ, 8 ಗಂಟೆಯೊಳಗೆ ಜಪತಪ ಪೂಜಾ ಕಾರ್ಯಕ್ರಮ, 8.30 ರ ಒಳಗೆ ಬೆಳಗ್ಗಿನ ಉಪಾಹಾರ, 12.30 ಕ್ಕೆ ಮಧ್ಯಾಹ್ನದ ಊಟ, ಸಂಜೆ 3.30 ಕ್ಕೆ ಕಾಫಿ ತಿಂಡಿ, ರಾತ್ರಿ 7.30 ಕ್ಕೆ ಸಂಧ್ಯಾವಂದನೆ, ಸಂಕೀರ್ತನೆ, ಭಜನೆ, ರಾತ್ರಿಯ ಪೂಜೆ, 8.30 ಕ್ಕೆ ರಾತ್ರಿಯ ಊಟ, 9.30 ಕ್ಕೆ ಶಯನ – ಹೀಗೆ ಅವರ ನಿತ್ಯ ದಿನಚರಿಯಾಗಿರುತ್ತಿತ್ತು. ಇದನ್ನು ನಮ್ಮ ಮನೆಯ ಸದಸ್ಯರೆಲ್ಲರೂ ತಪ್ಪದೇ ಪಾಲಿಸಿಕೊಂಡು ಬರುತ್ತಿದ್ದೇವೆ.


Leadership : ಅವರಲ್ಲಿ ನಾಯಕತ್ವದ ಗುಣ ಹುಟ್ಟಿನಿಂದಲೇ ಬಂದಿತ್ತು ಎನ್ನಬಹುದು. ಏಕೆಂದರೆ ಸಣ್ಣ ಪ್ರಾಯದಲ್ಲಿ ತನ್ನ ತಂದೆಯ ಮರಣಾ ನಂತರ 7 ಜನ ಅಣ್ಣ ತಮ್ಮಂದಿರನ್ನೂ, ಅವರ ಹೆಂಡಂದಿರು, ಮಕ್ಕಳನ್ನೂ ಸೇರಿಸಿ ಒಂದು ಕೂಡು ಕುಟುಂಬವನ್ನು ಯಾವುದೇ ಬೇಧ ಭಾವವಿಲ್ಲದೇ ಸಾಮರಸ್ಯದಿಂದ ನಡೆಸಿಕೊಂಡು ಹೋಗಬೇಕಾದರೆ ಅವರಿಂದಲೇ ಅದು ಸಾಧ್ಯವಾಯಿತು ಎನ್ನಬಹುದು. ಊರಿನಲ್ಲಿ ಯಾವುದೇ ಮನೆಯ ಲಗ್ನ, ಉಪನಯನ ಮುಂತಾದ ಕಾರ್ಯಕ್ರಮಗಳಿದ್ದರೂ ಅಲ್ಲಿಗೆ ಮೊದಲನೇ ದಿನ ಸಂಜೆ ಹೋಗಿ ಎಷ್ಟು ಜನರ ಸಂತರ್ಪಣೆ? ಯಾರು ಅಡುಗೆಯವರು? ಏನು ಭಕ್ಷ್ಯ? ಎಂಬ ಎಲ್ಲಾ ವಿವರಗಳನ್ನೂ ತಿಳಿಯುತ್ತಿದ್ದರು. ಮರುದಿನ ತಾನೇ ಮುಂದೆ ನಿಂತು ಕಾರ್ಯಕ್ರಮಗಳನ್ನು ಯಾವುದೇ ತೊಂದರೆಯಾಗದಂತೆ ವಿಜೃಂಭಣೆಯಿಂದ ನಡೆಸಿಕೊಡುತ್ತಿದ್ದರು. ಈ ಎಲ್ಲಾ ಕೆಲಸಗಳನ್ನೂ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ತನ್ನ ಮುಂದಾಳತ್ವದಲ್ಲಿ ಮಾಡಿಸುವಂತಹ ಮುತ್ಸದ್ದಿತನದ ಗುಣ ಅವರಲ್ಲಿ ಗೋಪ್ಯವಾಗಿತ್ತು.

Economist : ನಮ್ಮ ದೊಡ್ಡಪ್ಪನವರು ದಿನನಿತ್ಯದ ಆಯವ್ಯಯಗಳನ್ನು ತಾನೇ ಸ್ವತಃ ತುಳು ಲಿಪಿಯಲ್ಲಿ ದಿನಾ ರಾತ್ರಿ ಬರೆದಿಡುವಂತಹ ಅಭ್ಯಾಸ ಮಾಡಿದ್ದರು. ತಿಂಗಳ ಕೊನೆಯಲ್ಲಿ ಆದಾಯವನ್ನು ಲೆಕ್ಕ ಮಾಡಿ ಅದರ ಒಂದಂಶವನ್ನು ಸಂಸಾರದ ಯೋಗಕ್ಷೇಮ ಖಾತೆಗಾಗಿ ತೆಗೆದಿಡುತ್ತಿದ್ದರು. ಆದ್ದರಿಂದ ನಮ್ಮ ಮನೆಯಲ್ಲಿ ಎಷ್ಟೇ ಕಷ್ಟಕಾಲ ಬಂದರೂ ಊಟ, ಬಟ್ಟೆಗೆ ಯಾವಾಗಲೂ ತೊಂದರೆಯಾದುದು ನಮಗೆಲ್ಲಾ ನೆನಪೇ ಇಲ್ಲ ಎನ್ನಬಹುದು. ಅವರ ಚಾಣಕ್ಯನ ಅರ್ಥನೀತಿಯಿಂದ ಇಷ್ಟು ದೊಡ್ಡ ಸಂಸಾರದಲ್ಲಿ ಕಾಲಕಾಲಕ್ಕೆ ಶುಭಶೋಭನಾದಿ ಮಂಗಲ ಕಾರ್ಯಗಳು ನಿರಂತರವಾಗಿ ಯಾವುದೇ ಕೊರತೆಯಿಲ್ಲದೇ ವಿಜೃಂಭಣೆಯಿಂದಲೇ ನಡೆದಿದೆ ಎನ್ನಬಹುದು.

Royal-look : ವೇಷಭೂಷಣಗಳಲ್ಲಿ ಸರಳತೆ ಯಿದ್ದರೂ ನೋಡಲು ಒಳ್ಳೆಯ ರಾಜ ಗಾಂಭೀರ್ಯ ನಡಿಗೆ, ಸತ್ಯನಿಷ್ಠುರವಾದಿಯೂ, ಸದಾ ಹಸನ್ಮುಖಿಯೂ ಆಗಿದ್ದ ನಮ್ಮ ದೊಡ್ಡಪ್ಪ ಮಕ್ಕಳೊಂದಿಗೆ ಮಕ್ಕಳಂತೆ ಆಟವಾಡಿಕೊಂಡು, ಹಾಸ್ಯಚಟಾಕಿ ಹಾರಿಸಿಕೊಂಡು ಬೆರೆತುಕೊಂಡು ಇರುತ್ತಿದ್ದರು. ಒಂದು ಅವಿಭಕ್ತ ಕುಟುಂಬದಲ್ಲಿ ಸಾಮರಸ್ಯದಿಂದ ಸಹಬಾಳ್ವೆ ಮಾಡುವುದನ್ನು ನಮ್ಮ ಇಡಿಯ ಸಮಾಜಕ್ಕೆ ತೋರಿಸಿಕೊಟ್ಟಂತಹ ಒಬ್ಬ ಧೀಮಂತ ವ್ಯಕ್ತಿ – ಹಿಟ್ಲರ್ ವೆಂಕಟಕೃಷ್ಣ ಆಚಾರ್ಯರು.

ಅವರಂತಹ ವ್ಯಕ್ತಿ ನಮ್ಮ ಮುಂದಿನ ಪೀಳಿಗೆಗೆ ದಾರಿದೀಪವಾಗಿ ನಮ್ಮೊಡನೆ ಇದ್ದು ಸದಾ ನಮ್ಮೆಲ್ಲರನ್ನೂ ಆಶೀರ್ವದಿಸಬೇಕೆಂದು ಆಶಿಸುವ.

ಸೋದರಮಾವನಾಗಿ ವೆಂಕಟಕೃಷ್ಣ ಆಚಾರ್ಯರ ಸವಿ ನೆನಪುಗಳು



ಹೆಚ್.ಯಜ್ಞೇಶ

ನೀನೇ ಅನಾಥ ಬಂಧು ಕಾರುಣ್ಯಸಿಂಧು ಎಂಬುದು ದಾಸರ ಒಂದು ಕೃತಿ ಇದು ನನ್ನ ಜೀವನದಲ್ಲಿ ನನ್ನ ಹಿರಿಯರ ಸುಕೃತಿಯಿಂದ ನನಗೆ ನಿಜವಾಗಿ ದೊರೆತ ಅನಾಥಬಂಧು –ಕಾರುಣ್ಯಸಿಂಧುವೆಂದರೆ ನನ್ನ ಅತ್ಯಂತ ಪ್ರೀತಿಯ ಸೋದರಮಾವನೂ ತೀರ್ಥರೂಪಸಮಾನರೂ ಆದವರು ಹೊಸಬೆಟ್ಟು ವೆಂಕಟಕೃಷ್ಣಾಚಾರ್ಯರು.ಪ್ರತಿಯೊಬ್ಬರ ಜೀವನದಲ್ಲಿ ಯಾರೋ ಒಬ್ಬರು ಹೀಗೆ ದೇವರ ರೂಪದಲ್ಲಿ ಬಂದು ಜೀವರ ಸ್ವರೂಪ ಉದ್ಧಾರ ಮಾಡುತ್ತಾರೆ ಅಂತ ಪುರಾಣ ಅಥವಾ ಧಾರ್ಮಿಕ ನಂಬಿಕೆ ಇದೆ.ಅದನ್ನು ನಂಬಿದವನು ನಾನು. ಮಾವನವರು ನನ್ನ ಪೂರ್ವಸುಕೃತದಿಂದ ಭಗವಂತನರೂಪದಲ್ಲಿ ಬಂದು ನನ್ನನ್ನು ಉದ್ಧರಿಸಿದರು ಎಂದು ನಾನು ನಂಬುತ್ತೇನೆ ಅವರಲ್ಲಿ ನಾನು ದೇವರನ್ನು ಕಂಡವನು. ಅವರು ನನ್ನ ಜೀವನಕ್ಕೆ ಒಂದು ದಾರಿ ತೋರಿದವರು.

ಹೊಸಬೆಟ್ಟಿನ ಕಾವಿನಕಲ್ಲು ಮಠದ ಆಚಾರ್ಯ ಮನೆತನದಲ್ಲಿ ವೆಂಕಟಕೃಷ್ಣ ಆಚಾರ್ಯರ ತಂಗಿ ವಾಗ್ದೇವಿಯ ಉದರದಲ್ಲಿ ಏಕಮಾತ್ರ ಪುತ್ರನಾಗಿ ಜನಿಸಿದವನು ನಾನು. ನನ್ನ ಹಿರಿಯ ಸೋದರ ಮಾವ ವೆಂಕಟಕೃಷ್ಣ ಆಚಾರ್ಯರ ಮಾತುಗಳಲ್ಲೇ ಹೇಳುವುದಾದರೆ 8 ಜನಸೋದರ ಮಾವಂದಿರಿಗೆ ಒಬ್ಬನೇ ಒಬ್ಬ ಸೋದರಳಿಯ – ಕೃಷ್ಣ ಎಂದೇ ಪ್ರೀತಿಯಿಂದ ಕರೆಯುತ್ತಿದುದು ನೆನಪಿದೆ.

ಈ ಪ್ರೀತಿಯ ಬುತ್ತಿಯನ್ನು ನನ್ನ ಸರ್ವತೋಮುಖ ವಾದ ಬೆಳವಣಿಗೆಯಲ್ಲಿ ಧಾರೆಯೆರೆದು ನನ್ನನ್ನು ಸಮಾಜದಲ್ಲಿ ಒಂದು ಗೌರವಯುತವಾದ ಸ್ಥಾನದಲ್ಲಿ ಬದುಕುವುದಕ್ಕೆ ದಾರಿದೀಪವಾದವರು ಹಿರಿಯ ಮಾವನವರು. ನಾನು ಅವರ ಅಕ್ಕರೆಯ ಸಕ್ಕರೆಯನ್ನು ಸವಿದು ಬೆಳೆದವನು.

ಬಡತನದ ಬೇಗೆಯಲ್ಲಿ ಬಳಲಿ ಬೆಂಡಾಗಿದ್ದ ನಮ್ಮ ತೀರ್ಥರೂಪರು ಭಂಗಿಮನೆ [ಉಂಡಾರು] ರಾಮಚಂದ್ರರಾಯರು. ವಿಚಿತ್ರ ಸ್ವಭಾವದವ ರಾದ್ದರಿಂದಲೇ ಅವರು ಹೊರಗೆ ಇರುತ್ತಿದ್ದುದರಿಂದ ನಾನು ಮತ್ತು ನಮ್ಮ ಮಾತೃಶ್ರೀಯರು ಹೆಚ್ಚು ಇದ್ದುದ್ದು ತಾಯಿಯ ತವರು ಮನೆಯಲ್ಲಿಯೇ. ನನಗೆ ಬುದ್ಧಿ ಬಂದಾಗಿ ನಿಂದ ನನ್ನನ್ನು ಮತ್ತು ತಾಯಿಯನ್ನು ಸಾಕಿ ಬೆಳೆಸಿದವರು ನಮ್ಮ ಮಾವನವರು. ನಮ್ಮ ತಾಯಿಯ ಅಡುಗೆಯೆಂದರೆ ಇವರಿಗೆ ಪ್ರೀತಿ. ಕೂಡುಕುಟುಂಬದಲ್ಲಿ ಬೆಳೆಯುವ ಅವಕಾಶ ಆಗಲೇ ನನಗೆ ಸಿಕ್ಕಿತ್ತು. ಒಂದನೆಯ ತರಗತಿಗೆ ಸೇರುವಲ್ಲಿಂದ S.S.L.C ಆದ ಮೇಲೆ ಅಧ್ಯಾಪಕ ತರಬೇತಿವರೆಗಿನ ವಿದ್ಯಾಭ್ಯಾಸವನ್ನು ಮಾವನವರೇ ನೋಡಿಕೊಂಡರು ಎಲ್ಲೂ ಕೆಲಸವಿಲ್ಲ ಎಂದುಕೊಂಡು ಮಾವನವರ ಆದೇಶದಂತೆ ಬೀರೂರಿನಲ್ಲಿ ಹೋಟಲ್‌ನಲ್ಲಿ ಕ್ಯಾಶಿಯರ್ ಕೆಲಸಕ್ಕೆ ಸೇರಿದ್ದೆ. ದೀಪಾವಳಿ ಹಬ್ಬ ಕಳೆದು ಕೆಲವು ದಿನಗಳಿಗೆ ಮಾವನವರು ಬೀರೂರಿಗೆ ಬಂದು ಊರಿಗೆ ಬಾ ಒಂದು ಟೀಚರ್ ಕೆಲಸ ಸಿಗುವ ಅವಕಾಶ ಇದೆ ಎಂದರು ಬಂದೆ. ಶಿಕ್ಷಕನ ಕೆಲಸಕ್ಕೆ ವಿದ್ಯಾದಾಯಿನೀ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇರಿಕೊಂಡೆ. ಆಮೇಲೆ ತಿಳಿಯಿತು ಈ ಕೆಲಸ ನನಗೆ ಹೇಗೆ ದೊರಕಿತು ಎಂದು!

ಆಗ ವಿದ್ಯಾದಾಯಿನೀ ಶಾಲೆಯ ಸಂಚಾಲಕರಾಗಿದ್ದವರು ರಾಷ್ಟ್ರಪತಿ ಶಿಕ್ಷಕ ಪ್ರಶಸ್ತಿಯನ್ನು ಪಡೆದ ಶ್ರೀಎಮ್. ವಾಸುದೇವ ರಾಯರು. ಇಡ್ಯಾ ಶಾಲೆಯಲ್ಲಿ ಕೆಲಸ ಇದೆ ಎಂದು ತಿಳಿದ ನಮ್ಮ ಅತ್ಯಂತ ಚಿಕ್ಕ ಸೋದರಮಾವನವರಾದ ಡಾ॥ ಸೀತಾರಾಮ ಆಚಾರ್ ಇವರು ದೊಡ್ಡ ಮಾವನವರನ್ನು ಭೇಟಿಯಾಗಿ ವಿಷಯ ತಿಳಿಸಿದಾಗ ದೀಪಾವಳಿ ದಿವಸ ವೆಂಕಟಕೃಷ್ಣಾ ಚಾರ್ಯರು ಬೆಳಗ್ಗೆ ವಾಸುದೇವ ರಾಯರ ಮನೆಗೆ ಹೋದರೆ, ತಾವು ಒಬ್ಬ ಹಿರಿಯರು ಅತಿಥಿಗಳಾಗಿ ಬಂದಿರಿ – ಹಬ್ಬದ ದಿನ ನಮಸ್ಕರಿಸುವುದಕ್ಕೆ ಸಿಕ್ಕಿದಿರಿ ಎಂದು ಆದರದಿಂದ ಸ್ವಾಗತಿಸಿ, ನಮಸ್ಕಾರ ಮಾಡಿ ವಿಚಾರಿಸಿದಾಗ ನಮ್ಮ ಅಳಿಯನಿಗೆ ನಿಮ್ಮ ಶಾಲೆಯಲ್ಲಿ ಮೇಸ್ತ್ರ ಕೆಲಸ ಸಿಗಬಹುದಾ ಎಂದರೆ ಒಂದೇ ಮಾತಿನಲ್ಲಿ ಕರೆದುಕೊಂಡು ಬನ್ನಿ ಎಂದು ಹೇಳಿದ್ದಕ್ಕೆ ನನಗೆ ಕೆಲಸ ಸಿಕ್ಕಿತು. ಹೀಗೆ ಸೋದರ ಮಾವನವರ ಅನುಗ್ರಹವು ನನ್ನ ಜೀವನಕ್ಕೊಂದು ದಾರಿದೀಪವಾಯಿತು.

ಅವರ ಮಾರ್ಗದರ್ಶನದಲ್ಲಿ ನನ್ನ ಬದುಕು ಬಹಳ ಸುಂದರವಾಗಿಯೇ ಮೂಡಿ ಬಂದಿದೆ. ಕೇರಳದಲ್ಲಿ ನಡೆದ ಇನ್ನೊಬ್ಬ ಮಾವನ ಮಗನ ಮದುವೆಗೆ ಹೋಗುವಾಗ ರೈಲು ನಿಲ್ದಾಣದಿಂದ ಮಣಲೂರಿಗೆ ಸುಮಾರು 3–4ಕಿ.ಮೀನಷ್ಟು ದೂರವನ್ನು ರೈಲ್ವೆ ಟ್ರ್ಯಾಕನಲ್ಲಿ ಬೆಳಗಿನ ಜಾವ 3 ಗಂಟೆಗೆ ನಡೆದುಕೊಂಡು ಹೋದ ನೆನಪು ಈಗಲೂ ಹೊಸತನವನ್ನು ಹುಟ್ಟುಹಾಕಿದೆ.ಇನ್ನು ಅವರೊಡನೆ ನಾನು ವ್ಯಾಸ, ಕೃಪಾಕರ ಮತ್ತು ಸೀತಾರಾಮ ಆಚಾರ್ ಇವರೊಡನೆ ಆಡಿದ ಇಸ್ಪಿಟ್ ಆಟ ಇದು ಬಹಳ ಸುಂದರ ನೆನಪಾಗಿದೆ.

ಆಗಿನ ಕಾಲದಲ್ಲಿ ಮನೆಯಲ್ಲಿ ನಡೆಯುತ್ತಿದ್ದ ಆಚಾರವಿಚಾರಗಳು, ಪೂಜೆ ಪುನಸ್ಕಾರಗಳಲ್ಲಿ ನನಗೆ ಕೂಡಾ ತರಬೇತಿಯನ್ನು ನೀಡಿದ್ದರು. ತಮ್ಮ ತಮ್ಮಂದಿರಾದ ಶ್ರೀಧರ ಆಚಾರ್ಯರ ಮೂಲಕ ಜಪ, ದೇವ ಪೂಜಾಪದ್ಧತಿ, ವಿಷ್ಣುಸಹಸ್ರನಾಮ, ವಾಯುಸ್ತುತಿ, ನವಗ್ರಹಸ್ತೋತ್ರ, ನವಗ್ರಹಪೂಜೆ, ಮಂಗಳಾಷ್ಟಕ, ಭಗವದ್ಗೀತೆ ಇತ್ಯಾದಿಗಳನ್ನು ಅಭ್ಯಾಸ ಮಾಡಿಸಿದ್ದರಿಂದ ಇಂದಿಗೂ ಅವು ಬಾಯಿ ಪಾಠದಲ್ಲಿದೆ. ಪ್ರತಿದಿನ ಮುಸ್ಸಂಜೆ ಹೊತ್ತಿನಲ್ಲಿ ದೇವರ ಪೂಜೆಯ ಸಮಯದಲ್ಲಿ ಸಂಕೀರ್ತನೆ ಹಾಡುವುದಕ್ಕೆ ಪ್ರೇರಣೆ ನೀಡಿದರು. ಸತ್ಯನಾರಾಯಣ ಪೂಜೆಯ ಶನಿಪೂಜಾ ಸಮಯದಲ್ಲಿ ಕನ್ನಡ ಲಿಪಿಯಲ್ಲಿದ್ದ ಸಂಸ್ಕೃತದ ಶ್ಲೋಕಗಳನ್ನು ಓದಿಸುವುದರ ಮೂಲಕ ಆಗಲೇ ಮನೆಯಲ್ಲಿ ನಾನು ಗಮಕಿಯಾಗುವುದಕ್ಕೆ ಪ್ರೇರಣೆಯಾಯಿತು ಎಂದರೆ ತಪ್ಪಲ್ಲ. ಆಗಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಪಾಲು ಇತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಮಾವನವರು ಅಳಿಯನ ವಿದ್ಯಾಭ್ಯಾಸಕ್ಕಾಗಿ ಒಂದಿಷ್ಟು ಇಡುಗಂಟನ್ನು ಬ್ಯಾಂಕಿನಲ್ಲಿ ಇಟ್ಟು ಅದನ್ನು ಟ್ರೈನಿಂಗ್ ಸಮಯದಲ್ಲಿ ಉಪಯೋಗಿಸಿದರಂತೆ. ಅದು ನೆಪಕ್ಕೆ ಮಾತ್ರ. ಅದಕ್ಕಿಂತಲೂ ಹೆಚ್ಚು ಹಣವನ್ನು ನನ್ನ ಬದುಕಿನ ದಾರಿಗೆ ಬೆಳಕನ್ನು ನೀಡಲು ಉಪಯೋಗಿಸಿದ್ದಾರೆ ಎಂಬುದಂತೂ ಸ್ಪಷ್ಟ.

ಶಿಕ್ಷಕ ವೃತ್ತಿಯಲ್ಲಿ ತೊಡಗಿದಾಗ ನನಗೆ ಇರುವುದಕ್ಕೆ ನೆಲೆ ಇಲ್ಲವೆಂದು ತಿಳಿದಾಗ ನನ್ನ ತಂದೆಯವರ ಕಡೆಯಿಂದ ಯಾವುದೇ ಆಸ್ತಿ ಇಲ್ಲವೆಂದು ಅವರಿಗೆ ತಿಳಿಯಿತೋ ಏನೋ. ತಂಗಿಯ ನೆಪದಲ್ಲಿ ತಮ್ಮ ಪಾಲಿಗೆ ಬಂದ ಆಸ್ತಿಯಲ್ಲಿ ಒಂದಿಷ್ಟು ಭೂಮಿಯನ್ನು [4 ಸೆಂಟ್ಸ್] ದಾನದ ರೂಪದಲ್ಲಿ ನೀಡಿ ನನಗೆ ಇರುವುದಕ್ಕೆ ನೆಲೆ ಕಲ್ಪಿಸಿದವರು ಮಾವನವರು. ತಂಗಿ ಹಾಗು ತಂಗಿಯ ಮಗ ತಮ್ಮ ಕಣ್ಣಮುಂದೆ ಇರಬೇಕೆಂದು ಬಯಸಿದ್ದರೋ ಏನೋ. ಅಂತೂ ಮಾವನ ಕೃಪಾಶೀರ್ವಾದದಿಂದ ನಾನು ಅವರ ಕಣ್ಣಮುಂದೆಯೇ ಬೆಳೆದಿರುವುದು ನನ್ನ ಭಾಗ್ಯ.. ನನ್ನ ಮದುವೆಯ ವಿಚಾರದಲ್ಲಿಯೂ ನನಗೆ ಒತ್ತಾಸೆಯಾಗಿ ನಿಂತು ವಿವಾಹ ಮಾಡಿ ಗೃಹಸ್ಥ ಧರ್ಮಿ ಯಾಗುವುದಕ್ಕೆ ಆಶೀರ್ವದಿಸಿದ್ದಾರೆ. ನನ್ನ ಜೀವನದ ಪ್ರತಿಯೊಂದು ಬೆಳವಣಿಗೆಗೆ ದಾರಿದೀಪವಾದರು, ನನ್ನ ಸಂಸಾರವನ್ನು ಕಂಡು ಆನಂದಿಸಿದರು ಕೂಡಾ. ಈ ಮಾವನವರ ಋಣವನ್ನು ನಾನು ಹೇಗೆ ತೀರಿಸಲಿ? ಸಾವಿರ ಜನ್ಮವೆತ್ತಿಬಂದರೂ ಅದು ತೀರಲಾರದೋ ಏನೋ?

ನನಗೆ ಶಿಕ್ಷಣ ನೀಡುವುದರ ಮೂಲಕ ಶಿಕ್ಷಿಸಿ, ತಿದ್ದಿ– ತೀಡಿ ಮಣ್ಣಿನ ಮುದ್ದೆಯಿಂದ ಸುಂದರವಾದ ಮಣ್ಣಿನ ಮೂರ್ತಿಯನ್ನು ಕೆತ್ತಿದ ಶಿಲ್ಪಿ ಶ್ರೀ ವೆಂಕಟಕೃಷ್ಣಾ ಚಾರ್ಯರ ದಿವ್ಯ ಚೇತನಕ್ಕೆ ನಮೋನಮಃ

ನಾನು ಕಂಡ ನನ್ನ ದೊಡ್ಮಾವ



ರಾಜೇಂದ್ರ ಎಚ್.

ವಾದಿರಾಜ ಆಚಾರ್ ಮತ್ತು ಮಹಾಲಕ್ಷ್ಮೀ ದಂಪತಿಯವರ ಪ್ರಥಮ ಪುತ್ರ ಹೊಸಬೆಟ್ಟು ವೆಂಕಟಕೃಷ್ಣ ಆಚಾರ್‌ರವರು. ಕಾವಿನಕಲ್ಲು ಕುಟುಂಬದವರು.

ನೋಡಲು ಇವರು ಅಜಾನುಬಾಹು, ಎತ್ತರದ ಮೈಕಟ್ಟು. ದೊಡ್ಡ ಕಚ್ಚೆ ಶಾಲು ಧರಿಸುತ್ತಿದ್ದರು. ಕಿವಿಯಲ್ಲಿ ಕೆಂಪು ಕಲ್ಲಿನ ಒಂಟಿ. ತೀಕ್ಷ್ಣವಾದ ಕಣ್ಣುಗಳು. ಕಪ್ಪು ಫ್ರೇಮಿನ ಕನ್ನಡಕ. ಹಣೆಯಲ್ಲಿ ದೊಡ್ಡ ನಾಮ. ದೊಡ್ಡ ದೊಡ್ಡ ಗೋಪಿಯ ಮುದ್ರೆಗಳು ಹೀಗೆ. ಅವರನ್ನು ನೋಡಿದರೆ ನಮಗೆ ಗೌರವವೂ ಭಯವೂ ಭಕ್ತಿಯೂ ಬರುವುದು. ನಾವು ಅವರನ್ನು ಒಬ್ಬ ಆಚಾರ್ಯರು ಅಂದರೆ ಗುರುಗಳಂತೆ ಕಾಣುತ್ತಿದ್ದೆವು.

ನನಗೆ ಅವರು ದೊಡ್ಮಾವ ಆಗಬೇಕು. ನನ್ನ ತಾಯಿಯ ದೊಡ್ಡಪ್ಪನ ಮಗ. ನನ್ನ ತಾಯಿಗೆ ಸ್ವಂತ ಅಣ್ಣ ತಮ್ಮಂದಿರು ಇರಲಿಲ್ಲ. ಅವರು ಮತ್ತು ಅವರ ತಮ್ಮಂದಿರೆಲ್ಲಾ ನನಗೆ ಮಾವನಾಗಬೇಕು.

ನಾನು ನೋಡಿದ ಹಾಗೆ, ಅವರು ವೈದಿಕರು. ಪೌರೋಹಿತ್ಯ ಮಾಡುತ್ತಿದ್ದರು. ಧಾರ್ಮಿಕತೆ ಉಳ್ಳವರು. ಆಧ್ಯಾತ್ಮಿಕತೆಯಲ್ಲಿ ನಂಬಿಕೆ ಇಟ್ಟವರು. ಬೆಳಗ್ಗೆ ರಾತ್ರಿ ದಿನನಿತ್ಯ ಜಪತಪ ಪೂಜೆ ಇತ್ಯಾದಿಗಳನ್ನು ಮಾಡುತ್ತಿದ್ದರು. ಮಂತ್ರಗಳನ್ನು ಗಟ್ಟಿಯಾಗಿ, ಸ್ಪಷ್ಟವಾಗಿ ಉಚ್ಚರಿಸುತ್ತಿದ್ದರು. ಕಂಚಿನ ಕಂಠ ಅವರದು. ನಡೆನುಡಿ ನೇರವಾಗಿದ್ದವು. ಅವರನ್ನು ಕಂಡರೆ ನೆರೆಕರೆಯ ಮಕ್ಕಳಿಗೆಲ್ಲಾ ಭಯವೂ ಇತ್ತು. ಭಕ್ತಿಯೂ ಇತ್ತು. ಪ್ರೀತಿಯೂ ಇತ್ತು. ಮನೆಯಲ್ಲಿ ನಡೆಯುವ ಎಲ್ಲಾ ಪೂಜೆ ಸಮಾರಂಭಗಳಿಗೂ ನೆರೆಕರೆಯವರಿಗೆ ಬರಲು ಹೇಳುತ್ತಿದ್ದರು. ಭಜನೆ, ಸಂಕೀರ್ತನೆ ನಡೆಯುತ್ತಿತ್ತು. ನನ್ನ ಅಕ್ಕಂದಿರಿಂದಲೂ ಹೆಚ್ಚಾಗಿ ಹಾಡು ಹಾಡಿಸುತ್ತಿದ್ದರು. ರಸ್ತೆಯ ಬದಿಯಲ್ಲಿದ್ದ ಅಶ್ವತ್ಥಕಟ್ಟೆಯಲ್ಲಿ ಪ್ರತಿ ಶನಿವಾರ ಶನಿಪೂಜೆ ನಡೆಯುತ್ತಿತ್ತು. ಮಕ್ಕಳಿಗೆಲ್ಲಾ ಪ್ರಸಾದ ಎಳ್ಳು ಪಂಚಕಜ್ಜಾಯ (ಚುಕುಳಿ) ಕೊಡುತ್ತಿದ್ದರು. ಮನೆಯಲ್ಲಿ ಪೂಜೆಯ ಬಳಿಕ ಮನೆಯ ಎಲ್ಲಾ ಹಿರಿಯರಿಗೂ ನಮಸ್ಕಾರ ಮಾಡುವ ಪದ್ಧತಿ ಅವರು ನಮಗೆ ಕಲಿಸಿದ್ದರು. ಎಲ್ಲಾ ಧಾರ್ಮಿಕ ಹಬ್ಬಗಳನ್ನು ಬಹಳ ಸಂಭ್ರಮದಿಂದ ಎಲ್ಲರೊಂದಿಗೆ ಆಚರಿಸುತ್ತಿದ್ದರು. ಅವರದು ಕೂಡುಕುಟುಂಬ. ಅವರ ಹೆಂಡತಿ ಕಮಲತ್ತೆ. ಅಂದರೆ ನಮಗೆಲ್ಲಾ ಅವರು ದೊಡ್ಡತ್ತೆಯಾಗಿದ್ದರು. ಅವರಿಗೆ ಒಬ್ಬ ಮಗಳು ಲಕ್ಷ್ಮಮ್ಮ. ಒಬ್ಬ ಮಗ ಗುರುರಾಜ. ಜೀವನದಲ್ಲಿ ಅವರು ಪರಿಪೂರ್ಣರು.

ಅವರದು ಕೂಡುಕುಟುಂಬವಾದ್ದರಿಂದ ಮನೆಯಲ್ಲಿ ತಮ್ಮಂದಿರು, ಅವರ ಹೆಂಡತಿಯರು ಮಕ್ಕಳು ಹೀಗೆ. ಒಂದು ಹೊತ್ತಿಗೆ ಅವರ ಮನೆಯಲ್ಲಿ ಸಾಧಾರಣ 25–30 ಜನರಿಗೆ ಆಹಾರ ಬೇಯಿಸಬೇಕಾಗಿತ್ತು. ಆಚಾರ್ಯರು ಬೇಸಾಯ ಮಾಡಿಸುತ್ತಿದ್ದರು. ಇತರ ಬೆಳೆಗಳನ್ನು ಬೆಳೆಸುತ್ತಿದ್ದರು. ಕೆಲಸದವರೊಂದಿಗೆ ಸ್ವತಃ

ಅವರೇ ಕೆಲಸ ಮಾಡುತ್ತಿದ್ದರು. ಅವರೇ ಗದ್ದೆಯಿಂದ ಬೆಳೆಗಳನ್ನು ಹೊತ್ತು ತರುವುದು. ಅಂಗಳದಲ್ಲಿ 'ಬೈಪಣೆಗೆ" ಹೊಡೆದು ಭತ್ತ ತೆಗೆಯುವುದು ಮತ್ತು ಒಣಹುಲ್ಲು ಮೂಟೆ ಕಟ್ಟುವುದು ಈಗಲೂ ಕಣ್ಣಿಗೆ ಕಂಡ ಹಾಗೆ ಆಗುತ್ತದೆ.

ಮಾಧವರಾಯರ ಅಂಗಡಿಯಿಂದ ಮನೆಗೆ ಬೇಕಾದ ಜೀನಸು ಸಾಮಾನುಗಳನ್ನು ಹೆಚ್ಚಾಗಿ ಅವರೇ ಬುಟ್ಟಿಯಲ್ಲಿ ತುಂಬಿಕೊಂಡು ತಲೆಯ ಮೇಲೆ ಹೊತ್ತು ತರುತ್ತಿದ್ದ ದೃಶ್ಯ ಈಗಲೂ ನನ್ನ ಕಣ್ಣಲ್ಲಿ ಕಂಡಂತೆ ಇದೆ. ಮಳೆಗಾಲದಲ್ಲಿ ಒಳಾಂಗಣ ಆಟಗಳಾದ ಚೆನ್ನೆಮಣೆ, ಚದುರಂಗ ಆಟಗಳನ್ನು ಎಲ್ಲರೂ ಸೇರಿ ಆಡುತ್ತಿದ್ದೆವು. ಆಚಾರ್ಯರು ನಮ್ಮೆಲ್ಲರ ಜೊತೆ ಸೇರಿ ಆಡುತ್ತಿದ್ದರು. ಹೀಗೆ ಮನೆಯಲ್ಲಿ ಅವರ ಸರ್ವಾಧಿಕಾರವೂ ಇತ್ತು. ಆಡಳಿತ ಕ್ರಮ ಉತ್ತಮವಿತ್ತು. ಎಲ್ಲರಲ್ಲೂ ಪ್ರೀತಿ ಆತ್ಮೀಯತೆಯೂ ಇತ್ತು. ಬಡವರಿಗೆ ಅವರು ಬಹಳ ಸಹಾಯವನ್ನೂ ಮಾಡುತ್ತಿದ್ದರು. ಕೊಡುಗೈ ದಾನಿಯೂ ಆಗಿದ್ದರು.

ಊರಿನಲ್ಲಿ ನಡೆಯುವ ಎಲ್ಲಾ ಸಭೆ, ಕಾರ್ಯಕ್ರಮಗಳನ್ನು ಅವರು ಉತ್ತಮ ರೀತಿಯಲ್ಲಿ ನಡೆಸಿಕೊಡುತ್ತಿದ್ದರು. ಒಟ್ಟಿನಲ್ಲಿ ಅವರು ಎಲ್ಲರ ಪ್ರೀತಿಪಾತ್ರರಾಗಿದ್ದರು. ಮದುವೆ, ಪೂಜೆ ಅಲ್ಲದೆ ಸಭಾ ಕಾರ್ಯಕ್ರಮಗಳಲ್ಲಿ ಒಳ್ಳೆಯ ಹಿತನುಡಿಗಳನ್ನು ಜನರಿಗೆ ಹೇಳುತ್ತಿದ್ದರು. ಎಲ್ಲರಿಗೂ ಬೇಕಾಗಿದ್ದರು.

2ನೇ ಮಹಾಯುದ್ಧ ಕಾಲದಲ್ಲಿದ್ದ ಫ್ರಾನ್ಸ್ ದೇಶದ ಹಿಟ್ಲರ್‌ನ ಹಾಗೆ ಅವರ ಕಾರ್ಯವೈಖರಿ ಇತ್ತು. ಆದ್ದರಿಂದ ಇವರ ಕಾರ್ಯನಿಪುಣತೆಗೆ ಇವರನ್ನು ಹಿಟ್ಲರ್ ಆಚಾರ್ ಎಂದೂ ಕರೆಯುತ್ತಿದ್ದರು. ಒಟ್ಟಿನಲ್ಲಿ ಹೇಳುವುದಾದರೆ ಅಂತಹ ಧೀಮಂತ ವ್ಯಕ್ತಿಯನ್ನು ನಾವು ಯಾರೂ ಮರೆಯುವಂತಿಲ್ಲ. ಅವರ ಮುಂದಾಳತ್ವ, ಹಿರಿತನ, ಚಾಕಚಕ್ಯತೆ, ಮೃದುತ್ವ, ಗಂಭೀರತೆ ನಮ್ಮಲ್ಲಿ ಇರಲಿ ಎಂದು ಆಶಿಸೋಣ.



ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು ನಾನು ಕಂಡಂತೆ



ಸತೀಶ್ ರಾವ್ ಇಡ್ಯಾ

ಹೊಸಬೆಟ್ಟಿನ ಕಾವಿನಕಲ್ಲು ಮನೆತನದ ಹಿರಿಯ ಸದಸ್ಯರಾಗಿದ್ದ, ದಿ। ವೆಂಕಟಕೃಷ್ಣ ಆಚಾರ್ಯರನ್ನು ನಮ್ಮ ತಲೆಮಾರಿನವರು ಎಂದೂ ಮರೆಯಲಾರರು. ಯಾವುದೇ ಧಾರ್ಮಿಕ ಕಾರ್ಯಕ್ರಮವಿದ್ದಲ್ಲಿ ಅದನ್ನು ಚೆನ್ನಾಗಿ ನಿಭಾಯಿಸಿಕೊಂಡು ಸುಧಾರಿಸುತ್ತಿದ್ದ ಮಹಾನ್ ವ್ಯಕ್ತಿ. ಅವರ ದಿವ್ಯ ಚೇತನಕ್ಕೆ ಮೊತ್ತಮೊದಲಾಗಿ ವಂದಿಸುತ್ತಾ ನನ್ನ ಅನಿಸಿಕೆಗಳನ್ನು ತನ್ನೊಂದಿಗೆ ಹಂಚಬಯಸುತ್ತೇನೆ.

ನನ್ನ ಅಜ್ಜ ಚುಂಡಿಗ್ರಾಣಿ ವೆಂಕಟರಾವ್ ಮತ್ತು ವೆಂಕಟಕೃಷ್ಣ ಆಚಾರ್ಯರ ಹೆಂಡತಿ – ಶ್ರೀಮತಿ ಕಮಲ ಇವರುಗಳು ಸೋದರ ಸಂಬಂಧಿಗಳು. ನನ್ನ ಅಜ್ಜ ಸರಕಾರಿ ಹುದ್ದೆಯಲ್ಲಿ ಮಣೆಗಾರ್ (ರೆವೆನ್ಯೂ ಇನ್ಸ್‌ಪೆಕ್ಟರ್) ಆಗಿ ನಿವೃತ್ತಿ ಹೊಂದಿದ್ದರೂ, ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು. ಜೊತೆಗೆ ನನ್ನ ಅಜ್ಜ (ತಾಯಿಯ ತಂದೆ – ಕೊನ್ನಾರು ಬಿ. ನಾರಾಯಣ ರಾವ್)ನ ಮೊದಲ ಹೆಂಡತಿ ವೆಂಕಟಕೃಷ್ಣ ಆಚಾರ್ಯರ ಸಹೋದರಿ.

ಶ್ರೀಯುತರು ಬಡವ ಬಲ್ಲಿದವರೆಂಬ ಭೇದವಿಲ್ಲದೆ ಎಲ್ಲರೊಂದಿಗೆ ಒಂದಾಗಿ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿದ್ದರು. ನನ್ನ ಕುಟುಂಬದ ಯಾವುದೇ ಕಾರ್ಯಕ್ರಮವನ್ನು ಮುಂದಾಗಿ ನಿಂತು ಸುಧಾರಿಸುತ್ತಿದ್ದರು. ಇವರ ಕಾರ್ಯದಕ್ಷತೆ ಮತ್ತು ಸಮಯಪ್ರಜ್ಞೆಯನ್ನು ಗಮನಿಸಿ ಇವರನ್ನು ಹಿಟ್ಲರ್ ಆಚಾರ್ ಎಂದೇ ಕರೆಯುತ್ತಿದ್ದು ಚಿರಪರಿಚಿತ ರಾಗಿದ್ದರು.

ಇವರ ಇನ್ನೊಂದು ಚಟುವಟಿಕೆಯೆಂದರೆ ಊಟದ ಬಳಿಕ 28ರ ಆಟ (ಇಸ್ಪೀಟ್ ಆಟ) ಎಷ್ಟು ಚೆನ್ನಾಗಿ ಆಡುತ್ತಿದ್ದರೆಂದರೆ, ಇವರೊಂದಿಗೆ ಆಡಲು ಉಳಿದವರು ಹಿಂದೇಟು ಹಾಕುತ್ತಿದ್ದರು. ಹಾಸ್ಯ ಪ್ರವೃತ್ತಿಯ ಶ್ರೀಯುತರು ಆಗಾಗ ಹಾಸ್ಯ ಚಟಾಕಿಗಳನ್ನು ಹಾರಿಸಿ ವಾತಾವರಣವನ್ನು ತಿಳಿಗೊಳಿಸುತ್ತಿದ್ದರು. ತಮ್ಮ ಇಳಿವಯಸ್ಸಿನಲ್ಲೂ ಲವಲವಿಕೆಯಿಂದ ಎಲ್ಲರೊಂದಿಗೆ ಬೆರೆಯುತ್ತಾ, ಎಲ್ಲರ ಪ್ರೀತಿ – ಗೌರವಗಳನ್ನು ಗಳಿಸಿದ್ದರು.

ಈಗ ಇವರ ಪರಂಪರೆಯಲ್ಲಿ ಇವರ ಮಗ ಗುರುರಾಜ ಆಚಾರ್ಯರು ಹೋಟೆಲ್ ಉದ್ಯಮದಲ್ಲಿ ಹಾಗೂ ವಧೂವರರ ಅನ್ವೇಷಣೆಯಲ್ಲಿ ಹೆಸರಾಂತರು. ಮತ್ತು ಮೊಮ್ಮಗ ವೇದಮೂರ್ತಿ ವಿನೋದ ಆಚಾರ್ಯರು ಈಗ ತನ್ನ ಅಜ್ಜನ ವೃತ್ತಿಯನ್ನು ಮುಂದುವರಿಸಿ ಹೆಸರನ್ನು ಗಳಿಸಿದ್ದಾರೆ.

ಆಚಾರ್ಯರ ಕುಟುಂಬದವರಿಗೆ ನನ್ನ ಶುಭ ಹಾರೈಕೆಗಳು.

ಸಂದರ್ಶನ

ನಮ್ಮ ಆಚಾರ್ಯರು



ಯಂ. ರಮೇಶ

ನಮ್ಮ ಮನೆಗೂ ವೆಂಕಟಕೃಷ್ಣ ಆಚಾರ್ಯರ ಮನೆಗೂ ಅವಿನಾಭಾವ ಸಂಬಂಧ. ಹೇಗೆಂದರೆ, ನಮ್ಮ ಅಮ್ಮ ಪುಟ್ಟಮ್ಮ (ಸುಮತಿ) ನ ಅಮ್ಮ ಪದ್ಮಾವತಿಯೂ, ವೆಂಕಟಕೃಷ್ಣ ಆಚಾರ್ಯರ ತಾಯಿ ಮಹಾಲಕ್ಷ್ಮಿಯು ಅಕ್ಕ ತಂಗಿಯರು. ಹತ್ವಾರ್ ರಾಮಚಂದ್ರರಾಯರು ನಮ್ಮ ಅಮ್ಮನಿಗೂ, ಆಚಾರ್ಯರಿಗೂ ಸೋದರ ಮಾವ. ಆಗಿನ ಕಾಲದಲ್ಲಿ ಗ್ರಾಮ ಗ್ರಾಮದೊಳಗೆ, ಕೇರಿ ಕೇರಿಯೊಳಗಿನ ಸಂಬಂಧಗಳೇ ಹೆಚ್ಚು. ಹೀಗಾಗಿ ಇವರಿಗೆ ಅವರು – ಅವರಿಗೆ ಇವರು ಹತ್ತಿರದವರೇ, ಕುಶಾಲಿಗೆ ಹೇಳುವುದಿದ್ದರೆ ಕೋಲ್ ಸಂಬಂಧಿಗಳೇ ! ಇಂತಹ ಸಂಬಂಧಗಳನ್ನು ಬೆಸೆಯುವುದರಲ್ಲಿ ವೆಂಕಟಕೃಷ್ಣ ಆಚಾರ್ಯರು ಪ್ರಸಿದ್ಧರು.

ನಮ್ಮ ಅಪ್ಪನಿಗೆ ಮದುವೆ ಮಾಡಿಸಿದ್ದೂ ಇವರೇ. ನಮ್ಮಮ್ಮ 2ನೇ ಸಂಬಂಧ. ಅಪ್ಪ ಆಗ ಮಿಲಿಟ್ರಿಯಲ್ಲಿದ್ರು. ಮಿಲಿಟ್ರಿ ಬಿಟ್ಟು ವಿದ್ಯಾದಾಯಿನೀ ಶಾಲೆಗೆ ಮಾಸ್ಟ್ರಾಗಿ ಸೇರಿದ ಮೇಲೆ ಅಮ್ಮ – ಪುಟ್ಟಮ್ಮ ರಾಮಚಂದ್ರ ಮಾವನ ಮನೆಯಿಂದ ವಿದ್ಯಾದಾಯಿನಿಗೆ ಹೋಗುತ್ತಿರುವ ಸಂದರ್ಭದಲ್ಲಿ ಗುರುತಿಸಿ, ಮಾಸ್ಟ್ರಿಗೆ ಇವಳೇ ಸರಿ ಎಂದು ಹೇಳಿ ಒಂದು ವಾರದಲ್ಲಿ ಮದುವೆ ಮಾಡಿಸಿದ್ರು. ಅದರ ಮೆಹನತ್ ಎಲ್ಲಾ ಆಚಾರ್ಯರಿಗೆ ಸಲ್ಲಬೇಕು. ನಮ್ಮ ಅಪ್ಪನಿಗೂ ಆಚಾರ್ಯರ ಮೇಲೆ ಎಲ್ಲಿಲ್ಲದ ಗೌರವ. ಅಪ್ಪ ಮಾಸ್ಟ್ರಾದ್ದರಿಂದ ಅಪ್ಪನಿಗೆ ಅವರ ಮನೆಯಲ್ಲಿ ಒಂದು ವಿಶೇಷ ಸ್ಥಾನಮಾನ. ನಮ್ಮ ಮನೆಗೆ ಅವರು ಪುರೋಹಿತರು. ನಮ್ಮ ಹಿರಿಯರು ಇದ್ದ ಮಾಣಿಯಾಟ್‌ಗೂ ಇವರೇ ಪುರೋಹಿತರು. ಹಾಗಾಗಿ ನಮ್ಮೆಲ್ಲಾ ಕಾರ್ಯಕ್ರಮಗಳಲ್ಲಿ ಆಚಾರ್ಯರ ಪೌರೋಹಿತ್ಯ ಮತ್ತು ಸುಧಾರಿಕೆ ಎದ್ದು ಕಾಣುತ್ತಿತ್ತು.

ನನಗೆ ಸಿಡಿಲೆಂದರೆ ಬಹಳ ಹೆದರಿಕೆಯಿತ್ತು. ಒಂದು ಸರ್ತಿ ಆಚಾರ್ಯರು ತೀರ್ಥಪ್ರೋಕ್ಷಿಸಿದ ಮೇಲೆ ನನ್ನ ಹೆದರಿಕೆ ಹೊರಟು ಹೋಯಿತು. ಪುಟ್ಟಮ್ಮನೆಂದರೆ ಆಚಾರ್ಯರಿಗೆ ಬಹಳ ಪ್ರೀತಿ. ಮಾತು – ಕತೆ – ವ್ಯವಹಾರ – ನಡತೆ – ಸಹಾಯ ಎಲ್ಲದರಲ್ಲೂ ಆಚಾರ್ಯರದು ಎತ್ತಿದ ಕೈ. ಏನಾದರೂ ಕೇಳಿ ಬಂದವರಿಗೆ ಇಲ್ಲಾ ಅಂತಹ ಹೇಳಿದವರಲ್ಲ. "ಆಯ್ತ – ಮಾಡುವಾ" ಅಂತ ಹೆಗಲಿಗೆ ಬೈರಾಸು ಏರಿಸಿ ಹೊರಟು ಬಿಟ್ಟರೆಂದರೆ ಕೆಲಸ ಆದ ಹಾಗೆ. ಅಂತಹ ಚಾಣಾಕ್ಷತನ, ಬುದ್ಧಿವಂತಿಕೆ ಆಚಾರ್ಯರಲ್ಲಿತ್ತು.

ನಮ್ಮಮ್ಮನ ಸರ್ಕ್ಯೂಟ್ ವಾರದಲ್ಲಿ 2 ದಿನವಾದರೂ ಅವರ ಮನೆಗಿತ್ತು. ನಮ್ಮ ಅಮ್ಮ ತರಿಸಿಕೊಡುವ ನಶ್ಯವಂತೂ ಭಾರೀ ಇಷ್ಟ. ಇಸ್ಪೀಟ್ ಆಟ (ದಾಡ್‌ಫೀಡ್) ಆಚಾರ್ಯರ ಇನ್ನೊಂದು ಹವ್ಯಾಸ. ಹೋದಲ್ಲಿ ಆಗಲೀ, ಮನೆಯಲ್ಲಾಗಲೀ, ಪುರುಸೊತ್ತು ಇದ್ದಾಗಲೆಲ್ಲಾ ಮಧ್ಯಾಹ್ನ ಊಟದ ನಂತರ ಇಸ್ಪೀಟ್ ಆಟ ಆಡುವುದು ಮತ್ತು ಆಡಿಸುವುದು ಅವರ "ಮಾಸ್ತರಿಕೆ" ಆಗಿತ್ತು. ಮೊದಲೇ ಆಚಾರ್ರು ಬಹಳ ಲೆಕ್ಕಾಚಾರದ ಜನವಾದ್ದರಿಂದ, ಆಟ ಆಡುವಾಗ ತಪ್ಪಿದಲ್ಲಿ ಜೋರು ಮಾಡುವುದು, ಗೆದ್ದಾಗ ಗೊಳ್ಳ್ ಎಂದು ಅವರದ್ದೇ ಆದ ಧ್ವನಿಯಲ್ಲಿ ನಗುವುದು.

ಆಟದ ಮೋಸವನ್ನು ತಡೆದುಕೊಳ್ಳಲಾಗದಿದ್ದಲ್ಲಿ, ಆ ಸಿಟ್ಟನ್ನು ಗದ್ದೆ ಹುಣಿಯಲ್ಲಿ ಬಿಟ್ಟು ಬರುವುದು ಆಚಾರ್ಯರ ಅಭ್ಯಾಸ. ಇದನ್ನೆಲ್ಲಾ ನಮ್ಮಮ್ಮನ ಬಾಯಿಂದಲೇ ಕೇಳಬೇಕು !!

ಒಗ್ಗಟ್ಟಿನಲ್ಲಿರುವ ಆಚಾರ್ಯರ 5–6 ಮಂದಿ ತಮ್ಮಂದಿರು, ಕೂಡು ಕುಟುಂಬವನ್ನು ಹೊಂದಿದ 26–27 ಮಂದಿಯ ಸಹಜೀವನ, ಹೆಂಡತಿ ಕಮಲಮ್ಮ ಮತ್ತು ಅವರ ವಾರಗಿತ್ತಿಯರು ಸೇರಿ ಮಾಡುವ ಮೂರು ಹೊತ್ತಿನ ಅಡಿಗೆ. ಶ್ಯಾವಿಗೆ, ಪತ್ರೊಡೆ, ರಸಾಯನ, ಪಾಯಸ, ಹಪ್ಪಳ ಸೆಂಡಿಗೆ ತಯಾರಿಸುವುದು, ಇದನ್ನು ನೋಡುವುದೇ ಒಂದು ಚಂದ. ಮನೆಗೆ ಯಾರೇ ಬರಲಿ, ಅವರಿಗೆ ಬೆಲ್ಲ ನೀರು ಕೊಡುವುದು ಅವರ ಸಂಪ್ರದಾಯ. ತನ್ನ ತಮ್ಮಂದಿರ ಹೆಂಡತಿಯರನ್ನು, ಅವರ ಮಕ್ಕಳನ್ನು, ಅವರ ನೆಂಟರನ್ನು, ತಂಗಿಯ ಮಕ್ಕಳನ್ನು ತನ್ನವರೆಂದೇ ಕರೆದು ಮಾತನಾಡಿಸುವುದನ್ನು ಹಿಟ್ಲರ್ ಬಿರುದು ಪಡೆದ ಆಚಾರ್ಯರಿಂದ ಕಲಿಯಬೇಕು. ನನ್ನ ಮದುವೆ ಹಾಗೂ ನಮ್ಮ ತಮ್ಮಂದಿರ ಮದುವೆಯೆಲ್ಲಾ ಆಚಾರ್ಯರ ಮೇಲ್ವಿಚಾರಣೆಯಲ್ಲೇ ನಡೆದದ್ದು.

ಇಂತಹ ಅಪರೂಪದ ವ್ಯಕ್ತಿ 1986ರಲ್ಲಿ ತಾರಾ ಕ್ಲಿನಿಕ್‌ನಲ್ಲಿ ತೀರಿಕೊಳ್ಳುವ ಸ್ವಲ್ಪ ಗಂಟೆಯ ಮೊದಲು ನಾನು ಕೊಯಂಬತ್ತೂರಿಗೆ ಹೋಗುವ ಸಂದರ್ಭದಲ್ಲಿ ಕೊನೆಯದಾಗಿ ಮಾತನಾಡಿಸಿದ್ದೆ ಎಂಬುದೇ ನನಗೆ ಹೆಮ್ಮೆಯ ವಿಷಯ. ವೆಂಕಟಕೃಷ್ಣ ಆಚಾರ್ಯರಂತಹ ವ್ಯಕ್ತಿ ನಮಗಿನ್ನು ಸಿಗಲಾರರು. ಅವರ ಹತ್ತಿರದ ಸಂಪರ್ಕದಲ್ಲಿದ್ದ ನಮ್ಮ ಅಪ್ಪ ಅಮ್ಮನಿಂದ ಹಿಡಿದು ನಮಗೆಲ್ಲರಿಗೂ ಮಾರ್ಗದರ್ಶಕರಾಗಿ, ಗುರು ಸಮಾನರಾಗಿ ಬುದ್ಧಿ ಹೇಳಿ ದಾರಿ ತೋರಿಸಿದ್ದರಿಂದ ನಾವಿಂದು ಒಳ್ಳೆಯ ಬದುಕನ್ನು ನಡೆಸುತ್ತಿದ್ದೇವೆ ಎಂದು ಭಾವಿಸಿದ್ದೇನೆ.

ಅವರ ಆಶೀರ್ವಾದ ನಮಗೂ – ನಿಮಗೂ ಎಂದೆಂದೂ ಇರಲಿ.





ನಮ್ಮ ಹಿಟ್ಲರ್ ಆಚಾರ್ಯರು

ಪ್ರಸಿದ್ಧ ಪಿ.

ಮನೆತನಕ್ಕೂ ಕೀರ್ತಿ ಮತ್ತು ಪುರಜನರಿಗೆ ಹಿತವನ್ನು ಬಯಸುತ್ತಾ, ನನ್ನ ಜೀವನದ ಉದ್ದಕ್ಕೂ ಪಾಲಿಸಿಕೊಂಡು ಬಂದ ಕೆಲವು ವ್ಯಕ್ತಿಗಳಲ್ಲಿ ಒಬ್ಬರಾದ ಹಿಟ್ಲಾಚಾರ್ಯರು ಎಂದು ಹೆಸರುವಾಸಿಯಾದ ಪ್ರತಿಷ್ಠಿತ ಕಾವಿನಕಲ್ಲು ಮನೆತನದ ಶ್ರೀ ವೆಂಕಟಕೃಷ್ಣ ಆಚಾರ್ಯರೇ ಸೈ.

ಪಣಂಬೂರಿನ ಛಾತ್ರ ಮನೆಯಲ್ಲಿ ನನ್ನ ಅಜ್ಜ ಶ್ರೀ ಶ್ಯಾಮರಾಯರ ಹಿರಿತನದಲ್ಲಿ ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಮುಖ್ಯವಾಗಿ ಗಣೇಶ ಚತುರ್ಥಿಯ ಗಣಹೋಮ ಮತ್ತು ದುರ್ಗಾರಾಧನೆಯ ಬಾಬ್ತು 12 ದಿವಸ ಸತತವಾಗಿ ದುರ್ಗಾನಮಸ್ಕಾರ ಪೂಜೆಗಳು ನಡೆಯುತ್ತಿದ್ದವಂತೆ. ಪೂಜಾರಾಧನೆಯಲ್ಲಿ ಅಜ್ಜನಿಗೂ ಮತ್ತು ಆಗಿನ ಪುರೋಹಿತರಲ್ಲಿ ವ್ಯತ್ಯಾಸ ಬಂದಾಗ, ಇನ್ನು ಮುಂದಕ್ಕೆ ಯಾರನ್ನು ಕರೆದು ಪೂರೈಸುವುದು ಎಂದು ಚಿಂತಿತರಾದ ಅಜ್ಜ, ಹೊಸಬೆಟ್ಟಿನ ಶ್ರೀ ವೆಂಕಟಕೃಷ್ಣ ಆಚಾರ್ಯರಲ್ಲಿ ವಿನಂತಿಸಿದಂತೆ, ಪ್ರಾರಂಭದಲ್ಲಿ ಆಚಾರ್ಯರು ಪೂಜೆಯನ್ನು ಪೂರೈಸುತ್ತಿದ್ದರಂತೆ.

ಕಾಲಕ್ರಮೇಣ, ಬಂದರು ಪ್ರದೇಶವಾಗಿ ಅಭಿವೃದ್ಧಿ ಹೊಂದಿದಾಗ, ಪಣಂಬೂರಿನ ಆಸ್ತಿಯು ಸರಕಾರದ ವಶವಾದಾಗ, ನನ್ನ ತಂದೆಯವರು ಹೊಸಬೆಟ್ಟಿನ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಅದರಲ್ಲಿಯೂ ಆಚಾರ್ಯರ ಮನೆಯ ಪಕ್ಕ ಆಸ್ತಿ ಖರೀದಿಸಿ ಮನೆ ಕಟ್ಟಿದರು.

ಕಾಲಕ್ರಮೇಣ ಪೂಜೆಯು ಹೊಸಬೆಟ್ಟಿನ ಹಳೆಮನೆಯಲ್ಲಿ ಪ್ರಾರಂಭವಾಗಿ, ಹಲವು ತೊಂದರೆಗಳಿಂದಾಗಿ ನಿಂತು ಹೋಯಿತು. ಕಾಲಕ್ರಮೇಣ ಮತ್ತೊಮ್ಮೆ ನನ್ನ ಉಪನಯನದ ವರುಷದಿಂದ 1976ರಿಂದ ಶ್ರೀ ವೆಂಕಟಕೃಷ್ಣ ಆಚಾರ್ಯರ ನೇತೃತ್ವದಲ್ಲಿ ಪ್ರಾರಂಭಿಸಲಾಯಿತು.

ಬಾಲ್ಯದಲ್ಲಿ ಒಂದು ವರುಷ ಪೂಜೆಗೆ ಬಂದಿದ್ದ ಆಚಾರ್ಯರು ಸಾಯಂಕಾಲ ಮಂಡಲಕ್ಕೆ ಬಣ್ಣ ತುಂಬುತ್ತಾ, ನಮ್ಮ ಎಂದಿನ ಸ್ವರದಲ್ಲಿ ಹೀಗೆಂದು ಹೇಳಿದ್ದು, ನನ್ನ ಕಿವಿಯಲ್ಲಿ ಗುಣುಗುಣುತ್ತಾ ಇದೆ. 'ಮತ್ತೆ ಪಣಂಬೂರಿನ ಪೂಜೆಯ ಗೌಜಿಯೇ ಬೇರೆ. ನಾನು 12 ದಿವಸ ಪೂಜೆ ಮುಗಿಸಿ, ಚಿತ್ರಾಪುರವಾಗಿ ಹೊಸಬೆಟ್ಟಿಗೆ ಮನೆಗೆ ಬರುವಾಗ (ಆಗ ಆಚಾರ್ಯರು ದಣಿವು ಆರಿಸಲು ಚಿತ್ರಾಪುರದಲ್ಲಿ ಮಧ್ಯಾಹ್ನಕ್ಕೆ ತಂಗಿ, ಆ ಮೇಲೆ ಸಾಯಂಕಾಲಕ್ಕೆ ಅವರ ಮನೆ ತಲುಪುತ್ತಿದ್ದರು) ನಿಮ್ಮ ಅಪ್ಪ ಆಳುಗಳ ಮೂಲಕ 4 ಮುಡಿ ಅಕ್ಕಿಯನ್ನು ನಮ್ಮ ಮನೆಯ ಜಗಲಿಯಲ್ಲಿ ಇಟ್ಟಿರುತ್ತಿದ್ದರು' ಎಂದು ಹೇಳುತ್ತಿದ್ದಾಗ ಅವರ ಕಣ್ಣಂಚಿನಲ್ಲಿ ಒಂದು ಸಂತೋಷದ ಸಂತೃಪ್ತಿಯ ಭಾವವನ್ನು ನಾನು ನೋಡಿರುವೆನು. ನನ್ನ ಅಜ್ಜಿ ಸಂಜೀವಿನಿಯಮ್ಮನವರ ವೈಕುಂಠ ಸಮಾರಾಧನೆಯಲ್ಲಿ, ಅದರ ಮುತುವರ್ಜಿಯನ್ನು ವಹಿಸಿ ಸಾಂಗವಾಗಿ ನೆರವೇರಿಸಿದರು. ಆಗ ಗೋದಾನಕ್ಕಾಗಿ ದನಕರುವನ್ನು ವ್ಯವಸ್ಥೆ ಮಾಡಿ ಅವರು ಅತಿಯಾದ

ಶ್ರದ್ಧೆಯಲ್ಲಿ ನೆರವೇರಿಸಿದ ದೃಶ್ಯವನ್ನು ನಾನು ಅನುಭವಿಸಿರುವೆನು.

ಶ್ರೀಯುತ ಆಚಾರ್ಯರ ಮನೆಯಲ್ಲಿ ವರ್ಷದಲ್ಲಿ ಹಲವು ಕಾರ್ಯಕ್ರಮಕ್ಕೆ, ಮಧ್ಯಾಹ್ನ ಊಟದ ಹೇಳಿಕೆ ಇದ್ದಂತಹ ಸಂದರ್ಭದಲ್ಲಿ ನಾವು ಸಮಯಕ್ಕೆ ಸರಿಯಾಗಿ ಹಾಜರು ಇರುತ್ತಿದ್ದೆವು. ಆಚಾರ್ಯರ ಮನೆಯ ವೈದಿಕ, ಪೂಜೆ, ಊಟಕ್ಕೆ ಎಷ್ಟೊಂದು ಜನ ಸೇರುತ್ತಿದ್ದರು ಎಂದರೆ, ಒಮ್ಮೊಮ್ಮೆ ನಮ್ಮ ಅಪ್ಪ ಊಟ ಮಾಡಿ ಕೈ ತೊಳೆಯಲು ರಘುರಾಮ ಮಾಸ್ತ್ರ ಹಿತ್ತಲಿಂದ ಬಂದು ನಮ್ಮ ಮನೆಯಲ್ಲಿ ಕೈ ಕಾಲು ತೊಳೆದುಕೊಳ್ಳುತ್ತಿದ್ದರು ಆಚಾರ್ಯರ ಇಸ್ಪೀಟ್ 56ರ ಆಟ ಆಡುವ ಶೈಲಿಯು ತುಂಬಾ ಮನೋರಂಜನೀಯ.

ಹಲವು ವರುಷಗಳ ಕಾಲ ಶ್ರೀಯುತ ಆಚಾರ್ಯರ ಸಮಯದ ನಂತರ ದಿ. ಶ್ರೀಧರ ಆಚಾರ್ಯರು, ದಿ. ವಾದೀಶ ಆಚಾರ್ಯರು ಪೂಜೆ ನೆರವೇರಿಸಿದರು. ಪ್ರಸ್ತುತ ವೆಂಕಟಕೃಷ್ಣ ಆಚಾರ್ಯರ ಮೊಮ್ಮಗ ಶ್ರೀ ವಿನೋದ ಆಚಾರ್ಯರು ನೆರವೇರಿಸುತ್ತಾ ಇರುವುದು ನಮ್ಮ ಸೌಭಾಗ್ಯವೇ ಸರಿ.

ಆ ಕಾಲದಲ್ಲಿ ಅವರ ಮನೆಯಲ್ಲಿದ್ದ ತುಂಬು ಸಂಸಾರವನ್ನು ಸಾಗಿಸುತ್ತಾ, ಊರಿನ ಜನರಿಗೆ ಉಪದೇಶಿಸುತ್ತಾ ಸಾರ್ಥಕ ಬದುಕನ್ನು ಪೂರೈಸಿದ ಈ ಸಂದರ್ಭದಲ್ಲಿ ಅವರ ಸ್ಮರಣೆ ಮಾಡುವ ಅವಕಾಶವನ್ನು ನೀಡಿದ ಶ್ರೀ ವಿನೋದ ಆಚಾರ್ಯರಿಗೆ ಧನ್ಯವಾದ ನೀಡುತ್ತಾ, ಆ ಎಲ್ಲ ಚೇತನಗಳಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು.



ಶುಭೇಕ್ಷಣ ರಾಮ ರಂತಹ ವೇದಮೂರ್ತಿ ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು.

**"ಸುಹೃನ್ಮಿತ್ರಾರ್ಯುದಾಸೀನ ಮಧ್ಯಸ್ಥದ್ವೇಷ್ಯ ಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ।"**


= ಸಹೃದಯರು, ಮಿತ್ರರು, ವೈರಿಗಳು, ಉದಾಸೀನರು, ಮಧ್ಯಸ್ಥರು, ದ್ವೇಷಪಾತ್ರರು, ಬಂಧುಗಳು, ಸಜ್ಜನರು ಮತ್ತು ಪಾಪಿ ಇವರೆಲ್ಲರಲ್ಲಿ ಸಮಾನ ಭಾವವುಳ್ಳವನು ಅತ್ಯಂತ ಶ್ರೇಷ್ಠನಾಗಿದ್ದಾನೆ.

ಮೇಲಿನ ಶ್ಲೋಕವು "ಶ್ರೀ ಮದ್ಭಗವದ್ಗೀತೆಯ ಅಧ್ಯಾಯ 6ಲ್ಲಿ ಬರುವ ಭಗವಾನುವಾಚದಲ್ಲಿ ॥ 9 ॥ ನೇಯ ಶ್ಲೋಕವಾಗಿರುತ್ತದೆ.

ಶ್ರೀ ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ ಈ ಮಾತನ್ನು ಹೋಲುವ ವ್ಯಕ್ತಿಯು ಕುಳ್ಯಾ ಹೊಸಬೆಟ್ಟು ಗ್ರಾಮದ ನಿವಾಸಿಯಾದ ಪುರೋಹಿತ ಮನೆಯವರಾದ ವೇದಮೂರ್ತಿ ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು. ಇವರು "ಹಿಟ್ಲರ್" ಆಚಾರ್ಯರು ಎಂದೇ ಪ್ರಸಿಧ್ಧಿಯಾಗಿದ್ದಾರೆ.

ಇವರು ತನ್ನ ತಮ್ಮಂದಿರ ಜತೆಗೆ ಒಂದೇ ಮನೆಯಲ್ಲಿ, ಸಹ ಕುಟುಂಬವನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಬಂದಿರುತ್ತಾರೆ. ಇವರ ಮನೆಯಲ್ಲಿ ಹಲವಾರು ಶುಭಕಾರ್ಯಗಳು, ದಾನ ಧರ್ಮಗಳು ನಡೆದುಕೊಂಡು ಬಂದಿರುತ್ತವೆ.

ನಮ್ಮ ಕಕ್ಕೆಸಾಲು ಕುಟುಂಬಕ್ಕೂ ಕಾವಿನಕಲ್ಲು ಕುಟುಂಬಕ್ಕೂ ಒಳ್ಳೆಯ ಬಂಧುತ್ವದ ಸಂಬಂಧವಿತ್ತು. ನಮ್ಮ ಮನೆಗೆ ಶ್ರೀಯುತರಾದ ವೆಂಕಟಕೃಷ್ಣ ಆಚಾರ್ಯ ಹಲವು ವಿಧದಲ್ಲಿ ಸಹಾಯವನ್ನು ಮಾಡಿರುತ್ತಾರೆ. ನಮ್ಮ ವಿದ್ಯಾಭ್ಯಾಸಕ್ಕೆ ಧನ ಸಹಾಯ, ನನ್ನ ಅಕ್ಕನ ಮದುವೆಯ ಸಮಯದಲ್ಲಿ ಎಲ್ಲಾ ರೀತಿಯ ಸಹಾಯವನ್ನು ಮಾಡಿದ್ದಾರೆ. ಹಾಗೆಯೇ ನನ್ನ ತಂದೆಯವರಾದ ಕಕ್ಕೆಸಾಲು ವೆಂಕಟ್ರಾವ್ ತೀರಿಹೋದ ಸಮಯದಲ್ಲಿ ಸಾಂತ್ವನದ ನುಡಿಗಳನ್ನು ಹೇಳಿ, ಊರ ಹಿರಿಯರೊಂದಿಗೆ ಸೇರಿ ಒಳ್ಳೆಯ ರೀತಿಯಲ್ಲಿ ಪಿತೃಕಾರ್ಯ



ಕಕ್ಕೆಸಾಲು ಕೇಶವ ರಾವ್ ಕುಳ್ಯಾ

ಮಾಡಲು ಸಹಕರಿಸಿದ್ದಾರೆ. ನಮ್ಮ ಮನೆಯ ಶುಭಕಾರ್ಯಕ್ರಮ ಮತ್ತು ಅಶುಭಕಾರ್ಯಕ್ರಮಕ್ಕೆಲ್ಲಾ ಇವರು, ಊರಿನ ಪಡುಕಾಡು ಕೃಷ್ಣರಾಯರು, ಸಂಕಪ್ಪಯ್ಯ ಹತ್ವಾರರು,, ಗಿರಿಧರ ಹತ್ವಾರರು, ಅತಿಕಾರಿ ಗೋಪಾಲಕೃಷ್ಣ ರಾವ್ ಮತ್ತು ಕರೂರು ಡಾ। ಯಚ್. ಜನಾರ್ದನ ಆಚಾರ್ಯರರು, ಇವರೆಲ್ಲ ಸೇರಿ ಕಾರ್ಯಕ್ರಮವೆಲ್ಲ ನಿರ್ವಿಘ್ನವಾಗಿ ನಡೆಯುವ ಹಾಗೇ ಮಾಡುತ್ತಿದ್ದರು.

ಶ್ರೀಯುತ ಆಚಾರ್ಯರ ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ ಅಲ್ಲಿ ಮಧ್ಯಾಹ್ನದ ಭೋಜನದ ನಂತರ ಸಂಜೆಯ ತನಕ ಕೆಲವು ಹಿರಿಯರು 'ಇಸ್ಪೀಟ್' ಆಟವನ್ನು ಆಡುತ್ತಿದ್ದರು. ಇವರ ತಮ್ಮ ನಾರಾಯಣ ಆಚಾರ್ಯರು ನಮಗೆ ಆಟದ ವಿಷಯವನ್ನು ಹೇಳಿಕೊಡುತ್ತಿದ್ದರು.

ಶ್ರೀಯುತ ಆಚಾರ್ಯರು ಧೀಮಂತ ಮನುಷ್ಯರಾಗಿದ್ದಾರೆ. ಯಾವ ಬಡವನೇ ಆಗಲೀ ಶ್ರೀಮಂತನೇ ಆಗಲಿ ಮನೆಗೆ ಬಂದರೆ ಅವರ ಯೋಗಕ್ಷೇಮವನ್ನು ವಿಚಾರಿಸಿ ಕಳುಹಿಸಿಕೊಡುತ್ತಿದ್ದರು. ಹಾಗೆಯೇ ಅವರವರ ಆರ್ಥಿಕತೆಗನುಗುಣವಾಗಿ ಅವರ ಶುಭಕಾರ್ಯ, ಮದುವೆ, ಉಪನಯನ, ಹೋಮ ಹವನಗಳನ್ನು, ಪೂಜೆ ಕಾರ್ಯಗಳನ್ನು ನಿರ್ವಿಘ್ನವಾಗಿ ಮಾಡಿಸಿ ಆಶೀರ್ವದಿಸಿ ಕಳುಹಿಸಿಕೊಡುತ್ತಿದ್ದರು. ಜನರಿಗೆ ಮಾಡಿದ ಉಪಕಾರವನ್ನು ಯಾವುದೇ ಫಲಾಪೇಕ್ಷೆ ಇಲ್ಲದೆ, ಎಲ್ಲವನ್ನೂ ಏಕತಾ ಮನೋಭಾವನೆಯಿಂದ ಜೀವನವನ್ನು ನಡೆಸಿಕೊಂಡು, ಸಹಬಾಳ್ವೆಯ ದಾರಿದೀಪವನ್ನು ನಮಗೆ ತೋರಿಸಿಕೊಟ್ಟ ಮಹಾನ್ ವ್ಯಕ್ತಿ ದಿ.ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರಿಗೆ ನಮ್ಮ ಕುಟುಂಬದ ಸಹಸ್ರ ಸಹಸ್ರ ನಮನಗಳು.



ವೆಂಕಟಕೃಷ್ಣಾಚಾರ್ಯರು

ವಿ.ಎನ್. ಶ್ರೀನಿವಾಸ ಹೊಸಬೆಟ್ಟು

ಹಿಂದೆ ಒಂದು ಕಾಲದಲ್ಲಿ ಕಾವಿನಕಲ್ಲು ವಾದಿರಾಜ ಆಚಾರ್ಯರ ಮನೆ ಹೊಸಬೆಟ್ಟಿನಲ್ಲಿತ್ತು (ಈಗ ವಿನೋದ ಆಚಾರ್ಯರ ಮನೆ). ವಾದಿರಾಜ ಆಚಾರ್ಯ ದಂಪತಿಗಳಿಗೆ 7 ಜನ ಗಂಡು 1 ಹೆಣ್ಣು ಮಗು ಇತ್ತು. ಇದರಲ್ಲಿ ಹಿರಿಯ ಮಗನಾಗಿ ವೆಂಕಟಕೃಷ್ಣ ಆಚಾರ್ಯರು. ಅವರಿಗೆ ಇಲ್ಲಿನ ಪರಿಸರದಲ್ಲಿ ಹಿಟ್ಲರ್ ಅಂತ ಕರೆಯುತ್ತಿದ್ದರು. ಇವರು ಪುರೋಹಿತರಾಗಿ ಮತ್ತು ಇತರರ ಕೆಲವು ಕಾರ್ಯಕ್ರಮಗಳನ್ನು ಮನೆಯಲ್ಲಿ ಮಾಡಿಕೊಂಡಿದ್ದರು. 1963ರಲ್ಲಿ ನಮ್ಮ ಅಪ್ಪ ಮತ್ತು ನಾವು ಕುಳ್ಯಾಗೆ ಬಂದು ನೆಲೆಸಿದೆವು. ಆ ಸಮಯದಲ್ಲಿ ಇವರ ಪರಿಚಯ ನಮ್ಮ ತಂದೆಯವರಿಗೆ ಆಗಿ ಅವರೊಂದಿಗೆ ಎಲ್ಲ ಕೆಲಸಗಳಲ್ಲಿ ಸಹಭಾಗಿಯಾಗುತ್ತಿದ್ದರು. ಯಾವುದೇ ಕೆಲಸ ಆಗುವಾಗ ನಮ್ಮ ತಂದೆ ಅಂದರೆ ನಾರಾಯಣ ಇಲ್ಲದೆ ಅವರಿಗೆ ಸಮಾಧಾನ ಇಲ್ಲ. ಒಮ್ಮೆ ಹೊಸಬೆಟ್ಟಿನಲ್ಲಿ ಕಕ್ಕೆಸಾಲು ಉಪೇಂದ್ರ ಅವರ ತಾಯಿ ತೀರಿಕೊಂಡಾಗ ಮಳೆಯನ್ನು ಲೆಕ್ಕಿಸದೆ ಇವರು ನಮ್ಮ ಮನೆಯ ತೋಡಿನ ಬದಿಯಲ್ಲಿ ನಿಂತು – ಓ ನಾರಾಯಣ ಇಲ್ಲಿ ಬಾ,,,,,,,, ಉಪೇಂದ್ರನ ಅಮ್ಮ ತೀರಿದ್ದಾರೆ ಅಂತ ಹೇಳಿ ಕರಕೊಂಡು ಅವರ ಮನೆಗೆ ಹೋಗಿ ಆ ಕೆಲಸವನ್ನು ಮಾಡಿದ್ದಾರೆ.

ಊರಿನಲ್ಲಿ ಯಾವುದೇ ಕೆಲಸಗಳಿದ್ದರೂ ಅವರ ಮುಂದಾಳತ್ವದಲ್ಲಿ ಆಗುತ್ತಿತ್ತು. ಚೌತಿಯ ಸಮಯದಲ್ಲಿ ಮೊಗವೀರರ ಮನೆಗಳಲ್ಲಿ ಗಣಹೋಮ ಆಗುತ್ತಿತ್ತು. ಒಂದು ಬದಿಯಲ್ಲಿ ಇವರು, ಇನ್ನೊಂದು ಬದಿಯಲ್ಲಿ ಅವರ ತಮ್ಮ ಶ್ರೀಧರ ಆಚಾರ್ಯರು. ಅದರಲ್ಲೂ ಹಿಟ್ಲರ್‌ರ ಒಟ್ಟಿಗೆ ನಾನು ಹೋಗುತ್ತಿದ್ದೆ. ಒಂದು ಬೈರಾಸು ಕಚ್ಚೆ, ಖಾಲಿ ಮೈ ಬಿಟ್ಟು ಕೊಂಡು ಹೋಗುತ್ತಿದ್ದರು. ಯಾರಿಗೇ ಆಗಲಿ ಹೇಳುವುದನ್ನು ಸೀದಾ ಹೇಳಿ ಮತ್ತೆ ಇನ್ನೊಂದು ನಿಮಿಷದಲ್ಲಿ ಕೆಲಸದ ವಿಚಾರಕ್ಕೆ ಬರುತ್ತಿದ್ದರು. ನಾಳೆ ಎಲ್ಲಿಯಾದರೂ ಉಂಟಾ ನಿನಗೆ, ಇಲ್ಲದಿದ್ದರೆ ಮನೆಗೆ ಬಾ ಅಂತ ಆಗಾಗ ನನ್ನನ್ನು ಕರೆದದ್ದೂ ಉಂಟು. ನಮ್ಮ ತಂದೆ ನಾರಾಯಣ ಇದ್ದರೆ ಅವರ ಅರ್ಧ ಕೆಲಸ ಆದ ಹಾಗೆ. ಒಮ್ಮೊಮ್ಮೆ ಅವರಲ್ಲಿ ಭಾರೀ ಚರ್ಚೆಯಾಗಿ ಮತ್ತು ಒಟ್ಟಾಗುತ್ತಿದ್ದರು. ಅವರಿಲ್ಲದೆ ಇವರಿಲ್ಲ – ಇವರಿಲ್ಲದೆ ಅವರಿಲ್ಲ ಎಂಬ ರೀತಿಯಲ್ಲಿದ್ದರು. ಹೇಳುತ್ತಾ ಹೋದರೆ ಅವರ ಬಗ್ಗೆ ತುಂಬ ವಿಷಯಗಳಿವೆ. ಹಿಟ್ಲರ್‌ರಿಗೆ ನಮೋ ನಮಃ.



ಹೊಸಬೆಟ್ಟಿನ ಹೊಸಬೆಳಕು – ಕಾವಿನಕಲ್ಲು ವೆಂಕಟಕೃಷ್ಣಾಚಾರ್ಯರು



ಪವನ್ ಮೈರ್ಪಾಡಿ

ಸ್ವಸ್ತಿ ಮಂತ್ರಾರ್ಥಾಃ ಸತ್ಯಾಃ ಸಫಲಾಃ ಭವಂತು ಎನ್ನುವ ಆಶೀರ್ವಾಕ್ಯಗಳು, "ವಂಶಾಭಿವೃದ್ಧಿರಸ್ತು" ಎನ್ನುವ ಶ್ರೇಯಃ ಪ್ರಾರ್ಥನೆಗಳು ನಮ್ಮ ಹಿರಿಯರ ಪಾಲಿಗೆ ಸತ್ಯಗೊಂಡ ಕಾರಣ ನಾವು/ನಮ್ಮ ಪೀಳಿಗೆಯು ಋಣಾನುಬಂಧದ ಮೂಲಕ ಇಂತಹವರೇ ತಾಯಿ–ತಂದೆಯವರಿಗೆ ಯಾವುದೇ ಅರ್ಜಿ ಹಾಕದೇ ಹುಟ್ಟಿದ್ದೇವೆ. "ಮಾನವ ಜನ್ಮ ದೊಡ್ಡದು" ಎನ್ನುವ ಪುರಂದರ ದಾಸರ ಕೀರ್ತನೆಯ ಸಾಲು, ಅದಕ್ಕೂ ಮೀರಿದ ಬ್ರಾಹ್ಮಣ ಜನ್ಮ, ಅದಕ್ಕಿಂತಲೂ ಮಿಗಿಲಾದ ಸತ್ ವೈಷ್ಣವ ಜನ್ಮ ನಮಗೆ ದೊರಕಿದ್ದು ನಮ್ಮ ಪೂರ್ವಿಕರಿಗೆ ಗುರು–ಆಚಾರ್ಯ ಪರಂಪರೆಗಳು ಆಶೀರ್ವದಿಸಿದ ಫಲವೇ ಆಗಿದೆ. ಪುರಂದರ ದಾಸರ ಕೀರ್ತನೆಯ ಸಾಲು ಅದಕ್ಕೂ ಮುಂದುವರೆದು ಹೇಳಿದುದು "ಅದನು ಹಾಳು ಮಾಡಲುಬೇಡಿ ಹುಚ್ಚಪ್ಪಗಳಿರಾ" ಎಂಬುದಾಗಿ. ಹಾಗಾಗಿ ಮಾನವ ಜನ್ಮದ ಸದ್ಬಳಕೆಯು ಸಾಧನಾ ಶರೀರದ ಸದ್ಬಳಕೆಯೇ ಆಗಿದೆ. ಈ ಸಾಧನಾ ಶರೀರದ ಸದ್ಬಳಕೆಗಾಗಿ ನಿರ್ದೇಶನಗಳು ಅತ್ಯಗತ್ಯ. ಆ ನಿರ್ದೇಶನಗಳು ದೊರೆಯಲು ಸಂಸ್ಕಾರವೆಂಬ ಯೋಗಫಲವನ್ನೀಯುವ ಕರ್ಮವೃಕ್ಷದ ಬೇರು ಸುದೃಢವಾದಾಗಲೇ ಮಾತ್ರ ಸಾಧ್ಯ. ಆ ಸುಭದ್ರ ವೃಕ್ಷಕ್ಕೆ ರೆಂಬೆ–ಕೊಂಬೆಗಳು ಜನ್ಮಾಂತರಗಳೊಳಗೆ ಹುಟ್ಟಿ ಬಂದು ಜರುಗಿದ ಕರ್ಮಗಳ ಫಲ ಪಾಪ–ಪುಣ್ಯಗಳೆಂದು ವಿಭಾಗಗೊಂಡು ಅವುಗಳ ಶೇಷ ಲೆಕ್ಕಾಚಾರ ಮುಂದಿನ ಜನ್ಮದ ಜೀವ ಪರಿಸ್ಥಿತಿಗಳಾಗಿದೆ. ಹೀಗೆ ಸಾಗಿ ಬಂದ ಜನ್ಮಾಂತರಗಳ ಋಣ ವ್ಯವಹಾರಗಳು ಇಲ್ಲಿಯವರೆಗೆ ತಲುಪಿ ದೊರಕಿದ ಜನ್ಮ ನಮ್ಮ ಪ್ರಸ್ತುತ ಜೀವನವಾಗಿದೆ.

ಭಾರತೀಯ ಸನಾತನ ಪರಂಪರೆಯ ಗಟ್ಟಿ ಬೇರು ಋಷಿ ಪರಂಪರೆಗಳೇ ಆಗಿದೆ. ಆ ಪರಂಪರಾವಾರು ಜನಪದೀಯವಾಗಿ ಬಂದ ಸಂಪತ್ತೇ ಅಪೌರುಷೇಯ ವೇದ ಮಂತ್ರಗಳು. ಹೀಗೆ ಜ್ಞಾನ ಭಂಡಾರವೆನಿಸಿದ ಆ ಬ್ರಹ್ಮನ ಮುಖ ಕಮಲದಿಂದ ಹುಟ್ಟಿದ ವೇದ–ವೇದಾಂತ ಚಿಂತನೆಗಳನ್ನು ಅಂದಿನಿಂದ ಈ ಕಾಲದ ಪರ್ಯಂತ ಅಧ್ಯಯನ–ಅಧ್ಯಾಪನ–ಯಜನ–ಯಾಜನಗಳ ಮೂಲಕ ಕಾಪಿಟ್ಟುಕೊಂಡು ಬಂದ ಆ ಋಷಿ–ಆಚಾರ್ಯ–ಗುರು ಪರಂಪರೆಗಳಿಗೆ ಋಣಿಯಾಗಿರಬೇಕಾದದು ನಮ್ಮ ಕರ್ತವ್ಯವೇ ಆಗಿದೆ. ಅಂತಹ ಋಷಿ–ಆಚಾರ್ಯ–ಗುರು ಪರಂಪರೆಗಳು ಯೋಗ್ಯರಿಗೆ ಮತ್ತು ಅಧಿಕಾರಿಗಳಿಗೆ ಮಾಡಿದ ಪಾಠ ಪ್ರವಚನಗಳು, ಬ್ರಾಹ್ಮಣ ಜೀವದ ಹುಟ್ಟಿನಿಂದ ಮರಣದ ತನಕದ ಷೋಡಶ ಸಂಸ್ಕಾರಗಳು, ಸರ್ವಾಂತರ್ಯಾಮಿಯಾದ ಭಗವಂತನನ್ನು ಪಂಚಭೂತಗಳಲ್ಲಿ, ಪ್ರತಿಮಾ–ಶಿಲಾ–ಶಾಲಗ್ರಾಮಗಳಲ್ಲಿ ಅನುಸಂಧಾನಿಸಿಕೊಂಡು ಮಾಡಿದ ಪೂಜಾ ಉಪಾಸನೆಗಳನ್ನು ಮಾಡಿ–ಮಾಡಿಸಿದ ಫಲವನ್ನೇ ಲೋಕವು ಈ ವರೆಗೂ ಅನುಭವಿಸಿಕೊಂಡು ಬಂದಿದೆ. ಕಾಲ ಕಾಲಕ್ಕೆ ಸುರಿಯುವ ಮಳೆ, ಫಲವತ್ತಾದ ಮಣ್ಣು, ಧರ್ಮ ಭಯಗಳುಳ್ಳ ಜನರಿಂದ ಕೂಡಿದ ದೇಶ ಆ ರಾಷ್ಟ್ರದ ರಾಜನ ಪುರೋಹಿತರ ಬಲದಿಂದ ಎನ್ನುವ ಮಾತು ಈಗಲೂ ಜಾರಿಯಲ್ಲಿದೆ. ಪುರೋಹಿತ ಎಂಬುದು ಕಾಲಾಂತರದಲ್ಲಿ ವೈದಿಕ–ಧಾರ್ಮಿಕ ಕಾರ್ಯಕ್ರಮಗಳನ್ನು ನಿರ್ದೇಶಿಸುವ ವೃತ್ತಿಯಾಗಿ ಬದಲಾಯಿತು. ಆದರೂ ಋಷಿ–ಆಚಾರ್ಯ–ಗುರು ಪರಂಪರೆಯವರೇ ಈ

ವೃತ್ತಿಯನ್ನು ಮುಂದುವರೆಸುತ್ತಿದ್ದು, ವರ್ಣಾಶ್ರಮ ವಿಧಾನಯುಕ್ತ ಜೀವನ ಪದ್ಧತಿ ಬಲಹೀನಗೊಂಡ ಕಾಲಘಟ್ಟದಲ್ಲಿ ಜೀವನೋಪಾಯಕ್ಕಾಗಿ ಆಯ್ಕೆಯ ವೃತ್ತಿ ಇದಾಗಿ ಪರಿವರ್ತನೆಗೊಂಡಿದೆ. ಆದರೂ "ಪು"-ಪುನೀತನೂ "ರೋ"-ರೋಷರಹಿತನೂ "ಹಿ"-ಹಿತವಂತನೂ "ತ"-ತಪಸ್ವಿಯೂ ಆದ ಅರ್ಚಕನು ನಡೆಸುವ ಪುರೋಹಿತ ವೃತ್ತಿಯನ್ನು ಶ್ರದ್ಧೆಯಿಂದ ನಡೆಸಿಕೊಟ್ಟಾಗ ಅದು ಮಾಡಿಸಿದ ಯಜಮಾನ/ಕರ್ತೃವಿಗೂ ಮತ್ತು ಮಾಡಿದ ಪುರೋಹಿತನಿಗೂ ಶ್ರೇಯಸ್ಕರ ಮತ್ತು ಫಲಪ್ರದ ಎಂಬುದರಲ್ಲಿ ಎರಡು ಮಾತಿಲ್ಲ. ಅಂತಹುದರಲ್ಲಿ ಐದು ಶತಮಾನಗಳ ಹಿಂದೆ ಕುಂದಾಪುರದ ಕೋಟೇಶ್ವರ ಮಾಗಣೆ ಪ್ರದೇಶದಿಂದ ವಲಸೆ ಬಂದು ಮೂಲ್ಕಿ-ಸುರತ್ಕಲ್-ಕುಳಾಯಿ-ಹೊಸಬೆಟ್ಟು-ಚಿತ್ರಾಪುರ-ಬೈಕಂಪಾಡಿ-ಪಣಂಬೂರು ಬೋಳೂರು ಇನ್ನಿತರ ಮಂಗಳೂರಿನ ಆಸುಪಾಸು ಪ್ರದೇಶಗಳಲ್ಲಿ ಆಶ್ರಯ ಪಡೆದುಕೊಂಡ ಸೋದೆ ಮಠದ ಶ್ರೀವಾದಿರಾಜ ತೀರ್ಥ ಶ್ರೀಪಾದರಿಂದ ಅನುಗ್ರಹಿತರಾದ ಕೋಟೇಶ್ವರ ಬ್ರಾಹ್ಮಣ ಮನೆತನಗಳು ವೃತ್ತಿಗಾಗಿ ಕೃಷಿ-ಬಾಣಸಿಗ-ಉಪಾಧ್ಯಾಯ-ಜ್ಯೋತಿಷಿ ಹಾಗೂ ಪೌರೋಹಿತ್ಯ ವೃತ್ತಿಗಳನ್ನು ಆಯ್ದು ಜೀವನೋಪಾಯಗಳನ್ನು ಕಂಡವರು. ಹೀಗೆ ಬಂದು ನೆಲೆಗೊಂಡ ಕೋಟೇಶ್ವರ ಬ್ರಾಹ್ಮಣ ಮನೆತನಗಳಿಗೆ ಮತ್ತು ಇತರ ಬ್ರಾಹ್ಮಣ ಮನೆತನದವರಿಗೆ ಹಾಗೂ ಇನ್ನಿತರ ಅನೇಕ ಹಿಂದೂ ಬಾಂಧವರ / ಆಸ್ತಿಕರ ಧಾರ್ಮಿಕ ಜೀವನದ ಎಲ್ಲಾ ಷೋಡಶ ಸಂಸ್ಕಾರ - ವಾರ್ಷಿಕ ಶ್ರಾದ್ಧ-ಹಾಗೂ ಯಜ್ಞ-ಜಪ-ಪೂಜೆಗಳನ್ನು ಮಾಡಿಸಿದ ಪುರೋಹಿತ ಮನೆತನಗಳಲ್ಲಿ ಕಾವಿನಕಲ್ಲು ಮನೆತನದ ವಾದಿರಾಜಾಚಾರ್ಯರ ಕುಟುಂಬ ತುಂಬು ವಿದ್ವಾಂಸರುಗಳಿಂದಲೇ ಕೂಡಿದ್ದ ಮನೆತನ. ತನ್ನೆಲ್ಲಾ ಮಕ್ಕಳನ್ನೂ ವೇದ-ಸಾಹಿತ್ಯಗಳಲ್ಲಿ ನುರಿತವರನ್ನಾಗಿಸಿ ಬೆಳೆಸಿದ ಕೀರ್ತಿವಂತ ಕುಟುಂಬದ ಪೂರ್ವಿಕರು. ಅವರ ಜೇಷ್ಠಪುತ್ರರಾದ ತನ್ನ ಧೀಮಂತ-ಉದಾರ-ನೇರ ನಡೆನುಡಿಗಳಿಂದ "ಹಿಟ್ಲರ್" ಎಂದೆನಿಸಿಕೊಂಡ ವೇದಮೂರ್ತಿ ಕಾವಿನಕಲ್ಲು ವೆಂಕಟಕೃಷ್ಣ ಆಚಾರ್ಯರು ಮನೆತನದ ವೃತ್ತಿಯ ಯಶಸ್ವಿ ನಿರ್ವಹಣೆಯಿಂದಾಗಿ ಜನಪ್ರಿಯರಾಗಿದ್ದರು. ತನ್ನ ಶಿಷ್ಯರ ಮನೆಯಲ್ಲಿ ನಡೆಯಲೇ ಬೇಕಾದ ಯಾವುದೇ ಧಾರ್ಮಿಕ ಕೆಲಸಗಳಿಗೆ ದ್ರವ್ಯಗಳ ಕೊರತೆ ಕಂಡುಬಂದಾಗ ಯಾವುದೇ ಮುಲಾಜಿಲ್ಲದೇ ತನ್ನ ಮನೆಯಿಂದ ವ್ಯವಸ್ಥೆಗೊಳಿಸಿ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರು. ಯಾವುದೇ ಫಲಾಪೇಕ್ಷೆಯಿಲ್ಲದೇ ಮದುವೆ ಸಂಬಂಧಗಳನ್ನು ಕೂಡಿಸಿಕೊಟ್ಟು ದಂಪತಿಗಳ ಅನ್ಯೋನ್ಯ ಜೀವನಕ್ಕೆ ಮನಃಪೂರ್ವಕವಾಗಿ ಹರಸುತ್ತಿದ್ದ ಆಚಾರ್ಯರ ರೀತಿ-ನೀತಿ ಅವರನ್ನು ಇಂದಿಗೂ ಜನಮಾನಸದಲ್ಲಿ ಜೀವಂತವಾಗಿರಿಸಿದೆ. ಅದರಲ್ಲೂ ನನ್ನ ಅಜ್ಜಯ್ಯನವರಾದ (ತಂದೆಯ ತಂದೆ) ದಿವಂಗತ ಮೈರ್ಪಾಡಿ ಆನಂದರಾಯರ ಮದುವೆಯ ನೆಂಟಸ್ತಿಕೆಯನ್ನು ಕೂಡಿಸಿದವರೂ ಇವರೇ ಆಗಿದ್ದಾರೆ. ಇದೇ ಗ್ರಾಮದ ಕನ್ಯೆಯೊಬ್ಬರ ಜೊತೆ ವಿವಾಹ ನೆಂಟಸ್ತಿಕೆಯನ್ನು ಕೂಡಿಸಿ ಮದುವೆಯ ದಿನ ನಿಗದಿಪಡಿಸಿ ಮುಂದೆ ಈ ನೆಂಟಸ್ತಿಕೆ ಕಾರಣಾಂತರಗಳಿಂದ ಮುರಿದು ಬಿದ್ದಾಗ ಅದೇ ಮುಹೂರ್ತದಲ್ಲೇ ಅವರದೇ ಕುಟುಂಬದ ಕೇರಳ ನಿವಾಸಿಗಳಾದ ಮನೆತನದ ಕನ್ಯೆಯೊಂದಿಗೆ ವಿವಾಹವನ್ನು ಅವರ ಮನೆಯಲ್ಲೇ ಏರ್ಪಡಿಸಿದ್ದು ಅವರ ಕಾಳಜಿಗೆ ಹಿಡಿದ ಕೈಗನ್ನಡಿಯಾಗಿದೆ. ಕರ್ಕಾಟಕ ಮಾಸದಲ್ಲಿ ಮತ್ತು ನವರಾತ್ರಿಯ ಸಮಯದಲ್ಲಿ ಅವರ ಮನೆಯಲ್ಲಿ ಶ್ರದ್ಧಾಭಕ್ತಿಪೂರ್ವಕವಾಗಿ ನಡೆಸಲ್ಪಡುತ್ತಿದ್ದ ದುರ್ಗಾನಮಸ್ಕಾರ ಪೂಜೆಗಳನ್ನು ಮೆಲುಕು ಹಾಕುತ್ತಿದ್ದ ಹಿರಿಯ ತಲೆಮಾರಿನವರನ್ನು ಇಂದಿಗೂ ನೋಡಬಹುದು. ಅಪೂರ್ವ ಧಾರ್ಮಿಕಪ್ರಜ್ಞೆ, ತುಂಬು ಕುಟುಂಬವನ್ನು ಹೊಂದಾಣಿಕೆಯೊಂದಿಗೆ ನಡೆಸಿದ ಅವರ ಯಜಮಾನಿಕೆಯ ಛಾತಿ, ತನ್ನ ಶಿಷ್ಯವರ್ಗದವರ ಉನ್ನತಿಗಾಗಿ ಹೃತ್ಪೂರ್ವಕವಾಗಿ ಹರಸಿದ ಅವರ ಅಭಯ ಆಶೀರ್ವಾದಗಳು ಅದೆಷ್ಟೋ ಮನೆ ತನಗಳನ್ನು ಇಂದಿಗೂ ರಕ್ಷಿಸುತ್ತಿದೆ. ಅಂತಹ ಉದಾರ ಚರಿತರ ಪಾದಧೂಳಿಗಳನ್ನು ಹೊತ್ತಿರುವ ನಮ್ಮೂರಿನ ಮಣ್ಣು ಸಾರ್ಥಕತೆಯ ಪದಗಳನ್ನು ಗುನುಗುತ್ತಿದೆ. -ಆಚಾರ್ಯ ಶ್ರೀಮದಾಚಾರ್ಯ ಸಂತು ಮೇ ಜನ್ಮ ಜನ್ಮನಿ.

ಸಹೃದಯಿ



ನಾನು ಅವರು ಅನಾರೋಗ್ಯದಲ್ಲಿದ್ದೇ ನೋಡಲಿಲ್ಲ. ಯಾವಾಗಲೂ ಚಟುವಟಿಕೆಯ ಚಿಲುಮೆ. ಒಂದು ಸಲ ಅನಾರೋಗ್ಯವಾದಾಗ, ಮರುದಿನವೇ ನಮ್ಮ ಮನೆಗೆ ಬಂದು ನಾನು ಹುಷಾರಾಗಿದ್ದೇನೆ ಎಂಬ ಆತ್ಮವಿಶ್ವಾಸ. ಯಾವ ಊಟಕ್ಕೂ ಹೋದರೂ 12 ಗಂಟೆಗೆ ಎಲೆ ಹಾಕಬೇಕೆಂಬ ಒತ್ತಾಯ. ದೊಡ್ಡ ಮನಸ್ಸು, ಸಹೃದಯ, ಮಹಾನ್ ಉಪಕಾರಿ. ಒಂದು ಸಲ ನನಗೆ ಇಂಟರ್ವ್ಯೂ ಚೆನ್ನೈನಲ್ಲಿತ್ತು. ಅದಕ್ಕೂ ಅವರು ನನ್ನೊಡನೆ ಬರುವೆನೆಂದು ಅತೀವ ಉತ್ಸಾಹ ತೋರಿಸಿದ್ದರು. ದೊಡ್ಡಪ್ಪನ ಈ ಸಹೃದಯತೆಗೆ ನಾನೆಂದೂ ಋಣಿ.

ಯಚ್. ಮೋಹನ

ಉತ್ಸಾಹದ ಚಿಂತನ ಚಿಲುಮೆ



ಅಗಲ ಹಣೆ, ಹಣೆಯುದ್ದಕ್ಕೂ ನೀಳವಾಗಿ ಹಬ್ಬಿದ ಅಂಗಾರಕ, ಹೊರಕ್ಕೆ ಚಾಚಿ ನಿಂತಿರುವ ಗಜ ಕಿವಿ. ಹಲ್ಲುಗಳ ಸ್ಥಳವನ್ನು ಸೆಟ್ ಸೇರಿದ್ದರೂ ಮಾಸಿ ಹೋಗದ ನಗು.

ದೊಡ್ಡ ಹೊಟ್ಟೆ, ತುಳಸೀಮಣಿ ಸರ, ದೊಡ್ಡದಾಗಿ ಆಕ್ರಮಿಸಿರುವ ಗೋಪಿ . ಇದು ದೊಡ್ಡಪ್ಪಯ್ಯನನ್ನು ನೆನೆಸಿದಾಗ ಅಭಿಮಾನ ತರುವ ಮುಖ. ನಮ್ಮ ದೊಡ್ಡಪ್ಪಯ್ಯ ಹಿಟ್ಲರ್ ಎಂದೇ ಪರಿಚಿತರು. ತನ್ನ ಸ್ಥಳದಲ್ಲಿ ಕುಳಿತರೆ ಸಾಕು – ಇನ್ನುಳಿದವರ ಬಾಯಿಗೆ ಬ್ರೇಕು. ಸ್ವಪಾರ್ಟಿಯವರಿಗೆ ಕೊಕ್. ತನ್ನನ್ನು ಹಿಟ್ಲರ್ ಎಂದು ಕರೆದರೆ ಸಿಡಿಮಿಡಿ ಇಲ್ಲ. ಹಾಗೆ ಕರೆದರಲ್ಲಾ ಎಂದು ಅಭಿಮಾನ. ಊರೇತರರು ಹಿಟ್ಲರ್ ಆಚಾರ್ ಬದಲು ವಿಟ್ಲರಾಚಾರ್ ಎಂದು ಸಂಬೋಧಿಸಿದಾಗ ನಗೆ ಪಟಾಕಿ. ಆ ನಗುವೇ ಹಿಟ್ಲರ್ ನಗು ಎಂದು ಪ್ರಸಿದ್ಧಿ.

ಡಾ. ವಸಂತ ಹೊಸಬೆಟ್ಟು.

ಊಟದ ಬಗ್ಗೆ ಕಟ್ಟು ನಿಟ್ಟು. ಗಂಟೆ 12ಕ್ಕೆ ಊಟವಾಗಲೇ ಬೇಕು. ಎಲ್ಲಿದ್ದರೂ 12ಕ್ಕೇ ಗಡಿಬಿಡಿ. 12ಕ್ಕೆ 4 ಸಲ ನಾರಾಯಣ ಐತಾಳ ಬಳಿ ಹೋಗಿ ಅಡಿಗೆ ಬಗ್ಗೆ ವಿಚಾರಣೆ. " ನೀವು ಹೇಳಿದರೇ ಎತ್ತುವುದು " ಎನ್ನುವ ವಿನಯದ ರಾಗ. ಅಡಿಗೆ ಬಗ್ಗೆ ಕಾಳಜಿಯೂ ಇರುತ್ತಿತ್ತು – ಅನ್ನವನ್ನು ಇನ್ನೂ ತಡ ಬಸಿಯಿರಿ ಮಯ್ಯರೇ, ಉಪ್ಪು ಸ್ವಲ್ಪ ಹಿಂದೆ ಎಳೆಯಿರಿ, ಎರ್ದು ಮೆಣ್ಸು ಹಾಕಿನಿಯೇ – ಹೀಗೆ ಕುಶಾಲಿನಲ್ಲಿಯೇ ಸರಿ ತಪ್ಪು ಹೇಳುವುದು ದೊಡ್ಡಪ್ಪಯ್ಯನ ಗುಣ.

ಲೆಕ್ಕಾಚಾರದ ಬಗ್ಗೆ ಭಾರೀ ಕಟ್ಟು ನಿಟ್ಟು. ಹಣದ ವಿಚಾರದಲ್ಲಿ ಗಟ್ಟಿ ಮುಟ್ಟು. ರಾಜಕೀಯ ವಿಚಾರವಾಗಿ ಶ್ರೋತೃಗಳ ಪಾರ್ಟಿ ತಿಳಿದು ಮಾತನಾಡುವ ದೊಡ್ಡಪ್ಪಯ್ಯ ಸಮಾಜಕೀಯ ಮಾತುಗಳಲ್ಲಿ ಭಾರೀ ಮುಂದು. ಟೀಕೆ ಮಾಡುವುದರಲ್ಲಿ ಹಿಂದು ಮುಂದು.

ಇನ್ನು ಉಡುಪು . ಸದಾ ಒಂದು ತುಂಡು ಬಟ್ಟೆ – ಬರೀ ತುಂಡು ಕೋಮಣದಲ್ಲೂ ಕೆಲವೊಮ್ಮೆ ಕೆಲಸ ಮಾಡುತ್ತಿದ್ದರು. ಶಾಸ್ತ್ರ – ಮಡಿಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ, ಆಧುನಿಕತೆಗೆ ಹೊಂದಿಕೊಳ್ಳುತ್ತಿದ್ದರು. ಕೆಲವೊಂದು ಧಾರ್ಮಿಕ ಚಟುವಟಿಕೆಗೂ ರಿಯಾಯಿತಿ ತೋರಿಸುತ್ತಿದ್ದರು. ದೊಡ್ಡಪ್ಪಯ್ಯ ಯಾವ ಕೆಲಸಕ್ಕೂ ಸೈ – ಯಾರ ನೆರವಿಗೂ ಜೈ. ಇಂತಹ ಹಿಟ್ಲರ್ – ದೊಡ್ಡಪ್ಪಯ್ಯನವರನ್ನು ಪಡೆದದ್ದಕ್ಕೆ ನಾವು ಅಭಿಮಾನ ಪಡಬೇಕಲ್ಲವೇ?.



ನನ್ನ ನೆನಪಿನ ಬುತ್ತಿಯಲ್ಲಿರುವ ನನ್ನ ಅಜ್ಜ (ದೊಡ್ಡಜ್ಜ)

ವಿನೋದ ಆಚಾರ್ಯ

1978ನೇ ಇಸವಿಯಲ್ಲಿ ಅಮ್ಮ ಹಾಗೂ ಅಕ್ಕನೊಂದಿಗೆ ಹುಟ್ಟಿದ ಸ್ಥಳ ಹರಿಹರವನ್ನು ಬಿಟ್ಟು ಹೊಸಬೆಟ್ಟಿನ ಮನೆಗೆ ಬಂದು ಸೇರಿದಾಗ ನನಗೆ 3 ವರ್ಷ. ಅಸ್ಪಷ್ಟ ನೆನಪು. ಈ ಕಾಲಘಟ್ಟದಲ್ಲಿಯೇ ಹರಿಹರದ ಪಾರಿಜಾತ ಹೋಟೆಲ್ ಮಾಲಕರಾದ ಕೃಷ್ಣರಾಜ ಭಟ್ ಕೆರೆಮನೆ ಇವರ ಉದ್ದಿಶ್ಯ ನಮ್ಮ ಮನೆಯಲ್ಲಿ ಅಷ್ಟಮಂಗಲ ಪ್ರಶ್ನೆ ಹಾಗೂ ಭಾಗವತ ಸಪ್ತಾಹ. ಮನೆ ತುಂಬಾ ನೆಂಟರು. ನಾನು ತುಂಬಾ ತುಂಟನಾಗಿದ್ದರಿಂದ ಎಲ್ಲರಿಗೂ ಪ್ರೀತಿಪಾತ್ರ. ಅಜ್ಜನ ಓಡಾಟ, ಉತ್ಸಾಹವನ್ನು ಇವತ್ತು ನಾನು ಕುಳಿತು ಆಲೋಚಿಸುವಾಗ ಅದೊಂದು ಅದ್ಭುತ. ಯಾಕೆಂದರೆ ಆವಾಗಲೇ ಅವರು 70 ವರ್ಷವನ್ನು ದಾಟಿದ್ದರು. ಇವತ್ತು ನಮಗೆ ಒಂದು ದಿನದ ಕಾರ್ಯಕ್ರಮ ಪೂರೈಸುವಾಗ ಕೋಪ ಹತಾಷೆ ದುಃಖ ಎಲ್ಲ ಬರುತ್ತದೆ. ಆದರೆ ಅವರು ಉತ್ಸಾಹದ ಚಿಲುಮೆ. ದಣಿವಾಗುತ್ತಿರಲಿಲ್ಲವೋ ಅಥವಾ ಅದನ್ನು ನಮ್ಮ ಮುಂದೆ ತೋರಿಸುತ್ತಿರಲಿಲ್ಲವೋ. ನಾನು ಕಂಡಂತೆ ಅವರಿಗೆ ಕೋಪವೇ ಇರುತ್ತಿರಲಿಲ್ಲ. ಕೊನೆಯ ದಿವಸ ಪುತ್ತಿಗೆ ಶ್ರೀಗಳವರು ನಮ್ಮ ಮನೆಗೆ ಬಂದಿದ್ದರು. ಆ ಕಾಲದಲ್ಲಿ ಅಷ್ಟಮಂಗಲ ಪ್ರಶ್ನೆಗೆ ಸಹಕಾರಿಯಾಗಿದ್ದ ಮಧೂರು ರಂಗನಾರಾಯಣ ಭಟ್ಟರು ಇವತ್ತಿಗೂ ನಾನು ಎಲ್ಲಿಯಾದರೂ ಮಾತನಾಡಲಿಕ್ಕೆ ಸಿಕ್ಕಿದರೆ ಅಜ್ಜನ ಕುರಿತು ಅವರ ಆತಿಥ್ಯದ ಕುರಿತು ಹೇಳುತ್ತಿರುತ್ತಾರೆ. ಅದು ಮುಗಿದ ತಕ್ಷಣ ಮನೆಯಲ್ಲಿ ಹೆಚ್ಚಾಗಿ ಬೆಳಿಗ್ಗೆ ಮೊಗವೀರ ಬಾಂಧವರ ತಿಲಹೋಮ, ಸಂಜೆ ಸತ್ಯನಾರಾಯಣ ಪೂಜೆ ಹೆಚ್ಚಾಗಿ ಎರಡು ಹೊತ್ತು ಊಟವಿರುತ್ತಿತ್ತು. ಶನಿವಾರ ಅಶ್ವತ್ಥ ಪೂಜೆ. ಆವಾಗ ಅಜ್ಜ ನನ್ನನ್ನು ಕರೆದುಕೊಂಡು ಹೋಗಲು ಸುರು ಮಾಡಿದರು. ಗಂಟೆ ಹೊಡೆಯುವುದು ನನ್ನ ಕೆಲಸ. ಚಿಕುಳಿ ಸ್ವಲ್ಪ ನನ್ನ ಕೈಗೆ ಕೊಟ್ಟು ಉಳಿದದ್ದನ್ನು ಪೂಜೆ ಮಾಡಿಸಿದವರಿಗೆ ಕೊಡುತ್ತಿದ್ದರು. ಹೀಗೆಯೇ ಪ್ರಾರಂಭವಾದ ಅಜ್ಜ ಮೊಮ್ಮಗನ ಸಂಬಂಧ ದಿನ ಕಳೆದಂತೆ ಬಲವಾಗಲು ಪ್ರಾರಂಭಿಸಿತು. ವನಕ್ಕೆ ಹೋಗುವಾಗ ಅವರ ಜೊತೆ ಹೋಗಲು ಪ್ರಾರಂಭಿಸಿದೆ. ತುಳಸಿ ಕೊಯ್ಯುವಾಗ ನನಗೆ ವಿಷ್ಣುಸಹಸ್ರನಾಮ ಹೇಳಿಕೊಡಲು ಪ್ರಾರಂಭಿಸಿದರು. ಕ್ರಮೇಣ ಅದು ಒಂದು ರೂಢಿಯಾಯಿತು. ಬೆಳಿಗ್ಗೆ ಪೂಜೆ ಮುಗಿಸಿದ ಬಳಿಕ ನಾನು ಅಜ್ಜನೂ ಒಟ್ಟಿಗೆ ತುಳಸಿ ಕೊಯ್ಯಲು ಕೆಳಗೆ ತೋಟಕ್ಕೆ ಹೋಗುತ್ತಿದ್ದೆವು. ಆವಾಗ ಇಬ್ಬರೂ ಒಟ್ಟಿಗೆ ವಿಷ್ಣುಸಹಸ್ರನಾಮ ಗಟ್ಟಿಯಾಗಿ ಹೇಳುತ್ತಿದ್ದೆವು. ಇದು ಹೀಗೆಯೇ ಬೆಳೆಯುತ್ತಾ ಹೋಯಿತು. ಆವಾಗ ಕುಳಾಯಿ ಪರಿಸರದಲ್ಲಿ ಎಲ್ಲಿಯಾದರೂ ಬ್ರಾಹ್ಮಣರ ಮನೆಯಲ್ಲಿ ಸತ್ಯನಾರಾಯಣ ಪೂಜೆ ಇದ್ದರೆ ಅಜ್ಜ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ನಾನು ಗಟ್ಟಿಯಾಗಿ ಸಹಸ್ರನಾಮ ಹೇಳುವಂತೆ ಪ್ರೇರೇಪಿಸುತ್ತಿದ್ದರು. ಅಲ್ಲಿ ಏನಾದರೂ ನನಗೆ ದಕ್ಷಿಣೆ ಸಿಕ್ಕಿದರೆ ಅಜ್ಜ ಎಂದೂ ನನ್ನ ಹತ್ತಿರ ದುಡ್ಡನ್ನು ಕೇಳುತ್ತಿರಲಿಲ್ಲ. ದುಡ್ಡಿನ ಬಗ್ಗೆ ಜೋಪಾನ ಎಂದು ಹೇಳುತ್ತಿದ್ದರು ಅಷ್ಟೇ. ಬಹುಶಃ ಆ ಕಾಲಘಟ್ಟದಲ್ಲಿ ಮನೆಯಲ್ಲಿದ್ದ ಸಣ್ಣವನು ನಾನಾದ್ದರಿಂದ ನನ್ನ

ಮೇಲಿನ ಪ್ರೀತಿಯಿಂದ ಎಂದು ನನ್ನ ಭಾವನೆ. ಸಂಜೆ ಮನೆಯಲ್ಲಿ ಪೂಜೆ ಆಗುವಾಗ ಕೃಷ್ಣಾಷ್ಟೋತ್ತರ ಹಾಗೂ ವೇಂಕಟೇಶ ಸ್ತೋತ್ರ ಹೇಳಿಕೊಟ್ಟಿದ್ದಾರೆ. ಹಾಗಾಗಿ ಆಧ್ಯಾತ್ಮ ಜೀವನಕ್ಕೆ ಅಜ್ಜನೇ ನನ್ನ ಮೊದಲ ಗುರು. ಹೀಗೆ ಒಂದು ವರ್ಷ ಕಳೆಯಿತು. ನನ್ನನ್ನು ಶಾಲೆಗೆ ಸೇರಿಸಬೇಕು. ಅಜ್ಜನೇ ಕುಳಾಯಿ ಮಹಿಳಾ ಮಂಡಲದಲ್ಲಿದ್ದ ಬಾಲವಾಡಿಗೆ ಸೇರಿಸುವುದು ಎಂದು ತೀರ್ಮಾನಿಸಿ ಪುಟ್ಟಮ್ಮಕ್ಕ (ಸುಮತಿಯಮ್ಮ) ನ ಹತ್ತಿರ ಮಾತನಾಡಿದರು. ಆವಾಗ ಅಲ್ಲಿಯ ಟೀಚರ್ ಆಗಿದ್ದವರು ಕಕ್ಕೆಸಾಲು ರತ್ನ ಎಂಬವರು. ನಮ್ಮ ಮನೆಯಲ್ಲಿ ನಾರಾಯಣ ಅಜ್ಜ, ಶ್ರೀಧರಜ್ಜ ಎಲ್ಲ ಒಟ್ಟಿಗೆ ಇದ್ದ ಕಾಲ. ವ್ಯಾಸ ಚಿಕ್ಕಪ್ಪ ಆವಾಗಷ್ಟೇ ಎಂ.ಡಿ.ಎಲ್. ನಲ್ಲಿ ಕೆಲಸಕ್ಕೆ ಸೇರಿದ್ದರು. ಅವರಿಗೆ ಅಜ್ಜ ಒಂದು ಕೆಲಸ ಕೊಟ್ಟರು. ದಿನಾ ಬೆಳಿಗ್ಗೆ ವಿನೋದನನ್ನು ಕರೆದುಕೊಂಡು ಹೋಗಿ ಕಕ್ಕೆಸಾಲು ಮಹಾಲಕ್ಷ್ಮಿಯವರ ಮನೆ ಹತ್ತಿರ ಬಿಡಬೇಕು. ಅಲ್ಲಿಂದ ನಾನು ರತ್ನ ಟೀಚರ್ ಒಟ್ಟಿಗೆ ಹೋಗುತ್ತಿದ್ದೆ. ಬರುವಾಗ ರತ್ನ ಟೀಚರ್ – ನಾನು ರಸ್ತೆಯ ಒಂದೇ ಬದಿಯಲ್ಲಿ ಬರುತ್ತಿದ್ದೆವು. ನನ್ನನ್ನು ಕರೆದುಕೊಂಡು ಹೋಗಲು ಎಷ್ಟೋ ಸಲ ಅಜ್ಜ ಅಶ್ವತ್ಥ ಕಟ್ಟೆಯ ಹತ್ತಿರ ಕಾಯುತ್ತಿದ್ದದ್ದು ಇಂದೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಹೀಗೆ ಬಾಲವಾಡಿ ಕಳೆದುಹೋಯಿತು. ಪ್ರಾಥಮಿಕ ಶಾಲೆಗೆ ಎಲ್ಲಿ ಸೇರಿಸುವುದು ? ಇದು ನನ್ನ ಅಜ್ಜನ ಚಿಂತೆ. ಆ ಸಮಯದಲ್ಲಿ ಒಂದು ಸಲ ನಮ್ಮ ಮನೆಗೆ ಪಿ.ಸಿ. ವಾಸುದೇವ ಮಾಸ್ಟ್ರು ಬಂದಿದ್ದರು. ಅವರ ಒತ್ತಾಸೆಯ ಮೇರೆಗೆ ನನ್ನನ್ನು ವಿದ್ಯಾದಾಯಿನಿ ಶಾಲೆಗೆ ಸೇರಿಸುವುದು ಹಾಗೂ ಮಧ್ಯಾಹ್ನ ಊಟಕ್ಕೆ ವಾಸುದೇವ ಮಾಸ್ಟ್ರು ನನ್ನನ್ನು ಮನೆಗೆ ಕರೆದುಕೊಂಡು ಹೋಗುವುದು ಎಂದು ಅಜ್ಜನೇ ತೀರ್ಮಾನಿಸಿದರು. ಶಾಲೆಗೆ ಹೋಗುವ – ಬರುವ ವ್ಯವಸ್ಥೆ ಆಗಬೇಕು. ಆವಾಗ ಯಜ್ಞೇಶಣ್ಣ ಕಾವಿನಕಲ್ಲು ಮಠದಲ್ಲಿ ಬಾಡಿಗೆಗೆ ಇದ್ದರು. ಅವರಿಗೆ ನನ್ನನ್ನು ಕರೆದುಕೊಂಡು ಹೋಗಿ ಕರೆದುಕೊಂಡು ಬರುವ ಜವಾಬ್ದಾರಿಯನ್ನು ಅವರಿಗೆ ವಹಿಸಿ ನನ್ನ ಅಜ್ಜ ನಿರಾಳರಾದರು. ಹೀಗೆಯೇ ಕಾಲಚಕ್ರ ಸಾಗಿತು. ಈ ಕಾಲದಲ್ಲಿಯೇ ಒಂದಾಗಿದ್ದ ನಮ್ಮ ಮನೆ ಮೂರಾಯಿತು. ಅಂದರೆ ಶ್ರೀಧರಜ್ಜ, ನಾರಾಯಣ ಅಜ್ಜನಿಗೆ ಜಾಗ ಪಾಲು ಮಾಡಿಕೊಟ್ಟರು. ನಾರಾಯಣ ಅಜ್ಜ ಕೆಳಗೆ ಮನೆ ಕಟ್ಟಿಕೊಂಡರು. ಮನೆಯ ಒಂದೇ ಹಂಚಿನ ಕೆಳಗೆ ಶ್ರೀಧರಜ್ಜನಿಗೆ ಪಾಲಾಯಿತು. ಅಡಿಗೆ ಬೇರೆ ಬೇರೆ ಆಯಿತು. ಆವಾಗ ಎಷ್ಟೋ ವಿಚಾರಗಳನ್ನು ಅಜ್ಜ ನನ್ನೊಂದಿಗೆ ಹೇಳುತ್ತಿದ್ದರು. ಸಂಜೆ ಇಸ್ಪೀಟಿನ ಕಾಲಕ್ಕೆ ಎಲ್ಲರೂ ಒಟ್ಟು ಸೇರುತ್ತಿದ್ದರು. ನಾನು ಅಜ್ಜನ ಹಿಂದೆ ಕುಳಿತುಕೊಂಡು ಇರುತ್ತಿದ್ದೆ. ಇಸ್ಪೀಟಿನ ಲೆಕ್ಕವನ್ನು ನನಗೆ ಅಜ್ಜ ಹೇಳಿಕೊಟ್ಟರು. 1983ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ ನನಗೂ ಹಾಗೂ ವಾದೀಶ ಚಿಕ್ಕಪ್ಪನ ಮಗ ರಾಘವೇಂದ್ರನಿಗೆ ಜೋಡು ಉಪನಯನ ಅಜ್ಜನ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರುಗಿತು. ಆ ಉಪನಯನ ಕಾಲದಲ್ಲಿ 7 ಅಜ್ಜಂದಿರೂ ಇದ್ದರು. ಜಿತೇಂದ್ರಿಯ ಅಜ್ಜ ಮೊದಲೇ ತೀರಿಹೋಗಿದ್ದರು. ಕೇರಳದಿಂದ ನನ್ನ ಅಜ್ಜ ಅಂದರೆ ಅಮ್ಮನ ಅಪ್ಪ ಸಹ ಬಂದಿದ್ದರು. ಸಂಬಂಧದಲ್ಲಿ ಅವರು ನನ್ನ ಅಜ್ಜನಿಗೆ ಸೋದರಮಾವ. ಆ ದೃಶ್ಯಗಳು ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಆದರೆ ಫೋಟೋ ಆವಾಗ ಒಂದು ದೊಡ್ಡ ವಿಷಯ ಅಲ್ಲವಾದ್ದರಿಂದ ಆ ಸಂಭ್ರಮದ ಯಾವುದೇ ದಾಖಲಾತಿ ಇಲ್ಲ. ಮುಂದೆ ಒಂದು 2 ತಿಂಗಳಿನಲ್ಲಿ ನನ್ನ ಕೇರಳದ ಅಜ್ಜನಿಗೆ 80ರ ಶಾಂತಿ. ಅಲ್ಲಿಯೂ ನನ್ನ ಅಜ್ಜನದೇ ಮುತುವರ್ಜಿ. ನಾವೆಲ್ಲರೂ ಅಲ್ಲಿರುವ ಕಾಲಕ್ಕೆ ಇಲ್ಲಿ ಸೀತಾರಾಮಜ್ಜನ ಹೆಂಡತಿ ಜಾನಕಿ ದೊಡ್ಡಮ್ಮ ದುರ್ಮರಣ ಕ್ಕೊಳಗಾದರು. ಸೀತಾರಾಮಜ್ಜನಿಗೆ ದೈವಿಕವಾಗಿ ನಂಬಿಕೆ ಸ್ವಲ್ಪ ಕಮ್ಮಿ. ಆ ಕಾಲದಲ್ಲಿ ಅಜ್ಜನೇ ಮುಂದೆ ನಿಂತು ಅವರ ಉತ್ತರಕ್ರಿಯೆಯನ್ನು ಮಾಡಿಸಿದರು. ಅದೇ ಜೂನ್ ತಿಂಗಳಿನಲ್ಲಿ ನಾರಾಯಣಜ್ಜ ದೊಡ್ಡಮ್ಮನೊಂದಿಗೆ ಹೊಸದುರ್ಗಕ್ಕೆ ಹೊರಟು ನಿಂತರು. ಅಜ್ಜನ ಜಂಘಾಬಲವೇ ಉಡುಗಿ ಹೋಯಿತು. ಆದರೂ ಅದನ್ನು ತೋರಿಸಿಕೊಳ್ಳಲಿಲ್ಲ. ಹೋದ ನಾರಾಯಣಜ್ಜ ಅಲ್ಲಿಯೇ ವಿಧಿವಶರಾದರು. ಅಜ್ಜ ನಂಬಲೇ ಇಲ್ಲ. ಪುನಃ ವಿಚಾರಿಸಿ ದೃಢೀಕರಿಸಿಕೊಂಡ ಬಳಿಕ ಅಜ್ಜ ಹೊಸದುರ್ಗಕ್ಕೆ ಹೊರಟುನಿಂತರು. ಆ ಸಮಯಕ್ಕೆ ನಾನು ಶಾಲೆಗೆ ಹೋಗಿದ್ದೆ. ನೂತನ ಬ್ರಹ್ಮಚಾರಿಯಾದ ನಾನು ಸೂತಕದ ಮನೆಯಲ್ಲಿ ಊಟ ಮಾಡಬಾರದು ಎಂದು ನನಗೆ ಆಚೆಮನೆ ನಾರಾಯಣ ಆಚಾರ್ಯರ ಮನೆಯಲ್ಲಿ ಎಲ್ಲಾ ವ್ಯವಸ್ಥೆಯನ್ನು ಮಾಡಿಸಿ

ಹೊರಟುಹೋಗಿದ್ದರು. 10 ದಿವಸಗಳು ನನಗೆ ಎಲ್ಲವೂ ಊಟ ತಿಂಡಿ ನೀರು ಅವರ ಮನೆಯಲ್ಲೇ. ಅಷ್ಟು ದುಃಖದಲ್ಲಿಯೂ ಅವರು ಕರ್ತವ್ಯವನ್ನು ಧರ್ಮವನ್ನು ಮರೆತಿರಲಿಲ್ಲ. ಮುಂದೆ 1984ನೇ ಇಸವಿ ಏಪ್ರಿಲ್‌ನಲ್ಲಿ ದಾಸಜ್ಜ (ಹರಿದಾಸ ಆಚಾರ್) ಕಾಲವಶರಾದರು. ಎರಡು ತಮ್ಮಂದಿರ ಉತ್ತರಕ್ರಿಯೆ ಬೇರೆ ಬೇರೆ ಕಡೆ ನಡೆದಿತ್ತು. ಹೈದರಾಬಾದ್– ಹೊಸದುರ್ಗದಲ್ಲಿ. ಹಾಗಾಗಿ ಅಜ್ಜನಿಗೆ ಇದನ್ನು ಬೇರೆ ಕಡೆ ಮಾಡಿಸಲು ಮನಸ್ಸಿಲ್ಲ. ತನ್ನ ಎದುರೇ ನಡೆಯಬೇಕು ಎಂದು ನಮ್ಮ ಮನೆಯಲ್ಲಿಯೇ ನಡೆಸಿದರು. ದಹನ ನಮ್ಮ ಕೆಳಗಿನ ಗದ್ದೆಯಲ್ಲಿಯೇ ನಡೆಯಿತು. ಆವಾಗ ಹೆಂಗಸರು ದಹನವಾಗುವ ಸ್ಥಳಕ್ಕೆ ಬರುವ ಸಂಪ್ರದಾಯವಿರಲಿಲ್ಲ. ಎಲ್ಲರೂ ಮನೆಯಲ್ಲಿಯೇ ದುಃಖಿಸುತ್ತಾ ಇದ್ದರು. ಅಜ್ಜ ದಹನ ಪೂರೈಸಿ ಮೇಲೆ ಬಂದರು. ವಾತಾವರಣವನ್ನು ತಿಳಿಯಾಗಿಸಬೇಕು ಇದು ಅವರ ಉದ್ದೇಶ. ಕಮಲ ದೊಡ್ಡಮ್ಮನೂ ಅಳುತ್ತಾ ಇದ್ದರು. ಕೂಡಲೇ ಅವರನ್ನು ನೋಡಿ ಅಜ್ಜ ಹೇಳಿದ ಮಾತು 'ನೀನು ಯಾಕೆ ಕೂಗುವುದು ? ನಮ್ಮಿಬ್ಬರಲ್ಲಿ ನೀನು ಮೊದಲು ಹೋಗುವವಳು ಕೂಗಬೇಕಾದವನು ನಾನು' ಎಂದು ತಮಾಷೆಯಾಗಿ ಹೇಳಿದರು. ದೊಡ್ಡಮ್ಮನಿಗೆ ಸಿಟ್ಟು ಮಾಡಿಕೊಂಡು ಎದ್ದರು. ಆವಾಗ ಎಲ್ಲ ಹೆಂಗಸರು ಎದ್ದು ಮುಂದಿನ ಅಡಿಗೆಗೆ ಎಲ್ಲಾ ತಯಾರಾದರು. ಆ ಕಾಲದಲ್ಲಿ ನಿತ್ಯವಿಧಿಯ ಕಾಲದಲ್ಲಿ ಮನೆಯವರೇ ಅಡಿಗೆ ಮಾಡುವ ರೂಢಿಯಿತ್ತು. ಅಜ್ಜ ಅದಕ್ಕೆ ತಿಲಾಂಜಲಿ ಬಿಟ್ಟರು. 13 ದಿವಸವೂ ಕೇಶವ ಮಯ್ಯರಿಂದ ಅಡಿಗೆಯನ್ನು ಮಾಡಿಸಿದರು. ಮಾತು ಮಾತಿಗೂ ಹೋದವನು ಹೋದ ಅಂತ ಹೇಳಿ ನಾವೆಲ್ಲ ಉಪವಾಸ ಇರಲಿಕ್ಕೆ ಆಗುತ್ತದಾ ಅಂತ ಹೇಳಿ ತಮಾಷೆ ಮಾಡಿಕೊಂಡಿದ್ದ ಅಜ್ಜನ ಹೊರಮುಖವನ್ನೇ ಎಲ್ಲರೂ ನೋಡಿದ್ದಷ್ಟೇ. ದುಃಖವನ್ನು ನುಂಗಿಕೊಂಡು ನಗಾಡುತ್ತಿದ್ದ ಅಜ್ಜನ ಒಳಮುಖ ಕಾಣಲೇ ಇಲ್ಲ. ಅಲ್ಲಿಂದ ಮತ್ತಷ್ಟು ಅವರು ಮಾನಸಿಕವಾಗಿ ಬಲಹೀನರಾಗುತ್ತಾ ಹೋದರು. ಈ ಕಾಲದಲ್ಲಿ ವನಕ್ಕೆ ಹೋಗಿ ಹಾಲು ಹಾಕಿಬರುವುದು, ಅಶ್ವತ್ಥ ಪೂಜೆ, ಮನೆಗೆ ಬರುತ್ತಿದ್ದ ಸತ್ತ ಹಾವನ್ನು ಸುಡುವುದು ಇದು ಎಲ್ಲಾ ನನ್ನ ಹೆಗಲಿಗೆ ಹೊರೆಸಿದರು. ಎಲ್ಲಾ ಕೆಲಸದಲ್ಲೂ ಸಿಕ್ಕಿದ ದಕ್ಷಿಣೆಯನ್ನು ನನ್ನ ಹತ್ತಿರ ಅಜ್ಜ ಕೇಳಿದ್ದೇ ಇಲ್ಲ. ದ್ವಾದಶಿಗೆ ಹೊನ್ನಕಟ್ಟೆ ಗೋವಿಂದರಾಯರ ಮನೆಗೆ ಊಟಕ್ಕೆ ಹೋಗುವ ಕೆಲಸವೂ ನನಗೆ ಬಿತ್ತು. ನಾನು ಒಪ್ಪಿಕೊಳ್ಳುತ್ತಿದ್ದದ್ದು ಯಾಕೆ ಅಂದರೆ ಸಿಕ್ಕುವ ದಕ್ಷಿಣೆ ಆಸೆಗೆ. ಮಕ್ಕಳಾಟಿಕೆ ತಿನ್ನುವ ಚಪಲ. ಮರಣವನ್ನು ಎದುರುನೋಡುತ್ತಿದ್ದ ನನ್ನ ಅಜ್ಜನಿಗೆ ದಶರಥನಾಗಲು ಮನಸ್ಸಿರಲಿಲ್ಲ. ಹರಿಹರದಲ್ಲಿದ್ದ ನನ್ನ ಅಪ್ಪನಿಗೆ ಊರಿಗೇ ಬರಲೇಬೇಕು ಎಂದು ಹಠಮಾಡಲು ಪ್ರಾರಂಭಿಸಿದರು. ಕಾರಣ ಏನೇ ಹೇಳಿದರೂ ಅವರು ಒಂದು ರೀತಿಯ ಇಚ್ಛಾಮರಣಿಯಾಗಲು ಬಯಸಿದ್ದರು. ಅಪ್ಪ ಅಜ್ಜನ ಮಾತಿಗೆ ಓಗೊಟ್ಟು ಊರಿಗೆ ಬಂದು ನೆಲೆನಿಂತರು. ಈಗ ಅಜ್ಜನಿಗೆ ಕಣ್ಣು ದೃಷ್ಟಿ ಮಂಜಾಗಲು ಪ್ರಾರಂಭಿಸಿತ್ತು. ಸತ್ಯನಾರಾಯಣ ಪೂಜೆ, ಶನಿಪೂಜೆಯ ಮಂತ್ರಗಳು ಕಥೆಯನ್ನು ನನ್ನಿಂದ ಓದಿಸಲು ಪ್ರಾರಂಭಿಸಿದರು. ಇದು ನಮ್ಮ ಮನೆಯಲ್ಲಿ ಮಾತ್ರ. ಕಥೆಯನ್ನು ಅವರೇ ಹೇಳುತ್ತಿದ್ದರು. 1985ನೇ ಇಸವಿಯಲ್ಲಿ ವ್ಯವಸಾಯ ಮಾಡಲು ಸರಿಯಾದ ಜನ ಸಿಗುವುದಿಲ್ಲ, ಇನ್ನು ಕಷ್ಟ ಅಂತ ಹೇಳಿ ಅಜ್ಜನ ಪಾಲಿಗೆ ಬಂದ ಜಾಗವನ್ನು ಅಪ್ಪನನ್ನು ಮುಂದೆ ನಿಲ್ಲಿಸಿ ಮಾರಾಟ ಮಾಡಿಸಿದರು. ಆ ಕಾಲದಲ್ಲಿ ಬಂದ ದುಡ್ಡಿನಲ್ಲಿ ಎಲ್ಲಾ ತಮ್ಮಂದಿರ ಮಕ್ಕಳಿಗೂ ಸ್ವಲ್ಪ ಸ್ವಲ್ಪ ಹಂಚಿದರು. ಅದಕ್ಕಾಗಿ ಮನೆಯಲ್ಲಿ ಚಂಡಿಕಾಹೋಮ ಮಾಡಿಸಿ ಸ್ವತಃ ಕೈಯೆತ್ತಿ ದಶದಾನ ಮಾಡಿದರು. ಚಿತ್ರಾಪುರ ಮಾಧವ ಭಟ್ಟರಿಗೆ ಗೋದಾನ, ಭಾವನಾದ ರಾಮಚಂದ್ರ ಅಜ್ಜನಿಗೆ ಭೂದಾನ ಹೀಗೆಯೇ ಎಲ್ಲವನ್ನೂ ಅವರೇ ಮಾಡಿದರು. ಇವತ್ತು ನಾನು ಆಲೋಚನೆ ಮಾಡುವಾಗ ಮರಣವನ್ನು ಅವರು ಬಯಸುತ್ತಿದ್ದರು ಎಂದು ನಾನು ಹೇಳಬಲ್ಲೆ. ಯಾಕೆಂದರೆ ಚಂಡಿಕಾಹೋಮಕ್ಕೂ, ದಶದಾನಕ್ಕೂ ಏನು ಸಂಬಂಧ?. ಜಾಗ ಮಾರಿದ ದುಡ್ಡಿನಲ್ಲಿ ವಿಜಯಣ್ಣ, ವಿನಯಣ್ಣ ಹಾಗೂ ನನ್ನ ಹೆಸರಿನಲ್ಲಿ ಇಂದಿರಾ ವಿಕಾಸ್ ಪತ್ರದಲ್ಲಿ ದುಡ್ಡಿಟ್ಟರು. ಅದು ಕಾನೂನು ಸಹ ಹೌದು. ತುಳಸಿಗೆ ಮದುವೆಗೆ ಅಂತ ಒಂದು ಬಂಗಾರದ ನೆಕ್ಲೆಸ್ ಸ್ವತಃ ಅಪ್ಪನೊಂದಿಗೆ ಮಂಗಳೂರಿಗೆ ಹೋಗಿ ಅವರು ತೆಗೆದುಕೊಂಡು ಬಂದು ಕೊಟ್ಟು ಋಣಮುಕ್ತರಾಗುವತ್ತ ಹೆಜ್ಜೆ ಇಟ್ಟರು. ಮುಂದೆ ಶಾಮ ಚಿಕ್ಕಪ್ಪನ ಮದುವೆ. ನಾರಾಯಣಜ್ಜ

ತೀರಿಹೋಗಿದ್ದ ಕಾರಣ ಇವರೇ ಯಜಮಾನ. ಕುಂದಾಪುರದಲ್ಲಿ ಮದುವೆ. ಆಗ ಒಂದು ಎಕ್ಸ್‌ಪ್ರೆಸ್ ಬಸ್ಸು ಇತ್ತು. ಆ ಮದುವೆಯೂ ಮಂಗಳವಾರದ ದಿವಸ. ನವರಾತ್ರಿಯ ಒಂಭತ್ತು ದಿನವೂ ಶ್ರೇಷ್ಠ, ವಾರದೋಷವಿಲ್ಲ ಎಂದು ಅಜ್ಜ ಆ ಮದುವೆಯನ್ನು ವಿಜೃಂಭಣೆಯಿಂದ ಮಾಡಿ ಪೂರೈಸಿದ್ದರು. ಈ ಕಾಲಘಟ್ಟದಲ್ಲಿ ನಮ್ಮ ಸಂಸಾರದಲ್ಲಿ ಒಂದೊಂದೇ ಮರಣಗಳು ಸಂಭವಿಸುತ್ತಾ ಇತ್ತು. 1986ನೇ ಇಸವಿಯಲ್ಲಿ ಶ್ರೀಧರಜ್ಜನ ಮಗನಾದ ವ್ಯಾಸ ಚಿಕ್ಕಪ್ಪನಿಗೆ ಮದುವೆ. ಮೇ 22 ತಾರೀಕು ಕೇರಳ ತ್ರಿಶೂರಿನಲ್ಲಿ ಇಲ್ಲಿಂದ ಎರಡು ಬಸ್ಸು ದಿಬ್ಬಣ ಕೇರಳಕ್ಕೆ. ತನ್ನ ಮತ್ತೊಂದು ಸೋದರಮಾವನ ಮೊಮ್ಮಗಳೇ ಹುಡುಗಿ. ಅಜ್ಜನ ಉತ್ಸಾಹ ಹೇಳತೀರದು. ಅಲ್ಲಿ ಹೋದಾಗ ನಮ್ಮ ಕುಟುಂಬದವರೇ ಆದ ಶ್ರೀನಿವಾಸ ಅಜ್ಜ ಅಲ್ಲಿಗೆ ಬಂದಿದ್ದರು. ಇವರಿಬ್ಬರು ಪರಸ್ಪರ ಒಬ್ಬರ ಮೈಗೆ ಒಬ್ಬರು ಗಂಧ ಹಚ್ಚಿ ಸಂಭ್ರಮಿಸಿದ್ದು ಫೋಟೋ ತೆಗೆದ ನೆನಪು ಉಂಟು. ಬಳಿಕ ಊರಿನಲ್ಲಿ ಔತಣ. ಜೂನ್ ಬಹುಶಃ 12ನೇ ತಾರೀಕು ಇರಬಹುದು. ತಿಪಟೂರಿನಲ್ಲಿ ಉಪನಯನ ತಾನೇ ಹೋಗಿ ಅದನ್ನು ಪೂರೈಸಿ ಬರುವಾಗಲೇ ಜ್ವರ ಇತ್ತು. ಮಾರನೇ ದಿವಸ ಉಪೇಂದ್ರರಾಯರಲ್ಲಿ ದುರ್ಗಾನಮಸ್ಕಾರ. ಜ್ವರದಲ್ಲಿಯೇ ತಾನೇ ಹೋಗಿ ಮಾಡಿ ಬಂದರು. ಅದು ಅವರ ಕೊನೆಯ ಕಾರ್ಯಕ್ರಮ. ಜ್ವರದಿಂದ ನಿತ್ರಾಣರಾಗಿದ್ದರು. ನಮ್ಮ ಕುಟುಂಬದ ವೈದ್ಯರಾದ ಐ.ಡಿ. ಕೋಸ್ತ ಡಾಕ್ಟರು ಸ್ವತಃ ನಮ್ಮ ಮನೆಗೆ ಅಜ್ಜನನ್ನು ನೋಡಲು ಬಂದರು. ಆವಾಗ ಅಜ್ಜ ಹೇಳಿದ ಮಾತು. ಕಕ್ಕಸ್ಸು ಕಪ್ಪು ಬಣ್ಣದಲ್ಲಿ ಹೋಗುತ್ತಾ ಉಂಟು. ಕೂಡಲೇ ಕೋಸ್ತಾ ಡಾಕ್ಟರು ನೀವು ಮಂಗಳೂರಿಗೆ ಹೋಗಿ ಸೇರಲೇಬೇಕು. ಅಜ್ಜನಿಗೆ ಹೋಗಲು ಮನಸ್ಸಿರಲಿಲ್ಲ. ಛಾತ್ರಮನೆ ದಿನೇಶ ಡಾಕ್ಟರು ಬಂದು ನಿಮ್ಮ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ ಹಾಗೂ ರಮಾನಂದ ಮಾವನ ಒತ್ತಾಯಕ್ಕೆ ಜೂನ್ 14ರಂದು ಹೊರಟು ಮಂಗಳೂರಿನ ತಾರಾ ಕ್ಲಿನಿಕ್ ಸೇರಿದರು. ಅದೇ ನಾನು ಕೊನೆಯ ಸಾರಿ ಅಜ್ಜನನ್ನು ನೋಡಿದ್ದು. ನಾನಾವಾಗ 6ನೇ ಕ್ಲಾಸ್. ಜೂನ್ 16 ರಾತ್ರಿ ಹೊನ್ನಕಟ್ಟೆ ಶ್ರೀಧರರಾಯರು (ಅಂಗಡಿ ಆವಾಗ ಹಂಪನಕಟ್ಟೆಯಲ್ಲಿತ್ತು) ನಮ್ಮ ಪುರೋಹಿತರು ಅಂತ ಹೇಳಿ ಅಭಿಮಾನದಿಂದ ತಂದ ಎಳನೀರನ್ನು ಸೇವಿಸಿದ 'ಅನ್ನ' ಅಜ್ಜನಿಗೇ ಅದೇ ಕೊನೆಯ ಆಹಾರವಾಯಿತು. 10.30ರ ಸುಮಾರಿಗೆ ನನ್ನ ಅಜ್ಜ ವಿಧಿವಶರಾದರು. ಇಷ್ಟೇ ನಾನು ನನ್ನ ಅಜ್ಜನಿಗೂ ಇದ್ದ ಸಂಬಂಧದ ಅವಧಿ.

ಇದನ್ನು ಓದುವಾಗ ಇದರಲ್ಲಿ ಏನುಂಟು ? ಎಲ್ಲಾ ಮನೆಯಲ್ಲಿಯೂ ಅಜ್ಜ ಮೊಮ್ಮಕ್ಕಳು ಇದೇ ರೀತಿ ಪ್ರೀತಿಯಿಂದ ಇರುತ್ತಾರೆ. ಇದೇನು ಅಷ್ಟು ದೊಡ್ಡ ವಿಷಯವಲ್ಲ ಎಂದು ಕಾಣಬಹುದು. ಆದರೇ ಅಜ್ಜನಿಂದ ನಾನು ಕಲಿತದ್ದು ಬಹಳಷ್ಟಿದೆ.

ಶಿಸ್ತು : ಊಟಕ್ಕೆ ಆಗಲಿ ಪೂಜೆಗೆ ಆಗಲಿ ಅಥವಾ ಯಾವುದೇ ವಿಚಾರದಲ್ಲಿ ಅವರಿಗೆ ಒಂದು ಶಿಸ್ತು ಇತ್ತು. ಬೆಳಗಾತ ಪೂಜೆ 7 ಗಂಟೆಯ ಒಳಗೇ ಮುಗಿಸಿ 7.15ರ ಪ್ರದೇಶ ಸಮಾಚಾರ ಕೇಳುತ್ತಿದ್ದರು. ಸಂಜೆಯೂ ಹಾಗೇ ವಾರ್ತೆಗಳು ರೇಡಿಯೋದಲ್ಲಿ ಸುರುವಾಗುವ ಮೊದಲು ಎಲ್ಲಾ ಕೆಲಸಗಳು ಮುಗಿಯಬೇಕು.

ಪೂಜೆಯ ಸಂದರ್ಭದಲ್ಲಿ ಅವರು ಮಾತನಾಡುತ್ತ ಇರಲಿಲ್ಲ. ಗಂಟಾಮಣಿಯ ಶಬ್ದದಿಂದಲೇ ನಾವೆಲ್ಲ ದೇವರ ಕೋಣೆಗೆ ಸೇರಲೇಬೇಕು. ನೈವೇದ್ಯ ಆದ ತಕ್ಷಣ ನೈವೇದ್ಯವನ್ನು ತೆಗೆದುಕೊಂಡು ಹೋಗಿ ಸಾರಿಸಿದರೆ ಮಾತ್ರ ಪೂಜೆ ಮುಂದುವರಿಯುತ್ತಾ ಇತ್ತು. ಇಲ್ಲದಿದ್ದರೆ ಸುಮ್ಮನೇ ಕುಳಿತಿರುತ್ತಿದ್ದರು. ಆದರೇ ಏನೂ ಮಾತನಾಡುತ್ತಾ ಇರಲಿಲ್ಲ. ಹೇಳುತ್ತಲೂ ಇರಲಿಲ್ಲ. ನಮಗೆ ಅವರ ಮುಖ ಲಕ್ಷಣದಿಂದಲೇ ಗೊತ್ತಾಗುತ್ತಿತ್ತು. ಅಜ್ಜನಿಗೆ ಸಿಟ್ಟು ಬಂದಿದೆ ಅಂತ. ಒಮ್ಮೆ ನಾನು ಸಣ್ಣವನಿದ್ದಾಗ ನೈವೇದ್ಯದ ಹೊತ್ತಿನಲ್ಲಿ ಗಂಟೆ ಹೊಡೆಯುತ್ತಾ ಇದ್ದೆ ಎಂದು ನೇರವಾಗಿ ಎದ್ದು ನನ್ನ ತಲೆಗೆ ನೀರು ಸುರಿದಿರುತ್ತಾರೆ. ಅಷ್ಟು ಶಿಸ್ತು. ಪ್ರತಿ ದ್ವಾದಶಿಗೆ ತಿಮರೆ ತಂಬುಳಿ ಮಾಡಲೇಬೇಕು. ಹೀಗೆ ಪ್ರತಿಯೊಂದು ವಿಷಯದಲ್ಲೂ ಶಿಸ್ತನ್ನು ಹೇಳಿಕೊಟ್ಟಿರುತ್ತಾರೆ. ಊಟದ ಸಮಯದಲ್ಲೂ ಶಿಸ್ತು. ಊಟದ ಸಮಯದಲ್ಲಿ ಯಾರನ್ನೂ ಕಾಯುವ ಪ್ರಶ್ನೆಯೇ ಇಲ್ಲ. ಅವರು ಊಟಕ್ಕೆ ತಯಾರು ಆದ್ದರಿಂದ ನಾವು ಆ ಸಮಯಕ್ಕೆ

ಯಾವುದೇ ಕೆಲಸ ಇದ್ದರೂ ಬಿಟ್ಟು ಬರುತ್ತಿದ್ದೆವು. ಧಾನ್ಯ ಬೆಳೆಯುವ ಕಾಲದಲ್ಲಿಯೂ ಬೆಳಗಾತ ಎದ್ದು ಎಲ್ಲರೂ ಗದ್ದೆಗೆ ಹೋಗಿ ಧಾನ್ಯವನ್ನು ಕೀಳಲೇಬೇಕು. ಹೋಗದೆ ಮಲಗಿದ್ದರೆ ತಲೆಗೆ ನೀರು ತಂದು ಸುರಿಯಲು ರೆಡಿ. ಇದು ಅವರು ಎಲ್ಲಾ ವಿಷಯದಲ್ಲೂ ಪಾಲಿಸುತ್ತಿದ್ದರು.

ಉಪಚಾರ : ಉಪಚಾರದ ಮಟ್ಟಿನಲ್ಲಿಯೂ ಅವರು ನನಗೆ ಆದರ್ಶ. ಏನೂ ಇದ್ದರೂ ಹಂಚಿ ತಿನ್ನಬೇಕು. ಇದು ಅವರ ನಿಯಮ. ಪೂಜೆ ಆದ ತಕ್ಷಣ ನೈವೇದ್ಯಕ್ಕೆ ಇಟ್ಟ ಬೆಲ್ಲವನ್ನು ಪುಡಿ ಮಾಡಿ ಎಳ್ಳು ಹಾಗೂ ಅರಳಿನೊಂದಿಗೆ ಮಿಶ್ರ ಮಾಡಿ ಎಷ್ಟು ಮಕ್ಕಳು ಇದ್ದರೂ ಅವರ ಕೈಗೆಲ್ಲ ಹಂಚುತ್ತಿದ್ದರು. ಹತ್ತಿರದ ಮನೆಯ ಮಕ್ಕಳು ಆಡಲಿಕ್ಕೆ ಬಂದಾಗ ಅವರಿಗೂ ಮನೆಯಲ್ಲಿದ್ದ ತಿಂಡಿಯನ್ನು ಕೊಡಲೇಬೇಕು. ಇದು ಅವರ ನಿಯಮ. ಆ ಕಾಲದಲ್ಲಿ ಪತ್ರೊಡೆ ದೊಡ್ಡ ತಿಂಡಿ. ಅದು ಮಾಡಿದಾಗ ದಾಸಜ್ಜ ಸೀತಾರಾಮ ಜ್ಜನಿಗೆ ಬರಲು ಹೇಳಲೇಬೇಕು. ಅವರಿಗೆ ಕೊಟ್ಟರೆ ಮಾತ್ರ ಅಜ್ಜ ತಿನ್ನುತ್ತಿದ್ದರು. ಇತರರ ಕಾರ್ಯಕ್ರಮ ಆದಾಗ ಪಾಯಸವನ್ನು ಅವರೇ ಬಳಸುತ್ತಿದ್ದರು. ಪಾಯಸ ಉಳಿದರೆ ಅವರು ಬೇಡ ಬೇಡ ಎಂದು ಹೇಳಿದರೂ ಒತ್ತಾಯ ಮಾಡಿ ಬಳಸುತ್ತಿದ್ದರು. ಪಾಯಸ ಇಲ್ಲದಿದ್ದರೂ ವಿಚಾರಣೆ ಮಾಡಲೇಬೇಕು. ಎಷ್ಟು ವೇಗವಾಗಿ ಕೇಳಿಕೊಂಡು ಹೋಗುತ್ತಿದ್ದರು ಎಂದರೆ ಯಾರಾದರೂ ಬೇಕು ಅನ್ನುವಾಗ ಅವರು ಇನ್ನೊಂದು ತುದಿಯಲ್ಲಿರು ತ್ತಿದ್ದರು. ಹಾಗೇ ವಿಚಾರಣೆ ಮಾಡಬೇಕು. ಆದರೆ ಪಾಯಸ ಇಲ್ಲ ಅಂತ ಉಳಿದವರಿಗೆ ಗೊತ್ತಾಗಬಾರದು. ಇದು ಅವರ ತಂತ್ರ. ಈ ರೀತಿ ಬಳಸುವುದರಲ್ಲಿ ನಾರಾಯಣಜ್ಜನೂ ನಿಸ್ಸೀಮರು. ಹಾಗೆಯೇ ಬೇರೆಯವರ ಮನೆ ಕಾರ್ಯಕ್ರಮದಲ್ಲಿಯೂ ತುಂಬಾ ಒದ್ದಾಟ ಮಾಡಿದವರಿಗೆ (ಮನೆಯಲ್ಲಿ ಪಾಯಸ, ಹೋಳಿಗೆ) ಇದ್ದರೆ ತಿನ್ನಿಸುವುದರಲ್ಲೂ ಜೊತೆಗೆ ತಿನ್ನುವುದರಲ್ಲೂ ಅವರದ್ದು ಎತ್ತಿದ ಕೈ. ಅವರ ಮಾತೇ ಹಾಗೆ – ಅಲ್ಲಿ ಒಂದು ಹಾಕು, ಇಲ್ಲಿ ಎರಡು ಹಾಕು. ಹೀಗೆ ಜಾಸ್ತಿ ತಾನು ತಿನ್ನುತ್ತಿದ್ದರು, ತಿನ್ನಿಸುತ್ತಲೂ ಇದ್ದರು.

ಪ್ರೀತಿ : ಇನ್ನು ನನ್ನ ಅಜ್ಜನ ಜೀವನದಲ್ಲಿ ವಿರೋಧಿಗಳು ಇರಲೇ ಇಲ್ಲ ಎಂದು ಇಲ್ಲ. ಅವರ ಜೀವನದಲ್ಲಿ ಎಷ್ಟೋ ಅಹಿತಕರ ಘಟನೆಗಳು ನಡೆದಿದ್ದರೂ ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕೊರಗುತ್ತಿರಲಿಲ್ಲ. ಅಥವಾ ದ್ವೇಷ ಸಾಧಿಸುತ್ತಲೂ ಇರಲಿಲ್ಲ. ಶೀಘ್ರ ಕೋಪಿಗಳಾದರೂ ದೀರ್ಘ ದ್ವೇಷಿಗಳಾಗಿರಲಿಲ್ಲ. ಹಾಗಾಗಿ ಬೇಗನೇ ಎಲ್ಲರನ್ನು ಕ್ಷಮಿಸುವ ಹಾಗೂ ಮೊದಲಿನಂತೆ ಪ್ರೀತಿಸುವ ಗುಣ ನಮಗೆ ಯಾವಾಗಲೂ ಆದರ್ಶ.

ನಿಷ್ಠೆ : ಇನ್ನು ಕಾರ್ಯಕ್ರಮದ ವಿಷಯದಲ್ಲೂ ಅವರ ನಿಷ್ಠೆ. ದುರ್ಗಾನಮಸ್ಕಾರ ಪೂಜೆ ಎಂದರೆ ಬೆಳಿಗ್ಗೆ ಹೋಗಿ ಅವರ ಮನೆಯಲ್ಲಿ ಪಾರಾಯಣ, ಮಧ್ಯಾಹ್ನ ಉಪವಾಸ, ಸಂಜೆ ಮಂಡಲ ರಚನೆ. ಪೂಜೆ ನಡುವೆ ಎದ್ದು ಹೋಗಿ ಸ್ವತಃ ಅವರೇ ಪಾಯಸ ಮಾಡಿ 108 ಸೂರ್ಯ ನಮಸ್ಕಾರ ಮಾಡಿ ಸಂಕೀರ್ತನೆ ಹೇಳಿಯೇ ಅವರ ಪೂಜೆ ಮುಕ್ತಾಯ ಮಾಡುತ್ತಿದ್ದರು. ಹೀಗೆ ಯಾವುದೇ ಕಾರ್ಯಕ್ರಮದಲ್ಲಿ ನ್ಯಾಯ ಒದಗಿಸುತ್ತಿದ್ದರು. ಇದನ್ನು ನೋಡಿದಂತ ಎಷ್ಟೋ ಹಿರಿಯರು ನಮ್ಮ ಮುಂದೆ ಇದ್ದಾರೆ. ಗ್ರಾಮದಲ್ಲಿ ಮರಣ ಸಂಭವಿಸಿದರೆ ಮಕ್ಕಳು ಬರುವ ಮುಂಚೆಯೇ ಇವರು ಹೋಗಿ ಕಟ್ಟಿಗೆ ಕಾಷ್ಠ ಎಲ್ಲ ತಯಾರು ಮಾಡುತ್ತಿದ್ದರು. ಇದೆಲ್ಲಾ ಅವರಿಗೆ ಕರ್ಮಾಂಗದ ಮೇಲೆ ಇದ್ದ ನಿಷ್ಠೆ. ಒಟ್ಟಿನಲ್ಲಿ ಅವರ ಜೀವನದ ಕುರಿತು ಹೇಳುವುದಾದರೆ – ಅವರದು ನೇರ ದಿಟ್ಟ ನಿರಂತರ ಮಾರ್ಗ. ಅವರ ನೆನಪೇ ನಮಗಿಂದು ಜೇನ ಸವಿ.





॥ ಶ್ರೀಃ ॥

ಅವಸ್ಥಾ ಶಾಂತಿಕರ್ಮ : ಕಲ್ಪ ಮತ್ತು ಶಿಲ್ಪ

ವಿದ್ವಾನ್ ಉಮಾಕಾಂತ ಭಟ್ಟ, ಕೆರೇಕೈ

"ಅಜಃ ಸದ್ಯೋಜಾತೋ ಭವ ಭವ ಇತೀಡ್ಯೋಽಪ್ಯಭವನಃ
ಸ್ವಭಾವೋ ಭಾವಾನಾಂ ತ್ರಿನಯನಸುಗಂಧಿರ್ಮೃಗಧರಃ ।
ಸ್ವಯಂ ಘೋರಾಘೋರೋ ವಿನತಜನತಾ ಶೋಕಶಮನೋ
ಮಹಾದೇವೋ ದೇವಃ ಪರಿಹರತು ಮೃತ್ಯೋರ್ದವಭಯಮ್ ॥"

ಮಹಾದೇವ ಅಜ. ಆದರೂ ಸದ್ಯೋಜಾತ. ಭವ, ಭವ ಎಂದು ಸ್ತುತಿಸಲ್ಪಡುವ ದೇವ. ಅವನೇನೂ ಭವದೊಳಗೆ ಭವಿಸುವವನಲ್ಲ. ಭವವೇ ಅವನಿಂದ. ಆದುದರಿಂದ ಭವೋದ್ಭವ. ವಸ್ತುಗಳ ಸ್ವ_ಭಾವ ಅವನೇ. ಅವನು ತ್ರಿಣೇತ್ರ, ಸುಗಂಧಿ, ಮೃಗಧರ. ಘೋರನಾಗಿ ಅಘೋರನಾಗಿಯೂ ಇರುವವ. ಆನತಜನರ ದುಃಖವನ್ನು ನೀಗಿಸುವವ. ಅಂಥ ಮಹಾದೇವ ನಮ್ಮೆಲ್ಲರ ಮರಣ ಎಂಬ ಭಯಂಕರ ದಾವಾನಲವನ್ನು ಆರಿಸಲಿ.

ಪ್ರತಿಯೊಬ್ಬ ಜೀವಿಯ ಜೀವನಕಾಲ ಆಯುಷ್ಯ. ಜನನದ ಕ್ಷಣದಿಂದ ಮರಣದ ಘಟಿಯ ವರೆಗೆ ಅದರ ಅಳತೆ. ಅದು ಎಷ್ಟು ಎಂದು ಸಾಮಾನ್ಯರಿಗೆ ತಿಳಿಯದು. ಸಿದ್ಧರಾದ ದೈವಜ್ಞರಿಗೆ ತಿಳಿಯಬಹುದಾದರೂ ಅದನ್ನು "ಕೇಳಬಾರದು – ಹೇಳಬಾರದು" ಎಂಬ ನಿಯಮವೇ ಇದೆ. ಆದುದರಿಂದ – ಲೊ ಏನೊ... ಎಲ್ಲರಿಗೂ ಆಯುಷ್ಯವನ್ನು ತಿಳಿದುಕೊಳ್ಳಬೇಕು ಎಂಬ ಕುತೂಹಲ. ಜೀವಿ ಕಳೆದ ಬದುಕಿನ ಅವಧಿ ವಯಸ್ಸು. ವಯಸ್ಸನ್ನು ವರ್ಷ, ತಿಂಗಳು, ದಿನಗಳ ಲೆಕ್ಕದಲ್ಲಿ ಗಣಿಸುವ ರೂಢಿಯಿದೆ. ಮಕ್ಕಳಿಗೆ ವಯಸ್ಸು ಹೆಚ್ಚಿದಂತೆ ಸಂತೋಷ. ಅವರಿಗೆ ಬೇಗ ದೊಡ್ಡವರಾಗಬಹುದು ಎಂಬ ಪ್ರತೀಕ್ಷೆ. ಒಂದೊಂದು ಹುಟ್ಟಿದ ಹಬ್ಬ ಬಂದಂತೆ ಹಿಗ್ಗು, ಸಂಭ್ರಮ. ಆದರೆ ದೊಡ್ಡವರಿಗೆ ವಯಸ್ಸನ್ನು ಲೆಕ್ಕ ಹಾಕಿದಂತೆ ಗಾಬರಿ, ದಿಗಿಲು. ಒಂದೊಂದು ಕ್ಷಣವನ್ನು ಕಳೆಯುವಾಗಲೂ ತಾವು ಮರಣಕ್ಕೆ ಹತ್ತಿರ ಆದೆವು ಎಂಬ ಗುಪ್ತ ಭೀತಿ. ವೃದ್ಧಾಪ್ಯದಲ್ಲಿ ವಯಸ್ಸನ್ನು ವಿಚಾರಿಸಿದರೆ ಕೆಲವರಿಗಂತೂ ಕೋಪವೇ ಒಕ್ಕರಿಸಿಬಿಡುತ್ತದೆ. ಮತ್ತೆ ಕೆಲವರನ್ನು ಖಿನ್ನತೆ ತುಂಬಿಕೊಳ್ಳುತ್ತದೆ.

ಕಾಲದೇಶಗಳ ಸಂಬಂಧ ಇಲ್ಲದೆ ಬದುಕು ಇಲ್ಲ. ಭವವಿಲ್ಲ, ಅನುಭವವಿಲ್ಲ. ಅನುಭಾವಗಳೂ ಇಲ್ಲ. ಬಾಳಾಟ ಎಂದರೆ ನಿಶ್ಚಿತವಾದ ಕಾಲದಲ್ಲಿ ಖಚಿತವಾದ ಪ್ರದೇಶದಲ್ಲಿ ಏರ್ಪಡುವ ಜೀವನ ಯಾತ್ರೆ, ಕಾಲದಿಂದಲೆ ಬಾಲ್ಯ, ಕೌಮಾರ, ಯೌವನ, ವಾರ್ಧಕ್ಯ ಮುಂತಾದ ಅವಸ್ಥೆಗಳು. ಇವು ಪ್ರಕೃತಿಯಲ್ಲಿ ಏರ್ಪಡುವ ವಸಂತ, ಗ್ರೀಷ್ಮ, ವರ್ಷ, ಹೇಮಂತ ಮೊದಲಾದ ಋತುಮಾನಗಳ ಅವಸ್ಥೆಗಳಂತೆ ಒದಗುವ ದೆಸೆಗಳು. ಈ ಅವಸ್ಥೆಗಳು ಜೀವಿಗಳಿಗೆ ಅರಿತರೂ, ಮರೆತರೂ, ಬಯಸಿದರೂ, ನಿರಾಕರಿಸಿದರೂ ಕಟ್ಟಿಟ್ಟ ಬುತ್ತಿಗಳೆ. ಬಾಲ್ಯ ಕಳೆಯುವುದು ಗೊತ್ತಾಗುವುದೇ ಇಲ್ಲ. ಯೌವನ ಬಂದಾಗಲೆ ಅದು ನಮ್ಮ ಅರಿವಿಗೆ ಬರುವುದು. ಯೌವನ ಮಾಗುವುದು ನಮ್ಮ ಗಮನಕ್ಕೆ ಬರುವುದೇ ಇಲ್ಲ. ನಾವು ಮುದುಕರಾದಾಗಲೇ ಅದು ನಮ್ಮ ಅನುಭವಕ್ಕೆ ಸಿಗುವುದು. ಪ್ರತಿಯೊಂದು ಕ್ಷಣ ಜಾರುವಾಗಲೂ ನಮ್ಮ ಹಿಂದಿನ ಅವಸ್ಥೆಯನ್ನು ಕಳೆದುಕೊಳ್ಳುತ್ತ, ಮುಂದಿನ ಅವಸ್ಥೆಗೆ ಸೇರಿಕೊಳ್ಳುತ್ತ

ಇರುತ್ತೇವೆ. ಪರಿವರ್ತನೆಯ ಪಲುಕುಗಳು ಬಹಳ ಸೂಕ್ಷ್ಮ. ನಿನ್ನೆಯಂತೆ ಇಂದು ಇಲ್ಲ ; ಇಂದಿನಂತೆ ನಾಳೆ ಇಲ್ಲ. ಜೀವನ ಎಂದರೆ ಅನುಭವಗಳ ಸರಮಾಲೆ. ಇಲ್ಲಿ ಸುಖವಿದೆ, ದುಃಖವಿದೆ, ಪುರಸ್ಕಾರ – ತಿರಸ್ಕಾರಗಳಿವೆ. ನೋವು – ನಲಿವುಗಳಿವೆ. ಒಲವು, ಪ್ರೀತಿ, ನೆಮ್ಮದಿಗಳಂತೆ ಸ್ಪರ್ಧೆ, ಸಂಘರ್ಷ, ಅಸೂಯೆಗಳೂ ಇವೆ. ಈ ಎಲ್ಲಭಾವಗಳು ಬಿಡಿಬಿಡಿಯಾಗಿ ಹುಟ್ಟುವವು ಎಂಬನಿಯಮವೂ ಇಲ್ಲ. ಅವು ಜೊತೆ ಜೊತೆಯಾಗಿ, ಒಂದರೊಳಗೊಂದು ನುಲಿದುಕೊಂಡು, ಯಾವುದು ಯಾವ ಭಾವ ಎಂದು ವಿವೇಚಿಸಲಾಗದಷ್ಟು ಸಂಕೀರ್ಣವಾಗಿಯೂ ಮೈದಳೆಯಬಹುದು. ಬದುಕು ಎಂದರೆ ಒಂದಷ್ಟು ರೀತಿ ನೀತಿಗಳ ನಿಟ್ಟು. ಸೋಲುಗೆಲುವುಗಳ ಪಟ್ಟು. ಪ್ರವೃತ್ತಿ ನಿವೃತ್ತಿಗಳ ಮೊತ್ತ. ಆಸೆ ಆಕಾಂಕ್ಷೆಗಳ ಹಂದರ. ಒಡನಾಟಗಳ ಕೂಟ. ಬದುಕಿನ ಭಾವಪ್ರಪಂಚವನ್ನೂ, ಕ್ರಿಯಾವಿಸ್ತಾರವನ್ನೂ ಗಮನಿಸಿದರೆ ಅದನ್ನು ಸಮೀಕ್ಷಿಸಲು ಶಬ್ದಗಳು ಸಾಲವು. ಭಾಷೆಗಳು ಬಡವಾಗುತ್ತವೆ. ತರ್ಕಗಳು ಸೋಲುತ್ತವೆ. ನಾವು ಕಂಡುಂಡ ಜೀವನವನ್ನು ಸೀಮಿತವಾದ ಪರಿಧಿಯೊಳಗೆ ಅಷ್ಟಿಷ್ಟು ನಿರ್ವಚನ ಮಾಡಿಕೊಳ್ಳಬಹುದು. ಆದರೆ ಜೀವನ ಎಂದರೆ 'ಇಷ್ಟೇ' –'ಅಷ್ಟೇ' ಎಂದು ಪರಿಮಾಣ – ಪ್ರಕಾರಗಳನ್ನು ಸಮೀಕ್ಷಿಸಲು ಸಾಧ್ಯವಾಗದು.

ವಯಸ್ಸು, ಆಯುಷ್ಯ ಮತ್ತು ಅವಸ್ಥೆಗಳು ದೇಹದಲ್ಲಿ; ಸುಖ– ದುಃಖಗಳು ಜೀವಾತ್ಮನಲ್ಲಿ. ಇವೆಲ್ಲವನ್ನು ಸೇರಿಸಿಕೊಂಡು ನಾವು ಬಾಳಾಟವನ್ನು ಪರಿಗಣಿಸುತ್ತೇವೆ.

ಜೀವಿಯ ಜೀವನದಲ್ಲಿ ಬಹಳ ಮುಖ್ಯವಾದ ಸಂಗತಿ ಎಂದರೆ ಅದು ಅನುಭವಿಸುವ ಸುಖದುಃಖಗಳು. ಇರುವೆಯಿಂದ ಆನೆಯವರೆಗೆ, ಮನುಷ್ಯನಿಂದ ದೇವತೆಯವರೆಗೆ ಯಾವ ಜೀವಿಯೆ ಇರಲಿ; ಅದು ಸುಖ– ದುಃಖಗಳನ್ನು ಅನುಭವಿಸದೆ ತನ್ನ ಬಾಳನ್ನು ಮುಗಿಸದು. ಆ ಆ ಜೀವಿಯ ದೇಹ, ಇಂದ್ರಿಯ, ಮನಸ್ಸು, ಪ್ರಾಣಗಳ ತಾರತಮ್ಯದಂತೆ ಸುಖ – ದುಃಖಗಳ ಪ್ರಮಾಣದಲ್ಲಿಯೂ, ಅವುಗಳ ಭೋಗದ ಪ್ರಕಾರದಲ್ಲಿಯೂ ವೈಲಕ್ಷಣ್ಯವು ತೋರಬಹುದು. ಆದರೆ ಸುಖವನ್ನಾಗಲಿ, ದುಃಖವನ್ನಾಗಲಿ ಅನುಭವಿಸದ ಜೀವಿಯಿಲ್ಲ. ಸುಖದ ಸ್ವರೂಪವೇನು, ದುಃಖ ಎಂದರೇನು – ಎಂಬ ಅರಿವೇ ಬೇಕಿಲ್ಲ. ಸುಖ –ದುಃಖಗಳನ್ನು ತಿಳಿಯದೇ ಇದ್ದ ಮಗುವೂ ಅಳುತ್ತದೆ; ನಗುತ್ತದೆ. ಅಳಲಾರದ ಹಸು, ನಾಯಿ, ಬೆಕ್ಕು ಮೊದಲಾದ ಪ್ರಾಣಿಗಳೂ ಮೂಕರೋದನವನ್ನು ಮಾಡುತ್ತವೆ. ಸುಖ – ದುಃಖಗಳ ಅರಿವನ್ನು ಪಡೆದ ವಿವೇಕಿಗಳೂ ಅಳದೆ ಉಳಿಯಲಾರರು ; ನಗದೇ ಬಿಗಿಯಾಗಿ ಕುಳಿತಿರಲಾರರು. ಸುಖ – ದುಃಖಗಳ ಅರಿವು ಬೇರೆ: ಅವುಗಳ ಅನುಭವವೇ ಬೇರೆ.

ಸುಖ ಎಂದರೆ ಆನುಕೂಲ್ಯ. ನೆಮ್ಮದಿ. ಯಾವುದನ್ನು ಪಡೆದಾಗ ಆಯಾ ಇಂದ್ರಿಯಗಳು ಪ್ರಸನ್ನವಾಗಿ 'ಆಹ್' ಎಂಬಸ್ವಾದವು ಮನದಲ್ಲಿ ಹುಟ್ಟುವದೊ ಆ ಸ್ಥಿತಿಯೆ ಸುಖ. ದುಃಖ ಎಂದರೆ ಪ್ರಾತಿಕೂಲ್ಯ. ಯಾವುದರ ಸಂಬಂಧದಿಂದ ಇಂದ್ರಿಯಗಳಿಗೆ ಕಿರಿಕಿರಿಯುಂಟಾಗಿ ಮನಸ್ಸಿನಿಂದ 'ಹಾ' ಎಂಬ ಅನುಭವ ಉಂಟಾಗುವುದೊ ಅದು ದುಃಖ. ದುಃಖದ ಪರಿಣಾಮ ಅಳು. ಸುಖದ ಫಲ ನಗು. ಬದುಕಿನ ತುಂಬೆಲ್ಲ ಸುಖ – ದುಃಖಗಳೆ. ಹುಟ್ಟುವಾಗ ಅಳು. ಬೆಳೆಯುವಾಗ ನಗು. ಸಾಯುವಾಗ ಅಳು. ಅಳುವಾದ ಮೇಲೆ ನಗು. ನಗುವಾದ ಮೇಲೆ ಅಳು. ಅಳುವಾಗ ನಗು, ನಗುವಾಗ ಅಳು. ಆದುದರಿಂದ ಬದುಕು ಎಂದರೆ ಸುಖ– ದುಃಖಗಳ ಸರಮಾಲೆ. ಒಬ್ಬನ ಸುಖ ; ಇನ್ನೊಬ್ಬನ ದುಃಖ. ಒಂದು ಕಾಲದ ಸುಖ; ಇನ್ನೊಂದು ಕಾಲದ ದುಃಖ. ಒಂದು ಪ್ರದೇಶದ ಸುಖ; ಇನ್ನೊಂದು ಪ್ರದೇಶದ ದುಃಖ. ಒಬ್ಬನಿಗೆ ಸಿಹಿ ಸುಖ; ಇನ್ನೊಬ್ಬನಿಗೆ ಕಹಿ ಹಿತ. ಒಬ್ಬನಿಗೇ ಆದರೂ ಛಳಿಗಾಲದ ಶಾಲು ಕಂಬಳಿಗಳು ಬೇಸಿಗೆಯಲ್ಲಿ ಹಿಂಸೆ ಕೊಡುತ್ತವೆ. ಹಿಮಾಲಯದ ಬಿಸಿ ಪಾನೀಯ ಕರಾವಳಿಯಲ್ಲಿ ಇಷ್ಟವಾಗುವುದಿಲ್ಲ. ಆದುದರಿಂದ ಸುಖ– ದುಃಖಗಳು ಸಾಂದರ್ಭಿಕವಾದರೂ ಅನಿವಾರ್ಯ.

ಜೀವಿಗಳಿಗೆ ಸುಖವೆಂದರೆ ಆಸೆ. ದುಃಖವೆಂದರೆ ಜಿಹಾಸೆ. ಮಗುವಿನಿಂದ ಮುದುಕನವರೆಗೆ ಯಾರಿಗೂ ದುಃಖವು

ಬೇಕಾಗಿಲ್ಲ. ಸುಖವು ಬೇಡವೆಂದಿಲ್ಲ. ವಿಜ್ಞಾನ ದುಃಖವನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿತು. ಋಷಿಗಳ ಜ್ಞಾನ ದುಃಖವನ್ನು ಆತ್ಯಂತಿಕವಾಗಿ ನೀಗಿಸುವ ದಾರಿಯನ್ನು ತೋರಿಸಿತು.

ವಯಸ್ಸು ಕಳೆದಂತೆ, ಆಯುಷ್ಯ ತೀರಿದಂತೆ ದೇಹವು ದುರ್ಬಲವಾಗತೊಡಗುತ್ತದೆ. ಶಕ್ತಿ ಕುಂದುತ್ತದೆ. ಇಂದ್ರಿಯಗಳು ಪಟುತ್ವವನ್ನು ಬಿಟ್ಟುಕೊಡುತ್ತವೆ. ಮನಸ್ಸು ಕುಸಿಯುತ್ತದೆ. ಪ್ರಾಣಗಳು ನರಳುತ್ತವೆ. ಸಂದುಗೊಂದುಗಳು ಶಿಥಿಲವಾಗುತ್ತವೆ. ರೋಗರುಜಿನಗಳು ಹೆಚ್ಚುತ್ತವೆ. ನಿದ್ದೆ ಹತ್ತುವುದಿಲ್ಲ. ತಿಂದ ಆಹಾರ ಜೀರ್ಣವಾಗುವುದಿಲ್ಲ. ಹಲ್ಲುಗಳು ಉದುರಿ ಬಾಯಿ ಜೊಲ್ಲರಿಸುತ್ತದೆ. ಶ್ವಾಸನಿಶ್ವಾಸಗಳೂ ದುಷ್ಕರವಾಗುತ್ತವೆ. ಬೆಳೆಯುವಾಗ ದೇಹ; ಸವೆಯುವಾಗ ಶರೀರ. ಶರೀರದಲ್ಲಿ ವಾರ್ಧಕ್ಯದ ವಿಕಾರಗಳು ಇಮ್ಮಡಿಸುತ್ತವೆ. ಶರೀರ ಶಿಥಿಲವಾಗುವಾಗಲೂ ಮನಸ್ಸು ಮಾಗುವುದಿಲ್ಲ. ಮೊದಲಿನ ಎಳಸು ಮಾಸುವುದಿಲ್ಲ. ಮನಸ್ಸಿಗೆ ಎಲ್ಲ ಬೇಕು. ಶರೀರಕ್ಕೆ ಎಲ್ಲ ಸಾಕು. ಆ ಸಂಘರ್ಷದ ಸಂಕಟವನ್ನು ಹೇಳತೀರದು. ಹೆಂಡತಿ ಉಪಚರಿಸಲು ಒಪ್ಪುವುದಿಲ್ಲ. ಮಕ್ಕಳು ಅಮಿತ್ರರಾಗುತ್ತಾರೆ. ಬಂಧುಗಳು ದೂರವಾಗುತ್ತಾರೆ. ಮರಣದ ಭಯ ಆವರಿಸುತ್ತದೆ. ಸಾವಿನ ಆತಂಕ ಅಮರುತ್ತದೆ. ಆಗ ಜೀವದ ಕಾಂತಿ ಉಳಿಯಲು ಮನಸ್ಸಿಗೆ ಶಾಂತಿ ಬೇಕು.

ಶಾಂತಿ ಎಂದರೆ ನೆಮ್ಮದಿ, ಸಮಾಧಾನ. ಇದರಲ್ಲಿ ಸುಖದ ಹಿಗ್ಗೂ ಇಲ್ಲ; ದುಃಖದ ಕುಗ್ಗೂ ಇಲ್ಲ. ಸೊರಗಿಲ್ಲ, ಬೆರಗಿಲ್ಲ, ಕೊರಗಿಲ್ಲ, ಮರುಗೂ ಇಲ್ಲ. ವಿಕಾರರಹಿತವಾದ, ನಿಸ್ತರಂಗಿತವಾದ ಮನಸ್ಥಿತಿಗೆ ಶಾಂತಿ ಎಂದು ಹೆಸರು. ಶಮ – ದಮಗಳು ಅದರ ಅಂತರಂಗ – ಬಹಿರಂಗಗಳು. ಕಾಮ, ಕ್ರೋಧ, ಮದ, ಮೋಹ, ಲೋಭ, ಮತ್ಸರಗಳೆಂಬ ಅರಿಷಡ್ವರ್ಗಗಳಿಂದ ಮುಕ್ತವಾದ ಮನೋಧರ್ಮ ಇದು. ಇದು ಇಂದ್ರಿಯಗಳ ಪ್ರಸನ್ನತೆಗೆ ಕಾರಣ. ಇದರಿಂದ ಆಸೆಗಳು ದೂರಾಗುತ್ತವೆ. ದ್ವೇಷ ಹುಟ್ಟುವುದಿಲ್ಲ. ಪದ್ಮ ಪುರಾಣದಲ್ಲಿ ಹಿರಿಯರ ಮಾತೊಂದನ್ನು ಉದಾಹರಿಸಲಾಗಿದೆ –**"ಯತ್ಕಿಂಚಿದ್ವಸ್ತು ಸಂಪ್ರಾಪ್ಯ ಸ್ವಲ್ಪಂ ವಾ ಯದಿ ವಾ ಬಹು । ಯಾ ತುಷ್ಟಿರ್ಜಾಯತೇ ಚಿತ್ತೇಶಾಂತಿಃ ಸಾ ಗದ್ಯತೇ ಬುಧೈಃ ॥"**

ಒಂದು ವಸ್ತುವನ್ನು ಸ್ವಲ್ಪ ಅಥವಾ ಬಹಳವಾಗಿ ಪಡೆದಾಗ ಉಂಟಾಗುವ ಸಂತೋಷ (ತೃಪ್ತಿ)ವನ್ನು ತಿಳಿದವರು ಶಾಂತಿ ಎಂದು ಕರೆಯುತ್ತಾರೆ. ಅವಸ್ಥಾವಿಕಾರಗಳು ದೇಹದಲ್ಲಿ ಸಹಜ, ಅನಿವಾರ್ಯ. ಆದರೆ ಮನಸ್ಸಿನಲ್ಲಿ ಶಾಂತಿ ನೆಲೆಸಿದ್ದರೆ ಬದುಕು ಸಹ್ಯವಾಗುತ್ತದೆ. ಜೀವನಲ್ಲಿ ಕಾಂತಿ ನೆಲೆಸುತ್ತದೆ. ದೇಹ ವಿಕಾರಗಳು ಜೀವವಿಕಾರಕ್ಕೆ ಕಾರಣವಾಗುವುದಿಲ್ಲ.

ಶಾಂತಿಗೆ ಸಾಧನಗಳು ಎರಡು ; ಒಂದು ಯೋಗ, ಇನ್ನೊಂದು ಪ್ರಯೋಗ. ಯೋಗ ಎಂದರೆ ಅಷ್ಟಾಂಗಯೋಗ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರಗಳೆಂಬ ಹಠಯೋಗವೂ, ಧ್ಯಾನ, ಧಾರಣ, ಸಮಾಧಿ ಎಂಬ ರಾಜ ಯೋಗವೂ ಶಾಂತಿಯನ್ನು ಪಡೆಯುವ ಅಂತರಂಗದ ಆಧ್ಯಾತ್ಮಿಕ ಮಾರ್ಗ. ಪ್ರಯೋಗ ಎಂದರೆ ದೇವತಾರಾಧನ. ಪೂಜೆ – ಪುರಸ್ಕಾರಗಳಿಂದ ದೇವತೆಗಳನ್ನು ತೃಪ್ತಿಪಡಿಸಿ, ಅವರ ಅನುಗ್ರಹದಿಂದ ಶಾಂತಿಯನ್ನು ಪಡೆದುಕೊಳ್ಳುವ ಆಧಿದೈವಿಕ ಮಾರ್ಗ ಇದು.

ಪ್ರಯೋಗ ಪ್ರಕೃಷ್ಟವಾದ ಯೋಗ. ಯೋಗ ಎಂದರೆ ಸಂಬಂಧ. ಆರಾಧ್ಯನಾದ ದೇವನಿಗೂ ಆರಾಧಕನಾದ ಜೀವನಿಗೂ ಏರ್ಪಡುವ ಅತಿಶಯವಾದ ಸಂಬಂಧ ಪ್ರಯೋಗ – ಪ್ರಕೃಷ್ಟವಾದ ಯೋಗ. ಧ್ಯಾನ, ಅಭಿಷೇಕ, ಅರ್ಚನೆ, ಜಪ, ಹೋಮ, ತರ್ಪಣ, ಬಲಿ, ದಾನ, ಸಂತರ್ಪಣ ಮೊದಲಾದ ಸಂಸ್ಕಾರಕ ಕ್ರಿಯಾಕಲಾಪಗಳಿಂದ ಈ ಯೋಗವನ್ನು ಆರಾಧಕನು ಪಡೆಯುತ್ತಾನೆ ಎಂದು ಋಷಿಮುನಿಗಳು ಕಂಡು ನಿಶ್ಚಯಿಸಿದ್ದಾರೆ. ಅವರ ಆರ್ಷವಿಜ್ಞಾನವೇ ಈ ಪ್ರಕ್ರಿಯೆಗೆ ಆಧಾರ. ದೇವತೆಗಳು ತೇಜಶ್ಶರೀರವನ್ನು ಪಡೆದುಕೊಳ್ಳುವ ಶಕ್ತಿಯ ವಿನ್ಯಾಸಗಳು. ಅವು ತಾತ್ತ್ವಿಕವಾಗಿ ಅವ್ಯಕ್ತವಾಗಿಯೂ, ಇಚ್ಛೆಯಿಂದ, ಆರಾಧಕರ ಅನುಗ್ರಹಕ್ಕಾಗಿ ವಿವಿಧ ಆಕೃತಿಯನ್ನು ಪಡೆಯುವಂಥವೂ ಆಗಿವೆ. ಯೋಗಭೂಮಿಯಲ್ಲಿ ದರ್ಶನವಾಗದಂತೆ ಬೇರೆ ಬೇರೆ ದೇವತೆಗಳಿಗೆ ಬೇರೆ ಬೇರೆ

ವಿಗ್ರಹಗಳನ್ನು ಕೆತ್ತಿ ಆರಾಧಿಸುವ ಕಲ್ಪವನ್ನೂ, ಶಿಲ್ಪವನ್ನೂ ಋಷಿಗಳು ಏರ್ಪಡಿಸಿದ್ದಾರೆ. ಅವು ಸಾವಿರಾರು ವರ್ಷಗಳಿಂದ ನಿರಂತರವಾಗಿ ಮುಂದುವರಿದುಕೊಂಡು ಬಂದಿವೆ.

ಈ ಯುಗದಲ್ಲಿ ಮನುಷ್ಯರ ಪರಮಾವಧಿ ಆಯುಷ್ಯ ನೂರು ವರ್ಷಗಳು. ಎಲ್ಲ ಮಾನವರೂ ಒಂದು ನೂರು ವರ್ಷಗಳವರೆಗೆ ಜೀವಿಸುತ್ತಾರೆ ಎಂಬ ನಿಯಮವೇನೂ ಇಲ್ಲ. ದೀರ್ಘಕಾಲ ಬದುಕುವವರು ನೂರು ವರ್ಷಗಳ ವರೆಗೆ ಬದುಕಿರುತ್ತಾರೆ. ಇದನ್ನೇ **"ಶತಾಯುರ್ವೈ ಪುರುಷಃ" "ಶತಸಂವತ್ಸರಂ ದೀರ್ಘಮಾಯುಃ"** ಮೊದಲಾದ ವೇದವಾಕ್ಯಗಳು ಸಾರುತ್ತಿವೆ. ಉಳಿದವರು ತಮ್ಮ ತಮ್ಮ ಪುಣ್ಯಪಾಪಗಳಿಗೆ ಅನುಗುಣವಾಗಿ ವಿವಿಧ ಸಮಯದ ವರೆಗೆ ಜೀವಿಸಿರುತ್ತಾರೆ. ಈ ಅಭಿಪ್ರಾಯದಂತೆ ಆಯುರ್ಮಾನದ ಅರ್ಧವಾದ ಐವತ್ತನೆಯ ವರ್ಷದಿಂದ ಪ್ರತಿ ಐದು ವರ್ಷಗಳಿಗೆ ಬೇರೆ ಬೇರೆ ಹೆಸರಿನ ವಯೋಽವಸ್ಥಾನಿಮಿತ್ತವಾದ ಶಾಂತಿಯನ್ನು ಆಚರಿಸಬೇಕಾಗಿದೆ. ಭಟ್ಟಭಾಸ್ಕರರು (ಪ್ರಾಚೀನ ವೇದಭಾಷ್ಯಕಾರರು) ಈ ಪಕ್ಷವನ್ನು ಸಮರ್ಥಿಸುತ್ತಾರೆ.

ಲಿಂಗ ಪುರಾಣದಲ್ಲಿ **"ನಖಾಧಿಕಶತಂ ಚಾಯುಃ ಪುರುಷಾಣಾಂ ಪ್ರಕೀರ್ತಿತಮ್"** ಎಂಬ ಮಾತಿದೆ. ಅದರಂತೆ ಮಾನವರ ಪರಮಾಯುಷ್ಯ ಒಂದು ನೂರಾ ಇಪ್ಪತ್ತು ವರ್ಷಗಳು. ಕೆಲವು ದೈವಜ್ಞರು ಪ್ರಮಾಣಗಳಿಂದ ಈ ಅಭಿಪ್ರಾಯವನ್ನ ಸಮರ್ಥಿಸುತ್ತಾರೆ. ಅವರ ಅಭಿಮತದಂತೆ ಆಯುಷ್ಯದ ಮಧ್ಯಭಾಗವಾದ ಅರವತ್ತನೆಯ ವರ್ಷದಿಂದ ಅವಸ್ಥಾಶಾಂತಿಗಳು ಪ್ರಾರಂಭವಾಗುತ್ತವೆ. ಆದರೆ ಭಟ್ಟಭಾಸ್ಕರರ ಪಕ್ಷವನ್ನು ಸಾರ್ವತ್ರಿಕವಾಗಿ ಆದರಿಸುತ್ತಿದ್ದಾರೆ.

ಐವತ್ತನೆಯ ವರ್ಷದಿಂದ ನೂರನೆಯ ವರ್ಷದವರೆಗೆ ಐದು ವರ್ಷಗಳಿಗೆ ಒಂದರಂತೆ ಹನ್ನೊಂದು ಶಾಂತಿಕರ್ಮಗಳನ್ನು ಆಚರಿಸಿಕೊಳ್ಳಬೇಕು. ಇವುಗಳಿಗೆ ಎಲ್ಲ ಶ್ರದ್ಧಾವಂತರೂ ಅರ್ಹರಾಗಿದ್ದಾರೆ. ಎಲ್ಲ ಶಾಂತಿಕರ್ಮಗಳ ಲಕ್ಷ್ಯ ಒಂದೇ. ಅದೆ ಅನಿಷ್ಟ ಪರಿಹಾರ. **"ಅರಿಷ್ಟಪರಿಹಾರಾರ್ಥಂ ಶಾಂತಿಂ ಕುರ್ಯಾತ್ಪ್ರಯತ್ನತಃ"** ಅರಿಷ್ಟ ಪರಿಹಾರಕ್ಕಾಗಿ ಪ್ರಯತ್ನಪೂರ್ವಕವಾಗಿ ಶಾಂತಿಯನ್ನು ಮಾಡಿಕೊಳ್ಳಬೇಕು ಎಂಬ ಎಚ್ಚರಿಕೆಯ ಮಾತನ್ನು ಶೌನಕರೇ ಹೇಳಿದ್ದಾರೆ. ಶಾಂತಿಕರ್ಮಗಳ ಕಲ್ಪವನ್ನು ರೂಪಿಸಿದವರು ಅವರೇ. ಅವರೇ ಅದರ ಪ್ರಯೋಗಶಿಲ್ಪವನ್ನೂ ವಿವರಿಸಿದವರು. ಆದುದರಿಂದ ಸಂಕಲ್ಪವನ್ನು ಮಾಡುವಾಗ ಎಲ್ಲರೂ 'ಶೌನಕೋಕ್ತಪ್ರಕಾರೇಣ' ಎಂದು ಪಠಿಸುತ್ತಾರೆ.

ಐವತ್ತು ವರ್ಷಗಳ ವಯಸ್ಸಿನಲ್ಲಿ ಬಾಲ್ಯ ಕೌಮಾರ್ಯಗಳು ಕಳೆದು ಯೌವನವು ತನ್ನ ಪೂರ್ಣ ಬೆಳವಣಿಗೆಯನ್ನು ಪಡೆಯುತ್ತದೆ. ಅಲ್ಲಿಂದ ಮುಂದೆ ದೇಹದ ಬೆಳವಣಿಗೆ ಇಳಿಮುಖವಾಗಿ ಕ್ರಮೇಣ ಅರವತ್ತು ವರ್ಷಗಳ ಅವಧಿಯಲ್ಲಿ ನಿಲ್ಲುತ್ತದೆ. ಮರಣ ಭಯ ಮೆಲ್ಲನೆ ಅಡಿಯಿಡುತ್ತದೆ. ನಿದ್ರಾಭಂಗ, ದುಸ್ವಪ್ನ, ಭಾರ್ಯಾಪುತ್ರ-ವಿಯೋಗ, ಗ್ರಹಪೀಡೆ, ರಾಜಭಯ, ಶತ್ರುಭಯ, ದಂತರೋಗ, ದೃಷ್ಟಿಮಾಂದ್ಯ, ಛಾಯಾವಿಕಾರ, ಅಜೀರ್ಣ, ಆಲಸ್ಯ, ರೋಗಬಾಧಾ, ಉದರಶೂಲೆ, ಭೂತಪಿಶಾಚಬಾಧೆ, ಮನಸ್ತಾಪ ಮೊದಲಾದ ಅನಿಷ್ಟಗಳು ಒಂದಾದ ಮೇಲೊಂದರಂತೆ ಎರಗುತ್ತವೆ. ಇವುಗಳಲ್ಲಿ ಕೆಲವು ಮರಣಸದೃಶವಾದವು. ಮತ್ತೆ ಕೆಲವು ಮರಣದ ಪೂರ್ವರಂಗ. ಚಿಂತೆ, ಭಯ, ಶೋಕಗಳಿಗೆ ಕಾರಣವಾದ ಅವಸ್ಥೆ ವಾರ್ಧಕ್ಯ. ಅವುಗಳ ಉಪಶಮವೇ ಈ ಶಾಂತಿಕರ್ಮಗಳ ಪ್ರಯೋಜನ.

ಅವಸ್ಥಾಶಾಂತಿಕರ್ಮಗಳು ಕೆಲವು ದೋಷಗಳನ್ನು ಸಾಕ್ಷಾತ್ತಾಗಿ ನಿವಾರಿಸುತ್ತವೆ. ಇನ್ನು ಕೆಲವು ಪೀಡೆಗಳನ್ನು ಸಹಿಸಿಕೊಳ್ಳುವ ಮನೋಧರ್ಮವನ್ನು ಹುಟ್ಟಿಸಿ ಉಪಕರಿಸುತ್ತವೆ. ಅವು ಶಸ್ತ್ರಘಾತವನ್ನು ತಡೆಯುವ ಲೋಹದ ಕವಚಗಳಿದ್ದಂತೆ. ಹಿರಿಯ ಹಿತೈಷಿಗಳು ಹೀಗೆ ಗುರುತಿಸಿದ್ದಾರೆ. **"ಯಥಾ ಶಸ್ತ್ರ ಪ್ರಹಾರಾಣಾಂ ಕವಚಂ ವಿನಿವಾರಕಮ್ । ತಥಾ ದೈವೋಪಘಾತಾನಾಂ ಶಾಂತಿರ್ಭವತಿ ವಾರಣಮ್ ॥"**

ಎದೆಯ ಮೇಲೆ ಅಪ್ಪಳಿಸುವ ಕತ್ತಿ, ಬಾಣ, ಗದೆ ಮುಂತಾದ ಶಸ್ತ್ರಗಳು ಎದೆಯನ್ನೇ ಸೀಳಿಬಿಡುತ್ತವೆ. ಅದೇ ಸೀಸಕವಚವನ್ನು ಅವಚಿಕೊಂಡು ಅವುಗಳಿಗೆ ಎದುರಾದರೆ ಆಯುಧಗಳ ಪೆಟ್ಟು ಕವಚಕ್ಕೆ ಬಿದ್ದು ದೊಡ್ಡ

ಪ್ರಮಾಣದ ಆಘಾತ ತಪ್ಪಿ ಹೋಗುತ್ತದೆ. ಕವಚದ ಮೇಲಿನ ಒತ್ತಡದಿಂದ ಅಲ್ಪಸ್ವಲ್ಪ ಪೆಟ್ಟು ಬಿದ್ದರೂ ನೋವು ಕಡಿಮೆಯಾಗಿ ಸಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಂತೆ ವಯಸ್ಸಿನ ಪರಿಣಾಮಗಳನ್ನು ತಪ್ಪಿಸಲು ಶಕ್ಯವಿಲ್ಲದಿದ್ದರೂ ಅವುಗಳಿಂದ ಉಂಟಾಗುವ ಭಯಶೋಕಗಳನ್ನು ತಪ್ಪಿಸಬಹುದು.

ಶೌನಕರ ಪ್ರಕಾರ ವಯೋಽವಸ್ಥಾ ಶಾಂತಿಗಳು ಹನ್ನೊಂದು. ಅವು

"ವೈಷ್ಣವೀ ವಾರುಣೀ ಚೈವ ತತಶ್ಚೋಗ್ರರಥೀ ತಥಾ ।
ಮಹಾರಥೀ ಭೀಮರಥೀ ಐಂದ್ರೀ ಚೈವ ವಿಶೇಷತಃ ॥
ಚಾಂದ್ರೀ ದಾರ್ಶನಿಕೀ ರೌದ್ರೀ ಸೌರೀ ಮೃತ್ಯುಂಜಯೀ ತಥಾ ॥
ಮಹಾಮೃತ್ಯುಂಜಯೀ ಶಾಂತಿಃ ಕ್ರಮಶಸ್ತಾಃ ಪ್ರಕೀರ್ತಿತಾಃ ॥"

ಐವತ್ತಕ್ಕೆ ವೈಷ್ಣವೀ, ಐವತ್ತೈದಕ್ಕೆ ವಾರುಣೀ, ಅರವತ್ತಕ್ಕೆ ಉಗ್ರರಥೀ, ಅರವತ್ತೈದಕ್ಕೆ ಮಹಾರಥೀ, ಎಪ್ಪತ್ತಕ್ಕೆ ಭೀಮರಥೀ, ಎಪ್ಪತ್ತೈದಕ್ಕೆ ಐಂದ್ರಿ, ಎಂಭತ್ತಕ್ಕೆ ಸಹಸ್ರಚಂದ್ರದರ್ಶನ, ಎಂಬತ್ತೈದಕ್ಕೆ ರೌದ್ರೀ, ತೊಂಭತ್ತಕ್ಕೆ ಸೌರೀ, ತೊಂಭತ್ತೈದಕ್ಕೆ ಮೃತ್ಯುಂಜಯೀ, ನೂರಕ್ಕೆ ಮಹಾಮೃತ್ಯುಂಜಯೀ ಎಂಬ ಹೆಸರಿನ ಶಾಂತಿಗಳು. ಇವುಗಳಲ್ಲಿ ಕೆಲವನ್ನು ಬೇರೆ ಬೇರೆ ಋಷಿಗಳು ಬೇರೆ ಬೇರೆ ಹೆಸರಿನಿಂದಲೂ ಕರೆದಿದ್ದಾರೆ. ಇಲ್ಲಿಯ ಹೆಸರುಗಳು ಆಯಾ ಶಾಂತಿಕರ್ಮದ ಪ್ರಧಾನದೇವತೆಗಳ ಹೆಸರನ್ನೆ ಅವಲಂಬಿಸಿವೆ. ವಿಷ್ಣು ಪ್ರಧಾನದೇವತೆಯಾದ ಶಾಂತಿ ವೈಷ್ಣವೀ; ವರುಣ ಪ್ರಧಾನ ದೇವತೆಯಾದರೆ ವಾರುಣೀ. ರುದ್ರ ಪ್ರಧಾನನಾದರೆ ರೌದ್ರೀ; ಹೀಗೆ.

ಈ ಹನ್ನೊಂದು ಶಾಂತಿಗಳಲ್ಲಿ ಉಗ್ರರಥೀ ಎಂಬ ಶಾಂತಿ ಪ್ರಮುಖವಾಗಿದೆ. ಶೌನಕರು ಈ ಶಾಂತಿಕರ್ಮದ ಪೂರ್ವಾಂಗ, ಉತ್ತರಾಂಗ, ವಿಧಿ –ವಿಧಾನಗಳನ್ನು ಸಮಗ್ರವಾಗಿ ನಿರೂಪಿಸಿದ್ದಾರೆ. ಉಳಿದ ಶಾಂತಿಗಳನ್ನು ಇದರಂತೆ ಯೋಜಿಸಿಕೊಂಡು ಮಾಡಬೇಕಾಗಿದೆ. ಅರುವತ್ತು ವರ್ಷಗಳಲ್ಲಿ ಒಂದು ಸಂವತ್ಸರಚಕ್ರವು ಪೂರ್ಣವಾಗುತ್ತದೆ. ಆಗ ಮಾಡಬೇಕಾದ ಶಾಂತಿಯಾಗಿರುವುದರಿಂದಲೂ ಇದು ಪ್ರಧಾನವಾಗಿದೆ. ಈ ಶಾಂತಿಕರ್ಮವನ್ನು ಪ್ರಕೃತಿ ಎಂದೂ ಉಳಿದವುಗಳನ್ನು ವಿಕೃತಿ ಎಂದೂ ಪಾರಿಭಾಷಿಕವಾಗಿ ಕರೆಯುತ್ತಾರೆ. ಇಷ್ಟು ಶಾಂತಿಗಳನ್ನು ವಿಧಾನ ಮಾಡಿದ್ದರೂ, ಉಗ್ರರಥೀ, ಭೀಮರಥೀ, ಸಹಸ್ರಚಂದ್ರದರ್ಶನ ಮತ್ತು ಮಹಾಮೃತ್ಯುಂಜಯ ಶಾಂತಿಗಳನ್ನು ವಿಜೃಂಭಣೆಯಿಂದ ಆಚರಿಸುವ ಪರಂಪರೆ ಬೆಳೆದು ಬಂದಿದೆ.

ವಿಹಿತವಾದ ಮುಖ್ಯ ಕಾಲದಲ್ಲಿಯೇ ಈ ಶಾಂತಿಗಳನ್ನು ಅನುಷ್ಠಾನ ಮಾಡಬೇಕು. ತೊಂದರೆಯಾದರೆ, ಒಂದೆರಡು ವರ್ಷಗಳ ವಿಲಂಬದಲ್ಲಿಯಾದರೂ ಕರ್ಮವನ್ನು ಆಚರಿಸಬೇಕು. ಆಗ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಎಲ್ಲ ಶಾಂತಿಕರ್ಮಗಳ ಸಂಕಲ್ಪವು ಒಂದೇ ವಿಧವಾಗಿದೆ. ಅದರಲ್ಲಿ ಸರ್ವಾರಿಷ್ಟ ಪರಿಹಾರ, ಸರ್ವಸಮೃದ್ಧಿಲಾಭ ಮತ್ತು ಸಮಸ್ತ ಮಂಗಲಾವಾಪ್ತಿ ಎಂಬ ಮೂರು ಅಂಶಗಳಿವೆ. ಜೀವನ ಉತ್ಕರ್ಷಕ್ಕೆ ಇವು ಮೂರೂ ಅನಿವಾರ್ಯ. ಸಂಕಲ್ಪ ಎಂದರೆ ಮಾನಸ ಕರ್ಮ. "ಕಾಲ, ದೇಶ, ಸನ್ನಿವೇಶಗಳ ಅವಧಾರಣೆಯೊಂದಿಗೆ ನಾನು ಈ ಉದ್ದೇಶದಿಂದ ಇಂಥ ಕರ್ಮವನ್ನು ಈ ವಿಧಾನದಿಂದ ಮಾಡುತ್ತೇನೆ" ಎಂಬ ಪ್ರತಿಜ್ಞಾವಿಧಾನ ಸಂಕಲ್ಪ. ಕುಲದೇವರ ಅನುಗ್ರಹ, ಗುರುಹಿರಿಯರ ಅನುಮತಿಯ ಮೇರೆಗೆ ಕರ್ಮಾನುಷ್ಠಾನವನ್ನು ಮಾಡಬೇಕು. ಅದರ ಪೂರ್ವಾಂಗದಲ್ಲಿ ಮೊದಲ ಅಂಗ – ಸಂಕಲ್ಪ. ಹೀಗೆ ಸಂಕಲ್ಪವನ್ನು ಮಾಡಿದರೇ ತ್ರಿಕರಣಪೂರ್ವಕವಾಗಿ ಕರ್ಮವನ್ನು ಅನುಷ್ಠಾನ ಮಾಡಿದಂತೆ ಆಗುತ್ತದೆ.

ನಾಂದೀ, ಪುಣ್ಯಾಹ, ಸಂಕಲ್ಪ, ಕಲಶಸ್ಥಾಪನ, ದೇವತಾಹ್ವಾನ, ಶಾಂತಿಹವನ, ವಿವಿಧ ಸೂಕ್ತಪಠನ, ಸ್ವಿಷ್ಟಿಕೃತ್ – ಪ್ರಾಯಶ್ಚಿತ್ತ ಹೋಮ, ಬಲಿದಾನ, ಪೂರ್ಣಾಹುತಿ. ಯಜಮಾನ ಅಭಿಷೇಕ, ನೂತನ ವಸ್ತ್ರಧಾರಣ, ಚಿರಂಜೀವಪ್ರಾರ್ಥನ, ದುಗ್ಧ ಪ್ರಾಶನ, ಆಜ್ಯಾವಲೋಕನ, ವಿವಿಧದಾನ, ಬ್ರಾಹ್ಮಣ ಭೋಜನ – ಇವು ಎಲ್ಲ ಶಾಂತಿಕರ್ಮಗಳ ಅಂಗಕಲಾಪಗಳು. ಸಂಪ್ರದಾಯ ಮತ್ತು ಪ್ರಾದೇಶಿಕ ಭೇದಗಳಿಂದ ಅಲ್ಲಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ.

ಎಲ್ಲ ಶಾಂತಿಕರ್ಮಗಳ ಜೀವಾತುಮೃತ್ಯುಂಜಯ ತ್ರ್ಯಂಬಕಮಂತ್ರ. ಅದುಹೀಗಿದೆ –

"ಓಂ ತ್ರ್ಯಂಬಕಂ ಯಜಾಮಹೇಸುಗಂಧಿಂ ಪುಷ್ಟಿವರ್ಧನಮ್। ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯಮಾಮೃತಾತ್ ॥

""ಮಹಾದೇವ! ನೀನು ತ್ರ್ಯಂಬಕ, ನಿನಗೆಮೂರು ಕಣ್ಣುಗಳಿವೆ. ಅವುಗಳಿಂದ ನೀನು ಒಳಗೂ ಹೊರಗೂ ನೋಡಬಲ್ಲೆ. ಸೂರ್ಯ, ಚಂದ್ರ ಅಗ್ನಿಗಳೇ ನಿನ್ನ ನಯನಗಳು. ನೀನು ಎಲ್ಲ ವಸ್ತುಗಳ ಸಾರ, ನಿನ್ನಿಂದಲೆ ಭವಕ್ಕೆ ವಿಭವ, ಪರಿಮಳ. ಎಲ್ಲ ವಸ್ತುಗಳ ಪುಷ್ಟಿಯನ್ನು ನೀನೆ ಹೆಚ್ಚಿಸುತ್ತೀಯೆ. ಎಲ್ಲ ಜೀವಿಗಳ ತುಷ್ಟಿಯನ್ನು ಕೊಡಬಲ್ಲವನು. ನಿನ್ನನ್ನು ಆರಾಧಿಸೋಣ. ನೀನು ಮೃತ್ಯುವಿನ ಬಂಧನದಿಂದ ನಮ್ಮನ್ನು ಮಿಣಿಕೆ ಹಣ್ಣಿನಂತೆ ಅಮೃತಶಕ್ತಿಯಿಂದ ಬಿಡಿಸು!" ಈ ಮಂತ್ರವನ್ನೇ ಬೇರೆ ಬೇರೆ ಬೀಜಮಂತ್ರಗಳ ಸಂಯೋಜನೆಯಿಂದ ಬೇರೆ ಬೇರೆ ಉದ್ದೇಶಗಳಿಗಾಗಿ ಜಪಿಸುವ ಕ್ರಮವಿದೆ.

ಶಾಂತಿಯ ಕೊನೆಯಲ್ಲಿ ಚಿರಂಜೀವ ಪ್ರಾರ್ಥನೆಯನ್ನು ಕರ್ತನು ಮಾಡಿಕೊಳ್ಳಬೇಕು. ಚಿರಂಜೀವರು ಮರಣವನ್ನು ಕಳೆದುಕೊಂಡವರಲ್ಲ. ಆದರೆ ಅದನ್ನು ಗೆದ್ದವರು. ದೈವಾನುಗ್ರಹದಿಂದ ದೀರ್ಘಕಾಲ ಬದುಕಿದವರು. ಮರಣ ಭೀತಿಯನ್ನು ದಾಟಿದವರು. ಅವರು ಅಶ್ವತ್ಥಾಮ, ಬಲಿ, ವ್ಯಾಸ, ಹನುಮಂತ, ವಿಭೀಷಣ, ಕೃಪ ಮತ್ತು ಪರಶುರಾಮ. ಇವರ ಕೂಟಕ್ಕೆ ಕುಲಮಣಿ ಮಾರ್ಕಂಡೇಯ. ರುದ್ರಾನುಗ್ರಹದಿಂದ ಮಾರ್ಕಂಡೇಯ ಹವಿರ್ಭಾಜನನಾದ; ದೇವತೆಯಾದ. ಆಯುರಾರೋಗ್ಯ ಭಾಗ್ಯಗಳಿಗಾಗಿ ಅವರ ಪ್ರಾರ್ಥನೆಯಿದೆ. ಹೀಗೆ – ಪ್ರತಿಯೊಬ್ಬ ಜೀವಿಯೂ ಮೃತ್ಯುಂಜಯ ರುದ್ರನಿಗೆ ಬಾಗಬೇಕು; ಅಂತರಂಗದಿಂದ ಮಾಗಬೇಕು; ಮರಣ ಭಯದಿಂದ ದೂರವಾಗಬೇಕು ; ರುದ್ರಪ್ರೀತಿಯ ರಥದಲ್ಲಿ ಕುಳಿತು ಜೀವನಯಾತ್ರೆಯನ್ನು ಮುಂದುವರಿಸಬೇಕು –ಎಂಬುದೇ ಎಲ್ಲ ಅವಸ್ಥಾಶಾಂತಿ ಕರ್ಮಗಳ ಹೃದಯವಾಗಿದೆ.

ಚಿರಂಜೀವ ಪ್ರಾರ್ಥನಾ
ಮಾರ್ಕಂಡೇಯ ಮಹಾಭಾಗ ಸಪ್ತಕಲ್ಪಾಂತಜೀವನ।
ಆಯುರಾರೋಗ್ಯಮೈಶ್ವರ್ಯಂ ದೇಹಿಮೇಮುನಿಪುಂಗವ ॥
ದ್ರೌಣೇ ಮೇ ತ್ವಂ ಮಹಾಭಾಗ ರುದ್ರತೇಜಸ್ಸಮುದ್ಭವ।
ಆಯುರ್ಬಲಂ ಯಶೋದೇಹಿ ಅಶ್ವತ್ಥಾಮನ್ ನಮೋಽಸ್ತು ತೇ ॥
ದೈತ್ಯೇಂದ್ರಕುಲಸಂಭೂತ ಯಜ್ಞದಾನಕ್ರಿಯಾರತ।
ಬಲೇ ತ್ವಾಂ ಶರಣಂ ಯಾಮಿ ದೀರ್ಘಾಯುಷ್ಯಂ ಪ್ರಯಚ್ಛಮೇ ॥
ವಸಿಷ್ಠಕುಲಸಂಭೂತ ವೇದಶಾಸ್ತ್ರವಿಶಾರದ।
ನಾರಾಯಣಾಂಶಸಂಭೂತ ವೇದವ್ಯಾಸ ನಮೋಽಸ್ತು ತೇ ॥
ಅಂಜನಾಗರ್ಭಸಂಭೂತ ಕಪೀಂದ್ರಸಚಿವೋತ್ತಮ।
ರಾಮಪ್ರಿಯ ನಮಸ್ತುಭ್ಯಂ ಹನುಮನ್ ರಕ್ಷ ಮಾಂ ಸದಾ ॥
ವಿಭೀಷಣ ನಮಸ್ತುಭ್ಯಂ ರಾಮಪಾದಾಬ್ಜಪೂಜಕ।
ಆಯುರಾರೋಗ್ಯಮೈಶ್ವರ್ಯಂ ದೇಹಿ ಪೌಲಸ್ತ್ಯನಂದನ ॥
ದ್ವಿಜೇಂದ್ರ ಭರತಾಚಾರ್ಯ ಸರ್ವವಿದ್ಯಾವಿಶಾರದ।
ಶರಣಂ ತ್ವಾಂ ಪ್ರಪನ್ನೋಽಸ್ಮಿ ಕೃಪ ಮಾಂ ರಕ್ಷ ಸರ್ವದಾ ॥
ರೇಣುಕೇಯ ಮಹಾಭಾಗ ಕಾರ್ತವೀರ್ಯಕೃತಾಂತಕ।
ಆಯುಃ ಪ್ರಯಚ್ಛ ಮೇ ರಾಮ ಜಾಮದಗ್ನ್ಯ ನಮೋಽಸ್ತು ತೇ।

ನಾ ಕಂಡಂತೆ
ಹೊಸಬೆಟ್ಟು ವೆಂಕಟಕೃಷ್ಣ ಆಚಾರ್ಯರು (ಹಿಟ್ಲಾರಾಚಾರ್ರು)



ಟಿ. ಎನ್.ರಮೇಶ

ಮರಳುಕಾಡು ನಾಗೇಶರಾಯರಿಗೂ ಹಿಟ್ಲಾರಾ ಚಾರ್‌ಗೂ ಅವಿನಾಭಾವ ಸಂಬಂಧ.

ನಮ್ಮ ಮನೆಯಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡು ಬರುತ್ತಿರುವ ಚೌತಿ ದಿನದ ಗಣಹೋಮಕ್ಕೆ ಅವರದ್ದೇ ಸಾರಥ್ಯ. ಬೆಳಿಗ್ಗೆ ಬೇಗ 5ರಿಂದ 5.30ರೊಳಗೆ ನಮ್ಮ ಮನೆಗೆ ಬರುತ್ತಿದ್ದ ಅವರು ಗೇಟಿನ ಹತ್ತಿರವೇ – ಏ, ನಾಗೇಶ ಎಲ್ಲಾ ತಯಾರಾಯಿತಾ? ಎಂದು ಕೇಳುತ್ತಿರುವ ಪರಿ, ಕಚ್ಚೆ ಹಾಕಿಕೊಂಡು ಮಣೆಯ ಎದುರಿಗೆ ಕೊಡಿಕಾಲಲ್ಲಿ ಕೂತು ರಂಗವಲ್ಲಿ ಹಾಕುತ್ತಾ, ಮಕ್ಕಳ ಬಗ್ಗೆ ವಿದ್ಯಾಭ್ಯಾಸದ ಬಗ್ಗೆ ವಿಚಾರ ಮಾಡುತ್ತಾ ಗಣಹೋಮಕ್ಕೆ ರೆಡಿ ಮಾಡುತ್ತಿದುದು, ನಮ್ಮ ಅಮ್ಮನನ್ನು ಏ, ಲಕ್ಷ್ಮೀ – ಏನು ಮಾಡುತ್ತಿದ್ದಿ– ಬೇಗ ಬಾ ನೀನು ಅಗ್ನಿ ತರುವ ಸಮಯ ಆಯಿತು ಎಂದು ಎಚ್ಚರಿಸುತ್ತಿದುದು ನನಗೆ ಈಗಲೂ ನೆನಪು. ನಾಗೇಶರಾಯರ ಹಿರಿಮಗ ನಾನಾದುದರಿಂದ ಅದನ್ನು ಮುಂದುವರಿಸಿಕೊಂಡು ಹೋಗುವ ಅಭಿಲಾಷೆ ನನ್ನದಾಗಿತ್ತು. ವೆಂಕಟಕೃಷ್ಣ ಆಚಾರ್ಯರ ನಂತರ ಕೂಡಲೇ ಅವರ ಮನೆತನದ ಪುರೋಹಿತರು ಇರದಿದ್ದಾಗ ಇಡ್ಯಾ ದೇವಸ್ಥಾನದ ರಮಾನಂದ ಭಟ್ಟರು, ಶ್ರೀ ಜಗದೀಶ ಐತಾಳ ಹೀಗೆ ಕೆಲವರು ಚೌತಿ ಗಣಹೋಮ ನಡೆಸಿಕೊಡುತ್ತಿದ್ದರು. ಇತ್ತೀಚೆಗೆ ಹಲವು ವರ್ಷದಿಂದ ಅವರ ಮೊಮ್ಮಗ ಶ್ರೀ ವಿನೋದ ಆಚಾರ್ಯರು ಚೌತಿ ಗಣಹೋಮ ಉತ್ತಮವಾಗಿ ನಡೆಸಿಕೊಡುತ್ತಿದ್ದಾರೆ. ಅಲ್ಲದೆ ನನ್ನ ವ್ಯವಹಾರದ ಅಂಗಡಿ ಪೂಜೆಯೂ ಅವರ ನೇತೃತ್ವದಲ್ಲಿ ನಡೆಯುತ್ತಿದೆ.

ಮಾನ್ಯ ವೆಂಕಟಕೃಷ್ಣ ಆಚಾರ್ಯರು ನಮ್ಮಲ್ಲಿಗೆ ಬರುವಾಗ ನನಗೆ ಸಾಧಾರಣ 20 ವರ್ಷದೊಳಗಿರಬಹುದು. ಅವರ ನಡೆ ನುಡಿಗಳಿಗೆ ಆದರ್ಶಕ್ಕೆ ಮತ್ತು ಕೆಲಸದ ಬಗ್ಗೆ ಆಸಕ್ತಿಗೆ ನಾನು ಮನಸೋತಿರುತ್ತೇನೆ. ಸಾಧಾರಣ ನನಗೆ 20 ವರ್ಷ ಆಗಿರುವಾಗ ಅವರು ನಮ್ಮನ್ನೆಲ್ಲಾ ಅಗಲಿರುತ್ತಾರೆ. ಆದರೆ ಅವರ ಯಜಮಾನಿಕೆಯಲ್ಲಿ ಅವರ ಮನೆಯಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿದ ನೆನಪು ಇನ್ನೂ ನನ್ನನ್ನು ಎಚ್ಚರಿಸುತ್ತಿದೆ. ಯಾವುದೇ ಕಾರ್ಯಕ್ರಮದ ಊಟ ಉಪಚಾರದಲ್ಲಿ ಅವರು ಸುಧಾರಿಸುವ ಕ್ರಮ ನಮಗೆ ಆದರ್ಶವಾಗಿದೆ. ಅವರ ಮಗ ಶ್ರೀ ಗುರುರಾಜ ಆಚಾರ್ಯರ ಕೈಯಿಂದಲೇ ಶ್ಯಾಮಿಯಾನ ಖರೀದಿಸಿ ನಾನು ಉದ್ಯಮವನ್ನು ನಡೆಸುತ್ತಾ ಬಂದಿರುತ್ತೇನೆ. ಈವರೆಗೆ 34 ವರ್ಷದಿಂದ ಸ್ನೇಹ ಎಂಟರ್‌ಪ್ರೈಸಸ್ ಮತ್ತು ಕ್ಯಾಟರರ್ಸ್ ಉದ್ದಿಮೆಗೆ ಶ್ರೀ ಹಿಟ್ಲರ್ ಆಚಾರ್ಯರ ಆಶೀರ್ವಾದ ನನಗೂ ಸ್ಫೂರ್ತಿ ನೀಡಿದೆ ಎಂದು ಹೇಳಿದರೆ ತಪ್ಪಾಗಲಾರದು.

ಅವರ ತಮ್ಮ ಶ್ರೀಧರ ಆಚಾರ್ಯರ ಮಡದಿ ನಮಗೆ ಸೋದರ ಸಂಬಂಧಿ ಅತ್ತೆ ಆಗಿದ್ದೂ, ಅವರ ಸಹೋದರರೆಲ್ಲರೂ ನಮಗೆ ಒಂದಲ್ಲ ಒಂದು ವಿಚಾರದಲ್ಲಿ ಮಾರ್ಗದರ್ಶಕರಾಗಿರುತ್ತಾರೆ.

ಹಿಟ್ಲರಾಚಾರ್ಯರ ಚೇತನಕ್ಕೆ ನನ್ನ ಅನಂತ ಪ್ರಣಾಮಗಳು.



ಶಂಖಭೃನ್ನಂದಕೀ ಚಕ್ರೀ ಶಾರ್ಙ್ಗಧನ್ವಾ ಗದಾಧರಃ ।
ರಥಾಂಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ ॥ ೧೦೭ ॥

ವನಮಾಲೀ ಗದೀಶಾರ್ಙ್ಗೀ ಶಂಖೀ ಚಕ್ರೀಚ ನಂದಕೀ ।
ಶ್ರೀಮನ್ನಾರಾಯಣೋ ವಿಷ್ಣುಃ ಶ್ರೀವಾಸುದೇವೋಽಭಿ ರಕ್ಷತು ॥
ಶ್ರೀವಾಸುದೇವೋಽಭಿ ರಕ್ಷತು । ಓಂ ನಮಃ ಇತಿ ॥ ೧೦೮ ॥

॥ ಶ್ರೀಕೃಷ್ಣಾರ್ಪಣಮಸ್ತು ॥

*****





ಹಿಟ್ಲರತೆಗೊಂದು ಬೆನ್ನುಡಿ

ಬಾಕ್ಯ, ಸುರತ್ಕಲ್

ತಕ್ಷಣ ಬರುವ ಮಿಂಚು, ಅದರ ಹಿಂದಿನ ಗುಡುಗುಡು ಗುಡುಗು ಯಾವ ರೂಪದ್ದು ಎಂದು ತಿಳಿಯದು. ಅದರ ಝಳಪು ಹೊಳಪು ತೀಕ್ಷ್ಣವಾಗಿರಬಹುದು ಅಥವಾ ಪಟಾಕಿಯಂತಿರಲೂ ಸಾಕು. ಆದರೆ ಗುಡುಗು – ಮಿಂಚು ಇಲ್ಲದಿದ್ದರೆ ಪ್ರಕೃತಿ ವಿಕಸನಗೊಳ್ಳುವುದಿಲ್ಲ. ನೀರ ಬುಗ್ಗೆ ಒಸರುವುದಿಲ್ಲ, ಗಿಡ – ಮರ ಚಿಗುರುವುದಿಲ್ಲ. ಅಂತೆಯೇ ಸಮಾಜದಲ್ಲೊಬ್ಬ ವೀರ ಆಗಾಗ ಹುಟ್ಟಿಬರಬೇಕು. ಅದು ಜರ್ಮನಿಯ ಹಿಟ್ಲರೇ ಆಗಬೇಕೆಂದಿಲ್ಲ. ನಮ್ಮೂರ ಆಸುಪಾಸಿನಲ್ಲಿಯೇ ಇಂತಹ ಅನೇಕ **"ಹಿಟ್ಲರ್"** ಕಾಣ ಸಿಗುತ್ತಾರೆ. ಅವರ ಸಮಾಜಮುಖೀ ಚಿಂತನೆಗಳು, ಸತ್ಕಾರ್ಯಗಳು, ಪ್ರೀತಿಯ ತೊರೆಗಳು ತುಂಬಿ ತುಳುಕಿದಾಗ ಮುಂದೊಂದು ಕಾಲಘಟ್ಟದಲ್ಲಿ ಇತಿಹಾಸದ ಪುಟಗಳಲ್ಲಿ ದಾಖಲಾಗುತ್ತಾರೆ.

ಇಂದಿನ ವಿದ್ಯುನ್ಮಾನ ದಾಖಲಾತಿಗಳ ಕೇಳಿ – ನೋಡಿ – ತಳ್ಳುವ ಸಾಗಣಿಕೆಯಲ್ಲಿ ಹಲವಾರು ಕಾಲ ಮತ್ತೆ ಮತ್ತೆ ಹಿಂತಿರುಗಿ, ಪುಟ ತಿರುಗಿಸಿ, ಸ್ಮೃತಿಪಟಲದಲ್ಲಿ ಅಳಿಯದಿರುವಿಕೆಗೆ ಕಾರಣವಾಗುವಂತೆ ಇಂತಹವುಗಳನ್ನು ಪುಸ್ತಕ ರೂಪದಲ್ಲಿ ಕಾಪಿಡುವುದು ಕ್ಷೇಮವಾಗಿದೆ.

ಕೋಟೇಶ್ವರ ಬ್ರಾಹ್ಮಣ ವರ್ಗದವರ ಆಡು ಭಾಷೆಯ ಸೊಗಡು ಅಲ್ಲಲ್ಲಿ ಮಾಣಿಕ್ಯದಂತೆ ಕಂಡುಬರುವುದು ಇಲ್ಲಿಯ ಬರಹಗಳಲ್ಲಿನ ವಿಶೇಷತೆ.

ಬರಹಕ್ಕೊಂದು ಘಟನೆ:

2020, ಮಾರ್ಚ್ 6ಕ್ಕೆ ಬರೆಗುಂಡೆ ಚಕ್ರೇಶ ಯಡಿಯಾಳರಿಂದ (ನನ್ನ ದೊಡ್ಡಮ್ಮನ ಮಗ) ಫೋನ್ – 'ಇಂಥವರೊಬ್ಬರನ್ನು ನಿಮ್ಮಲ್ಲಿಗೆ ಕಳುಹಿಸುತ್ತಿದ್ದೇನೆ ಅವರ ಕುಟುಂಬದ ಮಾಹಿತಿಯನ್ನು ಸಂಗ್ರಹಿಸಲಿಕ್ಕೆ ಸಾಧ್ಯವಾ ಅಂತ ನೋಡು' ಎಂಬ ಸೂಚನೆ. ಎರಡು ದಿನಗಳ ಬಳಿಕ ಇಬ್ಬರು ವ್ಯಕ್ತಿಗಳು ಮಧ್ಯಾಹ್ನ 3 ಗಂಟೆಗೆ ಆಲ್ಟೋ ಕಾರಿನಲ್ಲಿ ಮನೆಗೆ ಬಂದರು. ಅವರು ಯಾರು – ಎತ್ತ ಅಂತ ವಿಚಾರಿಸಿ, ಅವರ ಕುಟುಂಬದ ತಪಾಸಣೆಗೆ ಹೊರಟೆವು. ಇಡ್ಯದ ಕೆಲವರನ್ನು, ಹೊಸಬೆಟ್ಟಿನಲ್ಲಿ ಕೆಲವರನ್ನು ವಿಚಾರಿಸಲಾಯಿತು. ಆ ಸಂಜೆಯವರೆಗೂ ಯಾವ ವಿಚಾರವೂ ಗೊತ್ತಾಗಲಿಲ್ಲ. ಮರುದಿನ ಪುನಃ ಅವರನ್ನು ಕರೆದುಕೊಂಡು "ನಮ್ಮೂರ"ನ್ನು ಸುತ್ತಲಾಯಿತು. ಸಂಜೆಯ ಹೊತ್ತಿಗೆ ಹಲವರನ್ನು ಸಂಪರ್ಕಿಸಿದ ನಂತರ, ಇವರ ಕುಟುಂಬದ **"ರೆಕಾರ್ಡ್"** ಪಿಲಿಕೋಡ್‌ನಲ್ಲಿ ಸಿಕ್ಕಿತು. ಅದರ ವಿಮರ್ಶೆ ನಡೆಯುತ್ತಿರುವ ಸಂದರ್ಭದಲ್ಲಿ ಹಲವಾರು ಸ್ವಾರಸ್ಯಕರ ವಿಷಯಗಳು ಹೊರಬಂದವು. ತತ್ಪರಿಣಾಮವೇ **"ಹಿಟ್ಲರ್"** ಪುಸ್ತಕದ ಪ್ರಕಟಣೆ. ತೋಡಬಳಿ ದಿವಂಗತ ರಾಮಕೃಷ್ಣರಾಯರ ಮನೆಯಲ್ಲಿ ಅಂದು ಸಂಧ್ಯಾಕಾಲದಲ್ಲಿ ಇದರ ನಾಂದಿಗೆ ವೇದಮೂರ್ತಿ ಶ್ರೀ ವಿನೋದ ಆಚಾರ್ಯರು ಓಂಕಾರ ನುಡಿದರು.